MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI

SWADESHABHIMANI
KANNADA WEEKLY
PUBLISHED FROM
MANGALORE

ROLL NO. 6

CONTD

FROM

1918

P.K.G

[illegible] 3.80

ಮುಂಗಡವಾಗಿ:—ವರ್ಷ 1ಕ್ಕೆ ರೂ. 1—8—0

ತಪಾಲು ಹಾಶುಲು ಸಹಿತ ವರ್ಷ 1ಕ್ಕೆ ರೂ. 2—5—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಘುತೆ' ಮತ್ತೆ ನಿಶ್ಚಪ ಸುಡುತ ಪುರಿವಿರುವ ॥
ಗರಲಕೆವರಂಜಿದರೆ' ಸುಧೆಯನು । ಮರೆತು ಕ್ಷುದ್ರರ ತರದಿ ತುಳಿತರೆ' । ತೆರಳಬಲ್ಲರೆ' ತೇಂದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೨ | ಮಂಗಳೂರು, ತಾರೀಖು ೧೦ನೇ ಮೇ ಶುಕ್ರವಾರ ೧೯೧೮. | ಸಂಚಿಕೆ ೨೦.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ಏಲಕ್ಕಿದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳ್ಳ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ ಮೀನು ಗೊಬ್ಬರದಂತೆ ನಾತ ಬಡೆಯುವುದಿಲ್ಲ

ಈ ಗೊಬ್ಬರ ಒಂದು ಹಿಡಿ ಸಾಕಾದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು.

"ಕೃಷಿ ಸುಧಾರಣೆ' ಎಂಬ ಸಚಿತ್ರ ಪತ್ರಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತಾ.

The Chilean Nitrate Propaganda.
1, Royal Exchange Place, Calcutta

ಮೇಲಾದ ಸಂಗ್ರಹ.

ಧನಿಕರಿಗೂ ಬಡವರಿಗೂ ಅತ್ಯಗತ್ಯವಾಗಿ ಬೇಕಾದಂಥ ಬಗೆಬಗೆಯ ವಸ್ತ್ರಗಳು! ಸ್ವದೇಶದಲ್ಲಿಯೇ ಸ್ವದೇಶಸ್ಥರಿಂದ ತಯಾರಾದ ವಸ್ತ್ರಗಳ ಸಂಗ್ರಹ

ಬನಾರಸ, ಪೂನಾ, ... ಎರೋಡ, ... ಗದಗ ಹುಬ್ಬಳ್ಳಿ, ಕೊಯಮತ್ತೂರ, ಧಾರವಾಡ, ... ಮದ್ರಾಸು, ಸೇಲಂ, ಅಹಮದಾಬಾದ ಮೊದಲಾದ ವಸ್ತ್ರನೇಯುಗೆಯಲ್ಲಿ ಪ್ರಖ್ಯಾತವಿದ್ದ ಎಲ್ಲಾ ಊರುಗಳ ನೆಯಿಗೆಯಿಂದ ... ಪೂರ್ಣವಾಗಿದೆ

ಮದುವೆ, ಉಪನಯನಗಳ ಹಬ್ಬ ಉತ್ಸವಗಳ ಕಾಲದ ಮತ್ತು ನಿತ್ಯದ ಉಪಯೋಗಕ್ಕೆ ಬೇಕಾದಂಥಾ ... ದವಣೆಗಳು, ದೋತ್ರಗಳು, ಅಂಗಿವಸ್ತ್ರಗಳು, ... ಇತ್ಯಾದಿ ... ಸಂಬಂಧಪಟ್ಟ ಎಲ್ಲಾ ವಸ್ತ್ರಗಳು

ಪ. ನಾರಾಯಣ ವೈಜಪ್ಪಭಂಡಾರಿ,

ರಥಬೀದಿ, ಮಂಗಳೂರು,

ಇವರಲ್ಲಿ ದೊರೆಯುತ್ತವೆ

ರಖಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು

ಚಿಲ್ಲರೆ ಗಿರಾಕಿಗಳಿಗೆ ಡಿಸ್ಕೌಂಟು ಕೊಡಲ್ಪಡುತ್ತದೆ

ವಿಶೇಷ ಸೂಚನೆ.— ನಮ್ಮಲ್ಲಿ ಇತ್ತೀಚೆಗೆ ಬಂದಿರುವ ತೀರೆಗಳ ರಕಮುಗಳನ್ನು ಬಂದು ನೋಡಿರಿ

In the Court of the
DISTRICT JUDGE OF SOUTH KANARA

O P No 42/1918

In the matter of the will of Yeldad Lucas Joshua—deceased

1 Unika Joshua, 2 Lucas Joshua, 3 Thomas Joshua (4) Lena Joshua (5) Benjamin Joshua } *Petitioners*

Notice is hereby given that application has been made to the Court of the District Judge of South Kanara for a grant of Letters of Administration with the will annexed, of the property and credits of Yeldad Lucas Joshua, late of Balmatta, Mangalore, to the first Petitioner and that the 30th day of July 1918 has been appointed for the hearing of the said application

Mangalore,
6-5-1918

M. N. BANGARA,
Vakil for Petitioner.

ಹತ್ತಿರವೇ ಇಟ್ಟುಕೊಳ್ಳಿರಿ!

ಎಲ್ಲಾ ಜನಗಳನ್ನು ಬಾಧಿಸುತ್ತ ಇರುವ ನೋವು, ಶೀತ, ಕೆಮ್ಮು, ಎದೆನೋವು ಗಂಟುನೋವು ಮೊದಲಾದ ನೂರಾರು ವಿಧಾನಗಳ ನೋವುಗಳನ್ನು ಶೀಘ್ರದಲ್ಲಿ ಗುಣಪಡಿಸುವ

ಅಮೃತಾಂಜನವನ್ನು

ನೀವು ಯಾವಾಗಲೂ ಹತ್ತಿರವೇ ಇಟ್ಟುಕೊಳ್ಳಬೇಕು. ಅಣೆ ಎಂಟಕ್ಕೆ ಅದು ಎಲ್ಲಿಯೂ ದೊರಕುವದು.

12 ಡಬ್ಬಿಗಳಿಗೆ 5—1—0. ವಿ. ಪಿ. ಪ್ರತ್ಯೇಕ

ಗಜಕರ್ಣದ ಮುಲಾಮು.

ಮೂರು ಸರ್ತಿ ತಿಕ್ಕಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಲಕ್ಷ ಡಬ್ಬಿಗಳು ಮಾರಲ್ಪಟ್ಟವು. ರಾಣಿ ಟ್ರೇಡ್ ಮಾರ್ಕು 0—6—0 12 ಡಬ್ಬಿಗಳಿಗೆ 4—0—0 ವಿ. ಪಿ. ಪ್ರತ್ಯೇಕ.

ದಂತಮಂಜನ.

(ರಾಣಿ ಟ್ರೇಡ್ ಮಾರ್ಕ್)

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ ಮುಂತಾದವುಗಳೆಲ್ಲಾ ನಿವೃತ್ತಿ. ಇದರಲ್ಲಿ ಕೆಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ ಒಂದಕ್ಕೆ 0—2—0 12 ಡಬ್ಬಿಗಳಿಗೆ 1—4—0 ವಿ. ಪಿ. ಪ್ರತ್ಯೇಕ.

ಅಮೃತಾಂಜನ ಡಿಪೋ,

6, 7, ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, **ಮದ್ರಾಸು.**

100 ಪ್ರೇಯರ್ ರೋಡ್, **ಮುಂಬಯಿ.**

ಉಡುಪಿ—ಕೊಟ್ಟಿಕಾರಾ ಬ್ರದರ್ಸ್, ಇವರಲ್ಲಿಯೂ ದೊರಕುವದು.

ಮಂಗಳೂರಲ್ಲಿ—ಊಲನಾ ಫಾರ್ಮಸಿ, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ವಿಲಾಸಿನೀವಟಿಕಾ



ಈ ಔಷಧಿಯ ಹೆಸರು ಯಾವುದನ್ನು ಸೂಚಿಸುವದೋ ಆ ಗುಣಗಳೆಲ್ಲವೂ ಈ ಮಾತ್ರೆಗಳಲ್ಲಿ ನೆಲೆಗೊಂಡಿವೆ. ಈ ಮಾತ್ರೆಗಳಲ್ಲಿ ಒಂದನ್ನು ತಿಂದ ಕಾಲು ಗಂಟೆಯ ಕಾಲದಲ್ಲಿ ಈ ಔಷಧಿಯ ಗುಣವು ವ್ಯಕ್ತವಾಗುವದು.

ಕ್ರಯ 16 ಮಾತ್ರೆಗಳುಳ್ಳ ಡಬ್ಬಿಗೆ ರೂ. 1

ಮೇಹಮರ್ದನ ಚೂರ್ಣ.

ಮೇಹರೋಗದಿಂದ ನಾನಾ ಬಗೆಯ ಮೂತ್ರದ ದೋಷಗಳು ಪ್ರಾಪ್ತವಾದರೂ ಈ ಚೂರ್ಣವು 21 ಗಂಟೆಯಲ್ಲಿ ಗುಣಮಾಡುವದು

ಕ್ರಯ ಡಬ್ಬಿ 1ಕ್ಕೆ 1—0—0

ವಿಳಾಸ.—

ರಾಜವೈದ್ಯ ನಾರಾಯಣಜಿ ಕೇಶವಜಿ,
27, ಟ್ರೈನಾಬಜಾರು ರೋಡ, ಮದರಾಸು.

ಒಂದೇ ಮಾತು

ಸ್ಥಳ ಸಂಕೋಚದಿಂದ ವಿವರವಾಗಿ ಬರೆಯುವ ತೆರನಿಲ್ಲ. ಆಗಿನ ... ಸಂಬಂಧವಾದ ಎಲ್ಲಾ ವ್ಯಾಧಿಗಳನ್ನು ... ಗುಣಮಾಡುವ



ಮದನಮಂಜರಿ ಮಾತ್ರೆಗಳು

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಕೈಕಾಲು ಸೊಂಟದಲ್ಲಿ ನೋವಿದ್ದರೂ ಮೂತ್ರದಲ್ಲಿಯೂ ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ ಈ ಮಾತ್ರೆಗಳನ್ನು ಸೇವಿಸುವುದರಿಂದ ರೋಗದ ಬೇರನ್ನು ಕಿತ್ತು ಬಿಡುವದು. ಈ ಮಾತ್ರೆಗಳಿಗೆ ದೆಳ್ಳಿ, ಭರ್ಗಾದ್ಯ, ತಾಮ್ರ, ಭಸ್ಮಗಳು ಎಷ್ಟೇ ಮಾತ್ರವೂ ಸಮಾನವಾಗಲಾರವು.

ಉಪಯೋಗಿಸುವ ವಿಧಿ ಔಷಧದ ಜೊತೆಯಲ್ಲಿ ಕಳುಹಿಸಲ್ಪಡುವದು.

ಕ್ರಯ ಡಬ್ಬಿ 1ಕ್ಕೆ 1—8—0.

ವಿಳಾಸ.—

ಮದನಮಂಜರಿ ಫಾರ್ಮಸಿ
... ಬಜಾರು ರೋಡ

THE CANARA BANK, LIMITED., MANGALORE.

ಕನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised and issued Capital Rs.	300,000—0—0	ಅಧಿಕಾರಗೊಳಿಸಲ್ಪಟ್ಟ ಮತ್ತು ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲ ಧನವು ರೂಪಾಯಿ	300,000—0—0
Subscribed Capital	246,500—0—0	ಚಂದಾಹಾಕಿ ಯತ್ತಿದ ಮೂಲ ಧನವು ,,	246,500—0—0
Paid up Capital	243,050—0—0	ಮೌಲ್ಯ ತೆತ್ತ ಮೂಲ ಧನವು ,,	243,050—0—0
Deposits	321,822—11—6	ಠೇವಣಾತಿಯಾಗಿ ಕೊಡಲ್ಪಟ್ಟ ಮೊಬಲಗುಗಳು	321,822—11—6
Reserve and other Funds ...	99,097—7—0	ಕ್ಷೇಮನಿಧಿ ಮತ್ತು ಇತರ ಫಂಡುಗಳು ...	99,097—7—0

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 5, 5½, 6, and 6½% respectively at the discretion of the managing committee. In the case of deposits for 12 months and 24 months interest will be paid half yearly.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 5, 5½, 6; ಮತ್ತು 6½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು. 12 ತಿಂಗಳ ವ 24 ತಿಂಗಳ ಠೇವಣಾತಿಗಳ ಸಂಗತಿಗಳಲ್ಲಿ ಅರ್ಧ ವರ್ಷಕ್ಕೊಮ್ಮೆ ಬಡ್ಡಿ ಕೊಡೋಣಾಗುವದು.

Short-notice Deposits requiring one week's notice of withdrawal after one month received @ 2½% per annum at the discretion of the managing committee.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

Current Deposit Account opened free of charge.

"ಕರೆಂಟ್ ಎಕೌಂಟ್" ಎಂಬ ಚಾಲ್ತಿಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

Savings Bank Account opened for any sum not less than 4 As. and multiples thereof and interest paid @ 4½%.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಆ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Loans granted on proper securities and pledges.

Canara Bank Ltd.,
Mangalore, 1st May 1918.

P. Gopal Naik,
Secretary.

ಮೈಸೂರು ಊದುಬತ್ತಿಗಳು

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅಗರಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗ್ರಹಬಾಧೆಗಳಿಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ರುಚಿಕರವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ. [illegible] ತೇವ. ಯಾವಾಗಲೂ ಕೆಡದಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ [illegible] 100 ಜನಕ್ಕೆ ಸಾಕಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರ್ಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಎಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಿಗಳಿಂದ ತಯಾರಿಸಿದ "ಎಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ಒಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ಒಸಡು ಬೀಗಿಕೊಂಡು ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲ್ಲದೆ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ!   ಕ್ರಯ ಕಮ್ಮಿ!!   ಖಾಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರಪೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಆರ್. ಮಾರ್ಟಿನ್ಸರ ಲಪ್ಪಾ ಎಣ್ಣೆ.

ಇದರ ವಾಸನೆಯು, (ಪರಿಮಳವು) ಬಹಳ ಅಂದವಾಗಿಯೂ ಇರುವುದಲ್ಲದೆ ಬಹಳ ಹೊತ್ತಿನವರೆಗೂ ಇರುತ್ತದೆ. ಈ ಎಣ್ಣೆಯನ್ನು ತಲೆಗೆ ಹಾಕಿಕೊಳ್ಳುವುದರಿಂದ ಕಣ್ಣುಗಳು ತಂಪಾಗಿಯೂ, ಶುಭ್ರವಾಗಿಯೂ, ಆಗುವುದಲ್ಲದೆ, ಮೆದುಳು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಪ್ರತಿದಿವಸವೂ ಉಪಯೋಗಿಸುವುದರಿಂದ ಕೂದಲುಗಳ ಕಪ್ಪಾಗಿ ಹೊಳೆಯುವಂತೆ ಮಾಡುತ್ತದೆ. ಕೂದಲುಗಳಲ್ಲಿರುವ ಹೇನುಗಳು ಮುಂತಾದುವು ನಾಶವಾಗಿ ತಲೆಬುರುಡೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುತ್ತದೆ. ಗಡ್ಡ ಮತ್ತು ಮೀಸೆಗಳು ಸಹ ಬೆಳೆಯುತ್ತವೆ. ಇದನ್ನು ಉಪಯೋಗಿಸಿದ ಜನರು ಇದಕ್ಕಿಂತ ಉತ್ತಮವಾದ ಎಣ್ಣೆಯು ಬೇರೆ ಇಲ್ಲವೆಂದು ಹೇಳಿರುತ್ತಾರೆ.

ಕ್ರಯ ಬಾಟ್ಲಿ ೧ಕ್ಕೆ ರೂಪಾಯಿ ೧—೪—೦.

ಆರ್. ಮಾರ್ಟಿನ್ಸರ ಕೆಮ್ಮಿನ ಔಷಧ.

ಒಂದೇ ಒಂದು ಸೀಸೆ ಔಷಧ, ಎಲ್ಲಾ ವಿಧವಾದ ಕೆಮ್ಮು, ಗೂರಲು, ಶ್ವಾಸ, ಸೀತ, ನೆಗಡಿ, ಗಂಟಲುನೋವು, ಎದೆನೋವುಗಳನ್ನು ಗುಣಪಡಿಸುತ್ತಿರುವೆಲ್ಲ ಯಾಕೆ ಈ ರೋಗಗಳಿಂದ ಇನ್ನೊಂದು ಜನರು ನರಳುತ್ತಿರಬೇಕು? ಒಂದೇ ಒಂದು ಸೀಸೆಯನ್ನು ತರಿಸಿ ಸೇವನಮಾಡಿ ಪರೀಕ್ಷಿಸಿನೋಡಿರಿ. ಆನಂತರ ಯಾವ ಬೇರೆ ಔಷಧಕ್ಕೂ ಗಮನ ಕೊಡವಿರಿ. ಎಲ್ಲಾ ವಿಧವಾದ ಕೆಮ್ಮಿಗೂ ರಾಜನಾಗಿಯೂ, ಎದೆಗೆ ಬಲಕೊಟ್ಟು ಮೇಲ್ಕಂಡ ರೋಗಗಳು ತಲೆಯಿಕ್ಕದಂತೆ ಮಾಡುತ್ತವೆ.

೬೦ ಮಾತ್ರೆಗಳ ಸೀಸೆ ಒಂದಕ್ಕೆ ರೂ. ೧—೪—೦.

ಆರ್. ಮಾರ್ಟಿನ್ಸರ ಗ್ಲಿಟೋಡಾಯಿನ್.

ಗಂಡಸರು ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸುವುದರಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ. ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿಮೂತ್ರವನ್ನು ನಿಲ್ಲಿಸಿ, ಮೂತ್ರವು ಸ್ವಚ್ಛವಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಬೆಲೆ ಸೀಸೆ ಒಂದಕ್ಕೆ ರೂ. ೨—೦—೦.

ವಿಳಾಸ:— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು!   ಭರಪೂರ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ವಟಿ, ಗರುಡ ಘೃತ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಉಪ್ಪರೋಗ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ ೨೦ ಮಾತ್ರೆ ರೂ. ೧.

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ಸತ್ವಶಕ್ತಿಯುತನ್ನು ಪುಷ್ಟಿಗೊಳಿಸುತ್ತದೆ. ತೊಲೆ ೧ಕ್ಕೆ ರೂ. ೧.

೩. ಆರೋಗ್ಯಾಮೃತ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ ೧ಕ್ಕೆ ೧-೪-೦.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಜಾಡ್ಯ ರೋಗಗಳನ್ನು ಗುಣಪಡಿಸಿ ಸುಪುತ್ರವತಿಯನ್ನು ಸುಪುತ್ರನನ್ನೂ ಕೊಡುತ್ತದೆ. ತೊಲೆ ೬ಕ್ಕೆ ರೂ. ೧.

೫. ಮಧುಮಾಧವ ಪಿಲ್ಸ್. ಇದು ಸ್ತ್ರೀಯರ [illegible] ಸಿದ್ಧೌಷಧವಾಗಿರುತ್ತದೆ. ಮಾತ್ರೆ ೬೦ಕ್ಕೆ ರೂ. ೨.

೬. ಬಾಲಶಂಕರಿ. ಬಾಲಕರ [illegible] ಗುಲ್ಮ, [illegible] ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ ೪೮ಕ್ಕೆ ರೂ. ೧—೮—೦.

೭. ದರ್ಬಾರ್ ಬ್ಯೂಟಿ ವೆಸಿನ್. [illegible] ಬಾಟ್ಲಿ ೧ಕ್ಕೆ ರೂ. ೦—೮—೦.

೮. ದನ್ತವಸ್ತ್ರ. [illegible] ೧ ತೊಲೆ [illegible] ರೂ. ೧—೦—೦.

[illegible]

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದವುಗಳು.

ಅಜ್ಜಿಕಥೆಗಳು:

ಮೂರು ಕರಡಿಗಳು.

ಹೇನು ಸತ್ತು ಕಾಗೆಬಡವಾಯಿತು.

ಮೆಣಸಿನ ಕಾಳಪ್ಪ.

ಅಗಸಣ್ಣ ಮುದ್ದೆ.

ಅಕ್ಷರಪರಿಚಿತಿಯನ್ನುಂಟುಮಾಡುವುದರಲ್ಲಿ ಸಹಾಯಕವಾಗಿವೆ. ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು. ಬಾಲ್ಯಪ್ರಾಯದಿಂದಲೇ ಕ್ರಮವಾಗಿ ಬೆಳೆದುಬರಬೇಕಾಗಿರುವ

ವಾಚನಪ್ರೀತಿಯು
ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು.

ವಿಳಾಸ:— ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ನವೀನ ಪುಸ್ತಕ!   ನವೀನ ಪುಸ್ತಕ!!

ಹಿಂದೂ ವ್ರತವಿವೇಕ

ಲೇಖಕ: ಸಿದ್ಧಮನೆ ಆತ್ಮಾರಾಮ ಶಾಸ್ತ್ರಿ.

ಕ್ರಯ—ಪ್ರತಿ ಒಂದಕ್ಕೆ ಆಣೆ 10.

ವಿಳಾಸ:— ಮ್ಯಾನೇಜರ್, ಶಾರದಾ ಛಾಪಖಾನೆ.

ಎಲ್ಲಾ ತರದ ಸ್ಯಾಕಲುಗಳ ದುರುಸ್ತಿಗಳನ್ನೂ, ಸ್ಯಾಕಲುಗಳ ಉಪಕರಣಗಳನ್ನೂ ಸುಲಭಕ್ರಯದಲ್ಲಿ ಮನಸ್ಸಿಗೆ ತೃಪ್ತಿಕರವಾಗಿ ಒದಗಿಸಿಕೊಡುವ

ಮಂಗಳೂರು ಸ್ಯಾಕಲ್ ಸ್ಟೋರ್ಸ್

(1917ನೇ ಇಸವಿಯಲ್ಲಿ ಮಂಗಳೂರಲ್ಲಿ ನಡೆದ ವಸ್ತುಪ್ರದರ್ಶನದಲ್ಲಿ ಬಹುಮಾನಪತ್ರವನ್ನು ಪಡೆದ.)

ಇವರಿಂದ

ಬರೇ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ

ಡೆಂಟಲೀನ್

ಈ ದಂತಾಮೃತವು ಎಲ್ಲಾ ತರದ ಹಲ್ಲುನೋವುಗಳಿಗೂ ಒಸಡಿಗೂ ಕೈಕಂಡ ದಿವ್ಯ ಔಷಧ.

ಹಲ್ಲುನೋವು ಶುರುವಾದ ಕೂಡಲೇ 2 ಯಾ 3 ತೊಟ್ಟುಗಳನ್ನು ಹಿಂಗಳಿಗೆ ಹಾಕ್ಕಲ್ಲಿ ಗುಣಕರ. ದೀರ್ಘಕಾಲದ ನೋವುಗಳಿಗೆ ಈ ಔಷಧವನ್ನು ಒಂದು ವಾರದವರೆಗೆ ಉಪಯೋಗಿಸಿದ್ದಲ್ಲಿ [illegible] ಒಮ್ಮೆ 1 ಶೀಸೆಯನ್ನು ತರಿಸಿ ಉಪಯೋಗಿಸಿದ್ದಲ್ಲಿ ಖಾತ್ರಿಯಾಗುವದು.

ಶೀಸೆ ೧ರ ಕ್ರಯ ರೂ. 1—0—0. ವಿ. ಪಿ. ಚಾರ್ಜು ಪ್ರತ್ಯೇಕ. ಒಮ್ಮೆ ೧೨ ಶೀಸೆ ತರಿಸುವವರಿಗೆ ವಿ. ಪಿ. ಚಾರ್ಜು ಇಲ್ಲದೆ ಕಳುಹಿಸಲಾದೀತು.

ಎಲ್ಲಾ ಊರುಗಳಲ್ಲಿಯೂ ಏಜಂಟರು ಬೇಕಾಗಿದೆ. ಹೆಚ್ಚಿನ ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಮಂಗಳೂರು ಸ್ಯಾಕಲ್ ಸ್ಟೋರ್ಸ್,
ಮಂಗಳೂರು, ದ. ಕನ್ನಡ.

ವಿಶೇಷ ಸೂಚನೆ:— ಈ ಔಷಧಿಯನ್ನು [illegible] 10 [illegible]

ಯುದ್ಧ ವಿಚಾರ

ಅಮೇರಿಕದಿಂದ ಸೈನ್ಯವು ಸಮೃದ್ಧವಾಗಿ ಬರುವ ವರೆಗೆ ಮಿತ್ರಮಂಡಲಿಯು ಈ ಪಶ್ಚಿಮ ಯುದ್ಧರಂಗದಲ್ಲಿ ತಡೆಯುವ ಕ್ರಮವನ್ನು ಮಾತ್ರ ಅನುಸರಿಸಿ, ಎಡೆ ಸಿಕ್ಕಿದಾಗ ಅಲ್ಲಲ್ಲಿ ಶತ್ರುಸೈನ್ಯದಲ್ಲಿ ಬಿರುಕುಗಳನ್ನು ಮಾಡಬಹುದೆಂತ ಹಿಂದಿನ ಕೆಲಸಗಳಿಂದ ಗೊತ್ತಾಗುತ್ತದೆ.

ಈ ರೀತಿಯಾಗಿ ಮಿತ್ರಮಂಡಲಿಯವರ ಸೈನ್ಯದ ಹೆಚ್ಚಿನ ಭಾಗವು ಪಶ್ಚಿಮ ಯುದ್ಧಕ್ಕೆ ಅಂಟಿಕೊಂಡಿರುವಾಗ, ಜರ್ಮನಿಯು ಬ್ರಿಟಿಷ ಸಾಮ್ರಾಜ್ಯಕ್ಕೆ ಇನ್ನೊಂದು ಕಡೆಯ ಏಟು ಕೊಡಲು ಯತ್ನಿಸುತ್ತಿದೆ ಎಂದು ಹಿಂದೆ ಸ್ವಲ್ಪ ಸೂಚನೆ ಮಾಡಿದೆವು. ಕಪ್ಪುಸಮುದ್ರವು ತೀರಾ ಈಗ ಜರ್ಮನಿಗೆ ಸೇರಿದ ವಿಹಾರದ ಕೊಳದಂತಾಯಿತು. ಅದರಲ್ಲಿರುವ ಮುಖ್ಯ ಬಂದರುಗಳು ಸಿವೆಸ್ಟೊಪೋಲ್, ಒಡೆಸ್ಸಾ, ಬಾಟೂಮ ಇವು ಈಗಲೆ ಜರ್ಮನ್ ಮತ್ತು ತುರ್ಕಿಯ ವಶವಾದವು. ಅದರೊಂದಿಗೆ ಕೌಕಾಸ್ಸದ ಕೆಳಗಿರುವ ಕಾರ್ಸ ಸಹಾ ತುರ್ಕಿಯ ವಶವಾಯಿತು. ಹೀಗಾದ್ದರಿಂದ ಹಿಂದೆ ಹೇಳಿದಂತೆ ಅಫಘಾನಿಸ್ಥಾನಕ್ಕೆ ಬರುವ ಹೆದ್ದಾರಿಗೆ ಈಗ ಅಡ್ಡಕಟ್ಟುವವರಿಲ್ಲವೋ ಎಂಬಂತೆ ಕಾಣುತ್ತದೆ. ಈ ಹೆದ್ದಾರಿ ಎರಡು ತರವಾಗಿದೆ. ಬರ್ಲಿನದಿಂದ ಒಡೆಸ್ಸಾ, ಅಲ್ಲಿಂದ ರೊಸ್ಟೊಫ, ಅಲ್ಲಿಂದ ಮೊಸ್ಕೊವಿನಾಗಿ ಸೈಬೇರಿಯ ರೈಲ್ವೆಮಾರ್ಗವಾಗಿ ಸಮಾರಾ, ಅಲ್ಲಿಂದ ಸಮರಖಂಡ್ (ತುರ್ಕಿಸ್ಥಾನ) ಅಲ್ಲಿಂದ ಮರ್ವ ಅಲ್ಲಿಂದ ಅಫಘಾನಿಸ್ಥಾನದ ಗಡಿಯಲ್ಲಿರುವ ಖುಷ್ಕ ಎಂಬಲ್ಲಿ ವರೆಗೆ ರೈಲು ಇದೆ. ರೊಸ್ಟೋಫದಿಂದ ಮೊಸ್ಕೋವಿನಾಗಿ ಬರುವ ದಾರಿಯಲ್ಲಿ ಒಂದು ವೇಳೆ ಜನರಲ್ ಕೊರ್ನಿಲೋಫನ ಕೊಸ್ಸೆಕರ ತಂಡವು ಒಂದು ವೇಳೆ ಅಡ್ಡಕಟ್ಟಬಹುದೆಂಬುದರಿಂದಲೇ ಜರ್ಮನಿಯು ರುಕ್ರೇನದ ರಾಜಿಯೊಡನೆ ಮೇಲೂ ಈ ಭಾಗಗಳಲ್ಲಿ ಸೈನ್ಯವನ್ನು ಓಡಾಡಿಸಿ, ಅಲ್ಲಲ್ಲಿ ಮುಖ್ಯ ಸ್ಥಳಗಳನ್ನು ಹಿಡಿದು ಬಲಪಡಿಸಿಕೊಳ್ಳುವ ತವಕದಲ್ಲಿದೆ. ಇನ್ನೊಂದು ಕಡೆ ತುರ್ಕಿಯ ಇನ್ನು ಸಮುದ್ರದ ದಾರಿಯಾದ ಬಟೂಮದಿಂದ ಕೆಸ್ಪಿಯನ್ ಸಮುದ್ರದ ಬಾಕೂಬಂದರ ಅಲ್ಲಿಂದ ಕಡಲ ದಾಟಿ ಕ್ರಾಸ್ನೊವೊಡಸ್ಕ ಅಲ್ಲಿಂದ ಮರ್ವಕ್ಕಾಗಿ ಖುಷ್ಕ ಪಟ್ಟಣಕ್ಕೆ ಹೋಗಲು ಯತ್ನಿಸುತ್ತಿದೆ ಎಂದು ತೋರುವುದು. ಈಗಲೇ ಇವೆರಡು ದಾರಿಗಳಿಂದ ಜರ್ಮನ ಮತ್ತು ತುರ್ಕಿಯ ಸೈನ್ಯಗಳು ಅಫಘಾನಿಸ್ಥಾನದ ಗಡಿಗೆ ಬಂದೀತೆಂದು ಹೇಳಲಾರೆವು. ಆದರೆ ಈ ದಾರಿಯಲ್ಲಿರುವ ಹೆಚ್ಚಿನ ಜನಾಂಗಗಳ ಮತ [illegible] ಮತದವರಾಗಿರುವದರಿಂದ ಅವುಗಳನ್ನು ಕೆರಳಿಸಿ ಇದು ಮತಸಂಬಂಧವಾದ ಯುದ್ಧವೆಂಬ [illegible]ವನ್ನು ತೀರಿ ಜರ್ಮನಿಯು ತನ್ನ ಕಾರ್ಯ ಸಾಧಿಸಿಕೊಳ್ಳಲಿಕ್ಕೆ ಹಿಂಜರಿಯದು. ಸರ್ ಫ್ರೆಡ್ರಿಕ್ ಯಂಗ್ ಹಸಬೆಂಡರು ಮದ್ರಾಸು ಮೈಲ್ ಪತ್ರಿಕೆಯ ಒಂದು ಸಂಚಿಕೆಯಲ್ಲಿ ಪ್ರಕಟಿಸಿದ ಮೇರೆಗೆ ಜರ್ಮನಿಗೆ ಯುದ್ಧಾರಂಭದಿಂದಲೂ ಹಿಂದುಸ್ಥಾನಕ್ಕೆ ಬರುವ ಕಾಂಕ್ಷೆ ಇತ್ತಂತಲೂ, ಯುದ್ಧದ ಮೊದಲೇ ಬರ್ಲಿನದಲ್ಲಿ ಜರ್ಮನ ಕೈಸರನು ತನ್ನ ದೇಶದ ಪ್ರಮುಖ ಧನವಂತರನ್ನು ಕರೆಸಿ ಆಲೋಚಿಸುವಾಗ ಈ ವಿಷಯವನ್ನು ಸ್ಪಷ್ಟವಾಗಿ ಹೇಳಿ ಹಿಂದುಸ್ಥಾನದಿಂದ [illegible] ಮುಂದೆ ಕಾಲು ಚಾಚುವ ಅಭಿಲಾಷೆಯನ್ನು ವ್ಯಕ್ತಪಡಿಸಿ ಅಲ್ಲಿ ನೆರೆದ [illegible]ರಿಗೆ [illegible]ಯಲ್ಲಿ ೧೦,೦೦೦ ಎಕ್ರೆ ಸ್ಥಳವನ್ನು ಕೃಷಿಯ ಬಗ್ಗೆ ಕೊಡುವದಾಗಿ ವಾಗ್ದಾನ ಮಾಡಿದನೆಂತಲೂ ಹೇಳುತ್ತಾರೆ. ಇಷ್ಟಲ್ಲದೆ ಯುದ್ಧ ಆರಂಭಿಸಿದ ನಂತರ ೧೯೧೫ನೇ ಇಸವಿಯಲ್ಲಿ ಜರ್ಮನ ಗೂಢಚಾರರು ಅಫಘಾನಿಸ್ಥಾನದ ಅಮೀರ ಸಾಹೇಬರನ್ನು ಭೇಟ್ಟಿಸಿ ಅವರಿಗೆ ಬ್ರಿಟಿಷ ಸಾಮ್ರಾಜ್ಯದ ಮೇಲೂ, ಇಂಡಿಯನ್ ಸರಕಾರದ ಮೇಲೂ ಇರುವ ವಿಶ್ವಾಸವನ್ನು ಕರಗಿಸಿ [illegible] ಹೋಗುವಂತೆ ಯತ್ನಿಸಿದರು. ಈ ಗೂಢಚಾರರು ಹಿಂದೀ ಸಾಮಂತರಾಜರಿಗೂ ದೊಡ್ಡ ಫರ್ಮಾನೆಗಳನ್ನು ತಂದಿದ್ದರಂತೆ. ಆದರೆ ಇವರೆಲ್ಲ ಬ್ರಿಟಿಷರಿಗೆ ಒಪ್ಪಿಸಲ್ಪಟ್ಟರು; ಅಮೀರಸಾಹೇಬರ ವ್ಯಕ್ತಿಯು ಕದಡಲಿಲ್ಲವೆಂದು ಗೊತ್ತಾಗುತ್ತದೆ.

ಜರ್ಮನ ಒಳಸರಿಯು ಇಷ್ಟು ದುಂದರಿಸಿತೆಂದರೆ ಇನ್ನು ದಾರಿ ನಿರಾತಂಕವಾಗಿದ್ದರೆ ಜರ್ಮನ ಮತ್ತು ತುರ್ಕಿಯ ಫಿರಂಗಿಗಳು ಇನ್ನು ಒಂದೆರಡು ವರ್ಷದೊಳಗೆ ಅಫಘಾನಿಸ್ಥಾನದ ಗಡಿಗೆ ಬಂದೀತೆಂದರೆ ಏಕಾಂಗಿಯಾದ ಅಮೀರ ಸಾಹೇಬರಿಗೆ ತುಂಬಾ ಕಷ್ಟಬಂದೀತು. ಆದ್ದರಿಂದ ಈಗಲೇ ಅಮೀರ ಕೈಯನ್ನು ಬಲಪಡಿಸುವದಲ್ಲದೆ ಹಿಂದುಸ್ಥಾನದ ವಾಯವ್ಯ ಗಡಿಗಳನ್ನು ಭದ್ರಪಡಿಸಿ ನಮ್ಮ ಮಾತೃಭೂಮಿಯು ತನ್ನ ಸ್ವಾತಂತ್ರ್ಯವನ್ನು ಇನ್ನು ಶತ್ರುವಿಗೆ ಬಿಡದಂತೆ ಮಾಡದಂತೆ ಈಗಲೇ ನಾವು ಬೇಗನೆ ಭದ್ರಮಾಡಿಕೊಳ್ಳಬೇಕೆಂದು ವೈಸರಾಯಿ ಪ್ರಭುಗಳೂ ಬ್ರಿಟಿಷ ಮುಖ್ಯಮಂತ್ರಿಗಳೂ ಹೇಳಿದ ಮಾತು ನಮಗೆ ಶಿರಸಾವಹವಾಗಿದೆ.

ವೈಸರಾಯಿ ಪ್ರಭುಗಳು ಆಮಂತ್ರಿಸಿದ ಡಿಲ್ಲಿಯ ಪರಿಷತ್ತಿನ ಇಷ್ಟಾರ್ಥದ ಮೇರೆಗೆ ನಾವು ಈಗ ಅವರು ಕೇಳುವ ಅರ್ಧಮಿಲ್ಲಿಯ ಜನರನ್ನು ಸೈನ್ಯಕ್ಕೆ ಒದಗಿಸಿ ಕೊಟ್ಟರೆ ಸರ್ ಸುಬ್ರಮಣ್ಯ ಅಯ್ಯರವರು ಅಮೇರಿಕದ ಪ್ರೆಸಿಡೆಂಟ ನಾಮದಾರ ಡಾ ವಿಲ್ಸನರಿಗೆ ನಿವೇದಿಸಿದ ಪತ್ರದಲ್ಲಿ ಹೇಳಿದ ಮಾತು ಶಕ್ಯವಲ್ಲವೆಂದು ಲೋಕಕ್ಕೆ ಪ್ರಕಟವಾದೀತು. ಆ ಪತ್ರದಲ್ಲಿ ಅವರು ಹಿಂದುಸ್ಥಾನಕ್ಕೆ ರಾಜಕೀಯ ಹಕ್ಕುಗಳನ್ನು ಹೆಚ್ಚಿಸಿ ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಕೊಟ್ಟಲ್ಲಿ ೧೦ ಮಿಲ್ಲಿಯ ಜನರು ಯುದ್ಧಕ್ಕೆ ನೆರವಾಗುವರು" ಎಂದು ಹೇಳಿರುವರು. ವೈಸರಾಯಿಯವರು ಡಿಲ್ಲಿಯ ಪರಿಷತ್ತಿನಲ್ಲಿ ರಾಜಕೀಯದ ಮಾತನ್ನೆ ಎತ್ತಲಿಲ್ಲ. ಆ ವಿಷಯವಾಗಿ ಒನರೆಬಲ್ ಖಾಪರ್ಡೆಯವರು ತರಬೇಕೆಂದಿದ್ದ ಠರಾವನ್ನು ಪರಿಷತ್ತಿನಲ್ಲಿ ಚರ್ಚೆಗೆ ಇಡದೆ ಕಾರಣಗಳನ್ನು ಕೊಟ್ಟು ತಮ್ಮನ್ನು ತೆಗದುಹಾಕಿದರು. ಆ ಠರಾವುಗಳನ್ನು ರಾಜಕೀಯ ಚಳವಳವಾದಿಗಳು ಒಪ್ಪಲಿ, ಅಥವಾ ಒಪ್ಪದಿರಲಿ ಮನೆ ಉಳಿದ ಮೇಲಲ್ಲವೆ ರಾಜ್ಯದಲ್ಲಿ ಅಧಿಕಾರ! ಮನೆಮಾರು ಅಳಿಯುವಂತೆ ಶತ್ರುವು ಗಢೆಯನ್ನು ಎತ್ತಿರುವಾಗ ನಾವು ಬೇರೆ ಯಾವ ಮಹತ್ವದ ವಿಷಯಗಳನ್ನಾಗಲಿ ಸ್ವಲ್ಪಕಾಲಕ್ಕೆ ಒಂದು ಬದಿಗೆ ಇಟ್ಟು ಮಾತೃಭೂಮಿಯನ್ನು ಶತ್ರುವಿನ ಸೈನ್ಯವು ತುಳಿದು ತಾಂಡವವಾಡದಂತೆ ಮಾಡುವುದು ನಮ್ಮ ಕರ್ತವ್ಯ! ಒಂದು ಸಲ ಕೈಕೈ ಹಿಡಿದು ಜಾತಿಭೇದ, ಮತಭೇದ, ವರ್ಣಭೇದ ಲಕ್ಷಿಸದೆ ಯುದ್ಧಮಾಡಿ ನಮ್ಮ ಅವಾಂತರ, ನಮ್ಮ ದೇಶಕ್ಕೆ ಅವಾಂತರ, ನಮ್ಮ ಸ್ವಾತಂತ್ರ್ಯಕ್ಕೆ ಅವಾಂತರ ಅಷ್ಟೇಕೆ ಇಡೀ ಭೂಲೋಕದ ಶಾಂತಿಗೆ ಕಂಟಕಪ್ರಾಯವಾಗಿರುವ ಈ ಅವಾಂತರವನ್ನು ಮುರಿದರೆ ಅನಂತರ ಹಿಡಿದ ಕೈಯನ್ನು ತುರಿಯುವರಾರು?

ಯೂರೋಪದ ಮಹಾ ಯುದ್ಧ.

ಹಡಗುಗಳ ನಾಶ—ಪ್ರತಿವಾರದಲ್ಲಿ ಶತ್ರುಗಳ ಟೊರ್ಪೆಡೊ ಮೂಲಕ ನಾಶಹೊಂದುವ ಹಡಗುಗಳ ಸಂಖ್ಯೆಯನ್ನು ಕೊಡುವ ಬದಲಾಗಿ ಅವುಗಳ ಪರಿಮಾಣವನ್ನು ಈಗ ಕೊಡಲು ಸರಕಾರದವರು ನಿರ್ಣಯಿಸಿರುವರು.

ಎಪ್ರಿಲ್ ೨೭ನೆ ತಾರೀಕಿಗೆ ಕೌಸ್ಲಿಪ್ ಎಂಬ ಬ್ರಿಟಿಷ ಹಡಗು ಮುಳುಗಿ ಹೋಯಿತು. ೬ ಮಂದಿ ಅಧಿಕಾರರೂ ಒಬ್ಬ ಕಲಾಸಿಯೂ ಸಿಕ್ಕಲಿಲ್ಲ. ಒಂದು ಟೊರ್ಪೆಡೊ ಹಡಗು ಸಹಾ ಮುಳುಗಿ ಹೋಗಿ ಒಬ್ಬ ಅಧಿಕಾರನೂ ೧೨ ಕೆಲಸಗಾರರೂ ಕಾಣದೆ ಹೋದರು.

[illegible]

ಇಟಲಿ ಯುದ್ಧರಂಗ—[illegible] ಗೊಡೀಕ ಭೂಮಿಯ ಪಶ್ಚಿಮದಲ್ಲಿಯೂ ಬ್ರಿಟಿಷರು ಯುದ್ಧದಲ್ಲಿ ಶತ್ರುಗಳ ಕೆಲವು ಸೈನ್ಯವನ್ನು ನಾಶಮಾಡಿದರು. ಬ್ರೆಂಟಾದ ಬಯಲಲ್ಲಿ ಫಿರಂಗಿಗಳ ಬಹಳ [illegible] ಕೇಳಿಸುತ್ತಿದೆ. ಗ್ರಾಪಾ ಕೆರೆಯೂ [illegible]ನಲ್ಲಿಯೂ ಯುದ್ಧ ಜೋರಾಗಿ ನಡೆಯುತ್ತಿದೆ.

ಪೆಲೆಸ್ತಿನ ಯುದ್ಧರಂಗ—ಜೋರ್ಡನ ನದಿಯ ಪೂರ್ವಭಾಗದಲ್ಲಿ ಬ್ರಿಟಿಷ ಸೈನ್ಯವು ಎಸೊಲ್ಟ ಎಂಬ ಸ್ಥಳಕ್ಕೆ ಸಮೀಪವಾಗಿಯೂ ಪಶ್ಚಿಮಕ್ಕೆ ಮುಡ್ಡಾ ಎಂಬ ದಕ್ಕೆ ಸಮೀಪವಾಗಿಯೂ ತಲುಪಿತು.

ಮೆಸೊಪೊಟೇಮಿಯ ಯುದ್ಧರಂಗ—ಬ್ರಿಟಿಷ ಸೈನ್ಯವು ಬಾಗ್ದಾದಕ್ಕೆ ಉತ್ತರದಲ್ಲಿ ಮುಂದರಿಸಿ ೨೭ನೆ ತಾರೀಕಿಗೆ ಕ್ರಿಫ್ರಿಯನ್ನು ಮುಟ್ಟಿದಾಗ ಶತ್ರು ಸೈನ್ಯವು ಕಿರ್ಕುಕ್ ಎಂಬಲ್ಲಿಗೆ ಬೇಗಬೇಗನೆ ಹಿಂದೆ ಸರಿಯಿತು. ಆದರೆ ಬ್ರಿಟಿಷ ರಾಹುತರು ಕಡಲೆ ಬೆನ್ನಟ್ಟಿ ೧೦೦ ಮಂದಿಯನ್ನು ಕೊಂದು/[illegible] ಮಂದಿಯನ್ನು ಸೆರೆಹಿಡಿದು ಯುದ್ಧಸರಂಜಾಮನ್ನು ಹಿಡಿದರು. ಅಲ್ಲಿಂದ ತೂಜ್ ಖೂರಮೇಟಲ್‌ಗೆ ಮುಟ್ಟಿತು. ಇನ್ನೊಂದು ಸೈನ್ಯವು ಕಾಫ್ರಿ ನದಿಯ ದಡಕ್ಕೆ ಮುಟ್ಟಿತು. ತೂಜಖೂರಮೇಟಲನ್ನು ಹಿಡಿಯುವಾಗ ೩೦೦ ಮಂದಿ ಸೈನಿಕರನ್ನೂ ೫ ಫಿರಂಗಿಗಳನ್ನೂ ಬ್ರಿಟಿಷ ಸೈನ್ಯವು ಹಿಡಿಯಿತು.

ಮೂಸ್ ಮತ್ತು ಬಿಡೆಬಾರ ಎಂಬ ಸ್ಥಳಗಳಿಗೆ ನಡುವೆ ಇರುವ ಭಾಗದಿಂದ ಪೆಲೆಸ್ತಿನ್ ಯುದ್ಧರಂಗದಲ್ಲಿ ತುರ್ಕಿಯರು ಬಿಟ್ಟು ಹೋದರು. ಶರೀಫ್ ಫೈಸಾಲನ ಸೈನ್ಯವು ಮೂಸ್ ಪ್ರದೇಶದಲ್ಲಿ ಕಾದಿರಿಲ್ ಹಾಜ ಸ್ಟೇಶನ್ ಹಿಡಿದುಕೊಂಡು ರೈಲು ರಸ್ತೆ ಹಲವು ಕಡೆಯಲ್ಲಿ ನಾಶಮಾಡಿ [illegible] ಸೇತುವೆಗಳನ್ನು ಮುರಿದು ಬಿಟ್ಟಿತು.

ಜರ್ಮನರು ಬೇಟ್ಯೂಬದಲ್ಲಿ ಆದ ನಷ್ಟವನ್ನು ಸರಿಗೊಳಿಸಲಿಕ್ಕೆ ಬಹಳ ಪ್ರಯತ್ನದಲ್ಲಿದ್ದಾರೆ. ಆದರೆ ಅವರ [illegible] ಇನ್ನು [illegible] ಅನುಕೂಲವಾಗಲಿಲ್ಲ.

ಪಶ್ಚಿಮ ಯುದ್ಧರಂಗ—ಇಲ್ಲಿ ಉತ್ತರಭಾಗದಲ್ಲಿ ಜರ್ಮನರು ೭ ಮೈಲು ಉದ್ದಕ್ಕೆ [illegible] ಮೈಲು ಮುಂದರಿಸಿ ಕೆಮ್ಮೆಲ್ ದಿಣ್ಣೆಯನ್ನು ಹಿಡಿದರು. ಕೆಮ್ಮೆಲ್ ದಿಣ್ಣೆ ಪ್ರಾಂತ್ಯದಲ್ಲಿ ಸಾಕಷ್ಟು ಎತ್ತರವಾಗಿದ್ದು ಸುತ್ತಲ ಪ್ರದೇಶದಲ್ಲಿ ದೂರದ ವರೆಗೆ ಕಾಣಿಸುವದರಿಂದ ಆ ಸ್ಥಳವು ಜರ್ಮನರಿಗೆ ತುಂಬಾ ಅನುಕೂಲವಾಗಬಹುದು. ಆದರೆ ಅಲ್ಲಿಂದ ಮುಂದರಿಸಲು ನೋಡಿದಾಗ ಫ್ರೆಂಚ ಮತ್ತು ಬ್ರಿಟಿಷ ಸೈನ್ಯವು ಅಡ್ಡಕಟ್ಟಿ ಬಹಳ ಸೈನ್ಯವನ್ನು ನಾಶಮಾಡಿದ [illegible] ಸ್ವಲ್ಪ ಸಮಯದ ವರೆಗೆ ಯುದ್ಧಕ್ಕೆ ವಿರಾಮ ಬಂದಿತ್ತು. ಈಗ ಪುನಃ ಯುದ್ಧ ತೊಡಗಿದೆ. ಆದರೆ ಈಪರನ್ನು ಹಿಡಿಯುವುದಕ್ಕೆ ಮುಂದರಿಸಿದ್ದು ಈ ವರೆಗೆ ಕೈಗೂಡಲಿಲ್ಲ.

ಈ ಯುದ್ಧರಂಗಕ್ಕೆ ಈಗ ಸರ್ವರ ದೃಷ್ಟಿಯು ತಿರುಗಿದೆ. ಇಲ್ಲಿ ಈಗಲೇ ಜರ್ಮನರನ್ನು ಮುರಿಯಬಹುದೆಂಬ ಕಾಂಕ್ಷೆಯು ನೆರವೇರಲಾಗದೆಂದು ಬಲ್ಲವರು ಸ್ಪಷ್ಟವಾಗಿ ಹೇಳುತ್ತಾರೆ. ಒಂದು ಕಡೆ ಫ್ರೆಂಚ ಕರಾವಳಿಯ ಮುಖ್ಯ ಬಂದರುಗಳ ಕಡೆಗೂ ಇನ್ನೊಂದು ಕಡೆ ಎಮಿಯನ್ಸ್ ಅಲ್ಲಿಂದ ಪೆರಿಸ್ ಕಡೆಗೆ ಹೋಗುವುದು ಮತ್ತು ಫ್ರೆಂಚ ಮತ್ತು ಬ್ರಿಟಿಷ ಸೈನ್ಯಗಳ ಮಧ್ಯೆಯಾಗಿ [illegible] ಇವೇ ಜರ್ಮನಿಯ ಮುಖ್ಯ ಉದ್ದೇಶಗಳು. ಆದರೆ ಮಿತ್ರಮಂಡಲಿಯ ಮುಖ್ಯ ಸೇನಾಪತಿಯು [illegible] ಸೈನ್ಯವು ಇನ್ನು ೫ ಯಾ ೬ ತಿಂಗಳೊಳಗೆ ಒಂದು ಪಶ್ಚಿಮ ರಂಗಕ್ಕೆ ಸೇರುವ ವರೆಗೆ [illegible] ಕಾಯುತ್ತದೆ.

ವಿದೇಶ ವೃತ್ತಾಂತ

ನ್ಯೂ ಫೌಂಡ್ ಲೇಂಡ್—ಇಲ್ಲಿ ಕಡ್ಡಾಯ [illegible] ಕಾನೂನು ಮೇಲಿನ ಸಭೆಯಲ್ಲಿ ಚರ್ಚೆಗೆ ಬಂದು ಮಂಜೂರಾಗುವ ಸಂಭವವಿದೆ.

ಜರ್ಮನಿ—ಜರ್ಮನ ಕೈಸರನಿಗೆ ಭೇಟಿಕೊಡಲಿಕ್ಕೆ ಒಸ್ಟ್ರಿಯದ ಚಕ್ರವರ್ತಿಯಾದ ಕಾರ್ಲನೂ ಅವನ ಮಂತ್ರಿಯೂ ಹೋಗಿರುವುದರಿಂದಲೂ ಕಾರ್ಲನ ಕಡೆಯಿಂದ [illegible]ಯಾಗಿ ಇಟಲಿಯೊಡನೆ ಸಂಧಿಯ ಮಾತು ಬಂದಿದ್ದರಿಂದಲೂ ಏನೋ ಗೊಂದಲ ನಡೆಯುವುದಾಗಿ ಕಂಡುಬರುತ್ತದೆ.

ಲಂಡನ್—ಸರ್ ಇ ಕಾರ್ಸನರು (ಐರ್ಲಂಡದ ಹೋಮ್ ರೂಲಿಗೆ ವಿರೋಧಪಕ್ಷದವರು) [illegible] ಯೂನಿಯನಿಸ್ಟ್ ಕಮಿಟಿಯವರಿಗೆ ಬರೆದ ಮೇರೆಗೆ ಈ ದುಸ್ತರ ಸಮಯದಲ್ಲಿ ಹೋಮ್ ರೂಲ್ ಚಳವಳವು ಎಂದಿಗೂ ಒಪ್ಪತಕ್ಕದ್ದಲ್ಲವೆಂದು ಅವರ ಅಭಿಪ್ರಾಯ. ಹೀಗಾದ್ದರಿಂದ ಹೋಮ್ ರೂಲ್ ಐರ್ಲಂಡಿಗೆ ಕೊಡುವ ವಿಷಯದಲ್ಲಿ ಹಲವು ಅಪಾಯಕರವಾದ ಅಭ್ಯಂತರಗಳು ಇರುವ ಕಾರಣ ಆ ಕೆಲಸವನ್ನು ಮುಂದರಿಸುವರೋ ಎಂಬಂತೆ ತೋರುತ್ತದೆ.

ಲಂಡನ್—ಗ್ರೇಟ್ ಬ್ರಿಟನ್ನಿನಲ್ಲಿ ಈ ವರ್ಷದ ಬಟಾಟೆ ಫಸಲು ೧೯೧೬ನೆ ಇಸವಿಯ ಫಸಲಿಗಿಂತ ಸೇಕಡಾ ೨೫ರಷ್ಟು ಹೆಚ್ಚಾಗಿದೆಯಂತೆ.

ತುರ್ಕಿ—ಕೋನ್‌ಸ್ಟಂಟಿನೋಪಲದಲ್ಲಿ ಆಹಾರದ ಕುಟ್ಟಿ ಬಹಳವಿದೆ ಎಂದು ಕೇಳಿಸುತ್ತದೆ.

ಸ್ವಿಜರ್‌ಲೇಂಡ್—ಸ್ವಿಜರ್‌ಲೇಂಡ್ ಮತ್ತು ಮಿತ್ರಮಂಡಲಿಯ ಪ್ರತಿನಿಧಿಗಳೊಳಗೆ ಆದ ಒಪ್ಪಂದದ ಮೇರೆಗೆ ಎಂಟು ತಿಂಗಳ ವರೆಗೆ ಕೆಲವು ವಿಧದ [illegible]ವನ್ನು ಸ್ವಿಜರ್‌ಲೇಂಡದವರು ಒದಗಿಸಿಕೊಟ್ಟು ಅದಕ್ಕೆ ಪ್ರತಿಯಾಗಿ ಕೆಲವು ಆಹಾರಸಾಮಗ್ರಿಗಳನ್ನು ಪಡೆಕೊಳ್ಳುವಂತೆ ಏರ್ಪಾಡು ಆಗಿದೆ.

ನೋರ್ವೆ—ನೋರ್ವೆಯವರ ಹಡಗುಗಳನ್ನು ಅಮೇರಿಕದವರು ಬಾಡಿಗೆಗೆ ಉಪಯೋಗಿಸಿ ಅದಕ್ಕೆ ಪ್ರತಿಯಾಗಿ ಕೆಲವು ಅಗತ್ಯ ಸಾಮಗ್ರಿಗಳನ್ನು ನೋರ್ವೆಯವರಿಗೆ ಕೊಡುವಂತೆ ನಿಶ್ಚಯಮಾಡಿರುವರು.

ಸ್ವೀಡನ್—ಸ್ವೀಡನದವರಿಗೆ ಕಾಲು ಮಿಲಿಯ ಟನ್ನು ಧಾನ್ಯ, ಮತ್ತು ೩೦ಸಾವಿರ ಟನ್ನು ಆಹಾರಸಾಮಗ್ರಿಗಳನ್ನು ಒದಗಿಸಿಕೊಡುವ ಕರಾರ ಮೇಲೆ ಮಿತ್ರಮಂಡಲಿಯವರ ಬಂದರುಗಳಲ್ಲಿ ಇರುವ ಸ್ವೀಡನ್ ದೇಶದ ಹಡಗುಗಳನ್ನು ಸ್ವೀಡನ್ ಸರಕಾರದವರಿಂದ ಮಿತ್ರಮಂಡಲಿಯವರ ಉಪಯೋಗಕ್ಕೆ ಒದಗಿಸಿಕೊಟ್ಟಿರುವರು.

ರಷ್ಯ—[illegible]

[illegible] ಕಡೆಯಲ್ಲಿ [illegible] ಒಬ್ಬನೆ [illegible] ಕಾರ್ಪೊರೇಶನ್ನು [illegible] ವರ್ತಮಾನ ಕೇಳಿಸುತ್ತದೆ. ಆದರೆ ನಿಜವಾದ ಸುದ್ದಿಯೋ ಎಂದು ಸ್ಪಷ್ಟವಾಗಿ ತಿಳಿಯುವದಿಲ್ಲ.

ಇಜಿಪ್ಟ್—ಇಜಿಪ್ಟ್ ಸರಕಾರದವರು ಯುದ್ಧಖರ್ಚಿಗಾಗಿ ಬ್ರಿಟಿಷ ಸರಕಾರಕ್ಕೆ ೩ಮಿಲಿಯ ಪೌಂಡು ಕೊಡುವದಾಗಿಯೂ ಇನ್ನು ೫ಮಿಲಿಯ ಪೌಂಡು ಈ ವರ್ಷದಲ್ಲಿ ಕೊಡುವ ಬಗ್ಗೆ [illegible]ವುದಾಗಿಯೂ ತಿಳಿಸಿರುವರು.

ಒಳದೇಶ ವೃತ್ತಾಂತ.

ಮದ್ರಾಸು—ರಾಷ್ಟ್ರೀಯ ಶಿಕ್ಷಣದ ಮದ್ರಾಸು ಸೆಂಟ್ರಲ್ ಕಮಿಟಿಯವರು ಮದ್ರಾಸಿನಲ್ಲಿ ಒಂದು 'ಕಾಲೇಜ್ ಒಫ್ ಕಾಮರ್ಸ' ಅಥವಾ ವರ್ತಕ ವಿದ್ಯಾಶಿಕ್ಷಣ ಶಾಲೆಯನ್ನು ಏರ್ಪಡಿಸಲಿಕ್ಕಿರುವರು. ಇದಕ್ಕೆ ತಿಂಗಳಿಗೆ ೩೦ ರೂಪಾಯಿ ಸಿಕ್ಕುವ ೩೦ ವೇತನಗಳನ್ನು ಕೊಡಲು ನಿಶ್ಚಯಿಸಿರುವರು. ಈ ವೇತನಗಳು ೩ವರ್ಷಗಳ ವರೆಗೆ ಕೊಡಲ್ಪಡುವವು. ಇದಕ್ಕಾಗಿ ಪ್ರತಿಯೊಂದು ಜಿಲ್ಲೆಯವರ ಒಂದೊಂದು ಸ್ಕೊಲರ್‌ಶಿಪ್ ವೇತನವನ್ನು ಕೊಡುವ ಹಣವನ್ನು [illegible] ಮತ್ತು ಹಿಂದೂದೇಶದಲ್ಲಿ ಈ ಮೊದಲು [illegible] ಅಥವಾ ಈಗ [illegible]ವಾಗಿರುವ ಮಹಾಪುರುಷರ ಸ್ಮರಣಾರ್ಥವಾಗಿ ಈ ವೇತನಗಳನ್ನು ಕೊಡಬಹುದು ಎಂತ ಕಮಿಟಿಯವರು ಸೂಚಿಸುತ್ತಾರೆ. ಈ ಕಾಲೇಜಿನಲ್ಲಿ ಮೂರು ವರ್ಷಗಳ ವರೆಗೆ ಕಲಿತು ಅನಂತರ ಪರೀಕ್ಷೆ ಕೊಡಬೇಕು. ದಾಖಲಾಗಬೇಕೆಂದಿರುವವರು ಸ್ಕೂಲ್ ಫೈನಲ್ ಸರ್ಟಿಫಿಕೇಟು ಪಡೆದವರಾಗಿದ್ದರೆ ಇಂಗ್ಲಿಷಿನಲ್ಲಿ ೬೫% ಮಾರ್ಕು ಹೊಂದಿದವರು, ಅಥವಾ ಮೆಟ್ರಿಕ್ಯುಲೇಶನ್ ಪಾಸಾದವರಾಗಿರಬೇಕು. ಇನ್ನು ಹೆಚ್ಚಿನ ಅನುಭವದ ಬಗ್ಗೆ ಮದ್ರಾಸಿನ ಕಿಲ್ಪಾಕ್ ಎಂಬಲ್ಲಿ ಲಂಡನ್ಸ್ ಗಾರ್ಡನ್ಸ್‌ನಲ್ಲಿ ವಾಸವಾಗಿರ ಮ ಮ ರಾ ಎಸ್ ಕೆ ರಾಜಗೋಪಾಲಾಚಾರ್ಯರಿಗೆ ಬರೆದು ಕೊಳ್ಳಬಹುದೆಂದು ಪ್ರಕಟಿಸಲ್ಪಟ್ಟಿದೆ.

ಪಾಲ್ಘಾಟ—ಇಲ್ಲಿ ಸಬ್ ಮೆಜಿಸ್ಟ್ರೇಟರ ಮುಂದೆ [illegible] ಮತ್ತು [illegible] ಎಂಬ ಇಬ್ಬರು ವರ್ತಕರು ಮತ್ತು ಮುನಿಸಿಪಲ್ ಕೌನ್ಸಿಲರು ಇವರ ಜತೆಯಲ್ಲಿ ಇನ್ನು ೬ ಜನರು ಕೂಡಾ [illegible] ವೇಳೆ ಒಬ್ಬ [illegible]ನಿಗೆ ಗಾಯಪಡಿಸಿದ್ದಕ್ಕೂ ಶಾಂತಿ ಭಂಗ ಮಾಡಿದ್ದಕ್ಕೂ ಹೊಂದ ಕ್ರಿಮಿನಲ್ ಮೊಕದ್ದಮೆಯಲ್ಲಿ [illegible] ಮೆಜಿಸ್ಟ್ರೇಟರು [illegible] ಸಾಧಾರಣವಾಗಿ ಅವರನ್ನು ಶಿಕ್ಷೆಗೆ ಗುರಿಮಾಡಿದರು. [illegible] ಮುದ್ದೆಯಾಲಿಗೆ ೧೦೦ ರೂಪಾಯಿ ದಂಡ [illegible] ೬ ವಾರದ ಕಠಿಣ ಸಜಾ, ೩ನೆ ೪ನೆ ಆಪಾದಿತರಿಗೆ ೫೦ ರೂಪಾಯಿ ಅಥವಾ ೬ ವಾರಗಳ ಕಠಿಣ ಸಜೆ, ೫, ೬, ೭ನೆ ಆಪಾದಿತರಿಗೆ ೨೫ ರೂಪಾಯಿ ದಂಡವನ್ನು ಅಥವಾ ೩ ವಾರಗಳ ಕಠಿಣ ಸಜೆ ವಿಧಿಸಲ್ಪಟ್ಟಿತು. ಚೆರುಮ ಜನರು [illegible] ದೊಡ್ಡ ರಸ್ತೆಯಲ್ಲಿ [illegible] ಅವರಿಗೆ [illegible] ಮುದ್ದೆಯಾಲೆಯರು [illegible] ಗಾಯಪಡಿಸಿದರೆಂಬುದೇ ಇವರ ಮೇಲಣ ಆರೋಪವಾಗಿತ್ತು.

ಪಾಲ್ಘಾಟ—ಇಲ್ಲಿಯ ಮ ರಾ ಪಿ ಯು ನಾರಾಯಣ ಅಯ್ಯರ್, ಬಿ ಎ ಇವರು ೭೫೦ ರೂಪಾಯಿ ಸಂಬಳದ ಮೇಲೆ ಮೆಸೊಪೊಟೇಮಿಯದಲ್ಲಿ ಬಾಗ್ದಾದ [illegible]ರಾಗಿ ನೇಮಕವಾಗಿರುವರು ಎಂದು ವರ್ತಮಾನ ಬಂದಿದೆಯಂತೆ.

ಸಿಮ್ಲಾ—ಇಂಡಿಯಾ ಸರಕಾರದವರು ಯುದ್ಧಪರಿಷತ್ತಿನ ವಿಷಯಗಳನ್ನು ಒಳಕೊಂಡ ಪ್ರಕಟಿಸಿದ ಜಾಹೀರನಾಮೆಯ ಮೇರೆಗೆ ಈ ವರ್ಷದ ಅಕ್ಟೋಬರ ಒಳಗೆ ಅರ್ಧ ಮಿಲಿಯ ಜನರನ್ನು ಸೈನ್ಯಕ್ಕೆ ದಾಖಲು ಮಾಡಿ ಯುದ್ಧಕ್ರಮವನ್ನು ಕಲಿಸಬೇಕು ಮಾಡಬೇಕೆಂತಲೂ ಈ ವರೆಗಿನ ಅನುಭವದಿಂದ ಯಾವಯಾವ ಸಂಸ್ಥಾನದಲ್ಲಿ ಎಷ್ಟು ಮಂದಿ ದಾಖಲಾಗಬಹುದು ಎಂದು ಅಂದಾಜು ಕಟ್ಟಿ ಅಷ್ಟು ಸಂಖ್ಯೆ ದಾಖಲಾಗುವಂತೆ ಸ್ಥಾನಿಕ ಕಮಿಟಿಯವರು ಪ್ರಯತ್ನಿಸಬೇಕೆಂದು ತಿಳಿಸಿರುವರು. ಹಿಂದೀ ವಿಮಾನದಳ ಸಂಖ್ಯೆ ಹೆಚ್ಚಿಸುವ ವಿಷಯವನ್ನು ಇಂಡಿಯಾ ಗವರ್ನಮೆಂಟಿನವರು ಬೇಗನೆ ಆಲೋಚಿಸಿ ಇತ್ಯರ್ಥಿಸುವರಂತೆ. ಹಿಂದೀಯರಿಗೆ ಕಮಿಶನ್ [illegible] ನೇಮಕಮಾಡುವ ವಿಷಯವು ಇಂಗ್ಲಂಡಿನ ಸರಕಾರದವರ [illegible] ಅದು ಬ್ರಿಟಿಷ್ ಪಾರ್ಲಿಮೆಂಟಿನವರ ಅಧಿಕಾರದಲ್ಲಿರುವುದರಿಂದ ಅವರು ಆ ಕುರಿತು ಬಗೆಹರಿಸಿಕೊಳ್ಳಬೇಕಾಗುವದಂತೆ. ಊರುಗಳಲ್ಲಿ ಯುದ್ಧವನ್ನು ಕುರಿತು ವರ್ತಮಾನಗಳು ಹಬ್ಬುವಂತೆ ಯುದ್ಧದ [illegible] ಪ್ರಕಟಿಸು[illegible] ಮತ್ತು ಸೈನ್ಯಕ್ಕೆ ಜನರು ದಾಖಲು ಆಗಲು ಉತ್ತೇಜಿಸುವ ಬಗ್ಗೆ ಬಿನ್‌ಸರಕಾರಿ ಮತ್ತು ಸರಕಾರಿ ಮೆಂಬರರಿಂದ ಕೂಡಿದ ಕಮಿಟಿ [illegible] ಸಾಧ್ಯವಿದ್ದಷ್ಟು ಕಡಿಮೆ ಮಾಡಿ, ಜನರು ಸ್ವದೇಶೀಯ ವಸ್ತುಗಳನ್ನೇ ಉಪಯೋಗಿಸುವಂತೆಯೂ, ಯುದ್ಧಕ್ಕೆ ಬೇಕಾದ ಸರಕು ಸರಂಜಾಮು ಸಾಗಿಸಲಿಕ್ಕೆ ಈ ರೀತಿಯ [illegible] ಕೃಷಿಗಳ ಉತ್ಪನ್ನ ಹೆಚ್ಚಿಗೆ [illegible] ಮಾಡುವಂತೆಯೂ, ದೇಶೀಯ ಹಡಗು ಚಲಾವಣೆ ಹೆಚ್ಚಿಸುವ ಮತ್ತು ಅಂಥ ಹೊಸ ಹಡಗುಗಳನ್ನು ಕಟ್ಟಿ [illegible] ಮಾಡುವಂತೆಯೂ ಪ್ರಜಾಜನರ ಸಹಕಾರವನ್ನು ಸರಕಾರದವರು ಅಪೇಕ್ಷಿಸುತ್ತಾರೆ.

ಯುದ್ಧಸಾಲವನ್ನು ಪ್ರಕಟಿಸಿದೊಡನೆ ಅದಕ್ಕೆ ಪ್ರಜಾಜನರು ತಮ್ಮ ಶಕ್ತ್ಯನುಸಾರ ದ್ರವ್ಯಸಹಾಯ ಮಾಡಬೇಕೆಂತಲೂ, [illegible] ಇದಲ್ಲದೆ ಸರಕಾರದವರೂ ಪ್ರಜೆಗಳೂ [illegible] ಅನಾವಶ್ಯ [illegible] ಮಾಡದೆ ಕಾಪಾಡಿಕೊಳ್ಳಬೇಕಾಗಿಯೂ ಈ ಜಾಹೀರನಾಮೆಯಲ್ಲಿ ಹೇಳುತ್ತದೆ.

ಹೈದರಾಬಾದು—ಹೈದರಾಬಾದು [illegible] ಮುಶೀರನನ್ನು ಕೆಲಸದಿಂದ ತೆಗೆದುಹಾಕಬೇಕೆಂದು ಹಟಮಾಡಿ ಅಲ್ಲಿಯ ಕಾಮಗಾರಿ ಜನರು ಮುಷ್ಕರ ಹಿಡಿದಿರುವರಂತೆ. ಕೆಲವು ಸಮಯದ ಹಿಂದೆ ಸಂಬಳದ ದರ ಹೆಚ್ಚಿಸಬೇಕೆಂದು ಮುಷ್ಕರ ಹಿಡಿದಾಗ ಅವರ ಅಹವಾಲುಗಳನ್ನು ಕೇಳಿ [illegible] ತಕ್ಕ [illegible]ಗಳನ್ನು ಅವರಿಗೆ ಕೊಟ್ಟಿದ್ದರು.

ಬೆಳಗಾವಿ—[illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನು
ಇದು ಸಾಧಕವೆ ಆಗುತ್ತಿತ್ತಲ್ಲವೆ? ... ೪
ಸ್ಫುಟವಿಚಾರಗಳು:—
೧. ಮದ್ರಾಸಿನ ಪ್ರಾಥಮಿಕ ಶಿಕ್ಷಣ ... ೪-೫
೨. ಮದ್ರಾಸಿನ ಪ್ರಾಂತಿಕ ಪರಿಷತ್ತು ... ,,
೩. ಸಾರ್ವರಾಷ್ಟ್ರೀಯಸಭೆಯ ಅಧಿವೇಶನ ... ,,
೪. ಮ. ಗಾಂಧಿಯವರ ಪತ್ರ ... ,,
೫. ಮುಂಬಯಿಯ ಅಬ್ರಾಹ್ಮಣರ ವಿಶ್ವಸಂಕೋಚ ... ,,
೬. ಮುಂಬಯಿಯ ಪ್ರಾಂ. ಪರಿಷತ್ತು ... ,,
೭. ಮಾನನೀಯರ ಅಭಿನಂದನ ... ,,
ಸ್ಥಳೀಕ—ಮಂಗಳೂರು ... ,,
ವರ್ತಮಾನ ಸಂಗ್ರಹಗಳು:—
೧. ಯುದ್ಧಸಮಾಚಾರ ... ೩
೨. ಯುರೋಪದ ಮಹಾಯುದ್ಧ ... ,,
೩. ವಿದೇಶ ವೃತ್ತಾಂತ ... ,,
೪. ಒಳದೇಶ ವೃತ್ತಾಂತ ... ೩-೬
೫. ದಕ್ಷಿಣ ಕನ್ನಡ. ಕುಂಬಳೆ ... ,,
೬. ಪತ್ರವ್ಯವಹಾರ, ಮಂಗಳೂರಲ್ಲಿ ಸ್ಥಾಪಿತವಾಗುವ ರಾಷ್ಟ್ರೀಯಶಿಕ್ಷಣದ ಬಾಲಿಕಾ ಪಾಠಶಾಲೆ, ಮಂಗಳೂರು ಮುನ್ಸಿಪಾಲಿಟಿ ... ,,
೭. ಬಂಟರ ಯಾನೆ ನಾಡವರ ಸಂಘ ... ,,

ಸ್ವದೇಶಾಭಿಮಾನಿ.

ಶಕ ೧೮೪೦ ಚೈತ್ರ ಬ. ೩೦ ಶುಕ್ರವಾರ.

ಇದು ಸಾಧಕವೆ ಆಗುತ್ತಿತ್ತಲ್ಲವೆ?

ಡಿಲ್ಲಿಯ ಯುದ್ಧಪರಿಷತ್ತಿನಲ್ಲಿ ಮನುಷ್ಯಬಲದ ಮತ್ತು ಸಾಧನ ಸಂಗ್ರಹದ ಎರಡು ಠರಾವುಗಳು ಪಾಸಾದವು ಈ ಸಂಗತಿಯನ್ನು ನಾವು ಕಳೆದ ಅಗ್ರಲೇಖದಲ್ಲಿ ತಿಳಿಸಿದ್ದೇವೆ; ಮತ್ತು ಮನುಷ್ಯಬಲದ ಠರಾವಿನ ಒಳಕಮಿಟಿಯಲ್ಲಿ ಚರ್ಚಿಸಬೇಕೆಂದಿದ್ದ ಕಾರಣ ವೈಸರಾಯರಿಗೆ ತಿಳಿಯಪಡಿಸಿದ ನಾಮದಾರ ಖಾಪರ್ಡೆಯರ 'ಸ್ವರಾಜ್ಯದ ಠರಾವಿಗೆ' ಆಸ್ಪದವಿಲ್ಲದೆ ಹೋಯಿತೆಂಬ ವೃತ್ತಾಂತವನ್ನು ಕೂಡ ಅಂದೆ ನಮ್ಮ ವಾಚಕವರ್ಗದ ಮುಂದೆ ಇಟ್ಟಿದ್ದೇವೆ. ಯುದ್ಧಪರಿಷತ್ತಿನಂಥ ಅತ್ಯಾವಶ್ಯಕ ಮತ್ತು ಮಹತ್ವದ ಪರಿಷತ್ತಿನ ಮುಂದೆ ಹಿಂದಿಸ್ವರಾಜ್ಯದ ವಿಷಯವು ಬಂದು ಪಾಸಾಗುತ್ತಿದ್ದರೆ ಏನಾದರೂ ಅನಿಷ್ಟವು ಸಂಭವಿಸುತಿತ್ತೆ. ಎಂದಿಲ್ಲ. ಈ ಠರಾವನ್ನು ಮುಂದೆ ತರಕೂಡದೆಂಬುದಕ್ಕೆ ವೈಸರಾಯರು ತಮ್ಮ ಮತದಿಂದ ಸಮರ್ಪಕ ಮತ್ತು ಸಾಕಷ್ಟು ಕಾರಣಗಳನ್ನು ತೋರಿಸಿದ್ದಾರಾದರೂ ಅವು ಹಿಂದಿ ಲೋಕಮತದ ದೃಷ್ಟಿಯಿಂದ ಅಪೂರ್ಣ ಹಾಗು ಬೇಸರವನ್ನು ಹುಟ್ಟಿಸುವಂಥವುಗಳಿದ್ದಾವೆಂಬುದು ಈ ವಾರದಲ್ಲಿ ಪ್ರಸಿದ್ಧವಾದ ಎಲ್ಲ ದೇಶದೊಳಗಿನ ಲೋಕಮತದಿಂದ ಸಿದ್ಧವಾಗುತ್ತದೆ. ನಾಮದಾರ ಖಾಪರ್ಡೆಯವರು ಯುದ್ಧಪರಿಷತ್ತಿನಲ್ಲಿ ಹಿಂದಿ ಸ್ವರಾಜ್ಯದ ಠರಾವನ್ನು ತರಲು ಯತ್ನಿಸಿದ್ದು ನಿಜವಾಗಿ ಅಪ್ರಾಸಂಗಿಕವೊ ಹ್ಯಾಗೆ ಮತ್ತು ಠರಾವು ಪಾಸಾದ್ದರಿಂದ ಸರಕಾರಕ್ಕೂ ಈ ದೇಶದ ಸಂರಕ್ಷಣಕ್ಕೂ ಅತ್ಯಾವಶ್ಯಕವಾದ ಮನುಷ್ಯಬಲದ ಪ್ರಶ್ನವು ಹ್ಯಾಗೆ ದೃಢಮೂಲವಾಗಬಹುದಿತ್ತು, ಈ ಎರಡು ಸಂಗತಿಗಳನ್ನು ಈ ಹೊತ್ತು ಕೆಳಗೆ ಪ್ರಸ್ತಾಪಿಸಲು ಯೋಜಿಸಿದ್ದೇವೆ.

ಯುದ್ಧದ ಪಶ್ಚಿಮರಂಗದಲ್ಲಿ ಈಗ ಮೂರು ನಾಲ್ಕು ವರ್ಷಗಳಿಂದ ಮಿತ್ರಸಂಘದ ರಾಷ್ಟ್ರಗಳು ಶೌರ್ಯದಿಂದಲೂ, ಯುಕ್ತಿಪ್ರಯುಕ್ತಿಯಿಂದಲೂ ಶತ್ರುಗಳ ಮುಂದೆ ಬರುವ ಕಾಲುಗಳನ್ನು ಹಿಂದಕ್ಕೆ ಒತ್ತುತ್ತಿರುವಾಗಲೆ ಇತ್ತ ರುಶ್ಯದ ಕಡೆಯಿಂದ ಹಿಂದುಸ್ಥಾನದ ಮೇಲೆ ಅಭಿಯೋಗವನ್ನು ಮಾಗಲು ಶತ್ರುಗಳ ಆಲೋಚನೆ ಇದ್ದದ್ದು ಕಂಡುಬಂದದ್ದರಿಂದ ಪೂರ್ವದಿಕ್ಕಿನಲ್ಲಿ ನಡೆಯಲಿಕ್ಕಿರುವ ಯುದ್ಧಸನ್ನಾಹಗಳನ್ನು ನಮ್ಮ ಸರಕಾರವು ಸಿದ್ಧಪಡಿಸಿಕೊಳ್ಳಬೇಕಾಗಿದೆ. ಮತ್ತು ಇದರಿಂದಾಗಿಯೇ ನಾಂದಿರೂಪದಿಂದ ಡಿಲ್ಲಿಯ ಯುದ್ಧಪರಿಷತ್ತು ಸೇರಿತ್ತು. ಈ ಮಾತು ನಿಜ. ಮಾತೃದೇಶದ ಮೇಲೆ ಅನ್ಯರ ಅಭಿಯೋಗದಂಥ ಅನಿಷ್ಟವು ಬಂದೊದಗುವಾಗ ಸಂಪೂರ್ಣ ಸ್ವಾರ್ಥತ್ಯಾಗ ಮಾಡಿ ಮಾತೃಭೂಮಿಯನ್ನು ಕಾಪಾಡುವದು ಜನರ ಕರ್ತವ್ಯವೆಂಬುದಕ್ಕೆ ಸಂದೇಹವಿಲ್ಲ. ಇಂಥ ಪವಿತ್ರಕರ್ತವ್ಯದ ಸ್ಫೂರ್ತಿಯನ್ನು ಬಾದಶಹರು ತಮ್ಮ ಸಂದೇಶದ ದ್ವಾರಾ ಜನರಲ್ಲಿ ಹುಟ್ಟಿಸಿದ್ದು ಮತ್ತು ವೈಸರಾಯರು ತಮ್ಮ ಭಾಷಣದಿಂದ ಅದನ್ನು ಬಲಪಡಿಸಿದ್ದು ಯುದ್ಧಪರಿಷತ್ತಿನ ಪ್ರಸಂಗಕ್ಕೆ ಹ್ಯಾಗೆ ಒಪ್ಪುವಂತಿತ್ತೊ ಹಾಗೆಯೆ ಶ್ರೀಯುತ ಖಾಪರ್ಡೆಯವರ ಸ್ವರಾಜ್ಯದ ಠರಾವು ಯುದ್ಧಪರಿಷತ್ತಿನ ಉದ್ದೇಶದ ಸಫಲತೆಗಾಗಿಯೆ ಇತ್ತು. ಹಿಂದುಸ್ಥಾನದ ವಾಯುವ್ಯದಿಕ್ಕಿನಲ್ಲಿ ಇನ್ನೂ ಕೆಲವು ಸಮಯದ ನಂತರ ಶತ್ರುಗಳ ಅಭಿಯೋಗವು ಆಗಲಿಕ್ಕಿದೆಯಂತೆ; ಇಂಗ್ಲಂಡಿನ ನೆರೆಯಲ್ಲಿನ ಫ್ರಾನ್ಸಿನಲ್ಲಿ ಯುದ್ಧದ ಪ್ರಥಮ ಪಾದದಿಂದಲೆ ಜರ್ಮನ ಸೈನ್ಯವು ಹದ್ದುಕೊಂಡಿದೆ; ಇಷ್ಟೆ ಅಲ್ಲ, ಸ್ವತಃ ಇಂಗ್ಲಂಡಿನಲ್ಲಿ ಸಹ ಅನೇಕ ಸಾರಿ ಶತ್ರುಗಳ ಬೊಂಬ್ ಗುಳಿಗೆಗಳು ಬೀಳುತ್ತಲಿ ಇವೆ. ಫ್ರಾನ್ಸಿಗೂ ಇಂಗ್ಲಂಡಿಗೂ ಮಧ್ಯದಲ್ಲಿ ಅಲ್ಪ ವಿಸ್ತಾರದ ಒಂದು ಸಮುದ್ರವು ಮಾತ್ರ ಪ್ರತಿಬಂಧಕವಿದ್ದದರಿಂದ, ಇಂಗ್ಲಂಡಿನಿಂದ ಯುದ್ಧದ ಸಂಪರ್ಕವು ದೂರದಲ್ಲಿದೆ ಎಂದು ಉಪಚಾರಾರ್ಥವಾಗಿ ಹೇಳಬಹುದಷ್ಟೆ. ಈ ಎರಡು ಸಂಗತಿಗಳನ್ನು ಹೋಲಿಸಿ ನೋಡುವಾಗ ಹಿಂದುಸ್ಥಾನಕ್ಕಿಂತ ಇಂಗ್ಲಂಡಿಗೆ ಯುದ್ಧದ ಭೀತಿ, ಇಲ್ಲವೆ ಕಡಿಮೆ ಪಕ್ಷಕ್ಕೆ ಅದರ ಚಳವಾದರೂ ಹೆಚ್ಚು ಸಂಬಂಧಿಸುತ್ತದೆ. ಎಂದು ಹೇಳಬಹುದು. ವಾಯವ್ಯ ದಿಕ್ಕಿನಲ್ಲಿ ಇನ್ನು ಮುಂದಿನ ಸಾಂಭವಿಕ ಯುದ್ಧದ ದೆಸೆಯಿಂದ ಇಲ್ಲಿ ಯುದ್ಧಪರಿಷತ್ತು ಒಮ್ಮೆ ಸೇರುತ್ತದೆ ಎಂದಾದರೆ ಯುದ್ಧಭೂಮಿಯ ನೆರೆಯಾದ ಇಂಗ್ಲಂಡಿನಲ್ಲಿ, ಯುದ್ಧಾಲೋಚನೆಯ ಇಂಥ ಪರಿಷತ್ತುಗಳು ಆಗುತ್ತಲೆ ಇದ್ದಾವೆ ಎಂದು ಹೇಳಿದರೆ ಅದು ಅತಿಶಯೋಕ್ತಿಯ ಮಾತಲ್ಲ. ಇಂಗ್ಲಂಡಿನೊಳಗಿನ ಸರದಾರರ (ಲೋರ್ಡರ) ಸಭೆಗಳಾಗಲಿ ಲೋಕ ಸಭೆಗಳಾಗಲಿ (ಹೌಸ ಒಫ್ ಕೊಮನ್ಸ) ಯಾವಯಾವಾಗ ಕೂಡುವವೊ ಆಗಾಗ ಯುದ್ಧದ ಜಯಸಿದ್ಧಿಯ ಪ್ರಸ್ತಾಪಗಳು, ಉಪಾಯ ಯೋಜನೆಗಳು ಮತ್ತು ಈ ವಿಷಯದ ವಿವಿಧ ನಿರ್ಣಯಗಳು ಆಗುತ್ತಲೆ ಇರುತ್ತವೆ. ಇದಕ್ಕೆ ಒಂದು ವಾರದಲ್ಲಿ ಎರಡು ಮೂರು ಸಾರಿಯಾದರೂ ಬರುವ 'ರೊಯ್ಟರ'ನ ಪಾರ್ಲಿಮೆಂಟಿನ ತಂತಿವರ್ತಮಾನಗಳೆ ದೃಷ್ಟಾಂತ. ಯುದ್ಧದ ಕೇವಲ ಗಲಾಟೆಯಿಂದ ತುಂಬಿಹೋದ ಪಾರ್ಲಿಮೆಂಟಿಗೆ, ನಿಜವಾಗಿ ನೋಡಿದರೆ, ಬೇರೆ ಪ್ರಸ್ತಾಪಗಳನ್ನು ಎತ್ತುವದು ಅಪ್ರಾಸಂಗಿಕ ಮಾತ್ರವಲ್ಲ; ಈ ಅಪ್ರಾಸಂಗಿಕತ್ವ ದೋಷವನ್ನು ಅಂಗೀಕರಿಸಿಕೊಂಡರೂ ಕೂಡ ಅಂಥ ಸಂಗತಿಗಳನ್ನು ಚರ್ಚಿಸಲು ಪುರಸತ್ತೆ ಇಲ್ಲ. ಚರ್ಚಿಸಲ್ಲಿಕ್ಕಿಂಥವರಿಗಂತೂ ಯುದ್ಧದ್ದಲ್ಲದೆ ಬೇರೆ ಸಂಗತಿಗಳ ಚರ್ಚೆಗಳನ್ನು ಮಾಡಲು ಸಮಯವೆ ಇಲ್ಲವಾಗಿ ಹೋಗಿದೆ. ತಾತ್ಪರ್ಯ ಯುದ್ಧೈಕಪರಾಯಣವಾದ ಇಂಗ್ಲಂಡಿಗೆ ಮತ್ತು ಇಂಗ್ಲಂಡಿನ ಪಾರ್ಲಿಮೆಂಟಿಗೆ ಹಾಗು ಅದರ ಮುಖ್ಯ ಪ್ರಧಾನರಾದ ಮಿ. ಲೊಯ್ಡ ಜೊರ್ಜರಿಗೆ ಐರ್ಲಂಡಿನ ಹೋಮ್‌ರೂಲಿನಂಥ 'ಅಪ್ರಾಸಂಗಿಕ' ವಿಷಯವನ್ನು ತಲೆಯಲ್ಲಿ ಹಾಕಿಕೊಳ್ಳಲು ಸಮಯವಿಲ್ಲವೆಂಬುದು ಸ್ಪಷ್ಟವೆ. ಆದರೆ ಅದೆ ಇಂಗ್ಲಂಡು, ಅದೆ ಪಾರ್ಲಿಮೆಂಟು ಮತ್ತು ಅದೆ ಲೊಯ್ಡ ಜೋರ್ಜರು ಸೈನ್ಯಭರತಿಯ ಬಿಲ್ಲನ್ನು ಐರ್ಲಂಡಿಗೆ ಲಾಗುಮಾಡಬೇಕಾದರೆ ಮೊದಲು ಅದರ ಹೋಮ್‌ರೂಲಿನ ಅನುಕೂಲವಾದ ಇಚ್ಛೆಯನ್ನು ಮಾಡಿಕೊಡಲು ಸಿದ್ಧರಾಗುತ್ತಾರೆ.

ಹೀಗಿರಲು ಹಿಂದುಸ್ಥಾನದ ಯುದ್ಧಪರಿಷತ್ತಿನಲ್ಲಿ ಸ್ವರಾಜ್ಯದ ಪ್ರಸ್ತಾಪವು ಅಪ್ರಾಸಂಗಿಕವೆಂಬ ಹೆಸರಿನಿಂದ ಅಲ್ಲೆ ನಿಂತುಹೋಗುತ್ತದೆ. ಇದು ವಿಚಿತ್ರವೆ ಸರಿ. ಒಂದೆ ಸಂಗತಿಯು ಒಂದು ಕಡೆಯಲ್ಲಿ ಅಪ್ರಾಸಂಗಿಕವಲ್ಲ, ಆದರೆ ಆವಶ್ಯಕಕೋಟಿಯಲ್ಲಿ ಸೇರುತ್ತದೆ ಮತ್ತು ಇನ್ನೊಂದು ಕಡೆಯಲ್ಲಿ ಅಪ್ರಾಸಂಗಿಕವಾಗುತ್ತದೆ ಎಂದ ಮೇಲೆ ಬೇರೆ ಬೇರೆ ದೇಶಗಳ ಜನರ ಪರಿಣಾಮವು ಸಜೀವ-ನಿರ್ಜೀವ ಇತ್ಯಾದಿ ಎಲ್ಲ ಸಂಗತಿಗಳ ಮೇಲೆ ಹ್ಯಾಗೆ ಉಂಟಾಗುತ್ತದೆಂಬುದು ವಾಚಕರಿಗೆ ತಿಳಿಯಬಹುದು. 'ಇಂಪೀರಿಯಲ್ ಪಾರ್ಲಿಮೆಂಟಿನ' ಎಂದರೆ ಬಾದಶಾಹಿ ರಾಜ್ಯವ್ಯವಸ್ಥೆಯ ದೃಷ್ಟಿಯನ್ನು ವೈಸರಾಯರು ಒಂದು ವಿಶಿಷ್ಟ ದೃಷ್ಟಿಯಿಂದ ನೋಡಿದರು. ಆದ್ದರಿಂದ ಅಪ್ರಾಸಂಗಿಕತ್ವ, ಸಂಸ್ಥಾನಿಕರ ಕಚೇರಿಯಲ್ಲಿ ಅಸಾಧ್ಯತ್ವ ಮುಂತಾದ ಅಡ್ಡಿಗಳು ಅವರಿಗೆ ಕಾಣಹತ್ತಿದವು. ನಿಜವಾಗಿ ನೋಡಿದರೆ ಈ ಠರಾವು ಅಪ್ರಾಸಂಗಿಕವಾಗಿರಲಿಲ್ಲ. ಬಾದಶಹರ ಆಜ್ಞೆಯಿಂದ ರಾಜಪ್ರತಿನಿಧಿಗಳಾದ ವೈಸರಾಯರು ಈ ಪರಿಷತ್ತನ್ನು ಯಾವ ಉದ್ದೇಶದಿಂದ ಕೂಡಿಸಿದ್ದರೊ ಆ ಉದ್ದೇಶದ ಸಿದ್ಧಿಗೆ ಶ್ರೀ. ಖಾಪರ್ಡೆಯವರ ಠರಾವು ಹೆಚ್ಚು ಸಾಧಕವಾಗುತ್ತಿತ್ತು. ಮನುಷ್ಯ ಬಲವನ್ನು ಸಂಗ್ರಹಿಸುವದು ಈ ಹೊತ್ತಿನ ಅತಿ ಮಹತ್ವದ ಪ್ರಶ್ನವಾಗಿದೆ. ಇಂತಿಷ್ಟು ಎಂದು ತೋರಿಸಿ ಒಂದು ಕ್ಲಪ್ತ ಸಮಯವನ್ನು ಸ್ವರಾಜ್ಯದ ಕಂತಿಗೆ ನಿರ್ಣಯಿಸಿ ಆ ಮೂಲಕ ಜನತೆಯಲ್ಲಿ ಮಾತೃದೇಶದ ಪ್ರೇಮವನ್ನೂ ಅಭಿಮಾನವನ್ನೂ ಹುಟ್ಟಿಸುವಂತೆ ಮಾಡಿದ್ದಾದರೆ ಇಂಗ್ಲಂಡು, ಫ್ರಾನ್ಸು, ಇಟಲಿ ಮುಂತಾದ ದೇಶಗಳು ಈ ಹೊತ್ತು ಯಾವ ಭಾವನೆಯಿಂದ ಸ್ವದೇಶಸಂರಕ್ಷಣದ ಸಲುವಾಗಿ ಸಂಪೂರ್ಣ ಸ್ವಾರ್ಥತ್ಯಾಗವನ್ನು ಮಾಡುತ್ತಿದ್ದಾವೊ ಹಾಗೆಯೆ ಐರ್ಲಂಡು ನಾಳೆಯಿಂದ ಮಾಡುವುದೊ ಆ ಭಾವನೆಯು ಇಲ್ಲಿಯವರಲ್ಲಿ ಮೂಡಿ ಸರ್. ಸುಬ್ರಹ್ಮಣ್ಯ ಅಯ್ಯರರು ಪ್ರೆ ವಿಲ್‌ಸನರಿಗೆ ಬರೆದ ಒಂದು ಪತ್ರದಲ್ಲಿ ಹೇಳುವಂತೆ ಈ ಹಿಂದುಸ್ಥಾನದಲ್ಲಿ ೧೦ ಕೋಟಿ ಜನರು ತಮ್ಮ ರುಂಡಗಳನ್ನು ಕೈಯಲ್ಲಿ ತೆಕ್ಕೊಂಡು ಈ ಹೊತ್ತು ಯುದ್ಧಕ್ಕೆ ಹೊರಡುತ್ತಿದ್ದಿಲ್ಲವೆ? ಬಾದಶಹರ ಚರಣಗಳಲ್ಲಿ ಜಯಶ್ರೀಯನ್ನು ತಂದು ಅರ್ಪಿಸಲಿಕ್ಕೆ ಹಾಗು ಮಾತೃದೇಶದ ಸಂಕಟವನ್ನು ನಿರ್ಮೂಲಿಸಲಿಕ್ಕೆ ಅದೆ ಭಾವನೆಯಿಂದ ಈ ಹೊತ್ತು ಎಲ್ಲ ಹಿಂದಿಪುತ್ರರು—ಹಿಂದಿ ವೀರರು ಸ್ವಾತ್ಮಸಮರ್ಪಣವನ್ನು ಸಂತೋಷದಿಂದ ಮಾಡುತ್ತಿರಲಿಲ್ಲವೆ? ಪರಮಪೂಜ್ಯ ಬಾದಶಹರು ತಮ್ಮ ಸಂದೇಶದಲ್ಲಿ ಹೇಳಿದ್ದಂತೆ "ಸಾಮ್ರಾಜ್ಯದ ಮೇಲೆ ಒದಗಿದ ಸಂಕಟವೆ ಹಿಂದಿ ಜನರಿಗೆ ಒಂದು ಸಂದರ್ಭ"ವೆಂಬುದರ ಅರ್ಥವು ಇಲ್ಲಿಯ ಕುತ್ಸಿತರಾದ ಎಂಗ್ಲೊ-ಇಂಡಿಯನರ ಮಲಿನವಾದ ಕರಳಿನಿಂದ ಹುಟ್ಟುವ ನಮೂನೆಯದಲ್ಲ. ಸಾಮ್ರಾಜ್ಯದ ಮೇಲೆ ಅನಿಷ್ಟವು ಒದಗಿದಾಗ ನಿಮ್ಮ ಶೌರ್ಯ, ಧೈರ್ಯ ಇವುಗಳನ್ನು ತೋರಿಸಿ ಬಾದಶಾಹಿ ಪಟ್ಟದ ಮತ್ತು ಸಾಮ್ರಾಜ್ಯದ ರಕ್ಷಣವನ್ನು ಮಾಡಿರಿ. ಈ ಅರ್ಥದಿಂದಲೆ ಬಾದಶಹರು ಮೇಲಿನಂತೆ ಅಪ್ಪಣೆಯನ್ನು ಕೊಡಿಸಿರುವರು. ಅಂಥ ಅಪ್ಪಣೆಯು ಅರ್ಥಪೂರ್ಣವಾಗಬೇಕಾದರೆ ಹಿಂದುಸ್ಥಾನದೊಳಗಿನ ಜನತೆಯು ಶತ್ರುಗಳನ್ನು ಹಿಮ್ಮೆಟ್ಟಲು ಅವಶ್ಯವಾದ ಪ್ರತಿಯೊಂದು ಬಗೆಯ ಸ್ವಾರ್ಥವನ್ನು ತ್ಯಜಿಸಲು ಸಿದ್ಧವಾಗಬೇಕು. ಮತ್ತು ಆ ಸಿದ್ಧತೆಗೆ ಇದು ಮಾತೃದೇಶ... ಭಾವನೆಯು ಜನತೆ...

ಯಲ್ಲಿ ಹುಟ್ಟುವಂತೆ ಅಂತರ್ಗತ ರಾಜ್ಯವ್ಯವಸ್ಥೆಯ ಹಕ್ಕನ್ನು ಸರಕಾರವು ಜನರ ಕೈಯಲ್ಲಿ ಕೊಡುವದು ಅದರ ಕರ್ತವ್ಯವು. ಅದಕ್ಕಾಗಿಯೆ ನಾಮದಾರ ಖಾಪರ್ಡೆಯವರು ಈ ಯೋಗ್ಯಸಮಯದಲ್ಲಿ ಈ ಮಹತ್ವದ ಪ್ರಸ್ತಾಪವನ್ನು ಎತ್ತಲಿಕ್ಕಿದ್ದರು. ಎಂದ ಮೇಲೆ ಗಣಿತದೊಳಗಿನ ತ್ರೈರಾಶಿಕ ಉದಾಹರಣದಂತೆ ಪರಸ್ಪರ ಕಾರ್ಯಕಾರಣ ಭಾವವುಳ್ಳ ಈ ಸಂಗತಿಗೆ 'ಅಪ್ರಾಸಂಗಿಕ'ವೆಂದು ಹ್ಯಾಗೆ ಹೇಳಬಹುದು? ಈ ಪ್ರಶ್ನದ ಕಡೆಗೆ ವೈಸರಾಯರು ಸರಿಯಾದ ದೃಷ್ಟಿಯಿಂದ ನೋಡಲಿಲ್ಲವೆಂದು ನಾವು ಮೇಲೆಹೇಳಿದ ಮಾತಾದರೂ ಇದೆ ಕಾರಣದಿಂದ. ಸ್ವರಾಜ್ಯದ ಪ್ರಾಪ್ತಿಯಾಗುತ್ತದೆಂದಾದರೆ ಜನರು ಸ್ವದೇಶವೆಂಬ ತಿಳಿವಿನಿಂದ ತಮ್ಮ ಪ್ರಾಣದ ಆಹುತಿಗಳನ್ನು ಕೊಡಲು ಬಂದಾರೆಂಬುದಕ್ಕೆ ಸಂದೇಹವಿಲ್ಲ; ಆಗ ನಾಮದಾರ ಖಾಪರ್ಡೆಯವರ ಠರಾವಿಗೆ 'ಅಪ್ರಾಸಂಗಿಕ'ವೆಂದು ಹೇಳುವದು ಹ್ಯಾಗೆ? ಖಾಪರ್ಡೆಯವರಿಗೆ ಸ್ವರಾಜ್ಯದ ಠರಾವನ್ನು ತರಲು ಬಿಟ್ಟರೆ ಬೇರೆಬೇರೆಯವರು ಬೇರೆಬೇರೆ ಠರಾವುಗಳನ್ನು ತಂದು ಪರಿಷತ್ತಿನ ಮುಖ್ಯ ಉದ್ದೇಶವನ್ನು ಕೆಡಿಸಿಬಿಟ್ಟಾರೆಂದು ವೈಸರಾಯರು ವೃಥಾ ಭಯಪಟ್ಟಿರುವರು. ಪರಿಷತ್ತಿನ ಮುಂದೆ ಬರುವ ಠರಾವುಗಳ ಯೋಗ್ಯತೆ, ಕಾರ್ಯಸಿದ್ಧಿಯ ಸ್ವರೂಪ, ಲೋಕಮತದ ಪುಷ್ಟಿ ಇತ್ಯಾದಿ ಸಂಗತಿಗಳನ್ನು ನಿರ್ಣಯಿಸುವ ಸಾಮರ್ಥ್ಯವು ವೈಸರಾಯರಲ್ಲಿ ಮತ್ತು ಅವರ ಆಲೋಚನಾಮಂಡಲದಲ್ಲಿ ಉಂಟಷ್ಟೆ. ಆ ನಿರ್ಣಾಯಕ ಶಕ್ತಿಯಿಂದ ಠರಾವುಗಳನ್ನು ಅವರು ಪರೀಕ್ಷಿಸಿ ಅವುಗಳ ಪ್ರವೇಶಾಪ್ರವೇಶಗಳನ್ನು ನಿಶ್ಚಯಿಸಬಹುದಿತ್ತು. ಸಾಲಗಾರನಿಗೆ ಕೊಡಲಿಕ್ಕೆ ಇದ್ದ ಹಣವನ್ನು ಕೊಡಲು ಹೋದರೆ ಕೈಯಲ್ಲಿ ಹಣವಿದ್ದದ್ದು ಗೊತ್ತಾಗಿ ಜನರು ಕಡಕೇಳಲು ಬಂದಾರೆಂಬ ಭಯದಿಂದ ಸಾಲಗಾರನ ಹಣವನ್ನು ಕೊಡದೆ ಇರುವದು ಎಷ್ಟು ಸಮರ್ಪಕವೊ ಅಷ್ಟೆ ಮೇಲಿನ ಕಾರಣವು ಸಮರ್ಪಕವಾಗಿದೆ. ಈಗ ಸಂಸ್ಥಾನಿಕರ ಕಚೇರಿಯಲ್ಲಿ ಬ್ರಿಟಿಷ್ ಹಿಂದೂಸ್ಥಾನದ ಪ್ರಶ್ನವನ್ನು ಕೈಕೊಳ್ಳುವದು ಪ್ರಶಸ್ತವಲ್ಲವೆಂದಿದ್ದರೆ ಬೇರೆಬೇರೆ ಎರಡು ಅಧಿವೇಶನಗಳನ್ನು ಮಾಡಬಹುದಿತ್ತು. ಕಿಂಬಹುನಾ 'ಬ್ರಿಟಿಷ್ ಹಿಂದೂಸ್ಥಾನದ ಪ್ರಶ್ನದಲ್ಲಿ ಸಂಸ್ಥಾನಿಕರಿಗೆ ಸಂಬಂಧವಿಲ್ಲ'ವೆಂಬ ತತ್ವದ ಪರದೆಯನ್ನು ಬಿಚ್ಚಿಬಿಡುವದು ವೈಸರಾಯರಿಗೆ ಅಸಾಧ್ಯವಿರಲಿಲ್ಲ. ಮತ್ತು ಅಂಥ ಪರದೆಯಿಂದ ಹೊರಗೆ ಮುಖಹಾಕಿ 'ಅವ್ಯಾಪಾರೇಷು ವ್ಯಾಪಾರ'ವನ್ನು ಮಾಡುವ ಸಂಸ್ಥಾನಿಕರೂ ನಿಜವಾಗಿ ಯಾರೂ ಇದ್ದಿಲ್ಲ. ಮೊದಲೂ ಕೂಡ ಇಂಥ ಎಷ್ಟೊ ಸಂದರ್ಭಗಳೂ ಒದಗಿದ್ದಾವೆ. ಸಾರಾಂಶ ನಾಮದಾರ ಖಾಪರ್ಡೆಯವರ ಸ್ವರಾಜ್ಯದ ಠರಾವು ಬಾದಶಹರ ಮತ್ತು ವೈಸರಾಯರ ಉದ್ದೇಶಕ್ಕೆನೆ ಸಾಧಕವಾಗಿತ್ತು.

ಈ ಮಾತು ಪರಿಷತ್ತಿನ ಅನಂತರದ ವಾರದಲ್ಲಿ ಪ್ರಸಿದ್ಧವಾದ ಲೋಕಮತದಿಂದ ಸಿದ್ಧವಾಗುತ್ತದೆಂದು ಯಾರೂ ಹೇಳಬಲ್ಲರು.

ಸ್ಫುಟವಿಚಾರಗಳು.

೧. ನಮ್ಮ ಮದ್ರಾಸ ಸಂಸ್ಥಾನದೊಳಗಿನ ಪ್ರಾಥಮಿಕ ಶಿಕ್ಷಣದ ವಿಷಯವನ್ನು ಆಲೋಚಿಸುವದಕ್ಕಾಗಿ ಈ ತಿಂಗಳ ತಾ. ೧೯ರಿಂದ ಎರಡು-ಮೂರು ದಿವಸದ ವರೆಗೆ ಊಟಕಮಂಡಿನಲ್ಲಿ ಒಂದು ಚಿಕ್ಕ ಪರಿಷತ್ತು ಸೇರುವದಿದೆ ಎಂಬುದಾಗಿ ತಿಳಿದುಬರುತ್ತದೆ. ಈ ಪರಿಷತ್ತಿನಲ್ಲಿ ಮದ್ರಾಸ ಇಲಾಖೆಯೊಳಗಿನ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನೂ, ಬಿನ್‌ಸರಕಾರಿ ಗೃಹಸ್ಥರನ್ನೂ ಆಮಂತ್ರಿಸುವದಿದೆಂದು ಕೇಳುತ್ತೇವೆ. ಪ್ರಾಥಮಿಕ ಶಿಕ್ಷಣದ ಆವಶ್ಯಕತೆಯ ಕುರಿತು ಜನಗಳ ಕೇಳಿಕೆಯು ಎಷ್ಟರಮಟ್ಟಿಗೆ ಅಗ್ರಹದ್ದಿದೆ ಎಂದರೆ, ಆ ವಿಷಯದಲ್ಲಿ ಎಲ್ಲ ಪ್ರಾಂತಾಧಿಪತಿಗಳು ತಂತಮ್ಮ ಸೀಮೆಗಳಲ್ಲಿ ಇದನ್ನು ಆವಶ್ಯಕಕೋಟಿಯ ದೃಷ್ಟಿಯಿಂದ ಉಪಕ್ರಮಿಸುವದು ಅಗತ್ಯದಾಗಿದೆ. ಮುಂಬಯಿ, ಪಂಜಾಬ ಮುಂತಾದ ಸಂಸ್ಥಾನಗಳು ಈ ವಿಷಯದಲ್ಲಿ ಮುಂದರಿಸಿದ್ದಾವೆ. ಆದರೆ ನಮ್ಮ ಮದ್ರಾಸ ಸರಕಾರವು ಇಂಥ ವಿಷಯಗಳಲ್ಲಿ ಬಹು ಜಾಗೃತೆಯಿಂದ ನಡಕೊಳ್ಳುತ್ತದೆ! ಆದ್ದರಿಂದ ಲೋಕಸುಧಾರಣೆಯ ಓಟದಲ್ಲಿ ನಮ್ಮ ಸರಕಾರದ ಒಂದು ಹೆಜ್ಜೆಯು ಹಿಂದೆ ಉಳಿದರೆ ಅದರಲ್ಲಿ ನಿಜವಾಗಿ ತಪ್ಪಿಲ್ಲ. ಇರಲಿ, ದೀರ್ಘಾಲೋಚನೆಯಿಂದ ಉಪಕ್ರಮಿಸುತ್ತಿರುವ ಮದ್ರಾಸ ಸರಕಾರದ ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಬರುವ ಪರಿಷತ್ತಿನೊಳಗೆ ಯಾವ ಯಾವ ಆಲೋಚನೆಗಳು ಅವಲಂಬಿಸಲ್ಪಡುತ್ತವೆಂಬುದನ್ನು ನೋಡಿ ಮುಂದೆ ನಮ್ಮ ವಿಚಾರಗಳನ್ನು ಪ್ರದರ್ಶಿಸುವೆವು.

೨. ಮದ್ರಾಸಪ್ರಾಂತಿಕ ಪರಿಷತ್ತಿನ ಅಧಿವೇಶನವು ನಿನ್ನೆಯಿಂದ ಪ್ರಾರಂಭವಾಗಿದೆ. ಕಾಂಜೀವರಮ್ ಪಟ್ಟಣದಲ್ಲಿ ಸೇರಿದ ಈ ಅಧಿವೇಶನದ ವೃತ್ತಾಂತವನ್ನು ಬರುವ ಸಂಚಿಕೆಯಲ್ಲಿ ಕೊಡುವೆವು. ಈ ವರ್ಷದ ಅಧಿವೇಶನದ ವಿಶೇಷವೇನೆಂದರೆ, ಶ್ರೀಮತಿ ಸರೋಜಿನಿ ನಾಯಡು ಇವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದಾರೆ. ಶ್ರೀಮತಿ ಸರೋಜಿನಿಯವರು ಇಂಗ್ಲಿಷ್‌ಭಾಷೆಯ ವರಕವಯಿತ್ರಿಗಳು ಮಾತ್ರವಲ್ಲ, ಹಿಂದಿ ರಾಜಕಾರಣದ ಪ್ರಶ್ನವನ್ನು ಸಾಂಗೋಪಾಂಗವಾಗಿ ಅಭ್ಯಾಸಮಾಡಿದವರು. ಆದ್ದರಿಂದ ಅಂಥವರಿಗೆ ರಾಜಕೀಯ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ತಮ್ಮ ಸ್ವಿರವಿಚಾರಗಳನ್ನು ಪ್ರದರ್ಶಿಸಲು ದೊರತಮಾಡಿಕೊಡುವದು ಈಗಿನ ಪರಿಸ್ಥಿತಿಯಲ್ಲಿ ಅತ್ಯಂತ ಹಿತಾವಹವಾಗಿದೆ. ಅಲ್ಲದೆ ರಾಜಕಾರಣದಂಥ ಮಹತ್ವದ ವಿಷಯದಲ್ಲಿ ಹಿಂದಿ ಸ್ತ್ರೀಯರು ತಮ್ಮ ಪಾಲಿನ ಬುದ್ಧಿ ಕೌಶಲ್ಯವನ್ನು ತೋರಿಸಿಕೊಡಗುವ...

ಯಿಂದ ಈ ವರ್ಷದ ಪ್ರಾಂತಿಕಪರಿಷತ್ತು ಅಪೂರ್ವವಾದೀತೆಂಬುದಕ್ಕೆ ಸಂದೇಹವಿಲ್ಲ.

೩. ಕಳೆದ ವಾರ ಮುಂಬಯಿಯಲ್ಲಿ ಸಾರ್ವರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಲದ ಒಂದು ಸಭೆಯು ಸೇರಿತ್ತು. ಅದರಲ್ಲಿ ಕೆಲವು ಮಹತ್ವದ ಠರಾವುಗಳು ಪಾಸಾದವು. ಇಂಗ್ಲಂಡಿನೊಳಗಿನ ಕೂಲಿಪಕ್ಷದ ಪ್ರತಿನಿಧಿಗಳನ್ನು ರಾಷ್ಟ್ರೀಯ ಸಭೆಯ ಬರುವ ಅಧಿವೇಶನಕ್ಕೆ ಕಳುಹಿಸಿಕೊಡಲು 'ಲೇಬರಪಾರ್ಟಿ'ಯವರಿಗೆ ವಿಜ್ಞಾಪಿಸಿದೆ. ಅಲ್ಲದೆ ಇಂಗ್ಲಂಡಿನಲ್ಲಿರುವ ಬ್ರಿಟಿಷ್ ಕೊಂಗ್ರೆಸ್ ಕಮಿಟಿಗೂ ಕೂಡ ರಾಷ್ಟ್ರೀಯಸಭೆಯ ಉದ್ದೇಶಗಳನ್ನು ಮಾನ್ಯಮಾಡುವಂಥ ಬೇರೆ ಇಂಗ್ಲಿಷ್ ಗೃಹಸ್ಥರನ್ನು ಕಳುಹಿಸುವ ವಿಷಯದಲ್ಲಿ ವಿಜ್ಞಾಪಿಸಿಕೊಂಡಿದೆ. ಈ ಎರಡು ಠರಾವುಗಳಲ್ಲದೆ ಇಂಗ್ಲಂಡಿಗೆ ಹೋಗ ಹೊರಟ ಹೋಮ್‌ರೂಲ್ ಡೆಪ್ಯುಟೇಷನುಗಳಿಗೆ ವಿಲಾಯತಿ ಸರಕಾರವು ೧೧ನೆಯ ತಾರೀಖಿಗೆ ಪ್ರತಿಬಂಧಮಾಡಿತು; ಇದು ಕೇವಲ ಅನುಚಿತ. ಅವು ಹೋಮ್‌ರೂಲ್ ಡೆಪ್ಯುಟೇಷನುಗಳಾದರೂ ರಾಷ್ಟ್ರೀಯಸಭೆಯ ಧ್ಯೇಯವನ್ನು ಸಮರ್ಥಿಸುವದಕ್ಕಾಗಿಯೆ ಹೋಗುತ್ತಿದ್ದವು. ಹೀಗಿರಲು ವಿಲಾಯತಿ ಸರಕಾರವು ಮಾಡಿದ್ದು ಅನ್ಯಾಯವೆಂಬುದಾಗಿ ನಿಷೇಧ ಪರವಾದ ಒಂದು ಠರಾವು ಪಾಸಾಯಿತು. ಮೊನ್ನೆಯ ದಿಲ್ಲಿಯ ಯುದ್ಧ ಪರಿಷತ್ತಿನಲ್ಲಿ ನಾಮದಾರ ಖಾಪರ್ಡೆಯವರ ಸ್ವರಾಜ್ಯದ ಠರಾವಿನ ವಿಷಯದಲ್ಲಿ ಲೊ. ಚೆಮ್ಸ್‌ಫೋರ್ಡರ ದ್ವಾರಾ ಸರಕಾರದ ವ್ಯಕ್ತವಾದ ಧೋರಣವು ಜಾಣತನದ್ದಲ್ಲ; ಶ್ರೀ ಖಾಪರ್ಡೆಯವರ ಠರಾವು ಸ್ವರಾಜ್ಯದ ಹೆಸರಿನಿಂದ ಮುಂದೆ ಬಂದದ್ದಾದರೂ ಜನತೆಯೊಡನೆ ಸರಕಾರದ ಯುದ್ಧದ ಸಹಕಾರವುಂಟಾಗುವಂತೆಯೆ ಆ ಠರಾವಿನಲ್ಲಿ ದಾರಿಯು ತೆರೆದಿತ್ತು. ಅದನ್ನು ಮುಚ್ಚಿ ಸರಕಾರವು ಜನರ ಮನಸ್ಸನ್ನು ಕೆಡಿಸಿತು. ಇದು ಶೋಚನೀಯವಾಗಿದೆ. ಎಂಬ ಅರ್ಥದ ಇನ್ನೊಂದು ಠರಾವು ಸಾರ್ವರಾಷ್ಟ್ರೀಯ ಕಮಿಟಿಯ ಸಭೆಯಲ್ಲಿ ಪಾಸಾಯಿತು.

೪. ವೈಸರಾಯರು ಯುದ್ಧಪರಿಷತ್ತಿನೊಳಗಿನ ಹೋಮ್‌ರೂಲಿನ ಠರಾವಿಗೆ ಅರ್ಧಚಂದ್ರವನ್ನು ಕೊಟ್ಟದ್ದು ಅಯುಕ್ತವಾಯಿತೆಂದು ಮೇಲಿನ ಕಾಂಗ್ರೆಸ್ ಕಮಿಟಿಯವರು ಅಭಿಪ್ರಾಯಪಡುವಂತೆಯೆ ಮಹಾತ್ಮಾ ಗಾಂಧಿಯವರು ಕೂಡ ವೈಸರಾಯ ಪ್ರಭುಗಳಿಗೆ ಕಳುಹಿಸಿದ ಒಂದು ಪತ್ರದಲ್ಲಿ ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಗಾಂಧಿಯವರ ಮುಖ್ಯ ಅಭಿಪ್ರಾಯವೇನೆಂದರೆ, ಹೋಮ್‌ರೂಲಿನ ತತ್ವವು ಸುಶಿಕ್ಷಿತರಲ್ಲಿ ಮಾತ್ರವಲ್ಲ, ಅಶಿಕ್ಷಿತರಲ್ಲಿ ಕೂಡ ಹಬ್ಬಿಕೊಂಡಿದೆ; ಆದ್ದರಿಂದ ಅದನ್ನು ಹಿಂದಕ್ಕೆ ಇಟ್ಟು ಅವರ ಸಾಹಾಯ್ಯವನ್ನು ಕೇಳುವದು ಯುಕ್ತವಾಗಲಾರದು. ಸಾಮ್ರಾಜ್ಯದಲ್ಲಿ ಬೇರೆ ವಸಾಹತುಗಳಂತೆ ಹಿಂದುಸ್ಥಾನವು ಸಹ ಸಮಭಾಗಿತ್ವದ ಭಾವನೆಯಿಂದ ಪ್ರವೃತ್ತವಾಗಬೇಕು. ಆ ಸಮಭಾಗಿತ್ವದ ತಿಳಿವು ಹಿಂದಿರಾಷ್ಟ್ರದಲ್ಲಿ ಹುಟ್ಟಬೇಕಾದರೆ ಅದಕ್ಕೆ ಸ್ವರಾಜ್ಯದಾನದ ಆಶ್ವಾಸನವು ಸಿಗಬೇಕು. ಆತ್ಮಿಕ ಶಕ್ತಿಯ ದೃಶ್ಯರೂಪವಾದ ಸತ್ಯಾಗ್ರಹದ ಬಲದಿಂದಾದರೂ ಹಿಂದಿ ಜನರು ಹೋಮ್‌ರೂಲಿನ ವಿಷಯದಲ್ಲಿ ಯತ್ನಿಸಿಯಾರು ಎಂಬುದು ಚಂಪಾರಣ್ಯ ಮತ್ತು ಖೇಡಾಜಿಲ್ಲೆಯೊಳಗಿನ ಉದಾಹರಣಗಳಿಂದ ಊಹಿಸಬಹುದಾಗಿದೆ. ಆದ್ದರಿಂದ ಸರಕಾರವು ಔದಾರ್ಯದಿಂದ ಹೋಮ್‌ರೂಲಿಗೆ ಸಮ್ಮತಿಯನ್ನು ಕೊಟ್ಟು ಆ ವಿಷಯದಲ್ಲಿ ಪಾರ್ಲಿಮೆಂಟಿನ ಕಡೆಯಿಂದ ಒಂದು ಆಶ್ವಾಸನವನ್ನು ಪ್ರಕಟಿಸುವದು ವಿಹಿತವಾಗಿದೆ. ಮಹಾತ್ಮಾಗಾಂಧಿಗಳ ಹಿತದ ಆಲೋಚನೆಯನ್ನು ಮುತ್ಸದ್ದಿಗಳಾದ ನಮ್ಮ ವೈಸರಾಯರು ಬಿಟ್ಟು ಹಾಕಲಿಕ್ಕಿಲ್ಲವೆಂದು ತೋರುತ್ತದೆ.

೫. ಮುಂಬಯಿ ಪ್ರಾಂತದ ಪ್ರಾಂತಿಕಪರಿಷತ್ತು ಜರಗುವ ಸಂಧಿಯಲ್ಲಿ ಅಲ್ಲಿಯ ವಿಘ್ನಸಂತೋಷಿಗಳಾದ ಕೆಲವು ಬ್ರಾಹ್ಮಣೇತರರು ಅಲ್ಲಿಯ ಪ್ರಾಂತಿಕಪರಿಷತ್ತಿಗೆ ಸವತಿಯಂತೆ ಬಂದು ಬ್ರಾಹ್ಮಣೇತರರ ಪರಿಷತ್ತನ್ನು ಒದಗಿಸಿ ಅದರಮೂಲಕ ತಮ್ಮ ಕೃತಾರ್ಥತ್ವವನ್ನು ವ್ಯಕ್ತಗೊಳಿಸುತ್ತಿದ್ದಾರೆ. ಇದು ಆ ವರ್ಗಕ್ಕೆ ಅವರ ತಿಳಿವಿನಂತೆ ಒಂದು ವೇಳೆ ಭೂಷಣಾಸ್ಪದವಾಗಿದ್ದರೂ, ದೇಶಕ್ಕೆ ಲಾಂಛನಾಸ್ಪದವೆ ಸರಿ. ಮುಂಬಯಿ ಪ್ರಾಂತಿಕಪರಿಷತ್ತಿನ ಅಧ್ಯಕ್ಷರು ನಾಮದಾರ ಪಟೇಲರು. ಇವರು ಅವಿಶ್ರಾಂತ ಶ್ರಮಪಟ್ಟು ಬ್ರಾಹ್ಮಣೇತರರ ಉದ್ಧಾರಾರ್ಥವಾಗಿ ಒತ್ತಾಯದ ಪ್ರಾಥಮಿಕಶಿಕ್ಷಣದ ಬಿಲನ್ನು ಮುಂಬಯಿ ಕಾಯಿದೆಕೌನ್ಸಿಲಿನಲ್ಲಿ ಪಾಸುಮಾಡಿಸಿಕೊಂಡವರು. ಹೀಗಿರುತ್ತ ಇಂಥ ಮಹನೀಯರು ಅಧ್ಯಕ್ಷಸ್ಥಾನವನ್ನು ವಹಿಸುವ ಪ್ರಾಂತಿಕಪರಿಷತ್ತಿನಲ್ಲಿ ಬ್ರಾಹ್ಮಣೇತರ ಬಂಧುಗಳು ಮೊದಲಿನಂತೆ ಬಂದು ಸೇರುವದನ್ನು ಬಿಟ್ಟು ಮದ್ರಾಸಿನ ಡೊಕ್ಟರ ನಾಯರರ ಅನುಕರಣದ ಹುಚ್ಚಿನಿಂದ ಸವತಿಯಾಗಿ ಒಂದು ಹೊಸ ಪರಿಷತ್ತನ್ನು ಏರ್ಪಡಿಸುವದೆಂದರೆ ದೇಶದ ನಿಜವಾಗಿ ದುರ್ದೈವವೆ ಸರಿ! ಬ್ರಾಹ್ಮಣೇತರರ ಈ ಪರಿಷತ್ತು ಕಳೆದ ವಾರ ವಿಜಾಪುರದಲ್ಲಿ ಸೇರಿತ್ತೆಂದು ಅಲ್ಲಿಯ 'ವೈಭವ'ವೆಂಬ ಪತ್ರಿಕೆಯಿಂದ ತಿಳಿದು ಬರುತ್ತದೆ. ಪರಿಷತ್ತಿನೊಳಗಿನ ವಕ್ತೃಗಳ ಭಾಷಣಗಳನ್ನು ನೋಡುವಾಗ ತಮ್ಮ ಮೂಗನ್ನು ಕೊಯ್ದುಕೊಂಡು ದೇರೆಯವರಿಗೆ ಅಪಶಕುನ ಮಾಡುವ ವಿಘ್ನಸಂತೋಷಿಯು ಸ್ಮರಣವಾಗದೆ ಇರದು. "ಡೊಕ್ಟರ ನಾಯರರ ಛತ್ರದಲ್ಲಿ ಬ್ರಾಹ್ಮಣೇತರರ ಉದ್ಧಾರವಾಗಬೇಕೆಂಬ" ಅಲ್ಲಿಯ ವಕ್ತೃಗಳಿಗೆ ತೋರುವದು. ಉದ್ಧಾರವು ಭ್ರಾಮಕ [illegible] ಅಲ್ಲಿ ಇಲ್ಲ. ಉದ್ಧಾರವು ಉದ್ಧಾರವೆ. ಆದರೆ [illegible] ಪುಣ್ಯ ಕಾರ್ಯವನ್ನು ಮಾಡುವಾಗ ಜಾತಿ ಭೇದದ [illegible] ಕಾರಿ ಒಡಕು ತಂದುಕೊಳ್ಳುವದು [illegible] ಶ್ರೇಯಸ್ಕರದಲ್ಲ [illegible]

ತೀವ್ರವಾಗಿ ನಿಷೇಧಿಸಬೇಕಾದ್ದೆ. ವಿಜಾಪುರದಂಥ ಕ್ಷತ್ರಿಯಕರ್ನಾಟಕದಲ್ಲಿ ಒಡಕಿನ ಈ ವಿಷವು ಉದ್ಭವಿಸಿದ್ದಕ್ಕೆ ನಾವು ತುಂಬಾ ವ್ಯಸನಪಡುತ್ತೇವೆ.

೬. ಮುಂಬಯಿಯ ೧೮ನೆ ಪ್ರಾಂತಿಕಪರಿಷತ್ತಿನ ಅಧಿವೇಶನವು ವಿಜಾಪುರಪಟ್ಟಣದಲ್ಲಿ ಈ ತಿಂಗಳ ತಾ. ೬-೭-೮ ಈ ಮೂರು ದಿವಸ ನಾಮದಾರ ಪಟೇಲರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುಖ್ಯವಾಗಿ ಸ್ವಸ್ವಭರತಿಯ ವಿಷಯವನ್ನು ವಿವರಿಸಿದರು. ಆ ಸಂದರ್ಭದಲ್ಲಿ ಅವರು ಹೇಳಿದ್ದೇನೆಂದರೆ, ಅಧಿಕಾರಿಗಳು ಸೈನ್ಯವನ್ನು ಕೂಡಿಸುವಾಗ ಜಾತಿದ್ವೇಷ ಮತ್ತು ಭೇದಗಳನ್ನು ತಂದು ಹಾಕದೆ ಅಂತಃಕರಣ ಪೂರ್ವಕವಾಗಿ ಸಮಬುದ್ಧಿಯಿಂದ ಯತ್ನಿಸಬೇಕು. ರಾಷ್ಟ್ರೀಯ ಸಭೆ ಹಾಗು ಮೊಸ್‌ಲೆಮ್-ಲೀಗುಗಳ ಸಂಯುಕ್ತಯೋಜನೆಯೆ ರಾಷ್ಟ್ರದ ಇತ್ತಲಾಗಿನ ಮುಖ್ಯವಾದ ಆಕಾಂಕ್ಷೆಯಾಗಿದೆ; ಇದೆ ತರದ ಆಕಾಂಕ್ಷೆಯನ್ನು ಮುಂಬಯಿ ಪ್ರೆಸಿಡನ್ಸಿ ಏಸೋಸಿಏಷನ್‌ನವರು ೧೯೧೭-೧೮ ರಲ್ಲೆ ಪಾರ್ಲಿಮೆಂಟಿಗೆ ವ್ಯಕ್ತಪಡಿಸಿದ್ದಾರೆ ಎಂಬುದಾಗಿ ನಾಮದಾರ ಪಟೇಲರು ಸ್ಪಷ್ಟವಾಗಿ ಹೇಳಿದರು. ಖೇಡಾ ಜಿಲ್ಲೆಯ ಅಸ್ವಾಸ್ಥ್ಯದ ಕುರಿತು ಮಾತಾಡುವಾಗ ಅಧ್ಯಕ್ಷರು ಅಧಿಕಾರಿಗಳ ದುರಾಗ್ರಹದಿಂದಲೆ ಜನರಿಗೆ ಸತ್ಯಾಗ್ರಹವನ್ನೆ ಕೈಕೊಳ್ಳಬೇಕಾಗಿ ಬಂದಿದೆ ಎಂಬಿತ್ಯಾದಿ ಅಭಿಪ್ರಾಯಪಟ್ಟರು. ಮೊನ್ನೆಯ ಯುದ್ಧಪರಿಷತ್ತಿನ ವಿಷಯದಲ್ಲಿ ಪಟೇಲರು ವ್ಯಕ್ತಗೊಳಿಸಿದ ವಿಚಾರಗಳಂತು ಮನನೀಯವಾಗಿದ್ದವು. "ಪರಿಷತ್ತಿನಲ್ಲಿ ಆಶ್ವಾಸನವನ್ನು ಕೊಟ್ಟಂತೆ ಸೈನ್ಯಭರತಿಯ ಮತ್ತು ದ್ರವ್ಯಸಾಮಗ್ರಿಯ ಕೆಲಸಗಳನ್ನು ಜನರ ಮುಖಂಡರು ಹೃತ್ಪೂರ್ವಕವಾಗಿ ಮಾಡುವದು ಅವರ ಕರ್ತವ್ಯವೆ. ಮತ್ತು ಆ ಕರ್ತವ್ಯವನ್ನು ಅವರು ಮಾಡಿಯೆ ತೀರುವರು. ಆದರೆ ಸಂಯುಕ್ತಸಭೆಗಳ ಯೋಜನೆಯನ್ನು ಪರಿಷತ್ತಿನ ಮುಂದೆ ತರಲು ಬಿಡಲಿಲ್ಲ ಇದು ಅನೇಕರಿಗೆ—ಆ ಅನೇಕರಲ್ಲಿ ನಾನೂ ಒಬ್ಬನು ಸೇರಿದವನೆ—ಅಸಮಾಧಾನಕರವಾಯಿತು. ಜನರ ಮೇಲೆ ಮತ್ತು ಅವರ ಮುಖಂಡರ ಮೇಲೆ ನಂಬಿಕೆಯನ್ನಿಡುವ ಸಮಯವು ಈಗ ಬಂದಿದೆ. ಆದ್ದರಿಂದ ಹತ್ಯಾರಿನ ಕಾಯಿದೆಯನ್ನು ತಿದ್ದಿರಿ; ಪ್ರೆಸ್ ಏಕ್ಟನ್ನು ರದ್ದುಪಡಿಸಿರಿ." ಎಂದು ನಾಮದಾರ ಪಟೇಲರು ಅಧಿಕಾರಿಗಳಿಗೆ ಉಪದೇಶವನ್ನು ಮಾಡಿದರು. ಸಾರಾಂಶ, ನಾಮದಾರ ಪಟೇಲರಂಥ ಅಧ್ಯಕ್ಷರ ಭಾಷಣದಿಂದ ಜನರೂ ಮತ್ತು ನೋಕರಶಾಹಿಯವರೂ ಏಕಪ್ರಕಾರವಾಗಿಯೆ ಯೋಗ್ಯವಾದ ಬೋಧವನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕು.

೭. ಮೊನ್ನೆಯ ಶನಿವಾರ ಇಲ್ಲಿಯ ಮ। ರಾ। ರಾ। ಕೆ. ರಂಗರಾಯರಿಗೆ 'ರೈಸಾಹೇಬ' ಎಂಬ ಬಿರುದಿನ ಪದಕವು ಮ. ಕಲೆಕ್ಟರ ದೊರೆಗಳಿಂದ ಗವರ್ನಮೆಂಟ ಕೊಲೇಜಿನ ಸಭಾಸ್ಥಾನದಲ್ಲಿ ಕೊಡೋಣಾಯಿತು. ರಾ। ರಂಗರಾಯರು ಪಂಚಮರ ಉದ್ಧಾರಾರ್ಥವಾಗಿ ಈಗ ಎಷ್ಟೊ ಸಮಯದಿಂದ ಅವಿಶ್ರಾಂತ ಶ್ರಮವನ್ನು ಪಡುತ್ತಿದ್ದಾರೆ. ಮಾತ್ರವಲ್ಲ, ಅದರ ಮಧುರವಾದ ಫಲಗಳನ್ನು ಈ ಜಿಲ್ಲೆಯವರ ಅನುಭವಕ್ಕೆ ತಂದು ಕೊಟ್ಟಿದ್ದಾರೆ. ಸಮಾಜ ಮತ್ತು ದೇಶ ಸೇವಕರಾದ ಇಂಥ ಮಾನನೀಯರನ್ನು ಯೋಗ್ಯ ಪದವಿಗಳಿಂದ ಗೌರವಿಸುವದು ಸರಕಾರದ ಗುಣಜ್ಞತೆಗೆ ಯೋಗ್ಯವಾಗಿಯೆ ಇದೆ. ರೈಸಾಹೇಬ ರಂಗರಾಯರನ್ನು ನಾವು ಈ ಪದವಿ ಸಿಕ್ಕಿದ ಬಗ್ಗೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಮತ್ತು ಅವರು ಇನ್ನೂ ಉಪಯುಕ್ತವಾದ ದೇಶಸೇವೆಯಿಂದ ಬೇರೆಯವರಿಗೆ ತಮ್ಮ ಉತ್ತಮ ಉದಾಹರಣವನ್ನು ಹಾಕಿ ಕೊಟ್ಟಾರೆಂದು ನಂಬುತ್ತೇವೆ.

ಸ್ಥಳೀಕ—ಮಂಗಳೂರು.

ರಾಷ್ಟ್ರೀಯಶಿಕ್ಷಣ ಮಂಡಲದ ಇಲ್ಲಿಯ ಕಮ್ಮಿಟಿ ಮೆಂಬರರಾಗಲಿಕ್ಕೆ ವಾಗ್ದಾನ ಮಾಡಿದ ಗೃಹಸ್ಥರ ಸಭೆಯು ಈ ತಿಂಗಳ ೨ನೇ ತಾರೀಕಿನಲ್ಲಿ ರಾವ್ ಬಹದ್ದೂರ್ ಅತ್ತಾವರ ರಾಮಯ್ಯ ಪೂಂಜರವರ ಅಧ್ಯಕ್ಷತೆಯಲ್ಲಿ ಕೂಡಿತು. ರಾಷ್ಟ್ರೀಯ ಶಿಕ್ಷಣಮಂಡಲದ ಮೆಂಬರರ ಮತ್ತು ಧನಸಹಾಯ ಮಾಡಿದವರ ಮತ್ತು ಇತರರ ಒಂದು ಸಭೆಯು ಇದೇ ತಿಂಗಳ ತಾ. ೧೮ರಲ್ಲಿ ಕೂಡಬೇಕೆಂತ ನಿಶ್ಚಯಿಸಲ್ಪಟ್ಟಿರುವದು. ಹೀಗೆ ಕೂಡುವ ಸಭೆಯಲ್ಲಿ ಶಿಕ್ಷಣಮಂಡಲದ ಒಂದು ಶಾಖೆಯು ಇಲ್ಲಿ ಸ್ಥಾಪಿಸಲ್ಪಡುವದಲ್ಲದೆ, ಉಪಶಾಖೆಯ ಬಗ್ಗೆ ಕಳೆದ ಸರ್ತಿಯ ಸಭೆಯಲ್ಲಿ ನೇಮಿಸೋಣಾದ ಕಮ್ಮಿಟಿಯವರಿಂದ ತಯಾರಿಸಲ್ಪಟ್ಟ ನಿಬಂಧನೆಗಳು ಪರ್ಯಾಲೋಚಿಸಲ್ಪಡುವವು ಮತ್ತು ಇದೇ ಸಭೆಯಲ್ಲಿ ಈ ಉಪಶಾಖೆಗೆ ಬೇಕಾದ ಅಧಿಕಾರಿಗಳು ನೇಮಿಸಲ್ಪಟ್ಟು ಬಾಲಿಕಾ ಪಾಠಶಾಲೆಯ ಸ್ಥಾಪನೆಗೆ ಏನೇನೆಲ್ಲಾ ವ್ಯವಸ್ಥೆಯು ಬೇಕಾಗಿರುವದೆಂಬುದು ನಿಶ್ಚಯಿಸಲ್ಪಡುವದು. ೧೮ನೇ ತಾರೀಕಿನ ದಿನ ಕೂಡುವ ಸಭೆಯು ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯ ಸಭಾಸ್ಥಾನದಲ್ಲಿ ಸಾಯಂಕಾಲ ಗಂಟೆ ೪ಕ್ಕೆ ಜರಗುವದು. ಈ ಸಭೆಗೆ ಸರ್ವರೂ ದಯವಿಟ್ಟು ಬರಬೇಕೆಂಬದಾಗಿ ಕಾರ್ಯದರ್ಶಿಗಳಾದ ಮ। ರಾ। ಎಮ್. ಎಸ್. ಏಕಾಂಬರರಾವ್‌ರವರು ವಿಜ್ಞಾಪಿಸಿಕೊಂಡಿರುತ್ತಾರೆ.

ಮ। ರಾ। ರಾ। ರೈಸಾಹೇಬ ಕೆ. ರಂಗರಾಯರಿಗೆ ರೈಸಾಹೇಬ ಬಿರುದಿನ ಪದಕವನ್ನು ಮತ್ತು ಕೈಗಾರಿಕೆ ಮತ್ತು ಕೃಷಿಪ್ರದರ್ಶನದಲ್ಲಿ ಬಹುಮಾನಗಳನ್ನು ಪಡೆದವರಿಗೆ ಇಂಥಾ ಬಹುಮಾನಗಳನ್ನು ಹಂಚುವ ಬಗ್ಗೆ ಜಿಲ್ಲಾ ಕಲೆಕ್ಟರ ದೊರೆಗಳ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ತಾ. ೪ನೇ ಶನಿವಾರ ದರಬಾರು ಸಭೆಯು ಕೂಡಿತ್ತು. ಸಭೆಗೆ ಸರಕಾರದ ನೌಕರರೂ ವಕೀಲರೂ ಸಾವುಕಾರರೂ ಇತರರೂ ವಿಶೇಷವಾಗಿ ಬಂದಿದ್ದರು. ಕಲೆಕ್ಟರ ದೊರೆಗಳವರು ರಾ. ಕೆ. ರಂಗರಾಯರ ಜೀವನದ [illegible] ಸಮಾಜ ಸುಧಾರಣೆ [illegible]

ಸುಧಾರಣೆ ಇತ್ಯಾದಿಗಳನ್ನು ಪ್ರಶಂಸಿಸಿ ದೊರೆಗಳು ಮಾ. ರಂಗರಾಯರಿಗೆ ಬಿರುದಿನ ಪದಕವನ್ನು ಸರಕಾರದವರ ಪರವಾಗಿ ಕೊಟ್ಟು ವಂದಿಸಿದರು. ಈ ದರಬಾರಿನ ನಂತರ ವಸ್ತುಪ್ರದರ್ಶನದ ಪದಕ ಪ್ರತಿಗಳು ಸಭೆಯಲ್ಲಿ ಹಂಚೋಣಾದವು. ಈ ಪ್ರದರ್ಶನದಿಂದ ಹುಟ್ಟಿ ಬಂದ ಐವಜಿನಲ್ಲಿ ಕೆಲವನ್ನು ಲೇಡಿಸ್ ಯುದ್ಧಫಂಡಿಗೆ ಕಳುಹಿಸಿಕೊಟ್ಟು ಬಾಕಿ ಉಳಿದ ಐವಜನ್ನು ಜಿಲ್ಲೆಯ ಸಾಂಪತ್ತಿಕ ಅಭಿವೃದ್ಧಿಯಲ್ಲಿ ವಿನಿಯೋಗಿಸುವಂತೆ ಒಂದು ಡಿಸ್ಟ್ರಿಕ್ಟ್ ಎಡ್ವಾನ್ಸ್‌ಮೆಂಟ ಕಮ್ಮಿಟಿಯು ಏರ್ಪಡಿಸಲ್ಪಟ್ಟಿರುವದೆಂದು ಕಲೆಕ್ಟರ ದೊರೆಗಳು ಸೂಚಿಸಿದರು. ಎರಂಡಿ ರೇಷ್ಮೆಯ ವ್ಯವಸಾಯ, ನೀರುಜೋಗುಗಳಿಂದ ವಿದ್ಯುಚ್ಛಕ್ತಿ ಉತ್ಪನ್ನಮಾಡಿ ಅದನ್ನು ಜಿಲ್ಲೆಯ ಕೈಗಾರಿಕೆಗಳ ಬಗ್ಗೆ ಉಪಯೋಗಿಸುವ ವಿಷಯ, ಜಿಲ್ಲೆಯಲ್ಲಿ ಇನ್ನೂ ಕೆಲವು ಕೈಗಾರಿಕೆಗಳಿಗೆ ಇರುವ ಆಸ್ಪದವನ್ನು ಪರಿಶೋಧಿಸಿ ನೋಡುವದು ಇತ್ಯಾದಿ ಉದ್ದೇಶಗಳು ಈ ಕಮ್ಮಿಟಿಯ ಮುಂದಿರುವವು. ಜಿಲ್ಲಾಜನರು ಸರಕಾರದವರ ಸಾಹಾಯವು ಬರಲಿ ಎಂತ ಸುಮ್ಮನಿರದೆ ಕೈಗಾರಿಕೆಗಳಿಗೆ ಬಹಳ ಆಸ್ಪದವಿರುವ ಈ ಜಿಲ್ಲೆಯನ್ನು ಉದ್ಧರಿಸುವ ಪ್ರಯತ್ನವನ್ನು ತಾವಾಗಿಯೇ ಕೈಕೊಳ್ಳಬೇಕೆಂದು ದೊರೆಗಳವರು ಹೇಳಿರುತ್ತಾರೆ. ಈ ಚಿಕ್ಕ ಭಾಷಣದ ನಂತರ ಪದಕ ಇತ್ಯಾದಿಗಳು ಹಂಚೋಣಾದವು. ಸಭೆಯವರ ಪರವಾಗಿ ಮ। ರಾ। ರಾ। ಸಂಜೀವ ರಘುನಾಥಯ್ಯನವರೂ ಮ। ರಾ। ರಾ। ಯು. ಸಿ. ಕೃಷ್ಣಭಟ್ಟರವರೂ ಕಲೆಕ್ಟರ ದೊರೆಗಳನ್ನು ವಂದಿಸಿದ ನಂತರ ಸಭೆಯು ತೀರಿತು.

ಪುತ್ತೂರಲ್ಲಿ ಸ್ಥಾಪಿತವಾದ ಪಂಚಮರ ಪರಸ್ಪರ ಸಹಾಯಕ ಸಂಘದ ಹೊಸ ಕಟ್ಟೋಣದ ಪ್ರವೇಶ ಸಮಾರಂಭವು ಇದೇ ತಿಂಗಳ ತಾ. ೧೪ನೇ ಮಂಗಳವಾರ ಸಾಯಂಕಾಲ ಘಂಟೆ ೫-೩೦ಕ್ಕೆ ಜರಗುವದು. ಜಿಲ್ಲಾ ಕಲೆಕ್ಟರರಾದ ಮ। ವ್ಯಾಟ್ಸ್ ದೊರೆಗಳು ಈ ಸಮಾರಂಭವನ್ನು ನೆರವೇರಿಸುವರು.

ಇಲ್ಲಿಯ ಬಂದರಿನ ಸ್ಟೀಮರ್ ಚಲಾವಣೆಯು ಇನ್ನು ಒಂದೆರಡು ಸ್ಟೀಮರುಗಳನಂತರ ಸುಮಾರು ಈ ತಿಂಗಳ ಮಧ್ಯಕಾಲದೊಳಗೆ ಮುಗಿಯುವದು.

ಮಲೆನಾಡು ಆಗಿದ್ದು ಮಲೆಜ್ವರದಿಂದ ಬಹಳವಾಗಿ ಪೀಡಿತವಾಗಿರುವಂಥ ಸುಳ್ಯದಂಥಾ ಸ್ಥಳಗಳಲ್ಲಿ ಆಸ್ಪತ್ರೆಯನ್ನು ಆಗಿಂದಾಗ್ಯೆ ಮುಚ್ಚುವದರಿಂದ ಜನರು ಬಹಳ ತೊಂದರೆಗೆ ಗುರಿಯಾಗುತ್ತಾರೆಂತಲೂ ಸುಳ್ಯದಿಂದ ಇಲ್ಲಿಯ ರಾಷ್ಟ್ರೀಯಶಿಕ್ಷಣದ ಕಮ್ಮಿಟಿಯ ಅಧ್ಯಕ್ಷರಾದ ರಾವ್ ಬಹದ್ದೂರ್ ಮ। ರಾ। ರಾ। ರಾಮಯ್ಯಪೂಂಜರವರಿಗೆ ರೂ. 100ನ್ನು ಕಳುಹಿಸಿಕೊಟ್ಟಿರುವರೆಂದೂ ಅಲ್ಲಿಯ ವಾತ್ಮೀದಾರರೊಬ್ಬರು ಬರೆದಿರುವರು.

ಇಲ್ಲಿ 'ಮಾಸ್ಟರ್ ಟೈಲರ್' ಎಂತ ದರ್ಜಿಯ ವೃತ್ತಿಯನ್ನು ಖ್ಯಾತಿಯಿಂದ ನಡಿಸುತ್ತಿರುವ ರಾ। ಎಮ್. ಅನಂತ ಪ್ರಭುಗಳ ಪರಿಚಯವನ್ನು ವಾಚಕರಲ್ಲಿ ಹಲವರಿಗೆ ನಾವು ಹೇಳಬೇಕೆಂತಿಲ್ಲ. ಸಾಧಾರಣ ಮೆಟ್ರಿಕ್ಯುಲೇಷನಾವರೇಗೆ ಇಂಗ್ಲಿಷ ವಿದ್ಯಾಭ್ಯಾಸವನ್ನು ಪಡೆದು ನಂತರ ಮದ್ರಾಸು ಇತ್ಯಾದಿ ಪ್ರಾಂತ್ಯಗಳಲ್ಲಿ ದರ್ಜಿ ವೃತ್ತಿಗೆ ಬೇಕಾದ ಶಿಕ್ಷಣವನ್ನು ಅಲ್ಲಿಯ ಪ್ರಖ್ಯಾತಪಟ್ಟ ಈ ವೃತ್ತಿಯವರಿಂದ ಕಲಿತು ಈಗ ಕೆಲವು ವರ್ಷಗಳಿಂದ ಮಂಗಳೂರಲ್ಲಿ "ದಿ ಟೈಲರಿಂಗ್ ಹೌಸ್" ಇದರ ಮಾಲಿಕರಾಗಿ ಈ ವೃತ್ತಿಯನ್ನು ನಡಿಸುತ್ತಿದ್ದಾರೆ. ಪ್ರತಿಒಂದು ವೃತ್ತಿಯಲ್ಲಿ ಕ್ರಮವಿದೆ, ಪಡಿಯಬೇಕಾದ ಅನುಭವ, ಮತ್ತು ಕಲಿಯಬೇಕಾದ ವಿಷಯಗಳೂ ಇವೆ. ಇದು ಇತರ ವೃತ್ತಿಗಳಿಗೆ ಹ್ಯಾಗೆ ಅಗತ್ಯವೋ ಅದೇ ರೀತಿ ಈ ವೃತ್ತಿಗೂ ಅಗತ್ಯ. ಇದನ್ನು ತಿಳಕೊಂಡು ತಾನು ಪಡೆದ ಶಿಕ್ಷಣದ ಮತ್ತು ದೀರ್ಘಕಾಲದ ಅನುಭವವನ್ನು ಇತರರಿಗೆ ಕೊಡುವಂತೆ ದೃಷ್ಟಾಂತಮೂಲಕ ಪಾಠಗಳನ್ನು ಹೇಳಿಕೊಡುವ ವ್ಯವಸ್ಥೆಯನ್ನು ಇವರ ಟೈಲರಿಂಗ್ ಹೌಸಿನಲ್ಲಿಯೇ ಮಾಡಿರುತ್ತಾರೆ. ಒಗ್ಗಿಹ ಗೊತ್ತಿದ್ದವರೂ ಗೊತ್ತಿಲ್ಲದವರೂ ಈ ಪಾಠಗಳನ್ನು ಕಲಿತುಕೊಳ್ಳಬಹುದು. ಬಹಳ ಸುಲಭ ದರಗಳಲ್ಲಿ ಈ ಪಾಠಗಳನ್ನು ಹೇಳಿಕೊಡುವದಾಗಿ ತಿಳಿಯುತ್ತೇವೆ.

ಕೋಟೆಕಾರ ಎಲಿಮೆಂಟರಿ ಸ್ಕೂಲಿನ ವರ್ಷಾಂತ್ಯವು ಗವರ್ನಮೆಂಟ ಸೆಕೆಂಡರಿ ಟ್ರೈನಿಂಗ್ ಸಾಲೆಯ ಹೆಡ್‌ಮಾಸ್ತರ್ ಮ। ರಾ। ಟಿ. ಮಂಗೇಶರಾವ್ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಇದೇ ೯ನೇ ತಾರೀಕಿಗೆ ಮಧ್ಯಾಹ್ನ ೩ ಘಂಟೆಗೆ ಜರಗಿತು. ಹೆಡ್‌ಮಾಸ್ತರ ಮತ್ತು ಮೆನೆಜರ್ ಮ। ರಾ। ಕೆ. ಸುಬ್ಬಣಯ್ಯನವರು ವರ್ಷಾವಧಿ ರಿಪೋರ್ಟಿನಲ್ಲಿ ಸರಕಾರದಿಂದ ಕಟ್ಟೋಣ, ಸಾಮಗ್ರಿಗಳ ಬಗ್ಗೆ ತನಗೆ ಸಿಕ್ಕಿದ 'ಗ್ರೆಂಟ' ಸಹಾಯವನ್ನು ಕೊಂಡಾಡಿ ಆಟ ಬಯಲಿಗೋಸ್ಕರ ತಾನು ಸರಕಾರದವರೊಡನೆ ಕೇಳಿಕೊಂಡ ಸ್ಥಳವು ಇನ್ನೂ ಕಾಯಮಾಗಿ ಸಾಲೆಗೆ ಉಪಯೋಗಕ್ಕೆ ಸಿಕ್ಕದ ಕೊರತೆಯನ್ನು ಕುರಿತು ಹೇಳಿದರು. ಮ। ರಾ। ಯು. ಟಿ. ಕೃಷ್ಣಭಟ್ಟ ಬಿ. ಎ. ಬಿ. ಎಲ್ ಇವರು ಈ ಸಾಲೆಯಲ್ಲಿ ಮಕ್ಕಳಿಗೆ ಮಾತ್ರವಲ್ಲ ದೊಡ್ಡ ಹಿರಿಯರಿಗೂ ವಿದ್ಯಾಭ್ಯಾಸ ಪ್ರಚಾರವಾಗುವಂತೆ ನೈಟ್‌ಸ್ಕೂಲ ಮತ್ತು ಪುಸ್ತಕ ಭಂಡಾರಗಳನ್ನು ಏರ್ಪಡಿಸಬೇಕಾಗಿ ಕಳೆದ ವರ್ಷ ಮಾಡಿದ ಸೂಚನೆಯನ್ನು ಪುನಃ ಒತ್ತಿಹೇಳಿದರು. ಮ। ರಾ। ಎಮ್. ಶಾಬು ಬಿ. ಎ. ಎಲ್. ಟಿ. ಯವರು ಈ ಸಾಲೆಯ ಅಭಿವೃದ್ಧಿಯನ್ನು ಕುರಿತು [illegible] ಭಾಷಣ ಮಾಡಿ [illegible] ಸಾಲೆಗಳನ್ನು ಮುಖ್ಯವಾಗಿ [illegible] ಸಾಲೆಗಳನ್ನು ಪ್ರೋತ್ಸಾಹಗೊಳಿಸಲಿಕ್ಕೆ [illegible] ಹೇಳಿದರು. ಅಧ್ಯಕ್ಷರು ಈ ಸಂದರ್ಭದಲ್ಲಿ [illegible] ಸಾಲೆಗಳ [illegible] ಅನಾನುಕೂಲತೆಯ [illegible]

ಹೇಳಿದರು. ಮಲೆಯಾಳದಲ್ಲಿ ಮಹಮ್ಮದೀಯರಿಗೆ ಒಂದು ಬೇರೆ ಕಾಲೇಜು ಏರ್ಪಡಿಸುವಂತೆ ಪ್ರಯತ್ನಿಸಬೇಕೆಂದು ಅವರು ಸೂಚಿಸಿದರು. ಇದಲ್ಲದೆ ಅರಬಿ ಬರಹವು ಮತಬೋಧನೆಯ ಬಗ್ಗೆ ಅಗತ್ಯವೆಂದಾದರೂ, ಅದರೊಂದಿಗೆ ಹಿಂದಿ ಭಾಷೆಯನ್ನೂ, ಮಲೆಯಾಳದ ಮಕ್ಕಳು ಕಲಿಯುವುದು ಅಗತ್ಯವೆಂದು ಅವರು ಹೇಳಿದರು.

ಖೇಡಾ—ಇಲ್ಲಿ ಕಂದಾಯ ಕೊಡದ ಮುಷ್ಕರ ಹಿಡಿದವರ ಆಸ್ತಿಪಾಸ್ತಿಗಳನ್ನು ಸರಕಾರಕ್ಕೆ ಮಾಡಿಕೊಳ್ಳದಿದ್ದರೂ ಅನೇಕ ಕಡೆಗಳಲ್ಲಿ ಜನರ ದನಕರುಗಳನ್ನು ಜಪ್ತಿ ಮಾಡುತ್ತಲೇ ಇದ್ದಾರೆ. ಈ ಸತ್ಯಾಗ್ರಹದ ಚಳವಳಿಯು ಇನ್ನೂ ಮುಗಿಯಲಿಲ್ಲ.

ಬಿಜಾಪುರ—ಇಲ್ಲಿ ನಿರಾಶ್ರಿತ ಜನರ ಉದ್ಧಾರಣೆಯ ಒಂದು ಪರಿಷತ್ತು ಓನರೆಬಲ್ ಬಿ. ಎಸ್. ಕಾಮತರವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರ ಭಾಷಣದಲ್ಲಿ ಈ ನಿರಾಶ್ರಿತ ಜನರ ಮಾನವನ್ನು ಆರೋಗ್ಯದ ಮಟ್ಟಿಗೆ ದುರುಸ್ತಾಗುವ ಹಾಗೆ ಪ್ರಯತ್ನಿಸಬೇಕೆಂದೂ ಈ ಜನರೂ ಇತರ ಜನರೂ ಒಬ್ಬರಿಗೊಬ್ಬರು ಸೇರಿ ನಡೆಯಬೇಕೆಂದೂ ಎಲ್ಲಾ ಬಗೆಯ ನಾಗರಿಕ ಹಕ್ಕುಗಳನ್ನು ಈ ಜನರಿಗೂ ಸಿಕ್ಕುವ ಹಾಗೆ ಮಾಡಬೇಕೆಂದು ಅವರೂ ಹೇಳಿದರು.

ವಿಶಾಖಪಟ್ಟಣ—ಇಲ್ಲಿ ಒಂದು ಎಂಜಿನಿಯರ್ ಸ್ಕೂಲನ್ನು ತೆರೆಯುವದಕ್ಕೆ ಸರಕಾರದ ಹುಕುಂ ಬಂದಿರುವುದು. ಇದರ ಸುಪರಿಂಟೆಂಡೆಂಟರಿಗೆ ೫೦೦ ರೂಪಾಯಿ ಸಂಬಳ ಸಿಕ್ಕುವುದು. ಇವರ ವಿನಾ ೩ ಮಂದಿ ಅಸಿಸ್ಟಾಂಟ ಟೀಚರರುಗಳೂ (ಉಪಾಧ್ಯಾಯರುಗಳು) ಮತ್ತು ಗುಮಾಸ್ತ ಪೇದೆ ವಗೈರೆ ಸಿಬಂದಿಯನ್ನು ಇಡಬೇಕಾಗಿ ಸರಕಾರ ಹುಕುಂ ಬಂದಿದೆ.

ಡಿಲ್ಲಿ—ಇಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ಒಂದು ಸ್ವದೇಶಿ ಸ್ಟೋರಿನ ಆಸ್ತಿವಾರವನ್ನು ಹಾಕಿದರು.

ತಿರುವಾಂಕೂರು—ಸಿಲೋನದಲ್ಲಿ ಕೇರಳೀಯ ನಾಯರ ಸಭೆ, ನಾಯರ ಮಹಾಸಭೆ ಇವುಗಳ ವಾರ್ಷಿಕ ಸಭೆಗಳು ಜರಗಿತು. ಇದರಲ್ಲಿ ಜನ ವರ್ಗದ ವಿದ್ಯಾಭ್ಯಾಸವನ್ನು ಪ್ರೋತ್ಸಾಹಗೊಳಿಸಬೇಕೆಂದೂ ಈ ವರೆಗೆ ಜಾರಿಯಲ್ಲಿ ಇದ್ದ ಕಾಯಿದೆಯನ್ನು ಬಿಟ್ಟು ಹೊಸ ರೀತಿಯ ಶಾಸನವನ್ನು ಜಾರಿಗೆ ತರಬೇಕೆಂದೂ ಗಂಡನ ಸ್ವಾರ್ಜಿತ ಆಸ್ತಿಯಲ್ಲಿ ಹೆಂಡತಿ ಮಕ್ಕಳಿಗೆ ಹಕ್ಕು ಇರುವಂತೆ ಮಾಡಬೇಕೆಂದೂ, ವ್ಯವಸಾಯದಲ್ಲಿ ದ್ರವ್ಯವು ವೃದ್ಧಿಯಾಗುವಂತೆ ಇಂಡಸ್ಟ್ರಿಯಲ್ ಕೈಗಾರಿಕೆಯ ಶಾಲೆಗಳನ್ನು ಸ್ಥಾಪಿಸಬೇಕೆಂದೂ, ಸ್ಪರ್ಶದೋಷದ ನಿಬಂಧನೆಗಳನ್ನು ತೆಗೆದುಹಾಕಬೇಕೆಂದೂ ಬ್ರಿಟಿಷ್ ಸೈನ್ಯದಲ್ಲಿ ದಾಖಲಾಗುವುದಕ್ಕೆ ನಾಯರ್ ಜನರಿಗೆ ಕೊಟ್ಟ ಅಧಿಕಾರಗಳ ವಿಷಯ ಬಹಳ ಕೃತಜ್ಞರಾಗಿದ್ದೇವೆಂದೂ, ಮುಖ್ಯವಾಗಿ ಠರಾವುಗಳು ಚರ್ಚೆಗೆ ಬಂದು ಮಂಜೂರಾದವು.

ದಕ್ಷಿಣ ಕನ್ನಡ

ಕುಂಬಳೆ:—ಇದೇ ಮೇ ತಿಂಗಳ ಮೊದಲಿನಿಂದ ಜಾರಿಗೆ ಬಂದಿರುವ ಈ ಶಹರಿನ ಕ್ರಿಮಿನಲ್ ಬೆಂಚ್ ಕೋರ್ಟಿಗೆ ಮ॥ ರಾ॥ ಕೆ. ನರಸಿಂಗರಾಯರವರು ಪ್ರೆಸಿಡೆಂಟರಾಗಿಯೂ ಮ॥ ರಾ॥ ಕೆ. ಪುಟ್ಟಪ್ಪ ವಾಮನ ಶೆಣೈ ಮ॥ ರಾ॥ ಕೆ. ಪದ್ಮನಾಭ ಇನ್ನರಾಯ, ಮ॥ ರಾ॥ ಕೆ. ವೆಂಕಪ್ಪ ಪ್ರಭು ಮ॥ ರಾ॥ ಬ. ಚಿಕ್ಕಪ್ಪ ಬಂಡಾರಿ, ಎಮ್. ಕೆ. ಮಹಮ್ಮದ್ ಪಟೇಲ್ ಸಾಹೇಬ್ ಎಚ್. ಎನ್. ಮಹಮ್ಮದ್ ಬ್ಯಾರಿ ಸಾಹೇಬ್ ಬಹದೂರ್ ಇವರುಗಳು ಬೆಂಚ್ ಮೆಜಿಸ್ಟ್ರೇಟರಾಗಿ ಸಹಾ ನೇಮಿಸಲ್ಪಟ್ಟಿರುವರು.

ಈ ಶಹರ ಬಡಾವಣೆಯು ನಕ್ಷೆಯಾಗಿ ಬಹಳ ಸಮಯವಾಗಿದ್ದರೂ ಈ ನೈಸರ್ಗಿಕ ಸ್ಥಳಗಳು ಏಲಂ ಆಗದೆ ವ್ಯಾಪಾರಸ್ಥರಿಗೆ ಅನೇಕ ತರದ ತೊಂದರೆಗಳುಂಟಾಗಿರುವದರಿಂದ ಮಾನ್ಯ ಕಲೆಕ್ಟರ್ ದೊರೆಗಳವರು ಕೃಪಾಪೂರ್ವಕ ತ್ವರೆಯಿಂದ ಇದರ ಏಲಂ ಮಾಡಿಸುವರೆಂತ ನಂಬುತ್ತೇವೆ.

ಕೆಲವು ದಿವಸ ಹಿಂದೆ ಸಾಯಂಕಾಲ ಸಮಯ ಇಲ್ಲಿಯ ಸಮುದ್ರ ಕಿನಾರೆಯಲ್ಲಿ ಮಟ್ಟಿ ಶಿಕಾರಿ ಮಾಡುತ್ತಿದ್ದ ಒಬ್ಬ ಮೊಗೇರನ ಸಿಡಿಲು ಬಡಿದು ಮೃತನಾದನು.

ಪತ್ರವ್ಯವಹಾರ.

ಮಂಗಳೂರಲ್ಲಿ—ಸ್ಥಾಪಿತವಾಗುವ ರಾಷ್ಟ್ರೀಯ ಶಿಕ್ಷಣದ ಬಾಲಿಕಾ ಪಾಠಶಾಲೆ

ಆಯ್ಯಾ ಪತ್ರಕರ್ತರೇ,

ಶ್ರೀಯುತ ಅರುಂಡೇಲರು ಬಂದು ಹೋದರ[?] ರಾಷ್ಟ್ರೀಯ ಶಿಕ್ಷಣಕ್ಕೆ ಬೇಕಾದ ಶಾಲೆಗಳನ್ನು ಸ್ಥಾಪಿಸುವ ಸಾಧನೆಯ ಪ್ರಕಟನಾ ಪತ್ರಿಕೆಯನ್ನು ಬರೆದು ಹೋಗಿರುತ್ತಾರೆ. ಮಂಗಳೂರ ಪಟ್ಟಣವನ್ನು ಪ್ರಾರಂಭಿಸಿ ಹೋಗಿರುತ್ತಾರೆ. ಅವರು ಹೇಳಿದ ಮೇರೆಗೆ ಹುಡುಗಿಯರ ಶಾಲೆಗೆ 10,000, ವ್ಯಾಪಾರ ಶಿಕ್ಷಣ ಶಾಲೆಗೆ ೧೦,೦೦೦ ಕ್ಕೆ ಕಡಿಮೆ ಮೊಬಲಗುಗಳನ್ನು ಬರುವ ಜೂನ್ ಅಥವಾ ಜುಲಾಯಿ ತಿಂಗಳುಗಳೊಳಗೆ ಸಂಗ್ರಹಿಸಿಡಬೇಕು. ಈ ಮೊಬಲಗು ಸಿದ್ಧವಾದರೆ ಅನ್ನಿಬೆಸಂಟರನ್ನು ಶಾಲೆಗಳನ್ನು ತೆರೆಯಲು ಕಳುಹಿಸಿ ಕೊಡುತ್ತೇನೆಂತ ಸಹ ಹೇಳಿ ಹೋಗಿರುತ್ತಾರೆ. ಈ ರೀತಿ ಅವರ ಅಪ್ಪಣೆ.

ಈ ಅಪ್ಪಣೆಯನ್ನು ಶಿರಸಾವಹಿಸಿ ಕಾರ್ಯ ಪ್ರಾರಂಭವನ್ನು ಮಾಡುವದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ಯಾವ ವಿಧದಲ್ಲಾದರೂ ಯಾರಾದರೂ ಈ ವಿಷಯಕ್ಕೆ ಅಡ್ಡ ಬರಲಿಕ್ಕಿಲ್ಲ. ಸಾಲಭೋಗಾಸಕ್ತರುಗಳು ಇದರ ನೆರವೇರಿಕೆ ಬಗ್ಗೆ ಯಾವರೆಂದು ನೋಡುವದು ಅಗತ್ಯ. ಇಪ್ಪತ್ತು ಸಾವಿರ ರೂಪಾಯಿ ಇನ್ನು ಕೆಲವು ವಾರಗಳಲ್ಲಿ ಇಲ್ಲಿ ಸಂಗ್ರಹ ಆಗಬೇಕೆಂತ ನನ್ನ ಅಭಿಲಾಷೆ ಇದ್ದರೂ ಅದು ಸಂಗ್ರಹ ವಾಗುವದು ನನಗೆ ಸಾಧ್ಯ ಕಾಣುವದಿಲ್ಲ. ಅದ್ದರಿಂದ ಶಾಲೆಗಳ ಸ್ಥಾಪನೆಯೂ ಇನ್ನು ಕೆಲವು ವಾರಗಳಲ್ಲಿ ಅಸಾಧ್ಯವೇ ಸರಿ. ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದ ಪಟ್ಟಿಗೆ ಮೊಬಲಗುಗಳನ್ನು ನೋಡಿದರೆ ಹುಡುಗಿಯರ ಶಾಲೆಗೆ ವಂತಿಗೆಯ ಮೊಬಲಗು ಅಧಿಕವೆಂತ ಕಾಣುತ್ತದೆ. ಮತ್ತು ವ್ಯಾಪಾರಶಿಕ್ಷಣ ಶಾಲೆಗೆ ವಂತಿಗೆ ಹಾಕಿದವರು ಸರ್ವಸಾಧಾರಣವಾಗಿ ಎಲ್ಲಾ ವ್ಯಾಪಾರಸ್ಥರೇ ಹೊರ್ತು ಮತ್ತಾರೂ ಯಾರೂ ಇಲ್ಲ. ಅಂದರೆ ವಂತಿಗೆದಾರರಲ್ಲಿ ಹುಡುಗಿಯರ ಶಾಲೆಯು ವ್ಯಾಪಾರ ಶಿಕ್ಷಣ ಶಾಲೆಗಿಂತ ಅಗತ್ಯವಾಗಿ ಬೇಕಾಗಿದೆಂದು ಅಭಿಪ್ರಾಯಪಡುವಂತೆ ತೋರುತ್ತದೆ. ನನ್ನ ಅಭಿಪ್ರಾಯವು ಹೀಗಿರದು. ಜನರಿಗೆ ಉದ್ಯೋಗಗಳನ್ನು ಒದಗಿಸಿ ಕೊಡುವ [illegible] ವ್ಯಾಪಾರಶಿಕ್ಷಣ ಶಾಲೆಯು ಪ್ರಥಮದಲ್ಲಿ ಬೇಕಾಗಿರುವದು. [illegible] ಸ್ಥಾಪಿಸಿಕೊಂಡು ಜನರಿಗೆ ಈ ಮೂಲಕ ರಾಷ್ಟ್ರೀಯಶಿಕ್ಷಣ ಚಳವಳದ [illegible] ಕೋರಿಕೆ ಕೊಟ್ಟರೆ ಈ ಶಿಕ್ಷಣದ ಮರ್ಮವನ್ನು ತಿಳಿದ [illegible] ಸಾಧ್ಯವಾಗುವದು ಮತ್ತು ರಾಷ್ಟ್ರೀಯ ಶಿಕ್ಷಣದ ಇನ್ನು ಹಲವು ಸಂಸ್ಥೆಗಳ [illegible] ಆಶ್ರಯವು ವ್ಯಾಪಾರಸ್ಥರಿಂದ ದೊರಕಬಹುದು. ಅದ್ದರಿಂದ ವ್ಯಾಪಾರ [illegible] ಶಾಲೆಯನ್ನು ಪ್ರಥಮದಲ್ಲಿ ಸ್ಥಾಪಿಸುವದು ಅತ್ಯವಶ್ಯವಾಗಿರುವದು. [illegible] ಶಾಲೆಯನ್ನು ಈ ಸ್ಥಾಪನೆಗೆ ಮುಟ್ಟಿಸುವ[?] [illegible]

ಯಾರಿಸನವರ ಇಂಥಾ ಇಚ್ಛೆಯು ಯಥಾರ್ಥವಾದದ್ದು. ಆದರೆ ಒಂದು ವಾರದೊಳಗೆ ಹಣವನ್ನು ಸಂಗ್ರಹಿಸಿದರೇ ಸ್ಥಾಪಿಸಿ ವ್ಯಾಪಕಪಡಿಸಬಹುದು. ಕೆಥೋಲಿಕ ಅಮ್ಮಂಬರ ಸುಬ್ರಾಯಪ್ಪಗಳವರು ಕೆನರಾ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿ ಆ ಶಾಲೆಯು ಈಗಲೂ ನಡೆಯುತ್ತಿರುವದು. ಈ ಶಾಲೆಗೆ ಸಂಬಂಧಪಟ್ಟಂಥಾ ಮ॥ ರಾ॥ ರಾ॥ ಅಮ್ಮಂಬಳ ಶ್ರೀನಿವಾಸಪ್ಪಗಳವರು, ರಿಟಾಯರ್ಡ್ ಜಿಲ್ಲಾ ರಿಜಿಸ್ಟ್ರಾರರಾದ ಮುಕುಂದರಾಯರು ಮ॥ ರಾ॥ ರಾ॥ ವಕೀಲ್ ಎನ್. ಮಾಧವರಾಯರು ಇವರೆಲ್ಲಾ ರಾಷ್ಟ್ರೀಯ ಶಿಕ್ಷಣದ ಕಮಿಟಿಯ ಮೆಂಬರರಾಗಿರುವರು. ಇವರೂ, ಇತರ ಜಾತಿಯ ಪ್ರಮುಖರೂ ಕೂಡಿಕೊಂಡು ಒಮ್ಮತವನ್ನಿಟ್ಟು ಈ ಶಾಲೆಯನ್ನು ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಾಗಿ ಮಾಡುವ ವಿಷಯವನ್ನು ಯಾಕೆ ಆಲೋಚಿಸಬಾರದು? ಒಂದು ಹೆಮ್ಮಕ್ಕಳ ಶಾಲೆಯನ್ನಾದರೂ ಸರ್ವ ಜಾತಿಗಳ ಪ್ರಯೋಜನಾರ್ಥವಾಗಿ ನಡೆಸುವಷ್ಟು ಪರಸ್ಪರ ವಿಶ್ವಾಸವು ನಮ್ಮಲ್ಲಿಲ್ಲವೇ? ವಿದ್ಯೆಯೇ ಪ್ರತಿ ಜಾತಿಯ ಉದ್ಧಾರಕ್ಕೆ ಬೇಕಾದದ್ದು ಎಂತ ತಿಳಕೊಂಡು ತಂತಮ್ಮ ಜಾತಿಗಳ ಬಗ್ಗೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿರುವ ಆಯಾ ಜಾತಿಗಳ ವಿದ್ಯಾಸಂಪನ್ನರು ಈ ಒಂದು ಶಾಲೆಯನ್ನಾದರೂ ಸರ್ವ ಜಾತಿಯವರಿಗೂ ಪ್ರವೇಶ ಕೊಟ್ಟು ನಡೆಸಬಾರದೇ? ಈ ರೀತಿ ಕೆನರಾ ಬಾಲಿಕಾ ಪಾಠಶಾಲೆಯನ್ನು ಹುಡುಗಿಯರ ರಾಷ್ಟ್ರೀಯ ಶಿಕ್ಷಣ ಶಾಲೆಯಾಗಿ ಏರ್ಪಡಿಸುವದರಿಂದ ಈಗ ಕೂಡಿಸುವ ಹಣವನ್ನು ವ್ಯಾಪಾರ ಶಿಕ್ಷಣ ಶಾಲೆಗೆ ಉಪಯೋಗಿಸಬಹುದು. ಹೀಗೆ ಮಾಡುವದರಿಂದ ರಾಷ್ಟ್ರೀಯ ಶಿಕ್ಷಣದ ಎರಡು ಶಾಲೆಗಳನ್ನು ಒಂದೇ ಸಲ ಸ್ಥಾಪನೆ ಮಾಡಿದಂತೆಯೂ ಆಗುತ್ತದೆ. ಈ ಸಂಗತಿಯನ್ನು ಮೊದಲಾಗಿ ಆಲೋಚಿಸಿರಿ.

—ದೇಶಭಕ್ತ

ಪತ್ರಾಧಿಪರೇ,

ಮಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಕೆಲವು ವಿಶೇಷ ಆಲೋಚನೆಗಳು

೪ ವಿಶೇಷ ಚರ್ಚೆಗೆ ಆಸ್ಪದವಾಗಿ ಪರಿಷತ್ತಿನ ಬಹಳ ಸಮಯವನ್ನು ಅಪಹರಿಸಿದ ರಂಪಿನ ಸಂಗತಿಯು ಯಾವದೆಂದರೆ, ಮಿಸೆಸ್ ಎನಿಬಿಝೆಂಟರು ನಾಲ್ಕು ಕಲಮುಗಳನ್ನು ಆಧರಿಸಿಕೊಂಡು ಮನುಷ್ಯಬಲದ ಒಂದು ರಂಪನ್ನು ಪರಿಷತ್ತಿನ ಮುಂದಿಟ್ಟರು (೧) ಸಾಮ್ರಾಜ್ಯದ ಮೇಲೆ ಒದಗಿರುವ ಮಹಾ ಸಂಕಟದ ವಿಷಯವಾಗಿ ಹಿಂದಿ ಜನರು ತಮ್ಮ ಪೂರ್ಣ ಸಾಹಾಯ್ಯವನ್ನು ಕೊಡಲು ಬಾದಶಹರು ಯಾವ ಸಂದೇಶವನ್ನು ಪ್ರಕಟಿಸಿರುವರೊ ಅದಕ್ಕೆ ಮದ್ರಾಸ ಸಂಸ್ಥಾನದ ಪ್ರಜೆಗಳ ಪೂರ್ಣ ಸಮ್ಮತಿ ಇದೆ. (೨) ಸಾಮ್ರಾಜ್ಯಾಂತರ್ಗತ ಸ್ವರಾಜ್ಯವನ್ನು ಪಡೆಯಬೇಕೆಂದಿರುವ ಹಿಂದೂಸ್ಥಾನಕ್ಕೆ ವೈಸರಾಯರು ಹೇಳಿರುವರೇನೆಂದರೆ, ಮಾತೃದೇಶದ ಮೇಲೆ ಬರುವ ಶತ್ರುಗಳ ದಾಳಿಯನ್ನು ಹಿಂದಕ್ಕಟ್ಟುವದಕ್ಕಾಗಿಯೂ ಸಾಮ್ರಾಜ್ಯದ ಸಂರಕ್ಷಣಕ್ಕಾಗಿಯೂ ಹಿಂದಿಗಳು ಮನುಷ್ಯಬಲವನ್ನು ಅರ್ಪಿಸಬೇಕು ವೈಸರಾಯರ ಈ ಅಂಬೋಣವನ್ನು ಅಂಗೀಕರಿಸಿ ನಾಗರಿಕರ ಸೈನ್ಯವನ್ನು ತಯಾರಿಸಲು ಸ್ವದೇಶ ಭಕ್ತಿಯುಳ್ಳ ಎಲ್ಲ ಸಂಸ್ಥೆಗಳು ಉದ್ಯೋಗ ನಡಿಸಬೇಕು (೩) ಹಿಂದೂಸ್ಥಾನದೊಳಗಿನ ಜನರಲ್ಲಿ ಅಂತಃಕರಣ ಪೂರ್ವಕ ಮತ್ತು ಯಥಾರ್ಥವಾದ ಉತ್ತೇಜನವನ್ನು ಹುಟ್ಟಿಸುವದಕ್ಕಾಗಿ ಕೊಂಗ್ರೆಸ್ ಲೀಗುಗಳ ಸ್ವರಾಜ್ಯದ ಯೋಜನೆಯಂತೆ ಜವಾಬದಾರ ರಾಜ್ಯಪದ್ಧತಿಯನ್ನು ಇಂತಿಷ್ಟು ಸಮಯದೊಳಗೆ ಕೊಡುವ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಒಂದು ಬಿಲು ಬರುವದು ಅಗತ್ಯವಿದೆ ಮತ್ತು ಆ ಪ್ರಕಾರ ಇಂಗ್ಲಂಡಿನ ಸರಕಾರವು ಒಂದು ಬಿಲನ್ನು ತರತಕ್ಕದ್ದು (೪) ಸಾರ್ವಜನಿಕ ಕಾರ್ಯಗಳಲ್ಲಿ ವರ್ಣಮೂಲಕವಾದ ಎಲ್ಲ ಭೇದಗಳನ್ನು ಮುರಿದು ಯುರೋಪಿಯನ್ ಹಾಗು ಹಿಂದಿಗಳನ್ನು ಏಕಪ್ರಕಾರವಾಗಿ ನಡಿಸಬೇಕು ಮಿಸೆಸ್ ಬಿಝೆಂಟರು ಈ ನಾಲ್ಕು ಕಲಮುಗಳನ್ನು ಒಳಕೊಂಡ ಮನುಷ್ಯಬಲದ ರಂಪನ್ನು ಓದಿ ಹೇಳಿ ಅದನ್ನು ತಮ್ಮ ಎಂದಿನ ಪದ್ಧತಿಯಂತೆ ಸಮರ್ಥಿಸಿದರು ಪರಿಷತ್ತಿನಲ್ಲಿ ಇಂಥಿಂಥ ರಂಪುಗಳನ್ನು ಇಂಥಿಂಥವರು ತರಬೇಕು ಎಂಬಿತ್ಯಾದಿ ನಿರ್ಣಯವು ಮೊದಲೆ ವಿಷಯನಿಯಾಮಕ ಕಮಿಟಿಯಲ್ಲಿ ಆಗುತ್ತದೆ ಆ ಕಾಲದಲ್ಲಿ ಈ ರಂಪಿನ ಸ್ವರೂಪವು ಕಮಿಟಿಯೊಳಗಿನವರಿಗೆ ಅರ್ಥಾತ್ ತಿಳಿದುಹೋಯಿತು ಆಗ ಅವರಲ್ಲಿ ಕೆಲವರು ಈ ರಂಪಿನೊಳಗಿನ ಎರಡನೆಯ ಕಲಮಿನ ಕುರಿತು ಒಂದು ಉಪಸೂಚನೆಯನ್ನು ತರಲು ಬಿಝೆಂಟರಿಗೆ ನೋಟಿಸು ಕೊಟ್ಟಿದ್ದರು. ಆ ಪ್ರಕಾರ ಪರಿಷತ್ತಿನಲ್ಲಿ ಬಿಝೆಂಟರ ಸಮರ್ಥನಪರವಾದ ಭಾಷಣವು ಮುಗಿದ ಕೂಡಲೆ ಮಿ ಎಸ್ ಸತ್ಯಮೂರ್ತಿಗಳು ಬಂದು ಉಪಸೂಚನೆಯನ್ನು ತಂದು ಮೇಲಿನ ರಂಪಿನೊಳಗಿನ ಎರಡನೆಯ ಕಲಮನ್ನು ಅಳಿಸಿಬಿಡಬೇಕೆಂದು ಹೇಳಿದರು ಮಿ ಸತ್ಯಮೂರ್ತಿಗಳು ಈ ಉಪಸೂಚನೆಯನ್ನು ತರುವಾಗ ಸೈನ್ಯಭರತಿಯ ಈಗಿನ ಸರಕಾರಿ ಕ್ರಮವು ದೇಶಭಕ್ತಿ ಇದ್ದವನಿಗೆ ಅಪಮಾನಕರವಾಗಿದೆ. ಯುದ್ಧ ಸುರುವಾದ ಈ ಮೂರು ನಾಲ್ಕು ವರ್ಷಗಳಿಂದ ಜನರು ಯಥೇಚ್ಛವಾಗಿ ಹಣವನ್ನು ಸುರಿಯುತ್ತಿದ್ದಾರೆ, ರಕ್ತವನ್ನು ಚೆಲ್ಲುತ್ತಿದ್ದಾರೆ. ಆದರೆ ಸ್ವರಾಜ್ಯದ ಹೆಸರು ಬಂದಕೂಡಲೇ ಅದು ಮಾತ್ರ ಈ ಅಧಿಕಾರಿಗಳಿಗಾಗದು ಹೋಮರೂಲಿನ ಡೆಪ್ಯುಟೇಶನಿನ ಪಾಸಪೋರ್ಟನ್ನು ಇವರು ರದ್ದುಪಡಿಸಿದ್ದು ಯಾಕೆ? ಇವೆ ಮೊದಲಾದ ಹಲವು ಕಾರಣಗಳನ್ನು ಕೊಟ್ಟು ಮಿ. ಸತ್ಯಮೂರ್ತಿಗಳು ಮನುಷ್ಯ ಬಲದ ರಂಪಿನೊಳಗಿನ ಎರಡನೆಯ ಕಲಮನ್ನು ತೆಗೆದು ಹಾಕಲು ಸಭೆಗೆ ವಿನಂತಿಮಾಡಿದರು. ಅದನ್ನು ಇನ್ನೊಬ್ಬರು ಪ್ರತಿಸ್ವೀಕರಿಸಿದರು. ಅರ್ಥಾತ್ ಈ ಚರ್ಚೆಯು ನಿರ್ಣಯಕ್ಕೆ 'ಅರ್ಧಾರ್ಧ' ಎಂದು ಆಗಲು ಅಸಾಧ್ಯವಾದ ಕಾರಣ ಮತ್ತು [illegible]

ಕೂಡದೆಂದು ರಾ. ಕಸ್ತೂರಿ ರಂಗ ಅಯ್ಯಂಗಾರರು ಸೂಚಿಸಿದರು. ಇದು ಎಲ್ಲರಿಗೆ ಸಮ್ಮತಿಸಿದ್ದರಿಂದ ಪಾಸಾಯಿತು. ಅನಂತರ ವಿಷಯನಿಯಾಮಕ ಕಮಿಟಿಯಲ್ಲೂ ಕೆಲವು ಪ್ರತಿನಿಧಿಗಳ ಖಾಸಗಿ ಮೀಟಿಂಗಿನಲ್ಲೂ ಮೇಲಿನ ಠರಾವು ಹಾಗು ಸತ್ಯಮೂರ್ತಿಗಳ ಉಪಸೂಚನೆ ಈ ವಿಷಯದಲ್ಲಿ ತುಂಬಾ ಚರ್ಚೆ ನಡೆಯಿತು. ತಥಾಪಿ ಯಾವದೊಂದು ನಿರ್ಣಯವಾಗಲಿಲ್ಲ. ಮರುದಿನದ ಅಧಿವೇಶನದಲ್ಲಿ ಬಿರ್ಡುಂಟಬಾಯಿಯವರ ಠರಾವಿನೊಳಗಿನ ಕೊನೆಯ ಕಲಮನ್ನು ತೆಗೆದು ಬೇರೊಂದು ಠರಾವನ್ನು ಸೇರಿಸುವ ಸೂಚನೆಯು ಮಾಡಲ್ಪಟ್ಟಿತು. ಮನುಷ್ಯಬಲದ ಕುರಿತು ದಿಲ್ಲಿ ಪರಿಷತ್ತು ಮಾಡಿದ ನಿರ್ಣಯವನ್ನು ಈ ಪರಿಷತ್ತು ಪುಷ್ಟೀಕರಿಸುತ್ತದೆ. ಮತ್ತು ಸ್ವಯಂಸೇವಕರ ಸೇನೆಯನ್ನು ಪ್ರಕೃತ ವರ್ಷದಲ್ಲಿ ತಯಾರಿಸುವದಕ್ಕೆ ಎಲ್ಲ ರಾಷ್ಟ್ರೀಯ ಸಂಸ್ಥೆಗಳನ್ನು ವಿಜ್ಞಾಪಿಸಿಕೊಳ್ಳುತ್ತದೆ. ಆದರೆ ಅದೇ ಸಮಯದಲ್ಲಿ ಈ ಪರಿಷತ್ತಿನ ಅಭಿಪ್ರಾಯವೇನೆಂದರೆ, ಈಗಿನ ಸೇನಾಭರತಿಯ ಪದ್ಧತಿಯಲ್ಲಿ ತುಂಬಾ ದೋಷಗಳಿದ್ದು ಅದು ಕೇವಲ ಅಸಮಾಧಾನಕರವಾಗಿದೆ; ಆದ್ದರಿಂದ ಇನ್ನು ಮುಂದೆ ಈ ಕ್ರಮವನ್ನು ದೂರೀಕರಿಸುವದು ಒಳ್ಳೆದು.' ಇದೆ ೩ನೆಯ ಕಲಮಿನ ಸಾರಾಂಶ. ಈ ಸೂಚನೆಯು ಕೆಂಬಹುನಾ ಬದಲಾವಣೆಯು ಮಿ. ಸತ್ಯಮೂರ್ತಿಯವರಿಗೂ ಮತ್ತು ಅವರ ಪಕ್ಷೀಯರಿಗೂ ಮಾನ್ಯವಾಯಿತು.- ಮಾತ್ರವಲ್ಲ ಸ್ವತಃ ಎನಿಬಿರ್ಡುಂಟರಿಗೂ ಇದು ಸಮ್ಮತವಾಯಿತು. ಆದರೆ ಬಾಯಿಯವರು ಈ ಹೊಸ ಅಂಶವನ್ನು ಮೂರನೆಯ ಠರಾವನ್ನಾಗ್ಯಕೊಳ್ಳದೆ ಮೇಲಿನ ಎರಡನೆಯ ಕಲಮಿನ ಸ್ಥಾನದಲ್ಲಿ ಸೇರಿಸಬೇಕೆಂದು ಹಟ ಹಿಡಿದರು. ಅದು ಸತ್ಯಮೂರ್ತಿಯವರಿಗೆ ಇಷ್ಟವಿರಲಿಲ್ಲ. ಪುನಃ ಮತಭೇದಕ್ಕೆ ಎಡೆ ಸಿಕ್ಕಿತು. ಆಗ ಇದರ ಇತ್ಯರ್ಥವನ್ನು ನಿರ್ಣಯಿಸುವದಕ್ಕಾಗಿ ಮತಗಳನ್ನು ತೆಕ್ಕೊಳ್ಳಬೇಕಾಯಿತು. ಮಿ. ಸತ್ಯಮೂರ್ತಿಯವರ ಕಡೆಗೆ ೧೪೦ ಮತಗಳು ಮತ್ತು ಬಿರ್ಡುಂಟರ ಕಡೆ ೧೧೮ ಮತಗಳು ಬಿದ್ದವು. ಈ ರೀತಿಯಿಂದ ಪರಾಜಯವು ಬರುವದನ್ನು ನೋಡಿ ಮಿಸೆಸ್ ಬಿರ್ಡುಂಟ ಪಕ್ಷದವರು ಮತಗಳನ್ನು ಕೊಡುವವರ ಹೆಸರುಗಳನ್ನು ಬರೆಯಬೇಕೆಂಬ ಹೊಸ ಆಗ್ರಹವನ್ನು ಹಿಡಿದರು. ಮತದಾರರ ಹೆಸರು ಬಹಿರಂಗವಾಗುವ ಈ ಹೊಸ ರೀತಿಯು ಹೊರಟ ನಂತರ ಕೆಲವರು ಸತ್ಯಮೂರ್ತಿಯವರ ಕಡೆಯಿಂದ ತಮ್ಮ ಹೆಸರುಗಳನ್ನು ಕೊಡಲು ಅನುದ್ಯುಕ್ತರಾದರು. ಆದರೂ ಎರಡು ಪಕ್ಷದಲ್ಲಿ ಸಮಾನಮತಗಳೇ ಬಿದ್ದವು. ಆಗ ಅಧ್ಯಕ್ಷ ಸರೋಜಿನಿಬಾಯಿಯವರು ಬಿರ್ಡುಂಟಬಾಯಿಯವರ ಕಡೆಗೆ ತಮ್ಮ ಕಾಸ್ಟಿಂಗ್ ವ್ಹೋಟನ್ನು ಕೊಟ್ಟು ಈ ದುರಾಗ್ರಹದ ಪ್ರಕರಣವನ್ನು ಮುಗಿಸಿದರು. ಸಾರಾಂಶ ಈ ವಿತುಷ್ಟಿಯು ಯಾರ ಮೂಲಕವಾಗಿಯೆ ಹೊರಟದ್ದಿರಲಿ ಅದರ ಸ್ಥಂಗತಿಯು ವಿಶೇಷ ಮಹತ್ವದ್ದಿರಲಿಲ್ಲ. ಇದರಲ್ಲಿ ಯಥಾರ್ಥತ್ವವು ಯಾವ ಪಕ್ಷದ ಕಡೆಗೆ ಇದೆ ಇದನ್ನು ನೋಡುವದರಲ್ಲಿ ಸಾರವಿಲ್ಲ. ಆದರೆ ನಾವು ಈ ವಿಷಯವನ್ನು ಮದ್ರಾಸಿನ 'ಹಿಂದು' ಪತ್ರಿಕೆಯ ಆಧಾರದಿಂದ ಬರೆದಿದ್ದೇವೆ. ಇರಲಿ.

೫. ಈ ರೀತಿಯಿಂದ ಮದ್ರಾಸ ಪ್ರಾಂತಿಕ ಪರಿಷತ್ತು ಅಂತ್ಯವಾಯಿತು. ಅಧ್ಯಕ್ಷರಾದ ಶ್ರೀಮತಿ ಸರೋಜಿನಿಯವರು ಕೊನೆಯ ದಿವಸ ಸಮಾರೋಪದ ಭಾಷಣದಲ್ಲಿ 'ಐಕ್ಯದ ವಿಷಯವು ಹಿಂದಿಗಳಲ್ಲಿ ಈಗ ದೃಢಮೂಲವಾಗಿದೆ. ಮಾತೃದೇಶದ ಸ್ವಾತಂತ್ರ್ಯದ (Freedom of Mother-land) ಸಲುವಾಗಿ ಯತ್ನಿಸಬೇಕು; ದೇಶಭಕ್ತಿಯನ್ನು ಪ್ರಜ್ವಲಿಸಬೇಕು' ಇತ್ಯಾದಿ ಹೃದ್ಯವಾದ ಸದುಪದೇಶವನ್ನು ಸರೋಜಿನಿಯವರು ಅತಿಶ್ಯಾಗ್ರಹದಿಂದ ಮಾಡಿ ಅಗ್ರಸ್ಥಾನವನ್ನು ಬಿಟ್ಟರು. ಬರುವ ವರ್ಷದ ಪ್ರಾಂತಿಕ ಪರಿಷತ್ತು ತಿರುಚಿನಾಪಳ್ಳಿಯಲ್ಲಿ ಅಲ್ಲಿಯವರ ಆಮಂತ್ರಣದ ಮೇರೆಗೆ ಸೇರಬೇಕೆಂದು ನಿರ್ಣಯವಾಯಿತು. ಒಟ್ಟಾರೆ ಈ ವರ್ಷದ ಅಧಿವೇಶನವು ಸರ್ವದೃಷ್ಟಿಯಿಂದ ನಿರ್ವಿಘ್ನವಾಗಿಯೆ ಮುಗಿಯಿತು. ಇದು ಸಂತೋಷದ ಮಾತಾಗಿದೆ.

೬. ನಾಲ್ಕನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನವು ಧಾರವಾಡದಲ್ಲಿ ಈ ತಿಂಗಳ ತಾ. ೧೧, ೧೨, ೧೩, ಈ ಮೂರು ದಿವಸ ಬಹು ವಿಜೃಂಭಣೆಯಿಂದ ಜರಗಿತು. ವಿಸ್ತೃತವಾದ ಕರ್ನಾಟಕ ಪ್ರಾಂತದಿಂದ ವಿದ್ಯಾಪ್ರಿಯರಾದ ಅನೇಕ ಪ್ರತಿನಿಧಿಗಳು ಬಂದಿದ್ದರು. ಸಭಾಗೃಹದಲ್ಲಿ ಕುಲಸ್ತ್ರೀಯರೂ ಹಾಜರಿದ್ದರು. ಮೈಸೂರ ಪ್ರಾಂತಸ್ಥರಾದ ರಾವಬಹಾದ್ದೂರ ನರಸಿಂಗಾಚಾರಿಯರ್ ಇವರು ಅಧ್ಯಕ್ಷರಾಗಿದ್ದರು. ಇವರು ಬೆಂಗಳೂರಿನಿಂದ ಧಾರವಾಡಕ್ಕೆ ತಲುಪಿದ ನಂತರ ಧಾರವಾಡದ ಪ್ರಮುಖ ನಾಗರಿಕರು ಅವರನ್ನು ರೈಲಸ್ಟೇಶನಿನಿಂದ ಸಮಾರಂಭ ಪೂರ್ವಕ ಸ್ವಾಗತದಿಂದ ಕರೆದು ತಂದರು. ಸ್ವಾಗತ ಮಂಡಲದ ಅಧ್ಯಕ್ಷರಾದ ಶ್ರೀಮತ್ ಬಳ್ಳಾಪ್ಪಬಸವಂತರಾವ ಮಾಮಲೆದೇಸಾಯಿಯವರು ಪ್ರತಿನಿಧಿಗಳನ್ನು ವಿನಯದ ಭಾಷಣದಿಂದ ಸತ್ಕರಿಸಿದರು. ಇವರ ಭಾಷಣದಲ್ಲಿ ಮುಖ್ಯವಾಗಿ ಕರ್ನಾಟಕದ ಪ್ರಾಚೀನ ಇತಿಹಾಸದ ವಿವರಣವು ಎಂದರೆ ಚಾಲುಕ್ಯ, ರಾಷ್ಟ್ರಕೂಟ ಮತ್ತು ವಿಜಯನಗರ ಮುಂತಾದ ಅರಸೊತ್ತಿಗೆಗಳ ಮಾಹಿತಿಯು ಇತ್ತು. ಪ್ರತಿನಿಧಿಗಳು ಬಾದಶಹರ ಜಯವನ್ನು ಪ್ರಾರ್ಥಿಸಿದರು. ಮೈಸೂರಿನ ಯುವರಾಜರ ಹಾಗು ರಾ. ಸ. ಆರ್. ರಡ್ಡಿಯವರ ಪತ್ರಗಳು ಓದಲ್ಪಟ್ಟವು. ಅಧ್ಯಕ್ಷ ಮಹಾಶಯರ ಭಾಷಣವು ಅತಿಮಹತ್ವದ್ದಾಗಿತ್ತು. [illegible] ... [illegible]

ಬಂದ ವೈಭವ ಇತ್ಯಾದಿ ಅನೇಕ ಸಂಗತಿಗಳನ್ನು ವರ್ಣಿಸಿ ಅಧ್ಯಕ್ಷರು ತಮ್ಮ ಭಾಷಣವನ್ನು ಅಂತ್ಯಗೊಳಿಸಿದರು. ಕೊನೆಗೆ ಇವರ ಭಾಷಣದಲ್ಲಿ ಶ್ರೀಮಂತ, ಬಡವ, ಸುಶಿಕ್ಷಿತ, ಅಶಿಕ್ಷಿತ, ಗಂಡಸು ಹೆಂಗಸು ಇತ್ಯಾದಿ ಎಲ್ಲರೂ ಈ ಮೊದಲು ಈ ಕನ್ನಡವನ್ನು ಅಭಿವೃದ್ಧಿಗೊಳಿಸಿದ್ದಾರೆ ಎಂಬುದು ವಿವರವಾಗಿ ತೋರಿಸಿದೆ. ಧಾರವಾಡದಲ್ಲೂ ಅದರ ಸುತ್ತು ಮುತ್ತಲೂ, ಪಂಪ, ರನ್ನ, ಕುಮಾರವ್ಯಾಸ ಮುಂತಾದ ಕವಿಗಳು ಆಗಿಹೋದರೆಂದು ಹೇಳಿ ಅನ್ಯಭಾಷೆಗಳೊಳಗಿನ ಉತ್ತಮ ಗ್ರಂಥಗಳನ್ನು ಕನ್ನಡಿಸುವ ವಿಷಯದಲ್ಲಿ ವಿಜ್ಞಾಪಿಸಿ ಹಾಗು ಕನ್ನಡ ಪ್ರಾಂತದ ಐಕ್ಯಕ್ಕೆ ಬಂದು ಕನ್ನಡ ವೈಸಿಕಪತ್ರದ ಆವಶ್ಯಕತೆಯನ್ನು ತೋರಿಸಿ ಅಧ್ಯಕ್ಷರು ತಮ್ಮ ಭಾಷಣವನ್ನು ಉಪಸಂಹರಿಸಿದರು. ಪರಿಷತ್ತಿಗೆ ೫೦೦ ಪ್ರತಿನಿಧಿಗಳು ಹಾಜರಿದ್ದರು. ಪರಿಷತ್ತಿನ ವಿಶೇಷ ವೃತ್ತಾಂತವನ್ನು ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು.

೭. ಹಿಂದಿ ಸುಧಾರಣೆಯು ಕೆಂಬಹುನಾ ಜವಾಬದಾರ ರಾಜ್ಯಪದ್ಧತಿಯ ಕುರಿತು ಇಲ್ಲಿಯ ಜನರ ಮತ್ತು ಅಧಿಕಾರಿಗಳ ಅಂಬೋಣವನ್ನು ಸಂಗ್ರಹಿಸುವ ಉದ್ದೇಶದಿಂದ ಬಂದ ಭಾರತ ಮಂತ್ರಿಗಳಾದ ಮಿ. ಮೊಂಟೆಗ್ಯುಗಳು ಇಂಡಿಯಾ ಕೌನ್ಸಿಲಿನ ಹೊಸ ಸಭಾಸದರಾದ ಮಿ. ಭೂಪೇಂದ್ರನಾಥ ಬಾಸುಗಳೊಡನೆ ಇಂಗ್ಲಂಡಿಗೆ ಸುಖವಾಗಿ ಹೋಗಿ ಸೇರಿದ ಬಗ್ಗೆ ಕಲಕತ್ತೆಗೂ ಮತ್ತು ವೈಸರಾಯರಿಗೂ ತಂತಿ ವರ್ತಮಾನಗಳು ಈ ತಿಂಗಳ ತಾ. ೧೪ರಲ್ಲಿ ಬಂದು ತಲ್ಪಿವೆ. ಮಿ. ಮೊಂಟೆಗ್ಯುಗಳ ನಿರ್ವಿಘ್ನ ಪ್ರಯಾಣದ ಬಗ್ಗೆ ನಮ್ಮಂತೆ ಎಲ್ಲ ಪ್ರಜೆಗಳಿಗೆ ಆನಂದವಾಗದೆ ಇರದು. ಇವರು ಇಲ್ಲಿ ಸಂಗ್ರಹಿಸಿದ ಮಾಹಿತಿಯ ಕಟ್ಟುಗಳನ್ನು ಉಪಯೋಗಿಸಿಕೊಂಡು ಪಾರ್ಲಿಮೆಂಟಿನ ಮುಂದೆ ಯಾವ ಅಭಿಪ್ರಾಯವನ್ನಿಡುವರೆಂಬುದರ ಕಡೆಗೆ ಎಲ್ಲರ ದೃಷ್ಟಿಯು ಹತ್ತಿದೆ. ಗಂಡೊ ಹೆಣ್ಣೊ ಇದು ಮುಂದೆಯೆ ಅದೂ ಬೇಗನೆ ತಿಳಿದು ಬರುವದಿದ್ದದರಿಂದ ಈಗಲೆ ಆ ಬಗ್ಗೆ ತರ್ಕವಿತರ್ಕ ಮಾಡುತ್ತ ಕೂಡ್ರುವದರಲ್ಲಿ ಅರ್ಥವಿಲ್ಲ.

ಸ್ಥಳೀಕ — ಮಂಗಳೂರು.

ಯುದ್ಧ ಸಾಲದ ಸಲುವಾಗಿ ಇದೇ ಬರುವ ಸೋಮವಾರ ಕಲೆಕ್ಟರದೊರೆಗಳ ಅಧ್ಯಕ್ಷತೆಯಲ್ಲಿ ಹಜೂರು ಆಫೀಸಿನಲ್ಲಿ ಒಂದು ಸಭೆಯು ಕೂಡಲಿಕ್ಕಿದೆ.

ಇತ್ತಲಾಗೆ ಮೂರು ನಾಲ್ಕು ದಿವಸಗಳಿಂದ ಮಳೆಯು ಬಹಳ ವಿಪರೀತವಾಗಿ ರಾತ್ರಿ ಹಗಲು ಇಲ್ಲಿ ಸುರಿಯುತ್ತಿದೆ. ಸಮುದ್ರದಲ್ಲಿ ತುಫಾನು ಎದ್ದಿರುವದರಿಂದ ಇಲ್ಲಿಂದ ಮುಂಬಯಿಗೆ ಕಾಫಿಯನ್ನು ಒಯ್ಯಲು ಬಂದಿದ್ದ ಹಡಗಕ್ಕೆ ಭರ್ತಿಮಾಡುವದು ಅಸಾಧ್ಯವಾಗಿ ಕಂಡು ಬಂದಿದೆ. ಮಲೆಬಾರಿನಿಂದ ಮುಂಬಯಿಗೆ ಮರದ ಮೆಪನ್ನು ಒಯ್ಯುತ್ತಿದ್ದ ಒಂದೆರಡು ಕೋರಿಯುಗಳು ತುಫಾನಿನ ಜೋರಿನಿಂ ಕಾಸರಗೋಡು ಅತ್ತಲಾಗೆ ಒಡೆದು ಹೋದವಂತೆ. ಮಳೆಯೊಂದಿಗೆ ಸಿಡಿಲು ಮಿಂಚುಗಳೂ ಬಹಳ ಕಠಿಣವಾಗಿದ್ದವು. ಇಲ್ಲಿ ರೈಲ್ವೆ ಸ್ಟೇಶನಿನ ಸಮೀಪದಲ್ಲಿರುವ ಇಲ್ಲಿಯ 'ಸಿಕಪ್ಪನ್ನು ಸುಪರಿಂಟೆಂಟರ ಮನೆಗೆ ಸಿಡಿಲು ಬಿದ್ದಿತ್ತು. ವಿದ್ಯುಲ್ಲತೆಯ ಸ್ಪರ್ಶವು ಮನೆಯಾಳಿಕರಿಗೆ ಬಹಳ ಸ್ವಲ್ಪ ಮಾತ್ರವೆ ಆದ್ದರಿಂದ ದೈವವಶಾತ್ ಪ್ರಾಣನಷ್ಟ ಉಂಟಾಗಲಿಲ್ಲ. ಇನ್ನೂ ಮಳೆಯು ಬರುತ್ತಿದೆ.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿರುವಂತೆ ರಾಷ್ಟ್ರೀಯ ಶಿಕ್ಷಣ ಮಂಡಲದ ಇಲ್ಲಿಯ ಕಮಿಟಿಯ ಸ್ಥಾಪನೆಯ ಸಭೆಯು ನಾಳೆ ಸಾಯಂಕಾಲ ೪ ಘಂಟೆಗೆ ಗಣಪತಿ ಹೈಸ್ಕೂಲು ಶಾಲೆಯಲ್ಲಿ ಕೂಡುವದು. ರಾಷ್ಟ್ರೀಯ ಶಿಕ್ಷಣಶಾಲೆಯನ್ನು ಮಾತ್ರವಲ್ಲ ವ್ಯಾಪಾರ ಶಿಕ್ಷಣ ಶಾಲೆಯನ್ನೂ ಇಲ್ಲಿ ಸ್ಥಾಪಿಸುವ ವಿಷಯವು ಸಭೆಯಲ್ಲಿ ಪರ್ಯಾಲೋಚಿಸಲ್ಪಡುವುದು. ಕಮಿಟಿಯ ಬಗ್ಗೆ ನಿರ್ಧರಿಸೋಣಾದ ನಿಬಂಧನೆಗಳು ಈ ಸಭೆಯಲ್ಲಿ ಚರ್ಚಿಸಲ್ಪಟ್ಟು ಮಂಜೂರಾಗಲಿಕ್ಕಿವೆ. ಮತ್ತು ಕಮಿಟಿಗೆ ಬೇಕಾದ ಅಧಿಕಾರಿಗಳನ್ನು ಚುನಾಯಿಸಲಿಕ್ಕಿದೆ. ಆದ್ದರಿಂದ ಈ ಸಭೆಗೆ ಸರ್ವರೂ ದಯಮಾಡಿ ಬರಬೇಕೆಂದು ವಿಜ್ಞಾಪನೆ ಇದೆ.

ಎರಡನೆ ಸ [illegible] ಇಲ್ಲಿ ಸಂಗ್ರಹಿಸಲ್ಪಡುವಂಥಾ ಯುದ್ಧಸಾಲದ ಕುರಿತು ಪ್ರಸಿದ್ಧವಾಗುವ ಪ್ರಕಟನೆಯ ಪ್ರತಿಯನ್ನು ಕಲೆಕ್ಟರ ಬೋರ್ಡುಗಳವರು ಕಳುಹಿಸಿಕೊಟ್ಟಿರುತ್ತಾರೆ. ಇದರ ಎಲ್ಲಾ ಮಾಹಿತಿಯನ್ನು ಸಂಕ್ಷೇಪವಾಗಿ ಕೆಳಗಿನ ತಿಳಿಸುವ, ಜಾಹಿರಾತು ನಮ್ಮ ಪತ್ರದಲ್ಲಿ ಬೇಗನೆ ಪ್ರಕಟಿಸಲ್ಪಡುವುದು. ಹಿಂದೂಸ್ಥಾನದಿಂದ ಯುದ್ಧದ ಸಲುವಾಗಿ ಕೊಡೋಣಾಗುವ ೧೦೦ ಮಿಲಿಯ ಪವನುಗಳ ಮೊಬಲಗಿನ ಭರ್ತಿಗೆ ಈ ಸಾಲಮೂಲಕವಾಗಿ ದೊರಕುವ ಮೊಬಲಗು ಕೊಡೋಣಾಗುವವು. ೧೯೨೧, ೧೯೨೨, ೧೯೨೫, ೧೯೨೮ ಈ ನಾಲ್ಕು ಅವಧಿಗಳಲ್ಲಿ ಕೊಡೋಣಾಗುವ ವಾರ್ [illegible] ಗಳ ಮೂಲಕ ಸಾಲವು ಸಂಗ್ರಹಿಸಲ್ಪಡುವದು. ಬಡ್ಡಿಮೇಲೆ ಆದಾಯ ತೆರಿಗೆ ಇರದು. ಮತ್ತು ೧೯೨೫, ೧೯೨೮ ರಲ್ಲಿ [illegible] ... [illegible]

ಈ ಜಿಲ್ಲೆಯ ಮಹಾ ಜನರು ತಮ್ಮಿಂದಾಗುವ ಮೊಬಲಗುಗಳನ್ನು ಸಾಲವಾಗಿ ಕೊಟ್ಟು ಸಹಾಯ ಮಾಡುವರೆಂಬುದಾಗಿ ಕೋರುತ್ತೇವೆ.

ಈ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨ ಪ್ಲೇಗು ಮರಣಗಳಿದ್ದವು. ಕೊಡಿಯಾಲಬೈಲು ವಾರ್ಡಿನಲ್ಲಿ ೧, ಕೋಟೆ ವಾರ್ಡಿನಲ್ಲಿ ೧.

ಪಿಟ್ಟಾಪುರದ ಮಹಾರಾಜರ ಅನಾಥಾಲಯದ ಸುಪರಿಂಟೆಂಡೆಂಟರಾದ ಶ್ರೀಯುತ ವಿ. ಪಿ. ರಾಜ್, ಬಿ. ಎ. ಯವರು ಪಿನ್ನೆಯ ಮೈಲು ಬಂಡಿಯಲ್ಲಿ ಇಲ್ಲಿಗೆ ಬಂದಿರುವರು. ಇವರು ಇದೇ ಶನಿವಾರ (ತಾ. 18—5—18) ಸಾಯಂಕಾಲ ೬ ಘಂಟೆಗೆ ಬ್ರಹ್ಮಮಂದಿರದಲ್ಲಿ "ಮಾನುಷ ಜನ್ಮದ ವಿಶೇಷತೆ" (Significance of Human Life) ಎಂಬ ವಿಷಯದಲ್ಲಿ ಇಂಗ್ಲಿಷಿನಲ್ಲಿ ಭಾಷಣಕೊಡುವರು ಮತ್ತು ಆದಿತ್ಯವಾರ ಬೆಳಗ್ಗೆ ೭-೩೦ಕ್ಕೆ ಇಂಗ್ಲಿಷಿನಲ್ಲಿ ದೇವಾರಾಧನೆಯನು ನಡಿಸುವರು. ಎಲ್ಲರಿಗೂ ಸುಸ್ವಾಗತವಿದೆ.

ಮಲಬಾರು ಜಿಲ್ಲೆಯ ಪರಿಷತ್ತು.

ಮಲಬಾರು ಜಿಲ್ಲೆಯ ರಾಜಕೀಯ ಪರಿಷತ್ತು ಮೇ ೬ನೇ ತಾರೀಕಿಗೆ ತಲಚೇರಿಯಲ್ಲಿ ಪ್ರಾರಂಭಿಸಿತು. ೭ನೇ ತಾರೀಕಿನ ದಿನ ಮಂಜೂರಾದ ಠರಾವುಗಳಲ್ಲಿ ವಿಶೇಷವಾದುವುಗಳನ್ನು ಈ ಕೆಳಗೆ ಕೊಟ್ಟಿರುವೆವು.

(೧) ಇಂಡಿಯನ್ ಆರ್ಮ್ಸ್ ಆಕ್ಟನ್ನು ತೆಗದುಹಾಕಿ ಈಗ ಶಸ್ತ್ರವಿಷಯವಾಗಲಿಕ್ಕಿರುವ ಪ್ರತಿಬಂಧಗಳನ್ನು ತೆಗೆದುಹಾಕಬೇಕು.

(೨) ದೇಶೀಯ ಕೈಗಾರಿಕೆಗಳ ವೃದ್ಧಿಗೆ ಅಂಬಾಗುವಂತೆ ದ್ರವ್ಯ ಸಹಾಯವನ್ನು ತಜ್ಞರ ಸಹಾಯವನ್ನೂ ಈ ಜಿಲ್ಲೆಗೆ ಸಾಕಷ್ಟು ಕೊಡಬೇಕು.

(೩) ಗೈರು ಕರಾರು ಬರೆಕೊಂಡು ಪರದೇಶಗಳಿಗೆ ಜನರನ್ನು ಕೂಲಿವೃತ್ತಿಗೆ ಕೊಂಡುಹೋಗುವ ಏರ್ಪಾಡನ್ನು ತೀರಾ ನಿಲ್ಲಿಸಬೇಕು.

(೪) ಸರಕಾರದವರಿಗೆ ಆದಾಯ ತಗ್ಗಿದೆ ಈಗ ವಿಶೇಷವಾಗಿರುವುದರಿಂದ ಎಲ್ಲಾ ಇಲಾಖೆಗಳಲ್ಲಿಯೂ ಖರ್ಚು ಕಡಿಮೆ ಮಾಡಿ, ಸರಕಾರದವರು ವರ್ಷಂಪ್ರತಿ ಘಟ್ಟಕ್ಕೆ ಹೋಕೆ ಖರ್ಚು ಮುಟ್ಟಿಸಿ ನಡಿಸುವ ವಿಹಾರ ಯಾತ್ರೆಯನ್ನು ನಿಲ್ಲಿಸಬೇಕು.

(೫) ಆಯುರ್ವೇದ ಮತ್ತು ಯುನಾನಿ ವೈದ್ಯಗಳ ಅಭಿವೃದ್ಧಿ ಮತ್ತು ಪ್ರಚಾರಕ್ಕೆ ಬರುವಂತೆ ಸರಕಾರದವರು ದ್ರವ್ಯ ಸಹಾಯ ಮಾಡುವುದು ಅಗತ್ಯ.

(೬) ವಿದ್ಯಾರ್ಥಿಗಳು ರಾಜಕೀಯ ಸಭೆಗಳಿಗೆ ಹೋಗದಂತೆ ಪ್ರತಿಬಂಧಕವಾದ ಮದ್ರಾಸ ಗವರ್ನಮೆಂಟಿನ ಹುಕುಂ ತೆಗೆದುಹಾಕುವುದು ಅಗತ್ಯ.

(೭) ಕೊಂಗ್ರೆಸ್ ಮತ್ತು ಮೊಸ್ಲೆಮ್ ಲೀಗಿನವರು ಸೂಚಿಸಿದ ರೀತಿಯ ರಾಜಕೀಯ ಹಕ್ಕುಗಳನ್ನು ಪ್ರಜೆಗಳಿಗೆ ಕೊಟ್ಟು ಜವಾಬ್ದಾರಿ ಆಡಳಿತ ಕ್ರಮವನ್ನು ಹಿಂದೂಸ್ಥಾನದಲ್ಲಿ ಜಾರಿಗೆ ತರುವುದಕ್ಕೆ ಪ್ರಜೆಗಳು ತುಂಬಾ ಅಗ್ರಹಪಡುತ್ತಾರೆ.

(೮) ಭೂಸೈನ್ಯದಲ್ಲಿಯೂ ನೌಕಾಸೈನ್ಯಗಳಲ್ಲಿಯೂ ದೊಡ್ಡ ಹುದ್ದೆಗಳನ್ನು ದೇಶೀಯರಿಗೆ ಕೊಟ್ಟು, ತನ್ಮೂಲಕ ದೇಶೀಯ ಜನರು ಈ ಯುದ್ಧಕ್ಕೆ ಸೈನ್ಯದಲ್ಲಿ ತಂಡತಂಡವಾಗಿ ಸೇರುವಂತೆ ಪ್ರೋತ್ಸಾಹಿಸಿ ಸೈನ್ಯದವರ ಸಂಬಳದ ದರವನ್ನು ಸಹಾ ಹೆಚ್ಚಿಸಬೇಕು.

(೯) ಹೋಮರೂಲ ಮತ ಪ್ರಚಾರಕ್ಕೋಸ್ಕರ ವಿಲಾಯತಿಗೆ ಹೋದವರನ್ನು ವಿಲಾಯತಿಯ ಯುದ್ಧ ಕಮಿಟಿಯವರು ಪಾಸಪೋರ್ಟ ರದ್ದುಪಡಿಸಿ ಹಿಂದಕ್ಕೆ ಅಟ್ಟಿದ್ದು ಸರಿಯಲ್ಲವೆಂತಲೂ ಈ ವಿಷಯವಾಗಿ ವಿವರ ಕಮ್ಮಿಟಿಯವರು ಕೊಟ್ಟ ಕಾರಣಗಳು ಸಮರ್ಪಕವಾದ್ದಲ್ಲವೆಂತಲೂ ಆ ಕಾರಣಗಳನ್ನು ಒಳಕೊಂಡ ಭಾಷಾರಚನೆಯು ಹಿಂದೀ ಜನರಿಗೆ ತಿರಸ್ಕಾರವಾಗಿ ತೋರಿಸುವಂಥಾದ್ದಾಗಿದೆ ಎಂತಲೂ ಈ ಸಭೆಯವರ ಅಭಿಪ್ರಾಯವಾಗಿದೆ.

(೧೦) ಬೇರಾ ಪ್ರಾಂತದ ರೈತರು ನೀತಿ ಪಡೆಯುವುದಕ್ಕೆ ಈಗ ನಡೆಸಿದ ಸತ್ಯಾಗ್ರಹದ ಚಳವಳದಲ್ಲಿ ತಮ್ಮ ಪೂರ್ಣ ಸಹಾನುಭೂತಿ ಆ ರೈತರ ಕಡೆ ಇದೆ ಎಂತಲೂ ಈಗಲಾದರೂ ಮುಂಬಯಿ ಸರಕಾರದವರು ಹಿಂದಿನ ಹುಕುಂ ರದ್ದುಪಡಿಸಿ ಆ ರೈತರನ್ನು ಉದ್ಧರಿಸುವುದು ಯೋಗ್ಯವೆಂತಲೂ ಇನ್ನೊಂದು ಠರಾವು.

(೧೧) ಕೇರಳದಲ್ಲಿ ಕೆಲವು ಜಾತಿಗಳ ಕಡೆಗೆ ಜನರು ತೋರಿಸುವ ಪ್ರತಿಬಂಧಗಳನ್ನು ತೆಗೆದುಹಾಕಿ ರಾಜರಸ್ತೆಗಳಲ್ಲಿಯೂ ಬಹಿರಂಗವಾದ ಸ್ಥಳಗಳಲ್ಲಿಯೂ ಅವರ ಚಲನೆಗೆ ಅಡ್ಡಿಯಾಗದಂತೆ ಮಾಡುವುದು ಯೋಗ್ಯ.

(೧೨) ಕಾಸರಗೋಡು ತಾಲೂಕಿನ ದಕ್ಷಿಣ ಭಾಗದ ತೀರಾ ಮಲೆಯಾಳಿ ಜನರಿಂದ ತುಂಬಿರುವುದರಿಂದ ಆ ಭಾಗವನ್ನು ಮಲಬಾರ ಜಿಲ್ಲೆಗೆ ಸೇರಿಸುವುದು ಅಗತ್ಯ.

(೧೩) ಪ್ರಾಥಮಿಕ ಶಿಕ್ಷಣವನ್ನು ಈ ಜಿಲ್ಲೆಯಲ್ಲಿ ಕಡ್ಡಾಯವಾಗಿಯೂ ಮಾಫಿಯಾಗಿಯೂ ಕಲಿಸುವುದಕ್ಕೆ ಬೇಗನೇ ಏರ್ಪಾಡು ಮಾಡಿ ಮ್ಯುನಿಸಿಪಲ್ ಮತ್ತು ಯೂನಿಯನ್ ಸರಹದ್ದಿನೊಳಗೆ ಅದನ್ನು ಕೂಡಲೇ ಜಾರಿಗೆ ತರಬೇಕು.

(೧೪) ಜನರಿಗೆ ನಿರ್ಬಂಧಕರವಾದ ಮತ್ತು ಹೀನಾಗಿ ಅಪಮಾನಕರವಾದ ಕಾನೂನುಗಳನ್ನು ತೆಗದುಹಾಕಬೇಕು.

(೧೫) ಈಗ ಪ್ರತಿಬಂಧದಲ್ಲಿರುವವರನ್ನೆಲ್ಲ ಬಿಡುಗಡೆ ಮಾಡಬೇಕು.

(೧೬) ಸರಕಾರದಿಂದ ಈಗ ಕೊಡುವ ಶಿಕ್ಷಣವು ಪ್ರಜಾಜನರಿಗೆ ಬೇಕಾದ ಜ್ಞಾನಗಳನ್ನು ಸಾಕಷ್ಟು ದೊರಕಿಸುವುದಿಲ್ಲವಾದ್ದರಿಂದ ಆ ಪ್ರಯತ್ನಕ್ಕೆ ಸಹಾಯಕವಾಗಿ ರಾಷ್ಟ್ರೀಯ ಶಿಕ್ಷಣ ಏರ್ಪಾಡನ್ನು ಉಪಯೋಗಿಸಿ [illegible] ಸಾಯಂಕಾಲ ಶಾಲೆ, ಇವರ ಹಾಗೆ ಸಂಬಂಧವಾದ ಶಿಕ್ಷಣವನ್ನು ಒದಗಿಸಕೊಡುವುದಕ್ಕೆ ಈ ಜಿಲ್ಲೆ [illegible] ಏರ್ಪಾಡು ಮಾಡಬೇಕು.

(೧೭) ಸ್ವದೇಶಿ ವಸ್ತುಗಳಿಗೆ ಜನರು ಉತ್ತೇಜನ ಕೊಟ್ಟು ಅವುಗಳನ್ನೇ ಉಪಯೋಗಿಸಿ ಬೆಲೆ ಹೆಚ್ಚಾದರೂ ಅವನ್ನೆ ಕೊಂಡುಕೊಳ್ಳಬೇಕು.

(೧೮) ಗ್ರಾಮ ಪಂಚಾಯತುಗಳನ್ನು ಜನರ ಚುನಾವಣೆಗೆ ಒಳಪಟ್ಟ ಬಗೆಯ ಸ್ಥಾಪಿಸುವುದು ಅಗತ್ಯ. ಮುನಿಸಿಪಾಲಿಟಿಗಳಲ್ಲಿಯೂ ಲೋಕಲ್ ಬೋರ್ಡುಗಳಲ್ಲಿಯೂ ಸರಕಾರದವರ ಹಸ್ತಕ್ಷೇಪ [illegible] ವಂತಿರಬೇಕು. ಆ ಎಲ್ಲಾ ಬಗೆಯ ಬೋರ್ಡುಗಳ ಮೇಲ್ವಿಚಾರಕ್ಕೆ [illegible] ಅಧಿಕಾರ ದಯಪಾಲಿಸುವ ಒಂದು ಬೋರ್ಡ್ ಗವರ್ನಮೆಂಟ್ [illegible] ಸ್ಥಾಪಿಸುವುದು ಅಗತ್ಯ.

(೧೯) ಹಿಂದೂಸ್ಥಾನದ [illegible] ... [illegible]

ಯೂರೋಪದ ಮಹಾ ಯುದ್ಧ.

ಅಮೇರಿಕ—ಉಕ್ಕಿನ ೧೧೦ ದೊಡ್ಡ ಹಡಗುಗಳು (೫೦,೦೦೦ ಟನ್) ೬ ವಾರದ ಹಡಗುಗಳು (೪,೦೦೦ ಟನ್ ಭಾರವಾದ) ಮೇ ತಿಂಗಳ ಪ್ರಥಮದಲ್ಲಿ ತಯಾರಾಗಿ ಇಳಿಸಲ್ಪಟ್ಟವು.

ವಿಮಾನಗಳು—ಫ್ರೆಂಚ ವಿಮಾನಚಾರಕರು ಶತ್ರುಗಳ ೬೩ ವಿಮಾನ ಏಪ್ರಿಲ್ ತಿಂಗಳಲ್ಲಿ ಮುರಿದುಬಿಟ್ಟದ್ದಲ್ಲದೆ ೧೫೬ ವಿಮಾನಗಳನ್ನು ಕೆಳಕ್ಕೆ ಸ್ಥಳದಲ್ಲಿ ಇಳಿಸಿಬಿಟ್ಟರು.

ಇಟಲಿ ಯುದ್ಧರಂಗ—ಬ್ರಿಟಿಷರು ಯುಕ್ತದಲ್ಲಿ ಶತ್ರುಗಳ ಕೆಲವು ಜನ ಸೆರೆಹಿಡಿದರು. ಶತ್ರುಗಳ ೧೬ ವಿಮಾನಗಳು ಮುರಿದುಬಿದ್ದವು. ಶತ್ರುಗಳ [illegible] ಎಂಬಲ್ಲಿಯ [illegible] ಶಕ್ತಿಯ ಕಾರ್ಖಾನೆಯನ್ನು ನಾಶಮಾಡಿದರು. [illegible] ನೆಯ ಮೂಲಕ ಶತ್ರುಗಳು ಒಂದು ರೈಲ್ವೆಯನ್ನು ಓಡ್ಯಾಡಿಸುತ್ತಿದ್ದರು.

ಐರ್ಲೆಂಡ್—ಜರ್ಮನರೊಡನೆ ಶತ್ರು ಜಲಾಂತರ್ಗಾಮಿಯು ಒಂದರಿಂದ ಕರಾವಳಿಗೆ ಇಳಿದು ಏಕೊ ಮೋಸ ಕೃತ್ಯಕ್ಕಾಗಿ ಹವಣಿಸುವಷ್ಟರಲ್ಲಿ [illegible] ನನ್ನು ಸೆರೆಹಿಡಿದಿರುವರು. ಈಗ ಅವನಿಗೆ ಲಷ್ಕರೀ ಕಾನೂನಿನ ಮೇರೆಗೆ [illegible] ನಡಿಸಲಾಗುವುದು.

ಸೆಲೋನಿಕಾ ಯುದ್ಧರಂಗ—ದೋಯರಾನ್ ಸರೋವರದ ಬಳಿಯಲ್ಲಿ [illegible] ಸೈನ್ಯವು ೬ನೆ ತಾರೀಖಿನ ರಾತ್ರಿ ಕೆಲವು ಸುರಂಗಗಳನ್ನು ಹಿಡಿದು, ವರ್ದಾರ [illegible] ಪ್ರದೇಶದಲ್ಲಿಯ ಒಂದು ವಿಮಾನಗಳ ಕಾರ್ಖಾನೆಯನ್ನು ನಾಶಪಡಿಸಿತು.

ಮೆಸೊಪೊಟೆಮಿಯಾ ಯುದ್ಧರಂಗ—೭ನೆ ತಾರೀಖಿಗೆ ಬ್ರಿಟಿಷ ಸೈನ್ಯದ [illegible]

[illegible]

ಪಶ್ಚಿಮ ಯುದ್ಧರಂಗ— [illegible]

[illegible]

ಪೆಲೆಸ್ಟಿನ್ ಯುದ್ಧರಂಗ—ಜನರಲ್ ಎಲ್ಲೆನ್‌ಬಿಯ ಸೈನ್ಯವು [illegible]

[illegible]

ರುಷ್ಯ— [illegible]

[illegible]

ರುಮೇನಿಯ— [illegible]

[illegible]

ವಿದೇಶ ವೃತ್ತಾಂತ

ರುಮೇನಿಯ— [illegible]

ಇಂಗ್ಲೆಂಡ್— [illegible]

ರುಷ್ಯ—ಜರ್ಮನಿ, ಆಸ್ಟ್ರಿಯ ಮತ್ತು ಸ್ವಿಡನ ಬಾಲ್ಟಿಕದಲ್ಲಿ [illegible]

[illegible]

ಒಳದೇಶ ವೃತ್ತಾಂತ

[illegible]

ಪತ್ರವ್ಯವಹಾರ

ಮಂಗಳೂರು ಮುನಿಸಿಪಾಲಿಟಿಯ ಕಂಬಳದ ಸಂಕ

ಅಯ್ಯಾ ಪತ್ರಾಧಿಪರಿಗೆ,

[illegible]

A. Bhola Rau.

ಪತ್ರಾಧಿಪರೇ,

[illegible]

ಇತಿ ಆರೋಗ್ಯಾಭಿಲಾಷಿ

ಬಂಟರ ಯಾನೆ ನಾಡವರ ಸಂಘ

ಲಭ್ಯದ ಸಂದಾಯದೊಳ್ಳೆ ವಸೂಲಾದದ್ದು:—

		ರೂ ಆ
೧	ಅಡಾಡಿ ರಾಯಪ್ಪ ಬಂಟರಿಂದ	೫—೦
೨	ಬೆಳ್ಳಾರು [illegible] ಪೂಂಜರಿಂದ	೫—೦
೩	ಹೇರೂರು ರಾಮಯ ಪೂಂಜರಿಂದ	೫—೦
೪	[illegible] ಶೆಟ್ಟಿ ಕೋಟೆಕಾರರಿಂದ	೫—೦
೫	ಪಡುಬಿದ್ರಿ ವೆಂಕಣ್ಣ ಶೆಟ್ಟರಿಂದ	೪—೦
೬	ಕೋಟೆಕಾರ ಗುತ್ತು ಲಕ್ಷ್ಮಣ ಭಂಡಾರಿಗಳು ವ ತಮ್ಮಂದಿರಿಂದ	೧೫—೦
೭	ಸಣ್ಣ ಅಸಾಮಿಗಳ ಮುಖಾಂತರ (ಬಡ ವಿದ್ಯಾರ್ಥಿಗಳ ಫಂಡಿಗೆ)	೧೮—೪
		೫೭—೧೦

ಮಂಗಳೂರು
17—೦—18

ಅ. ಬಾಲಕೃಷ್ಣ ಶೆಟ್ಟಿ
ಕೋಶಾಧಿಕಾರಿ

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No [illegible]

ಹೊನ್ನೆ ರಂಗಪ್ಪ ಕಿಣಿ ಕೂಡಾ—ವಾದಿರು

ಮತ್ತು

ಹುಸೇನ ಸಾಹೇಬ ಕಟ್ಟಂಗೆರೆ ಅಬ್ದುಲ್ [illegible] ಸಾಹೇಬನ ಮಗ ಉಡುಪಿ ತಾಲೂಕು ಕೋಡಿ ಗ್ರಾಮದ ಬೆಂಗ್ರೆಯಲ್ಲಿರುವವ ... ... } ಪ್ರತಿವಾದಿ

ಇವರೊಳಗೆ

ವಾದಿರ ಕಂಪೆನಿಯ ಜವಳಿ ಅಂಗಡಿಯಲ್ಲಿ ಪ್ರತಿವಾದಿಯು ನಡಿಸಿದ ಲೇವಾದೇವಿ ಬಾಕಿ ರೂಪಾಯಿ ೫೧—೧೦—೦ ಬರವಾಡಿ [illegible] ಪ್ರತಿವಾದಿಯು ಹಾಜರಾಗಿ [illegible]

ಕುಂದಾಪುರ
೧೬-4-18

K. K. Bhandari,
Pleader for Plaintiff.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ಬರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ
ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಕಂಪೆನಿ ವಿಳಾಸ — "ಪಂಡಿತ್" ಮದರಾಸ್

ಹೈಮಾದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತಿರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ 1/ ಟಪ್ಪಾಲು ಸ್ಯಾಂಪು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ಶತಧೌತ ಘೃತಗಳೆಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಜೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಟಪ್ಪಾಲು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ ವಿ ಎಸ್ ಎ ಎಮ್. ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
೮೮ ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷದಗಳು.



ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್ ಮಲೆಯ ಸ್ಟೇಟ್ ಗೋವಾ, ನ್ಯೂಜಿಲೆಂಡ್, ಈಸ್ಟ್ ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ

ಮಹಾಭಾಗ! ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಾಟು ವೈದ್ಯರ ಸಹಾಯವನ್ನು ಕಾದು [illegible] ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ ಮಲಬದ್ಧ, ಕೆಮ್ಮು, ಗಸಿಬೇನೆ [illegible] ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5 0—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು 20 ಮಾತ್ರೆಗಳುಳ್ಳ ಬುಡ್ಡಿಗೆ ೪ ಆಣೆ ಮಾತ್ರ

ಯೋಗ್ಯತಾ ಪತ್ರಗಳು

ಮ ರಾ॥ ಡಾಕ್ಟರ್ ಪ್ರಭಾಕರ್ [illegible] ಆಯುರ್ವೇದಿಕ್ ಯೂನಿವರ್ಸಿಟಿ ಗ್ರಾಜುಯೇಟ್ [illegible] ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, [illegible] ಲಂಡನ್ [illegible] ಎಗಿಯರಿವೇಸ್ ನಂ 2, [illegible] ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸುವದರಲ್ಲಿ [illegible] ಅಜೀರ್ಣ, ಮಲಬದ್ಧತೆ, ಹೊಟ್ಟೆಯ ನೋವು, [illegible] ರಕ್ತಸಂಬಂಧವಾದ ರೋಗ, ಮಕ್ಕಳ ಎಳವು ನಾಡಿಗಳಲ್ಲಿಯೂ ಗುಣವಾಗಿರುತ್ತದೆ. [illegible]

ಮೆ॥ ರಾ॥ ಬಿ ಎಸ್ [illegible] ಸೀನಿಯರ್ ಸರ್ಜನ್ [illegible] ಗವರ್ನಮೆಂಟ್ ಇವರು ಬರೆದಿರುತ್ತಾರೆ. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ, ಪಂಡಿತರವರಿಂದ ಪತ್ರಿಕೆಯಲ್ಲಿ [illegible] ಅನೇಕ ಉತ್ಕೃಷ್ಟವಾದ ಗುಣಗಳನ್ನು [illegible] ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ [illegible] ಔಷಧವನ್ನು ಕರುಣಾರು ಮಾಡುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೀಮನ್ ಕಲ್ಯಾಣ [illegible]!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ [illegible] ವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವಸಿದ್ಧ [illegible]ಧಗಳು ಈ ಕೆಳಗಣ ವಿಳಾಸದವರಲ್ಲಿ ದೊರೆಯುವವು. [illegible]ಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.
Kalyanakaraka Bhahagmandir,
[illegible]

ಎಸ್. ಪಿ. ರಾಜಾ ಮತ್ತು ಕಂಪನಿ,
ಕಲ್ಯಾಣಕಾರಕ ಭವನ್ಮಂದಿರ, [illegible], ದ. ಕ.

"ವಸ್ತ್ಯಾಮಯಾಂತಕ ವಟಿಕಾ."

ಮೇಹಸಂಬಂಧವಾದ ಮೂತ್ರ [illegible] ಮೂತ್ರಗಳನ್ನು 24 ಗಂಟೆಯಲ್ಲಿಯೇ ನಿಲ್ಲಿಸುವದು. ಇದರ ಸೇವನೆಯಿಂದ 20 ತರದ ಮೇಹಗಳು ಕೂಡಲೇ ನಿಲ್ಲುವದು ಅಶ್ಮರಿಯೆಂಬ ಕಲ್ಲು ಸಹಾ ಇದ್ದಲ್ಲಿ ಕೂಡಲೇ ಮೂತ್ರದೊಂದಿಗೆ ಬೀಳುವದು

12 ಮಾತ್ರೆಗಳಿರುವ ಡಬ್ಬಿ 1ರ ಕ್ರಯ . . ರೂ. 1—4—0.
12 ಡಬ್ಬಿಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ,, 13—12—0.
ವಿ. ಪಿ. ಖರ್ಚು ಬೇರೆ

ಇನ್ನೂ ನಮ್ಮಲ್ಲಿ ಅನೇಕ ಸಿದ್ಧೌಷಧಗಳು ದೊರೆಯುವವು. ಅಪೇಕ್ಷಕರು ಅರ್ಧಾಣೆ ಸ್ಟ್ಯಾಂಪನ್ನಿಟ್ಟು ಪತ್ರ ಬರೆದಲ್ಲಿ ಕೆಟಲಾಗು ಕಳುಹಿಸಲಾಗುವದು.

ನಮ್ಮ ವಿಳಾಸ — ವೈದ್ಯ ಬಿ. ವಿಠಲ ಭಟ್ಟ,
ಆಯುರ್ವೇದ ವೈದ್ಯಮಂದಿರ, ಉಡುಪಿ.

ರೂ. 1,000 ಬಹುಮಾನ,

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ [illegible] ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಈ "ಸಾಲಾಮಿಸ್ರಿ ಮುರಬ್ಬಾ" ವಿನ ಸೇವನೆಯಿಂದ — ವೀರ್ಯವು ನೀರಿನಂತೆ

ಇದ್ದರೂ ಸ್ವಪ್ನೇಂದ್ರಿಯಬಾಧೆಯೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು [illegible], ಸೊಂಟದ ನೋವು ಸ್ವಲ್ಪಮಾತ್ರವೂ ಇರಲಾರದು ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಸಿಂಗಾಪುರ್, ಆಫ್ರಿಕ, ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧರಪಡಿಸಿದರೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು.

ಒಂದು ಡಬ್ಬಾ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತೆ. ೩-೪ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನ ಡಬ್ಬಿಯ ಜೊತೆಯಲ್ಲಿರುತ್ತದೆ.

ಕ್ರಯ ಡಬ್ಬಿ ೧ಕ್ಕೆ ರೂ 2 ಟಪಾಲು ಖರ್ಚು ೧ರಿಂದ ೩ ಡಬ್ಬಿಗಳ ವರೆಗೆ ಆ 6

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ ರೂ ೩ ಬಾಟ್ಲಿಗೆ ೨ ರೂ ೧೦ ಆಣೆ

೨. ಪ್ರಮೇಹರಿಪು ಬಿಂದು. [illegible]ರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ [illegible] ಕೊಡುವದು ಬಾಟ್ಲಿಗೆ ೨ ರೂ. ೮ ಆಣೆ.

೩. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ಬಾಟಲಿಗೆ ೨ ರೂ

೪. ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉನ್ನವಾತ, ಬುದ್ಧಿ ಮಾಂದ್ಯಗಳನ್ನು ಪರಿಹರಿಸುವದು, ಸ್ಮರಣ ಶಕ್ತಿಯನ್ನು ಬೆಳೆಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

೫. ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೬. ಸರಳಭೇದಿ ಮಾತ್ರೆ. ಅಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೭. ಮಹಾಜ್ವರಾಂಕುಶ ಮಾತ್ರೆ. [illegible] ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ [illegible] ೨ ರೂ.

ವೈದ್ಯ ವಿಳಾಸ—ಬಿ. ಎಮ್. ನಾಥ್ ಮತ್ತು [illegible]

[illegible]

B. M. NATH & CO.

ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರ ಲೇಖ್ಯಬೋಧಿನಿ.

ಈ ಪುಸ್ತಕದಲ್ಲಿ ಅನೇಕ ಬಾಬುಗಳ ಅರ್ಜಿ ನಮೂನೆ ಕ್ರಯ ಭೋಗ್ಯಖರ್ ಮುಂತಾದ ಪತ್ರಗಳ ನಮೂನೆಗಳು ಮತ್ತು ಹಿಂದೂ ಧರ್ಮಶಾಸ್ತ್ರವೂ ಮುದ್ರಿಸಲ್ಪಟ್ಟಿರುವದು ಅತ್ಯುತ್ತಮವಾದ ಪುಸ್ತಕ ಬೇಗ ತರಿಸಿಕೊಳ್ಳಿರಿ ಕ್ರಯ ೩೦೦ ಪುಟದ ಈ ಪುಸ್ತಕ 1ಕ್ಕೆ ರೂ 1—8—0

ವಿವೇಕ ಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗಹೊಸ ಪ್ರಕಟವಾಗಿದೆ ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರತ್ರಯ, ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ಅನೇಕ ಪ್ರಕರಣಗಳನ್ನು ಒಳಗೊಂಡಿದೆ ಇದನ್ನೇ ಅಭ್ಯಾಸಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಕರತಲಾಮಲಕ ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೦೮ ಪ್ರತಿಯೊಬ್ಬ ಆಸ್ತಿಕರಿಗೂ ಅತ್ಯಾವಶ್ಯಕವಾದ ಪುಸ್ತಕ

ಬೆಲೆ ೧ಕ್ಕೆ ರೂ 2—4—0 ಅಂಚೆ 6 ಆಣೆ

ವಿಳಾಸ:—

ಎಚ್. ಎಸ್. [illegible] ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ನ್ಯಾಯದರ್ಪಣ.

ಹೊಸ ಪುಸ್ತಕ.

ಬೆಲೆ ರೂ. 1—8—0. [illegible] 1—12—0

[illegible]

ಕ್ರಯ ಸುಲಭ!

ಕ್ರಯ ಸುಲಭ!!

ಕಾಶೀಯಲ್ಲಿ ತಯಾರಾಗುವ ಪೀತಾಂಬರ, ಮುಗುಟ ಸೀರೆ, ರವಕೆ ಕಣಗಳು, ಕಸ್ತೂರಿ ನಗ್ಗೆರೆ ಇನ್ನೂ ಅನೇಕ [illegible]

[illegible]

[illegible] Sitaram [illegible]
BENARES CITY

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೊಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವದು, ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗದುಕೊಳ್ಳುತ್ತವೆ.

ಕ್ರಯ ಬಾಟ್ಲ 1ಕ್ಕೆ 12 ಆಣೆ, ಟ. ಖ. 4 ಆಣೆ.

ಕೆ. ಟಿ. ಡೊಂಗರ ಕಂಪೆನಿ,

ಗಿರಗಾಂವ, ಮುಂಬಯಿ.

ಮಂಗಳೂರು ಏಜಂಟರು:

ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಕರ್ಣಿಕ ಜ್ವರಮುಕ್ತಿ — Karnik's Ague Mixture.

ಚಳಿಜ್ವರ, ಮಲೇರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಮದ್ದು! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು. ದೊಡ್ಡ ಬಾಟ್ಲಿಯ ಕ್ರಯ ರೂ. ೧.

ಪೆನೋ-ಪಿನ್: — ಕೊಲೆರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು. ಕ್ರಯ ೧೨ ಆಣೆ.

ಗಜಕರ್ಣದ ಮುಲಾಮು: — ಬಾಟ್ಲ ೧ಕ್ಕೆ ೪ ಆಣೆಗಳು. ಡಜನ್ ೧ಕ್ಕೆ ರೂ. ೨—೪—೦. ಪೋಸ್ಟೇಜು ಬೇರೆ. ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ.

ಕರ್ಣಿಕ ಬ್ರದರ್ಸ್,
56 ಗಿರಗಾಂವ, ಮುಂಬಯಿ.

Agent: – The Woollen Mart, *Mangalore.*

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಥವಾ ಆರೋಗ್ಯಬಿಂದು

ಇದು ಒಂದು ಹೊಸ ಔಷಧವೆಂದು ... ಎಲ್ಲರಿಗೆ ... ಇದರ ಬಗ್ಗೆ ಮತ್ತೆ ನಾವು ಪ್ರಶಂಸಿಸುವ ... ಔಷಧವನ್ನು ... ಸರ್ಟಿಫಿಕೇಟುಗಳ ... ಒಂದಲ್ಲ ಎರಡಲ್ಲ ಎಷ್ಟೋ ... ವರ್ಷದಿಂದಲೂ ಪ್ರಯೋಗದಿಂದಲೂ ಅನುಭವ ತಕ್ಕೊಂಡು, ನಮ್ಮ ಪ್ರಯೋಗದಂತೆ ನಮಗೆ ಪೂರ್ಣ ಮನವರಿಕೆಯಾದನಂತರ ನಾವು ಇದನ್ನು ಪ್ರಸಿದ್ಧಿಗೆ ತಂದೆವು. ರೋಗಗಳ ವಿವರ: —

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ಕಿವಿಶೂಲಿ, ಮೂಗಿನೊಳಗಿನ ಪೀನಸ, ಮೊದಲಾದ ರೋಗ, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಪಿತ್ತಶೂಲಿ, ಅರದಲೆಶೂಲಿ, ನಡಶೂಲಿ, ವಾತಶೂಲಿ, ರಕ್ತಬಿದ್ದು ಗುದ್ದವ್ವನ ಬೇನೆ, ಹುರಳು, ಕಜ್ಜಿ, ಗಜಗರ್ಣ, ತದ್ದು, ಇಸಬು, ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಶೂಲಿ, ಹಡದ ಸಂಧು, ಸಣ್ಣ ಕೂಸುಗಳ ಬಾಲಗ್ರಹ, ತಲೆದಗೆಮ್ಮು, ಅರವಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋದು, ಮತ್ತು ಆಬಾಲವೃದ್ಧರಿಗೂ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಅಮೋಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ. ಒಂದು ಕಾಲುತೊಲೆ ಬಾಟಲಿ ಒಂದಕ್ಕೆ 2 ರೂಪಾಯಿ. ನಮೂನೆ ಉದ್ದಿಸ್ಕ 5 ಆಣೆ. ತೂಕದ ಬಾಟ್ಲ ಒಂದಕ್ಕೆ 8 ಆಣೆ. ವಿ. ಪಿ. ಖರ್ಚು ಬೇರೆ ಬೀಳುವದು. ೧ರಿಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ. ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ಕೊಡುತ್ತೇವೆ. ಇದಕ್ಕೆ ವಿ. ಪಿ. ಖರ್ಚು 6 ಆಣೆ ಬೀಳುತ್ತದೆ. ಅನುಪಾನ ಪತ್ರಗಳು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂತಿ ಪ್ರಕಾರ ಬಾಟ್ಲಿಯ ಸಂಗಡ ಸಿಗುವವು. ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಒಂದು ಕಾಲುತೊಲೆ 3 ಬಾಟಲಿಗಳು ಒಂದೇ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಷನ್ ಸಿಗುತ್ತೆ. ವಿ. ಪಿ. ಖರ್ಚು 5 ಆಣೆ ಬೀಳುತ್ತೆ.

ನಮ್ಮಲ್ಲಿ ಯಸ್. ಕೆ. ತೀಂಗಡೆಯವರ ಪ್ರಸಿದ್ಧ ಧಾತುಪೌಷ್ಟಿಕ (ಕಾಮಸಂಜೀವಿನ ಬೇರು) ೪೨ ಕೊಲೆ ಡಬ್ಬಿ ೧ಕ್ಕೆ ರೂ. 3—0—0 ವಿ. ಪಿ. ಖರ್ಚು ಬೇರೆ. ಅನುಪಾನಪತ್ರಿಕೆ ಡಬ್ಬಿಯೊಂದಿಗೆ ಸಿಗುತ್ತೆ.

ಎಚ್. ಎಮ್. ಮುಲ್ಲಾ,
ಅರ್ಕಶಫಾ ಹೆಡ್ ಆಫೀಸ್ ಶಹಾಪೂರ, (ಬೆಳಗಾವ).

The Indian Tooth-ache Specific.

ಹಲ್ಲುನೋವಿಗೆ ಖಾತ್ರಿಯಾದ್ದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಬೀಗು ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ. ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ. ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಸುವ ಆವಶ್ಯಕತೆ ಇಲ್ಲ. ಈ ಔಷಧದ ಗುಣವನ್ನು ನೀವು ಪರೀಕ್ಷಿಸಿ ಎಲ್ಲರಿಗೂ ತಿಳಿಸಿರಿ.

ಶೀಸೆ ೧ಕ್ಕೆ ಕ್ರಯ ರೂ. 1—4—0; ಟಪಾಲ ಖರ್ಚು 4 ಆಣೆ ಪ್ರತ್ಯೇಕ. ವರ್ತಕರಿಗೆ ಒಮ್ಮೆಯೇ ೧೨ ಶೀಸೆ ತರಿಸಿಕೊಂಡರೆ ರೂ. 12 ಮಾತ್ರ. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಸೊಗಸಾದ ಕಾಫಿ ಹುಡಿ.

I	ಕ್ಲಾಸ್	0—10—0
II	ಕ್ಲಾಸ್	0—8—0
III	ಕ್ಲಾಸ್	0—6—0

ಹೊಟೇಲುಗಳಿಗೂ ಕ್ಲಬ್‌ಗಳಿಗೂ ಧಾರಾಳವಾಗಿ ವ್ಯಾಪಾರದ ಮೇಲೆ ರವಾನಿಸಲಾಗುವದು. ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ.

STANY BROTHERS, MANGALORE.

ಜ್ವರಾಂತಕ ಗುಳಿಗೆಗಳು.

ಇದು ದ್ವ್ಯಾಹಿಕ ತ್ರ್ಯಾಹಿಕ ಚಾತುರ್ಥಿಕ ನಿತ್ಯಮುಂತಾದ ಜ್ವರಗಳಿಗೆ ಮಹೌಷಧವು. ಇದನ್ನು ಜ್ವರವಿರುವಾಗಲೂ ಬಿಟ್ಟಿರುವಾಗಲೂ ಸೇವಿಸಬಹುದು. 40 ಗುಳಿಗೆಗಳುಳ್ಳ ಡಬ್ಬಿಗೆ ರೂ. 1—0—0.

ಕಾಸಾಂತಕ ಗುಳಿಗೆಗಳು.

ಇದು ಕ್ಷಯ, ಉಬ್ಬಸ ಮುಂತಾದ ಶ್ವಾಸನಾಳದ ರೋಗಗಳನ್ನು ನಿವಾರಿಸುತ್ತೆ. ಗಂಟ್ಲುಕಟ್ಟಿಕೊಳ್ಳುವದು ಮುಂತಾದ್ದನ್ನು ಹೋಗಲಾಡಿಸುತ್ತೆ. ಸಂಗೀತಗಾರರಿಗೆ ಇದು ಮುಖ್ಯವಾದದ್ದು.

50 ಗುಳಿಗೆಗಳ ಡಬ್ಬಿಗೆ ರೂ. 1—0—0.

ಕಾಮಶಾಸ್ತ್ರವೆಂಬ ಉತ್ತಮ ಪುಸ್ತಕವನ್ನು ದಯಮಾಡಿ ಓದುವದು ಉಚಿತವು.

ಪುಸ್ತಕವು ಉಚಿತವು. ಅಂಚೆ ಹಾಸಲು ಮಾಫ್.

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳು ಉಪಯೋಗಿಸಿರಿ. ಅದು ಅದ್ಭುತ ಗುಣವನ್ನುಂಟುಮಾಡುವದು. ಕ್ರಯ ೧ ರೂಪಾಯಿ ಮಾತ್ರವೇ.

ವಿಳಾಸ:—

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 157, ಬ್ರಾಡ್ವೇ, ಮದರಾಸು
ಮತ್ತು 96 ಮೌಂಟ್ ರೋಡ್, ಮದ್ರಾಸು.

Local Agents: **Raphael & Co.**
Brito Buildings,
Hampankatta, MANGALORE.

ಪಂಡಿತ ಜಸ್ಸು ಅಂತೋನ ಫೆರ್ನಾಂದಿಸರವರ ಅನುಭವಸಿದ್ಧವಾದ ಆಯುರ್ವೇದ ಔಷಧಗಳು.

ಗ್ರಹಭೈರವಿ ತೈಲ್ಯ.

ಈ ತೈಲ್ಯವನ್ನು ಮಕ್ಕಳ ಸಂದುಗಳಿಗೆ ತಿಕ್ಕುವದರಿಂದ ಬಾಲಗ್ರಹ, ಅಪಸ್ಮಾರಗಳೆಂಬ ಮಹಾವ್ಯಾಧಿಯು ಇಲ್ಲದಂತಾಗುವದು. ಕ್ರಯ ಶೀಸೆ ೧ರ 0—8—0.

ಕೊಡಾಶಾದಿ ಮಾತ್ರೆ.

ಈ ಗುಳಿಗೆಗಳ ಸೇವನೆಯಿಂದ ಮಕ್ಕಳ ಬಾಲಾಪಸ್ಮಾರ, ಬಾಲಗ್ರಹ, ಕಫ, ಕೆಮ್ಮು, ಜ್ವರ, ಅತಿಸಾರ, ಇವೆಲ್ಲವೂ ಖಂಡಿತ ಗುಣವಾಗುವದು. ಡಜನ್ ೧ರ ಕ್ರಯ 0—6—0.

ವಜ್ರಕಂಠ ಧಾತುವೃದ್ಧಿ ಲೇಹ್ಯವು.

ಈ ಔಷಧಿಯನ್ನು ನಾನು ಬಹಳ ವರ್ಷ ತಯಾರಿಸುತ್ತೇನೆ. ಇದರ ಗುಣವನ್ನು ವರ್ಣಿಸಲು ಸಾಧ್ಯವಿಲ್ಲ. ಗ್ರಾಹಕರು ಒಂದಾವರ್ತಿ ತರಿಸಿ ನೋಡಿದ್ದಲ್ಲಿ ಕಾಣೇ ತಿಳಿಯುವದು. 1 ಸೇರು ಲೇಹ್ಯವನ್ನು ತಿನ್ನುವದರೊಳಗಾಗಿ ನಪುಂಸಕತ್ವವು, ಶಿಶ್ನಶೈಥಿಲ್ಯ, ಧಾತುಸ್ರಾವ, ಪ್ರಮೇಹ, ಸ್ವಪ್ನಸ್ಖಲನ, ಉಪದಂಶ, ಇವೆಲ್ಲವೂ ನಾಶವಾಗಿ ಧಾತುಪುಷ್ಟಿಯೂ ರಕ್ತವೃದ್ಧಿಯೂ ಉಂಟಾಗುವದು. ಸೇರು ೧ರ ಕ್ರಯ 1—0—0.

ಪಂಡಿತ್ ಜೆಮ್ಸು ಅಂತೋನ್ ಫೆರ್ನಾಂದಿಸ್,
ನೇಟಿವ್ ವೈದ್ಯ, ಕಂಕನಾಡಿ ಪೋಸ್ಟ್,
ಮಂಗಳೂರು, ದ. ಕನ್ನಡ.

ಎ. ಎಸ್. ಡಿ'ಸೋಜ,
ಏಜಂಟ್, ಮಾರ್ಕೆಟ್‌ರೋಡು, ಮಂಗಳೂರು.

ಕನ್ನಡ ಕಾದಂಬರಿಗಳು.

ಸ್ವರ್ಣಲತಾ	ರೂ. 1—8—0	ಪೂರ್ಣಕಲಾ	ರೂ.	1—4—0
ಶೋಭನ	„ 0—12—0	ಹರಿದಾಸಿ	„	0—4—0
ಮನೋರಮಾ	„ 1—0—0	ಶ್ಯಾಮಲಾಂಗಿ	„	0—6—0
ಜಮಾಲ	„ 0—6—0	ಗಜೇಂದ್ರಸಿಂಹ	„	0—12—0
ಉನ್ಮಾದಿನಿ	„ 0—6—0	ಪದ್ಮಿನಿ (ಚಿತ್ತೂರಿನ ಮೊದಲನೇ		
ಪ್ರಿಯಂವದಾ	„ 0—1—0	ಜೋಹರ್	ರೂ.	1—8—0

ನಮ್ಮಲ್ಲಿ ಇನ್ನೂ ಅನೇಕ ಕಾದಂಬರಿಗಳು ದೊರೆಯುತ್ತವೆ. ಪುಸ್ತಕದ ಪಟ್ಟಿಗಾಗಿ ½ ಆಣೆ ಸ್ಟಾಂಪು ಕಳುಹಿಸಿ.

ಯಂ. ಎಸ್. ರಾವ್ ಕಂಪೆನಿ,
ಪುಸ್ತಕ ವ್ಯಾಪಾರಿಗಳು, ಬೆಂಗಳೂರು ಸಿಟಿ.

ಬೆಲೆ ಸುಲಭ! ಗುಣಾಧಿಕ!

ಜಗತ್ಪ್ರಸಿದ್ಧವಾದ ಆಯುರ್ವೇದೀಯ ಔಷಧಗಳು.

ಚಂದ್ರಿಕಾ.

ಜೀವಾಧಾರವಾದ ರಕ್ತವನ್ನು ಶುದ್ಧಿಮಾಡಿ ಉಷ್ಣಾಧಿಕ್ಯವನ್ನು ತಗ್ಗಿಸಿ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವನ್ನು ಗಟ್ಟಿಮಾಡಿ ದೇಹದಲ್ಲಿರುವ ಕಲೆಗಳನ್ನೆಲ್ಲಾ ದಿನಕ್ರಮದಲ್ಲಿ ಮಾಯವಾಗುವಂತೆ ಮಾಡಿ ಧಾತುನಷ್ಟ, ಮೂತ್ರದ ಉರಿ, ಬಹುಮೂತ್ರ, ಮೂತ್ರದಲ್ಲಿ ಕಲ್ಲುಬೀಳುವಿಕೆ, ಸ್ವಪ್ನಸ್ಖಲನ, ನಡುನೋವು, ಕೈಕಾಲುಗಳ ಉರಿ, ಕಣ್ಣುಮಂಜು, ಬಾಯಾರಿಕೆ, ಬಾಯಿಹುಣ್ಣು, ನಾಭಿವ್ರಣ, ಇವುಗಳನ್ನು ಶೀಘ್ರದಲ್ಲಿ ಗುಣಪಡಿಸಿ ಶರೀರಕ್ಕೆ ಕಾಂತಿಯನ್ನುಂಟುಮಾಡುವವರಲ್ಲಿ ಪ್ರಖ್ಯಾತಿಹೊಂದಿರುವ ಮತ್ತು ಅನುಭವಸಿದ್ಧವಾದ ವನೌಷಧಿಗಳಿಂದ ತಯಾರಿಸಲ್ಪಟ್ಟ ಅನ್ಯಪ್ಪಡ ... ಒಂದು ಸೀಸೆ ಬೆಲೆ ರೂ. 1—0—0 ಮಾತ್ರ.

ಕಸ್ತೂರಿಭೂಷಣ.

ಟಿಬೆಟ್ ಕಸ್ತೂರಿಯಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುವ ನಮ್ಮ ಕಸ್ತೂರಿಭೂಷಣವು ಪ್ಲೇಗು, ಸನ್ನಿಪಾತವೇ ಮೊದಲಾದ ಪ್ರಬಲ ಜ್ವರಗಳನ್ನು, ಸಾರ್ಶ್ವವಾಯು, ಅಪಸ್ಮಾರ ಮೊದಲಾದ ಕಷ್ಟಸಾಧ್ಯವಾದ ವಾತಗಳನ್ನು, ಅಜೀರ್ಣ ರೋಗಗಳನ್ನು, ಗುಣಪಡಿಸಿ ಶೀತಸಂಬಂಧವಾದ ಕೆಮ್ಮು, ನೆಗಡಿ, ಗಂಟಲುನೋವು ಮೊದಲಾದ್ದನ್ನು, ಮಕ್ಕಳ ಸಮಸ್ತ ರೋಗಗಳನ್ನು, ಬಾಲಂತಿಯರ ರೋಗಗಳನ್ನು, ನಿರ್ಲಕ್ಷ್ಯವಾಗಿ ನಾಶಮಾಡಿ ಸಾಂಕ್ರಾಮಿಕ ರೋಗಗಳಿಗೆ ... ದೊಂದಿಗೆ ... ಮನಸ್ಸಿಗೆ ಆನಂದವನ್ನುಂಟುಮಾಡುವ ಸಾಮರ್ಥ್ಯವುಳ್ಳದ್ದು ನಮ್ಮ ಭೂಷಣವೇ!!!

ಪ್ರತಿ ಮಾತ್ರೆಯಲ್ಲಿ ಕಸ್ತೂರಿ ಇರುವುದನ್ನು ಖಂಡಿತವಾಗಿ ಹೇಳುತ್ತೇವೆ. ಅದುದರಿಂದಲೇ ಇದು ಬಹು ಅಮೂಲ್ಯವಾದುದು. ಬೆಲೆ ಸೀಸೆ ರೂ. ೧ ಮಾತ್ರವೇ.

ಬಾಲಸುಧಾ.

ಮಕ್ಕಳಿಗೆ ಬಾಲ್ಯದಲ್ಲಿ ... ರೋಗಗಳಿಂದ ... ನಮ್ಮ ಬಾಲಸುಧಾ ... [illegible] ... ಜ್ವರ, ಹೊಟ್ಟೆಯುಬ್ಬರ, ಕೈಕಾಲುಗಳ ಸೆಳೆತ, ... ರೋಗಗಳೆಲ್ಲಾ ನಾಶಮಾಡುವುದು.

ಬೆಲೆ ಸೀಸೆಗೆ ರೂ. 1—0—0.

ಕಸ್ತೂರಿಭೂಷಣ, ಬಾಲಸುಧಾ ಇವೆರಡರ ... ರೋಗಗಳನ್ನು ... [illegible]

ಇನ್ಶೂರ್ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಸ್ವಾಂಕರಿ ಭವನ,
ಮೈಸೂರು.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ ಸಿದ್ಧೌಷಧಗಳು.

ಶ್ರೀಕರಕಸ್ತೂರಿಮಾತ್ರೆ: — ವಂಶಪಾರಂಪರ್ಯವಾಗಿ ಶ್ರೇಷ್ಠವಾದ ಮೂಲಿಕೆಗಳಿಂದ ಬಹಳ ಸುವಾಸನೆಯಾಗಿ ತಯಾರಿಸಲ್ಪಟ್ಟಿರುವ ನಮ್ಮ ಕಸ್ತೂರಿಮಾತ್ರೆಗಳನ್ನು ... ತಾಂಬೂಲದೊಡನೆ ಸೇವಿಸುತ್ತಾಬಂದರೆ ಬಾಯಿ ಎಷ್ಟೋ ಘಂಟೆಗಳ ಕಾಲ ಘಮಘಮಿಸುತ್ತಿರುವುದಲ್ಲದೆ ಆಹಾರವು ಚೆನ್ನಾಗಿ ಜೀರ್ಣವಾಗಿ ... ಮಕ್ಕಳ ಶೀತವಾತ ಮತ್ತು ಅಜೀರ್ಣಗಳಿಗೂ, ಥಂಡಿ ಹವಾಕ್ಕೂ, ಪ್ಲೇಗ್, ಕಾಲರಾ ಮೊದಲಾದ ... ಈ ಮಾತ್ರೆಗಳು ಸಂಜೀವನವೆಂಬುದನ್ನು ... ಇದರ ಸೇವನೆಯಿಂದ ನೆಗಡಿ, ಕೆಮ್ಮು, ವಿಷಮಜ್ವರಗಳು, ತಲೆಭಾರ, ಮೈಕೈಭಾರ, ಆಹಾರದಲ್ಲಿ ಇಚ್ಛೆಯಿಲ್ಲದಿರೋಣ, ಮಲಬದ್ಧ, ಉಬ್ಬಸ, ತಲೆನೋವು, ಗಂಟಲುನೋವು, ನಡುನೋವು, ಮೊದಲಾದವೆಲ್ಲವೂ ಅನುಮಾನವಿಲ್ಲದೆ ಗುಣವಾಗುತ್ತವೆ.

ಹತ್ತು ವರುಷಗಳಿಂದ ಎಲ್ಲಾ ದೇಶಗಳಲ್ಲೂ, ಎಲ್ಲಾ ಮನೆಗಳಲ್ಲೂ, ಈ ಶ್ರೀಕರಕಸ್ತೂರಿಮಾತ್ರೆಗಳಿದ್ದರೆ ... ಯಾವ ರೋಗವೂ ಬಾರದಂತೆಯೂ ಅಥವಾ ... ವ್ಯತ್ಯಾಸಗಳಿಂದ ಉಂಟಾದ ರೋಗವನ್ನು ... ಪ್ರಪಂಚದ ಎಲ್ಲಾ ಭಾಗಗಳಲ್ಲೂ ಪ್ರಖ್ಯಾತಿಹೊಂದಿರುವ ಶ್ರೀಕರಕಸ್ತೂರಿಮಾತ್ರೆಗಳನ್ನೇ ... ಸುಮಾರು 301 ಮಾತ್ರೆಗಳುಳ್ಳ ಸೀಸೆಗೆ 4 ಆಣೆ. 6 ಸೀಸೆಗಳಿಗೆ ರೂ. 1-4-0. 12ಕ್ಕೆ ರೂ. 2-8-0. 25ಕ್ಕೆ ರೂ. 4-11-0. 50ಕ್ಕೆ ರೂ. 9-0-0. 100ಕ್ಕೆ ರೂ. 17-0-0. ಟಪಾಲ್ ಖರ್ಚು ಪ್ರತ್ಯೇಕ.

ಜೀರಿಗೆರಸಾಯನ: — ... ಬೆಲೆ ೧೨ ತೊಲೆಗೆ 12 ಆಣೆ. ೨೪ ತೊಲೆಗೆ ರೂ. 1-4-0. ಟಪಾಲು ಖರ್ಚು ಪ್ರತ್ಯೇಕ.

ಖಂಡೂಮಲಹರರಸಾಯನ: — ... ಹೊಟ್ಟೆಯುಬ್ಬರ, ... ಇವೆಲ್ಲವೂ ಗುಣವಾಗುತ್ತವೆ. ಬೆಲೆ ೧೫ ತೊಲೆಗೆ 12 ಆಣೆ. ಟಪಾಲು ಖರ್ಚು ಪ್ರತ್ಯೇಕ.

ಶತಾವರಿರಸಾಯನ: — ಈ ರಸಾಯನದ ಸೇವನೆಯಿಂದ ಹೆಂಗಸರ ... [illegible] ... ಬೆಲೆ ೨೪ ತೊಲೆಗೆ ರೂ. 2. ಟ. ಖ. ಪ್ರತ್ಯೇಕ.

ಮಂಗಳೂರು ಏಜಂಟರು:— ದಿ. ಉಲನ್ ಮಾರ್ಟ್, ಮಂಗಳೂರು. ವೈದ್ಯಶಾಲಾ, ನಂಜನಗೂಡು.

ಸ್ವದೇಶಾಭಿಮಾನಿ

ಪ್ರತಿ—ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೂಂಯಲನುಪಮರಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಧೈಯನು । ಮರೆತು ಕ್ಷುದ್ರರ ತೆರದಿ ಕುಳಿತರೆ! । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೦. ಮಂಗಳೂರು, ತಾರೀಕು ೨೫ನೇ ಮೇ ಶುಕ್ರವಾರ ೧೯೧೭. ಸಂಚಿಕೆ ೨೦.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ.

ಈ ಗೊಬ್ಬರವು ಒಂದು ಬಗೆಯ ಉಪ್ಪು. ಹಲವು ದೇಶಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ.

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ. ಮೀನು ಗೊಬ್ಬರದಂತೆ ನಾತ ಹಿಡಿಯುವುದಿಲ್ಲ.

ಈ ಗೊಬ್ಬರ ಒಂದು ಹಿಡಿ ನಾಕಾರು ಹಿಡಿ ಹಟ್ಟಿಗೊಬ್ಬರದಿಂದು ಮಿಗಿಲು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ.

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಪಡಬಹುದು.

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಟ್ಟಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು.

ದಿ ಚಿಲ್ಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta.

ಹತ್ತಿರವೇ ಇಟ್ಟುಕೊಳ್ಳಿರಿ!

ಎಲ್ಲಾ ಬೇನೆಗಳನ್ನು ತಲೆಸಿಡಿತ, ಸೊಂಟದ ನೋವು, ಶೀತ, ಕೆಮ್ಮು, ಎದೆನೋವು, ಗಂಟ್ಲುನೋವು ಮೊದಲಾದ ನೂರಾರು ವಿಧಾನಗಳ ನೋವುಗಳನ್ನು ಶೀಘ್ರದಲ್ಲಿ ಗುಣಪಡಿಸುವ

ಅಮೃತಾಂಜನವನ್ನು

ನೀವು ಯಾವಾಗಲೂ ಹತ್ತಿರವೇ ಇಟ್ಟುಕೊಳ್ಳಬೇಕು. ಆಣೆ ಎಂಟಕ್ಕೆ ಅದು ಎಲ್ಲಿಯೂ ದೊರಕುವದು.

12 ಡಬ್ಬಿಗಳಿಗೆ 5—4—0 ವಿ. ಪಿ. ಪ್ರತ್ಯೇಕ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಚ್ಚುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0 12 ಡಬ್ಬಿಗಳಿಗೆ 4—0—0. ವಿ. ಪಿ. ಪ್ರತ್ಯೇಕ.

ದಂತಮಂಜನ.

(ರಾಜಾರಾಣಿ ಟ್ರೇಡ್ ಮಾರ್ಕ್).

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಹಲಗಳ ವಾಸನೆ ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಕೋನ ಹುಡಿ ಇಲ್ಲ. ಡಬ್ಬಿ ಒಂದಕ್ಕೆ 0—2—0. 12 ಡಬ್ಬಿಗಳಿಗೆ 1—4—0. ವಿ. ಪಿ. ಪ್ರತ್ಯೇಕ.

ಅಮೃತಾಂಜನ ಡಿಪೋ,

67, ತಂಬುಚೆಟ್ಟಿ ಸ್ಟ್ರೀಟ್, ಜಾರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ್, ಮುಂಬಯಿ.

ಉಡುಪಿ — ಕೊಚ್ಚಿಕಾರ್ ಬ್ರದರ್ಸ್, ಇವರಲ್ಲಿಯೂ ದೊರಕುವದು.

ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ಮೇಲಾದ ಸಂಗ್ರಹ.

ಧನಿಕರಿಗೂ ಬಡವರಿಗೂ ಅತ್ಯಗತ್ಯವಾಗಿ ಬೇಕಾದಂಥ ಬಗೆಬಗೆಯ ವಸ್ತ್ರಗಳ ಸ್ವದೇಶದಲ್ಲಿಯೇ ಸ್ವದೇಶಸ್ಥರಿಂದ ತಯಾರು ಮಾಡಲ್ಪಡುವಂಥವುಗಳ.

ಬನಾರಿಸ, ಪೂನಾ ಮಹೇಶ್ವರ, ಬರೋಡಾ, ಇಳಕಲ್, ಗದಗ, ಗುಳೇದಗುಡ್ಡ, ಕೊಯಮತ್ತೂರು, ಮಧುರೆ, ಬೆಂಗಳೂರು, ಆರಣಿ, ಮುಂಬಯಿ, ಮದರಾಸು, ಸೇಲಂ, ಅಹಮದಾಬಾದ ಮೊದಲಾದ ಪಟ್ಟಣಗಳಲ್ಲಿ ಪ್ರಖ್ಯಾತಪಟ್ಟ ಎಲ್ಲಾ ಊರುಗಳ ಸರಕುಗಳಿಂದ ನಮ್ಮ ಸಂಗ್ರಹವು ಪೂರ್ಣವಾಗಿದೆ.

ಮದುವೆ, ಉಪನಯನ, ಹಬ್ಬ, ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥ ಸೀರೆಗಳು, ರವಕೆ ಕಣಗಳು, ಧೋತ್ರಗಳು, ಅಂಗಿ ವಸ್ತ್ರಗಳು, ಟೋಪಿಗಳು, ಇತ್ಯಾದಿ ಇತ್ಯಾದಿ ಉಡುಪುತೊಡುಪುಗಳಿಗೆ ಸಂಬಂಧಪಟ್ಟ ಎಲ್ಲಾ ವಸ್ತ್ರಗಳು

ಪ. ನಾರಾಯಣ ವೈಜಪ್ಪ ಭಂಡಾರಿ,

ರಥಬೀದಿ, ಮಂಗಳೂರು;

ಇವರಲ್ಲಿ ದೊರೆಯುತ್ತವೆ.

ರಖಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು.

ಚಿಲ್ಲರೆ ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡಲಾಗುತ್ತದೆ.

ವಿಶೇಷ ಸೂಚನೆ:—ನಮ್ಮಲ್ಲಿ ಇತ್ತಲಾಗೆ ಬಂದಿರುವ ಸೀರೆಗಳ ರವಕೆಯನ್ನು ಬಂದು ನೋಡಿರಿ.

ಮಡಿಕೇರಿ ಮುನ್ಸಿಫ್ ಕೋರ್ಟಿನಲ್ಲಿ

ಅರ್ಜಿನಲ್ ನಂಬ್ರ 41/1917

೧. ದಕ್ಷಿಣಕನ್ನಡಾ ಜಿಲ್ಲಾ ಕಾರ್ಕಳ ತಾಲೂಕು ಮಾರ್ಪಾಡಿ ಗ್ರಾಮದಲ್ಲಿರುವ ಮುತ್ತಯ್ಯ ಪೂಜಾರಿ (೨) ಚೆನ್ನು ಹೆಂಗಸು.	ವಾದಿರು.
೧. ಪಟೇಲ್ ಸೋಮೇಗೌಡನ ಹೆಂಡತಿ ನಂಜವ್ವ ಸೌತಿ ಈಕೆಯ ವಾರಿಸ್ತಾರರು ಸೆಕ್ರೆಟರಿ ಆಫ್ ಸ್ಟೇಟ್ ಫೊರ್ ಇಂಡಿಯಾ ಇನ್ ಕೌನ್ಸಿಲ್ (೨) ದಕ್ಷಿಣಕನ್ನಡಾ ಜಿಲ್ಲಾ ಕಾರ್ಕಳ ತಾಲೂಕು ಮಾರ್ಪಾಡಿ ಗ್ರಾಮದಲ್ಲಿದ್ದು ಹಾಲಿ ವಾಸಸ್ಥಳ ಗೊತ್ತಿಲ್ಲದಿರುವ ಅಪ್ಪಣ್ಣ ಪೂಜಾರಿ.	ಪ್ರತಿವಾದಿರು.

ಮೇಲ್ಕಂಡ ನಂಬ್ರವು ಬರುವ ತಿಂಗಳ ತಾ. ೩೧ಕ್ಕೆ ಅಖೈರಿ ತೀರ್ಮಾನಕ್ಕೆ ಇಟ್ಟಿದೆ. ಸದರಿ ದಿನ ೨ನೇ ಪ್ರತಿವಾದಿಯು ಹಾಜರ್ ಆಗದೆ ಇದ್ದರೆ ನಂಬ್ರವು ಏಕಪಕ್ಷವಾಗಿ ತೀರ್ಮಾನವಾಗುವದು ಎಂದು ಈ ಮೂಲಕ ಸದರಿಯವನಿಗೆ ತಿಳಿಸಲ್ಪಟ್ಟಿದೆ.

M. Bhujanga Rao, B. A., B. L.
Pleader.

ಆನಂದ ವಿಲಾಸಿನೀ ವಟಿಕಾ



ಈ ಔಷಧಿಯ ಹೆಸರು ಯಾವುದನ್ನು ಸೂಚಿಸುವದೋ ಆ ಗುಣಗಳೆಲ್ಲವೂ ಈ ಮಾತ್ರೆಗಳಲ್ಲಿ ನೆಲೆಗೊಂಡಿವೆ. ಈ ಮಾತ್ರೆಗಳಲ್ಲಿ ಒಂದನ್ನು ತಿಂದ ಸ್ವಲ್ಪ ಗಂಟೆಯ ಕಾಲದಲ್ಲಿ ಈ ಔಷಧಿಯ ಗುಣವು ವ್ಯಕ್ತವಾಗುವದು.

ಕ್ರಯ 16 ಮಾತ್ರೆಗಳುಳ್ಳ ಡಬ್ಬಿಗೆ ರೂ. 1

ಮೇಹ ಮರ್ದನ ಚೂರ್ಣ.

ಮೇಹಕಾರಕದಿಂದ ಮೂತ್ರದಲ್ಲಿ ಉರಿಯುವದು ಮೂತ್ರದಲ್ಲಿ (ಹಸರು) ಬರುವದು ಮುಂತಾದ ವ್ಯಾಧಿಗಳನ್ನು ಈ ಚೂರ್ಣವು 24 ಗಂಟೆಯಲ್ಲಿ ಗುಣಮಾಡುವದು.

ಕ್ರಯ ಡ. 1ಕ್ಕೆ 1—0—0

ವಿಳಾಸ:—

ರಾಜವೈದ್ಯ ನಾರಾಯಣಜಿ ಕೇಶವಜಿ,
27. ನಾಬಜಾರು ರೋಡ, ಮದರಾಸು.

ಒಂದೇ ಮಾತು

ಸ್ಥಳ ಸಂಕೋಚದಿಂದ ವಿವರವಾಗಿ ಬರೆದು ತಿಳಿಸಲು ಆಗದು.

ಚಿಕ್ಕಂದಿನ ಕೆಟ್ಟ ಚಾಳಿಗಳಿಂದ ಬರಮಾಡಿಕೊಂಡ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನು ಘಂಟೆ ಘಂಟೆಗೂ ಗುಣಮಾಡುವ

ಮದನಮಂಜರಿ ಮಾತ್ರೆಗಳು

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಕೈಕಾಲು ಸೊಂಟದಲ್ಲಿ ನೋವಿದ್ದರೂ ಮೂತ್ರದಲ್ಲಿಯೂ ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ, ಈ ಮಾತ್ರೆಗಳನ್ನು ಸೇವಿಸುವುದರಿಂದ ರೋಗದ ಬೇರನ್ನು ಕಿತ್ತು ಬಿಡುವದು. ಈ ಮಾತ್ರೆಗಳಿಗೆ ಬೆಳ್ಳಿ, ಬಂಗಾರ, ತಾಮ್ರ, ಭಸ್ಮಗಳು ಎಷ್ಟು ಮಾತ್ರವೂ ಸಮಾನವಾಗಲಾರವು.

ಉಪಯೋಗಿಸುವ ರೀತಿ ಔಷಧದ ಜೊತೆಯಲ್ಲಿ ಕಳುಹಿಸುತ್ತೇವೆ.

ಕ್ರಯ ಡಬ್ಬಿ 1ಕ್ಕೆ 1—0—0.

ವಿಳಾಸ—

ಮದನಮಂಜರಿ ಫಾರ್ಮಸಿ,
37. ಜೈನಾ ಬಜಾರು ರೋಡ್ಡು,
ಮದ್ರಾಸು.

ಯೂರೋಪಿನ ಮಹಾ ಯುದ್ಧ

ಇಟಲಿ ಯುದ್ಧರಂಗ—ಶತ್ರುಗಳಿಂದು ದೊಡ್ಡ ರೇವಾಗಿರುವ [illegible] ಎಂಬ ಊರ ಮೇಲೆ ಬ್ರಿಟಿಷ ಮತ್ತು ಇಟಲಿಯ ಯುದ್ಧವಿಮಾನಗಳು ಗುಂಡುಗಳನ್ನು ಚೆಲ್ಲಿ ಬೆಂಕಿ ಎಬ್ಬಿಸಿದವು. [illegible] ಕಡೆಗೆ ಒಸ್ಟ್ರಿಯದ ಜನರು ಒಂದು ಊರಿನಲ್ಲಿ ಇರುವುದರಿಂದ ಬೇಗನೆ ಯುದ್ಧರಂಗದಲ್ಲಿ ಯುದ್ಧದ ಬೆಸವು ಹೆಚ್ಚುವುದೆಂದು ತಿಳಿಯಬರುತ್ತದೆ. [illegible] ಯವರು ಒಸ್ಟ್ರಿಯದ ಸೈನ್ಯದ [illegible] ಶತ್ರುಗಳ [illegible] ಎಂಬಲ್ಲಿ [illegible] ಮರಳಿ ಹಿಡಿದು [illegible] ಶತ್ರುವು ಮಾಡಿದ ಯತ್ನವು ಕೈಸಾಗಲಿಲ್ಲ.

ಶತ್ರುಗಳ ಒಂದು ಹಡಗು ಯುದ್ಧಸಾಮಗ್ರಿಗಳನ್ನು ತುಂಬಿಸಿಕೊಂಡು [illegible] ಎಂಬಲ್ಲಿಗೆ ಹೋಗುವಾಗ ಇಟಲಿಯ [illegible] ನಾವೆಗಳು ಅದನ್ನು ಮುಳುಗಿಸಿ ಬಿಟ್ಟವು.

ಒಸ್ಟ್ರಿಯದ [illegible] ಎಂಬ ಬಂದರವನ್ನು ಸಹ ಇಟಲಿಯ ಒಬ್ಬ ಅಧಿಕಾರಿಯೂ ೪ ಬಳಅಧಿಕಾರಿಗಳೂ ಒಂದು [illegible] ಯನ್ನು [illegible] ಸುಟ್ಟರು; ಫಲಿತಾಂಶ ಗೊತ್ತಾಗಲಿಲ್ಲ.

ಮೆಸೊಪೊಟೇಮಿಯ ಯುದ್ಧರಂಗ—[illegible] ಬ್ರಿಟಿಷರು ಹಿಡಿ[illegible] ಅಲ್ಲಿ ತುರ್ಕಿಯ ಸೈನ್ಯವು ೫೦೦ ಮಂದಿ ಗಾಯಾಳುಗಳನ್ನು ಮಾತ್ರ ಬಿಟ್ಟು [illegible] ಈ ಪ್ರದೇಶವು ಫಲವತ್ತಾಗಿದ್ದು [illegible] ತುರ್ಕಿಯರು ಅದನ್ನು ಬಿಟ್ಟುಹೋಗಬೇಕಾದುದರಿಂದ ನಷ್ಟ [illegible] ಆಯಿತು. ಅಲ್ಲಿಂದ ಬ್ರಿಟಿಷ ಸೈನ್ಯವು [illegible] ಮಂದಿ ತುರ್ಕಿಯರನ್ನು ಸೆರೆಹಿಡಿಯಿತು. ಇಲ್ಲಿಂದ [illegible] ವಿಮಾನಗಳು ಟೈಗ್ರಿಸ್ ನದಿಯ ಮೇಲೆ ಇರುವ ತುರ್ಕಿಯ [illegible] ಸಿಡಿಮದ್ದನ್ನು ಚೆಲ್ಲಿದವು.

ವಿಮಾನಗಳ ಹಾವಳಿ.—[illegible] ಪಟ್ಟಣದ ಮೇಲೆ [illegible] ವಿಮಾನಗಳು ಸುತ್ತಾಡಿದವು. ಆದರೆ ಫ್ರೆಂಚರ ವಿಮಾನ [illegible] ಫಿರಂಗಿಗಳಿಂದ ಹಿಂದಕ್ಕೆ ಓಡಿಸಲ್ಪಟ್ಟವು.

ಹಡಗು ನಾಶ—[illegible] ಎಂಬ ೭೦೦೦ ಟನ್ನು ದೊಡ್ಡ ಹಡಗು [illegible] ಎಂಬಲ್ಲಿ ಮುಳುಗಿಹೋಯಿತು.

ಸಿಡಿಮದ್ದಿನ ಹಡಗು ಕೋಟೆ (ಮ್ಯಾನಿ).—ಬ್ರಿಟಿಷ [illegible] ೩೨೦೦೦ [illegible] ಸಮುದ್ರದಲ್ಲಿ ಈ ಹಡಗು [illegible] ಮಾಡಿ ಅಲ್ಲಲ್ಲಿ ತಮ್ಮ ಮಿತ್ರಮಂಡಲಿಯ ಹಡಗುಗಳ ಚಲಾವಣೆಗೆ [illegible] ಅದನ್ನು ಕಾವಲು ಮಾಡುತ್ತಿದ್ದಾರೆ. ಇದರ ಒಂದು [illegible] ನೂರ ಕಡಾವಳಿಗೆ ಬಾಡಿದೆ.

[illegible] ತುರ್ಕರಿಂದ [illegible] ಪಟ್ಟಣವನ್ನು [illegible] ಕಾನ್‌ಸ್ಟಂಟಿನೋಪಲದಿಂದ ಒಂದು ತಂತಿವರ್ತಮಾನ ತಿಳಿಸುತ್ತದೆ.

ಅಮೇರಿಕದ ಸೈನ್ಯ.—ಅಮೇರಿಕದಿಂದ [illegible] ಬಂದ ಸೈನ್ಯದ [illegible] ಸೇರ [illegible] ಕಡಾವಳಿಗೆ ಹೋಗಬೇಕೆಂದಿರ[illegible] ಹಿಂದಿರುಗಿ [illegible]

ಹಡಗುಗಳ ನಾಶ—[illegible] ತಾರೀಕಿನ [illegible] ಎಂಬ ಹಡಗು [illegible] ತಂತಿ [illegible] ಬಂದಿದೆ. [illegible] ಇರುವವರೆಲ್ಲರು ಉಳಿಸಲ್ಪಟ್ಟರು.

ಒಂದು ಬ್ರಿಟಿಷ ವಿನಾಶಕ ನಾವೆಯನ್ನು ಶತ್ರುಗಳು [illegible] ತಾರೀಕಿನಂದು [illegible] ಅದರಲ್ಲಿದ್ದ [illegible] ಮಾತ್ರ ಸತ್ತರು.

ವಿಮಾನಗಳ ಹಾವಳಿ—[illegible] ತಾರೀಕಿಗೆ [illegible] ವಿಮಾನಗಳ [illegible] ಪಟ್ಟಣದ ಮೇಲೆ ಸಂಚರಿಸಿದವು. ಆದರೆ ಒಂದು [illegible] ಹಿಂತಿರುಗಿಹೋಗಬೇಕಾಯಿತು.

[illegible] ಪಟ್ಟಣದಲ್ಲಿರುವ [illegible] ಮೇಲೆ ಜರ್ಮನ್ ವಿಮಾನ [illegible] ಸಿಡಿಮದ್ದನ್ನು ಚೆಲ್ಲಿ [illegible] ಮಂದಿಗೆ ಗಾಯ ಪಡಿಸಿದರು.

ಇಟಲಿ ಯುದ್ಧರಂಗ—ಫ್ರೆಂಚರೂ ಇಟಲಿಯವರೂ ಒಟ್ಟಾಗಿ ಮತ್ತು [illegible] ನದಿಗಳ ನಡುವೆ ಇರುವ ಪ್ರದೇಶದಲ್ಲಿ [illegible] ಶತ್ರುಗಳೊಡನೆ [illegible] ಸ್ಥಳವನ್ನು ಹಿಡಿದರು.

ಪಶ್ಚಿಮ ಯುದ್ಧರಂಗ—ಅಲ್ಲಲ್ಲಿ ಸಣ್ಣ-ಸಣ್ಣಗಳನ್ನು ಹಿಡಿದುಕೊಳ್ಳಲಿಕ್ಕೆ [illegible] ಪರಸ್ಪರ [illegible] ವಿಮಾನಗಳ ಹಾರ್ಮಾಟವು [illegible] ಸುಮಾರು [illegible] ಶತ್ರುವಿಮಾನಗಳ ನಾಶವಾದವು; ಅಥವಾ ಮಿತ್ರಮಂಡಲಿಯ [illegible] ಸುಮಾರು [illegible] ವಿಮಾನಗಳು ಹಾಳಾದವು. [illegible] ಅದರ [illegible] ಮೇಲೆ ಹರಿದು ಬರುವಂತೆ ಪ್ರಯತ್ನಗಳು ನಡೆಯುತ್ತವಂತೆ.

ವಿದೇಶ ವೃತ್ತಾಂತ.

ಜಪಾನ್—[illegible], ಹೊಂಗ್‌ಕೊಂಗ್, ಸಿಂಗಾಪುರ, [illegible] ಮುಂತಾದ ಸ್ಥಳಗಳಿಂದ ಓಡಿಹೋದ ಜರ್ಮನರು [illegible] ಗುಪ್ತಪ್ರದೇಶಗಳಲ್ಲಿ ಅಡಗಿಕೊಂಡು [illegible] ಒಳಸಂಚು ನಡೆಸುತ್ತಿದ್ದಾರೆಂದು ಲಂಡನ್ [illegible] ಪತ್ರಿಕೆಯ ಒಂದು ತಂತಿವರ್ತಮಾನವು ತಿಳಿಸುತ್ತದೆ.

ಜರ್ಮನಿ—[illegible] ಸಾಧಿಸಲ್ಪಟ್ಟ [illegible] ಹೋಗಿ ಬೆಂಕಿ ಬಿದ್ದು [illegible] ನಷ್ಟ [illegible] ಸುಟ್ಟುಹೋಯಿತು. ಇದಕ್ಕೆ ಕಾರಣ [illegible] ಗೊತ್ತಾಗಲಿಲ್ಲವಂತೆ.

ಜರ್ಮನಿ—[illegible] ಎಂಬಲ್ಲಿ [illegible]

ಜರ್ಮನಿ—ಒಸ್ಟ್ರಿಯದ [illegible]

[illegible]

ಖಡ್ಗ. ಈ ವಿಷಯವಾಗಿ [illegible] ಮತ್ತು [illegible] ಜನರು ಪಕ್ಷಪಾತಿಗಳು [illegible] ಒಸ್ಟ್ರಿಯ ಹಂಗೇರಿ [illegible] ಒಂದೇ ಜನಾಂಗದವರಲ್ಲ. ಒಸ್ಟ್ರಿಯದಲ್ಲಿ [illegible] ಜರ್ಮನಿಯೊಡನೆ [illegible] ಸೇರಬೇಕೆಂಬ [illegible] ಹಂಗೇರಿಯಲ್ಲಿ ಚೆಕ್ಸ್, ಮೆಗಾಯರ್ಸ್, ಸ್ಲಾವ್ ಮುಂತಾದ ಜನಾಂಗಗಳಿವೆ. ಈ ಪೈಕಿ ಸ್ಲಾವ ಜನಾಂಗದವರಿಗೆ ಕೆಳಗಿರುವ ಸರ್ವಿಯದೊಡನೆ ಸೇರಿಕೊಂಡು ಸರ್ವಿಯದ ರಾಜ್ಯವನ್ನು ವಿಸ್ತರಿಸಬೇಕೆಂದು ಇಚ್ಛೆ. ಬಹಳ ಕಾಲದಿಂದಲೂ ಇದೆ. ಹಂಗೇರಿಯಲ್ಲಿ ಮೆಗಾಯರ್ಸ್ ಎಂಬ ಸಣ್ಣ ಜನಾಂಗವು ಅವರೆಲ್ಲರ ಸೂತ್ರಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು ಇತರ ಜನಾಂಗಗಳ ಮೇಲೆ ರಾಜ್ಯಕಾರ್ಯ ನಡೆಸುತ್ತದೆ. ಇದು ಇತರರಿಗೆ ಒಪ್ಪಿಗೆಯಿಲ್ಲ. ಹೀಗಿರುವುದರಿಂದ ಈ ಭಿನ್ನಾಭಿಪ್ರಾಯದ ಜನಾಂಗಗಳನ್ನು ಒಂದೇ ಛತ್ರದೊಳಗೆ ಎಷ್ಟು ಕಾಲ ಇರಿಸಲು ಒಸ್ಟ್ರಿಯದ ಚಕ್ರವರ್ತಿಗೆ ಸಾಧ್ಯವಾದೀತೋ ಎಂದು ನೋಡಲಿಕ್ಕೆ ಇದೆ.

ರಷ್ಯ—ರುಷ್ಯದಿಂದ ಬೆಸ್ಸರೇಬಿಯದ ಭಾಗವನ್ನು ಕಳಚಿ ರುಮೇನಿಯಕ್ಕೆ ಕೊಟ್ಟಿದೆಂದು ರುಮೇನಿಯದ ಮಂತ್ರಿಯು ತಿಳಿಸುವನು.

ರಷ್ಯ—ಬೋಲಶೆವಿಕರು ಸೆರೆಯಾಳಾಗಿಯಾದ ಜನರಲ್ [illegible] ನನ್ನು ಕೊಲ್ಲಿಸಿದರಂತೆ. ರುಷ್ಯದ ಯುದ್ಧಹಡಗುಗಳು ಫಿನ್ಲೆಂಡದಲ್ಲಿದ್ದ ಜರ್ಮನ್ ಲಶ್ಕರಿ ಅಧಿಕಾರಿಯು ಅಪ್ಪಣೆ ಪಡೆದ ಮೇಲೆಯೇ ಪೆಟ್ರೊಗ್ರೇಡನ್ನು ಸೇರಿಕೊಳ್ಳಲಿಕ್ಕೆ ಸಾಧ್ಯವಾಯಿತು. ಜನರಲ್ ರಾಯಬಾರಿ [illegible] ಎಂಬವನು ರುಷ್ಯದ ದೊಡ್ಡ ಊರುಗಳಲ್ಲಿ ರುಷ್ಯದ ಲಷ್ಕರು ಜತೆಗೂಡಿಸಿದ್ದನು. ಫಿರಂಗಿಯಿಂದ [illegible] ಅಪ್ಪಣೆ ಮಾಡಿರುವನು.

ಮಾಸ್ಕೋ ಪಟ್ಟಣದಲ್ಲಿ ಬೋಲಶೆವಿಕರಿಗೂ ಅರಾಜಕ ಪಕ್ಷದವರಿಗೂ [illegible] ಆರಂಭಿಸಿ ಬೋಲಶೆವಿಕರು ಅರಾಜಕ ಪಕ್ಷದವರ [illegible] ಗಳನ್ನು ಮುತ್ತಿಗೆ ಹಾಕಿ ಗುಂಡುಗಳನ್ನು ಹಾರಿಸಿದರು. ಅರ್ಧ ತಾಸಿನೊಳಗೆ ಅರಾಜಕ ಪಕ್ಷದವರು ಶರಣಾಗತರಾಗಿ ಹೊರಬಂದರು. ಈ ಸಂದರ್ಭದಲ್ಲಿ ಎಷ್ಟು ಜನರು ಘಾಯವಾದರೆಂದು ತಿಳಿಯಲಿಲ್ಲ.

ಅಲ್ಲಲ್ಲಿ ಅನ್ಯಾಕ್ರಾಂತಿಯು ಇರುವುದನ್ನು ಜರ್ಮನ್ ಮತ್ತು ಪೋಲೆಂಡದ ಜನರು ನಿಷ್ಕಂಟಕವಾದ ರುಷ್ಯದ ಪ್ರಜೆಗಳ ಮೇಲೆ ಬಿದ್ದು ಅವರಿಗೆ ಹೊಡೆಯುವುದನ್ನು [illegible] ಜರ್ಮನ್ ಸರಕಾರಕ್ಕೆ [illegible]

ರುಷ್ಯದ ನೌಕಾಸೈನ್ಯವನ್ನು ನಿವಿಸ್ಸ್ಯಫೋಲದಲ್ಲಿರುವ ಜನರಲ್ ನಾಯಕರಿಗೆ ಒಪ್ಪಿಸಿಕೊಡಬೇಕೆಂದು ಜರ್ಮನರು ಹೇಳಿದ್ದಕ್ಕೆ ಒಸ್ಟ್ರಿಯ, ಜರ್ಮನಿ, ತುರ್ಕಿಯ ಸೈನ್ಯಗಳು ರುಷ್ಯವನ್ನು ಬಿಟ್ಟು ಹೊರಟು ಹೋಗುವುದಾದರೆ ಮತ್ತು ಉಕ್ರೇನದ ಮತ್ತು ಫಿನ್ಲೆಂಡದ ಸರಹದ್ದುಗಳನ್ನು ನಿಶ್ಚಯಿಸಿದರೆ ಮಾತ್ರ, ಅದಾದರೆ ಆ ಮೇಲೆ ತಮ್ಮ ನೌಕೆಗಳನ್ನು ಸಿವಸ್ಸ್ಯಪೋಲಕ್ಕೆ ಕಳುಹಿಸುವೆವು ಎಂದು ರುಷ್ಯ ಸರಕಾರದವರು ತಿಳಿಸುವರು.

ಅಲೆಂಡ ದ್ವೀಪಗಳನ್ನು ಜರ್ಮನಿ ಫಿನ್ಲೆಂಡ ಮತ್ತು ಸ್ವೀಡನಿನೊಡನೆ ಅದರ ಪ್ರಯೋಜನ [illegible] ತಾರೀಕಿಗೆ ಬಿಟ್ಟುಹೋಗುವರು.

[illegible] ತಾರೀಕಿನ ಮಧ್ಯಾಹ್ನ [illegible] ತಾರೀಕಿನ ವರೆಗೆ [illegible] ಕಳೆದ [illegible] ಸುಮಾರು [illegible] ರೈಲುಗಳು [illegible] ಊರಿನ ಮೇಲೆ [illegible]

ಲಂಡನ್—ಡಿನಬಲ್ ಭೂಪೇಂದ್ರನಾಥ ಬಾಸು ಇವರು ಸೆಕ್ರೆಟರಿ ಆಫ್ ಕೌನ್ಸಿಲಿನ ಮೆಂಬರರಾಗಿ ಚಾರ್ಜು ವಹಿಸಿಕೊಂಡರು.

[illegible]—[illegible] ತಾರೀಕಿನ 'ನ್ಯೂ ಇಂಡಿಯ' ಪತ್ರಿಕೆಯ ಪ್ರಕಟವಾದ ಕೆಲವು ವಿಷಯಗಳ ಬಗ್ಗೆ [illegible] ಹೈಕೋರ್ಟಿನವರು [illegible] ಅಡ್ವೋಕೇಟ ಜನರಲರ ಮೇಲೆ [illegible] ಪ್ರಿವಿ ಕೌನ್ಸಿಲಿನಲ್ಲಿ ಪಿರ್ಯಾದಿ ಮಾಡಿದರು.

[illegible]—ಬಾಲ್ಕನದಲ್ಲಿ ಯುದ್ಧದ ಆರಂಭದಲ್ಲಿ [illegible] ಬಂದ ದಿವಸ [illegible] ಆಹಾರದ [illegible] ೬೦೦ ಜನರು [illegible] ಆಹಾರ ಸಾಮಾಗ್ರಿಗಳ [illegible] ಒಸ್ಟ್ರಿಯದಿಂದ ಬರುವ ಆಹಾರ [illegible] ಬಲಾತ್ಕಾರದಿಂದ ಹಿಡಿದುಕೊಳ್ಳುವ [illegible] ಒಸ್ಟ್ರಿಯದ ಸೈನ್ಯದವರು ಈ ಜನರ [illegible] ಜನರಲ್ಲಿ [illegible] ಗುಡ್ಡಗಳಿಗೆ ಸೇರಿಕೊಂಡು [illegible] ಹೋರಾಡುತ್ತಿರುವರಂತೆ.

ಜೊಹನ್ಸ್ [illegible] (ದಕ್ಷಿಣ ಆಫ್ರಿಕ)—ಇಲ್ಲಿ ವಿದ್ಯುತ್‌ಶಕ್ತಿಯ [illegible] ಹಚ್ಚಬೇಕೆಂದು [illegible] ಸಂಬಳದ [illegible] ವಿದ್ಯುತ್‌ಶಕ್ತಿಯು [illegible]

ಸಿಡ್ನಿ (ಆಸ್ಟ್ರೇಲಿಯ)—ಇಲ್ಲಿ ಸೈನ್ಯಕ್ಕೆ ಜನರು [illegible] ಉತ್ತೇಜನ [illegible] ಅಲ್ಲಿಯ ಮಂತ್ರಿಯು ಹೇಳುತ್ತಾರೆ.

[illegible] ಈ ತಿಂಗಳ [illegible] ಈ ವಿಷಯವಾಗಿ [illegible] ಮತ್ತು [illegible]

[illegible]

[illegible] ಕಲ್ಕತ್ತಾ—[illegible] ಸುಮಾರು ೧ ಲಕ್ಷ ರೂಪಾಯಿ [illegible] ಬಾಳುವ [illegible] ವಾಯಿತು.

ಬೊಂಬಾಯಿ—ಜಿ. ಐ. ಪಿ. ರೈಲ್ವೆ ಕಾಮಗಾರಿಯವರ ಒಂದು ಸಂಘವನ್ನು ಸ್ಥಾಪಿಸುವುದಕ್ಕಾಗಿ ಮಿ. [illegible] ಕಾಂಜಿ ದ್ವಾರಕಾದಾಸರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿತು. ಮಿ. [illegible] ತಾರೀಕಿಗೆ ಆದ ಈ ಸಭೆಯಲ್ಲಿ [illegible] ಜನವಾಲಾ ಎಂಬವರು ಇಂಥ ಸಂಘದ ಪ್ರಯೋಜನಗಳನ್ನು ವಿವರಿಸಿ [illegible] ಯವರ ಒಗ್ಗಟ್ಟಿನಿಂದ ಅವರ ಅಭಿವೃದ್ಧಿಗೆ ಎಡೆಯಿಕ್ಕುತ್ತದೆಂದು ಹೇಳಿದರು.

ಬೊಂಬಾಯಿ—ರುಸ್ತುಂಬಾಯಿ [illegible] ಎಂಬ [illegible] ಗೃಹಸ್ಥರೊಬ್ಬರು ತನ್ನ [illegible] ಲಕ್ಷ ರೂಪಾಯಿ ಬೆಲೆ ಬಾಳುವ ಸ್ಥಿರ ವಸ್ತು [illegible] ವರ್ಷಕ್ಕೆ [illegible] ರೂಪಾಯಿ ಉತ್ಪನ್ನವಿರುವ ಆಸ್ತಿಯನ್ನು ತನ್ನ ಜಾತಿಯವರ ಪ್ರಯೋಜನಾರ್ಥವಾಗಿ ದಾನಮಾಡಿರುವರು. ಈ ಹಣದಿಂದ ತನ್ನ ಜಾತಿಯ ಬಡಜನರಿಗೆ ಉಳುಕೊಳ್ಳುವುದಕ್ಕೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೂ ಅದ[illegible]ಗಳಿಂದ ಹುಟ್ಟಿದ ಉತ್ಪನ್ನವನ್ನು ಮೇಲೆ ಹೇಳಿದ ಬಡಬಗ್ಗರ [illegible] ಅದರಿಂದ ತನ್ನ ಜಾತಿಯವರ ಬಗ್ಗೆ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸುವುದಕ್ಕೂ ಏರ್ಪಾಡುಮಾಡಿರುವರು.

ಕಲ್ಲಿಕೋಟೆ—ಇಲ್ಲಿ [illegible] ಸುಮಾರು ದೋಣಿಗಳೂ ಒಂದು ಪತ್ತೆಮಾರೂ ಸರಕನ್ನು ಸಮುದ್ರದಲ್ಲಿ ಎತ್ತಿಹಾಕಿ ಸುರಕ್ಷಿತವಾಗಿ ದಡ ಹಿಡಿದವು. ಹೊಸತಾಗಿ ಕಟ್ಟಿಸಿ ತಯಾರಾದ ಕೋಟ್ಟ ಒಂದು ಧಾನ್ಯ ತಂದುಕೊಂಡು ಹೋಗುವಷ್ಟರಲ್ಲಿ ಮುಳುಗಿಹೋಯಿತು. ಒಟ್ಟಿಗೆ ಸುಮಾರು ೨ ಲಕ್ಷ ರೂಪಾಯಿ ಬೆಲೆ ಬಾಳುವ ಸೊತ್ತು ನಾಶವಾಯಿತಂತೆ.

ಅಹಮ್ಮದಾಬಾದಿನಿಂದ ಜರ್ಮನ ಕೈದಿಗಳು ತಪ್ಪಿಸಿಕೊಂಡದ್ದು.—೪ ಮಂದಿ ಜರ್ಮನ ೨ ಒಸ್ಟ್ರಿಯನ್ ಕೈದಿಗಳು ಅಹಮ್ಮದಾಬಾದಿನ ಬಿಡಾರದಿಂದ ತಪ್ಪಿಸಿಕೊಂಡು ಹೋಗಿರುವರಂತೆ. ಅವರ ಪೈಕಿ ಒಬ್ಬನು ಒಂದು ವರ್ಷ ಕಾಲ ಅಫಘಾನಿಸ್ಥಾನ, ಪಾರಸೀಕಸ್ಥಾನಗಳಲ್ಲಿ ತಿರುಗಾಡಿಕೊಂಡಿದ್ದು ಕಡೆಗೆ [illegible] ಸೆರೆಹಿಡಿಯಲ್ಪಟ್ಟಿದ್ದನಂತೆ. ಇವರ ಹೆಸರು [illegible] ಬೊಂಬಾಯಿ ಸರಕಾರಿ ಗಜೆಟಿನಲ್ಲಿ ಪ್ರಕಟವಾಗಿದೆ.

ರಂಗೂನು—ಇಲ್ಲಿ [illegible] ಎಂಬಲ್ಲಿ [illegible] ಒಂದು ದೊಡ್ಡ [illegible] ಬೆಂಕಿ ಬಿದ್ದು ಸುಮಾರು ೪ ಲಕ್ಷ ಬೆಲೆಬಾಳುವ [illegible] ಸಾಮಾನು [illegible] ಲಕ್ಷ ರೂಪಾಯಿ [illegible] ಮತ್ತು ಬಂಡಸಾಲೆ ನಾಶವಾದವು. ಬೆಂಕಿಯು [illegible] ಘಂಟೆಯಿಂದ [illegible] ಗಂಟೆ ವರೆಗೆ ಉರಿದು ಬಹಳ ಜನರ [illegible] ಈ ಹಾವಳಿಯಿಂದ ಸರಕಾರಕ್ಕೆ ಸ್ವಲ್ಪ ನಷ್ಟ ಉಂಟಾಯಿತು.

ಕರಾಚಿ—ಇಲ್ಲಿ ನಡೆದ ಹಲವು ಮಿಷನ ಸಂಘದವರು ತಮ್ಮ ಆಶ್ರಯದಲ್ಲಿರುವ ದೇಶೀಯ ಕ್ರೈಸ್ತರನ್ನು ಯುದ್ಧದ ಸೇವೆಗೆ ದಾಖಲಾಗುವಂತೆ ಪ್ರೋತ್ಸಾಹಿಸಬೇಕೆಂದೂ ಯುದ್ಧಸಾಲಕ್ಕೆ ಅವರು ಹಣ ಒದಗಿಸುವಂತೆ ಯತ್ನಿಸುವುದಲ್ಲದೆ ಯುದ್ಧಕ್ಕೆ ಸಂಬಂಧ ಆಸ್ಪತ್ರೆ ಮೊದಲಾದ ಹಲವು ಸಂಸ್ಥೆಗಳಿಗೋಸ್ಕರ ತಮ್ಮ ಕೈಕೆಳಗಿರುವ ಕಟ್ಟೋಣಗಳನ್ನು ಹಂಗಾಮಿಯಾಗಿ ಬಿಟ್ಟುಕೊಡಬೇಕೆಂದೂ ನಿಶ್ಚಯಿಸಿದ್ದಾರಂತೆ.

ಹಿಂದುಸ್ಥಾನದಿಂದ ಯುದ್ಧಕ್ಕೆ ಸಹಾಯ.

ಆಫೀಸರ ನವಾಬರು . . . ರೂ. ೩೦,೦೦೦

[illegible] ಮುಖ್ಯ ಮಂತ್ರಿ ರಾಜಾ [illegible] . . ೧೫,೦೦೦

ಇದಲ್ಲದೆ ತನ್ನ ಸರ್ವಸ್ವವನ್ನು ಸರಕಾರದವರು ವಿನಿಯೋಗಿಸಬಹುದೆಂದು ಅವರು ವಾಗ್ದತ್ತ ಮಾಡಿರುವರು.

ಕನ್ನಡ ಸಾಹಿತ್ಯದ ದುಃಸ್ಥಿತಿ.

(ಲೇ.—[illegible])

ಈ ವರುಷದ ಮೇ ತಿಂಗಳ ಎಂದರೆ ಬೇಸಿಗೆಯ ರಜೆಯು ಕಳೆಯುತ್ತ ಬಂತು. ಶಾಲೆ-ಕಾಲೇಜುಗಳು ಬರುವ [illegible] ಎಂದು [illegible] ಬಾಲಕರಿಗೆ ಪ್ರಾರಂಭವಾದಾಗ ಕಳೆದ ವರುಷ ಇದೆ ಬೇಸಿಗೆಯ ರಜೆಯಲ್ಲಿ "ಇಂಗ್ಲಿಷ ದೇಶಭಾಷೆಗಳ" ಈ ಶಿರೋನಾಮೆಯಿಂದ ಕೆಲವು ವಿಚಾರಗಳನ್ನು ಸ್ವದೇಶಬಂಧುಗಳ ಮುಂದೆ ಇಟ್ಟಿದ್ದೆ. ಅದರಂತೆಯೇ ಈ ವರುಷದ ರಜೆಯಲ್ಲಿ ಸಾಹಿತ್ಯದ [illegible] ಸಂಗತಿಗಳನ್ನು ಪ್ರಸ್ತಾಪಿಸಬೇಕೆಂದಿದ್ದೆ. ಆದರೆ ರಜೆಯು ಮುಗಿಯುತ್ತ ಬೇರೆ ಬೇರೆ ಕಾರ್ಯಗಳು [illegible] ನಮ್ಮಂಥ [illegible] ಸೇರಿದ್ದಾಗಿ ಬಂದು ಬಿದ್ದವು! ಆದರಿಂದ ಒಂದು ತಿಂಗಳ ಹಿಂದೆಯೆ ಪ್ರಾರಂಭದಿಂದ ರಜೆಯು ಈಗ [illegible] ಬಂದರೂ ಆಲೋಚಿಸಿದ ವಿಷಯದ ಮೇಲೆ ಒಂದೆರಡು ಅಕ್ಷರಗಳನ್ನು ಸಹ ಬರೆಯಲು ಸಾಧ್ಯವಾಗಲಿಲ್ಲ! ಇದಲ್ಲದೆ, [illegible] ಒಂದು ವಿಷಯದ ಮೇಲೆ ಬರೆಯುವಂಥ [illegible] ಮತ್ತು [illegible] ಕಾಲಹರಣ ಈ ಎರಡು ಉದ್ದೇಶಗಳಿಗಾಗಿ ಅಲ್ಲ, ಬರೆಯುವ ಪ್ರಯೋಜನವು [illegible] ಅಲ್ಲ. [illegible] ಹಾಗೆ [illegible] ನಮ್ಮ ಲೇಖಕರು [illegible]

[illegible]

ಅನುಕ್ರಮಣಿಕೆ

	ಪಾನು
ಅಗ್ರಲೇಖ	
ಇಂದಿಗೆ ಸರಿಯಾಗಿ ಒಂದು ವರ್ಷವಾಯಿತು!!	೪
ಸ್ಫುಟವಿಚಾರಗಳು —	
೧ ಪಂಜಾಬದೊಳಗಿನ ಬರಗಾಲ	,,
೨ ಹಿಂದ್ವಾಯದ ಸ್ವೈಸ್ಯಭರತಿ	,,
೩ ಮೇಡಾಚಿಲ್ಲಿಯೊಳಗಿನ ಸತ್ಯಾಗ್ರಹ	,,
೪ ಕೃಷಿ ಇಲಾಖೆಯ ವರದಿ	,,
೫ ಅಪರಾಧಗಳನ್ನು ಹ್ಯಾಗೆ ನಿಲ್ಲಿಸಬಹುದು?	,,
೬ ಡಾ ನಾಯರರು ವಿಲಾಯತಿಗೆ ಹೋಗಹೊರಟರಂತೆ!	,,
ಸ್ಥಳೀಕ — ಮಂಗಳೂರು	,,
ವರ್ತಮಾನ ಸಂಗ್ರಹಗಳು —	
೧ ಯೂರೋಪದ ಮಹಾಯುದ್ಧ	೩
೨ ವಿದೇಶ ವೃತ್ತಾಂತ	,,
೩ ಸ್ವದೇಶ ವೃತ್ತಾಂತ	
೪ ಕನ್ನಡ ಸಾಹಿತ್ಯದ ದೀನಸ್ಥಿತಿ	೩
೫ ಟ್ರೈಲ್ ಸಭಾ ಮೂಲಕ ಸಾಲ ವಸೂಲಿ	
೬ ಪತ್ರವ್ಯವಹಾರ — ಟಪ್ಪಾಲ ಮತ್ತು ತಂತಿ ಇಲಾಖೆ	,,
೭ ದಕ್ಷಿಣ ಕನ್ನಡ ಕುಂಬಳೆ	,,

ಸ್ವದೇಶಾಭಿಮಾನಿ.

ಶಕ ೧೮೪೧ ವೈಶಾಖ ಶು ೧೪ ಶುಕ್ರವಾರ.

ಇಂದಿಗೆ ಸರಿಯಾಗಿ ಒಂದು ವರ್ಷವಾಯಿತು!!

"ಎಲ್ಲ ಸಾಮಾನ್ಯ ಜನರಲ್ಲಿ ಸನದಶೀರ ಪದ್ಧತಿಯಿಂದ ರಾಜಕೀಯ ಶಿಕ್ಷಣವನ್ನು ಹಬ್ಬಿಸಿ ಜವಾಬದಾರ ರಾಜ್ಯಪದ್ಧತಿಯ ಪಾತ್ರತೆಯನ್ನು ಅವರಲ್ಲಿ ತಂದು ಕೊಡುವದು ಮುಂದಿನ ಕಾಲಗಳ ಮುಖ್ಯ ಕರ್ತವ್ಯವು" ಲಾರ್ಡ ಪೆಂಟಲೆಂಡ್

ಕಳೆದು ಹೋದ ಸಂಗತಿಗಳನ್ನು ಸ್ಮರಿಸುವದು ಅನೇಕ ದೃಷ್ಟಿಯಿಂದ ಬೋಧಪ್ರದವಾಗಿರುತ್ತದೆ. ದೀರ್ಘಮಾರ್ಗವನ್ನು ನಡೆಯಹತ್ತಿದವರು ಅಲ್ಲಲ್ಲಿ ಕುಳಿತು ನಡೆದು ಬಂದ ಮಾರ್ಗವು ಎಷ್ಟು ಕ್ಲೇಶದಾಯಿತೆಂದು ತಮ್ಮಷ್ಟಕ್ಕೆ ಯೋಚಿಸುವದಿದೆ. ಇಂತಿಷ್ಟು ಕ್ರಮಿಸಲಾಯಿತು, ಇನ್ನು ಇಂತಿಷ್ಟಿದೆ ಎಂದು ನಿರ್ಣಯಿಸಲು ಅನುಕೂಲವಾಗುವದರಿಂದ ಮಾರ್ಗಸ್ಥರಲ್ಲಿ ಪುನಃ ಉತ್ಸಾಹವು ಬರುವದು. ಅಥವಾ ಕಳೆದ ಮಾರ್ಗವನ್ನು ನಿರೀಕ್ಷಿಸುವದರಿಂದ ಆ ಮಾರ್ಗದ ಮೇಲಿನ ಕಲ್ಲುಮುಳ್ಳುಗಳನ್ನೂ ಕಣಿವೆಗಳನ್ನೂ ದಾಟಿ ಬಂದದ್ದು ಸ್ಮರಣಕ್ಕೆ ಬಂದು ಮುಂದಿನ ಪ್ರಯಾಣವು ಸುಕರವಾಗ ಬಹುದು. ಹಾಗೆಯೇ ರಾಜಕೀಯ ಚಳವಳದ ಮಾರ್ಗಸ್ಥರಿಗೆ ಹಿಂದಿನ ದಾರಿಯ ಮೇಲಿನ ಸಮ ವಿಷಮ ಸ್ಥಲಗಳನ್ನು ಎಂದರೆ ಒಳ್ಳೆ ಕೆಟ್ಟ ಸಂಗತಿಗಳನ್ನು ಆಲೋಚಿಸುವದರಿಂದ ಮುಂದಿನ ಪ್ರಯಾಣದಲ್ಲಿ ಉತ್ಸಾಹವೂ, ಸ್ಫೂರ್ತಿಯೂ ಉಂಟಾಗುತ್ತದೆ. ಈ ದೃಷ್ಟಿಯಿಂದ ಕಳೆದ ವರ್ಷದ ಮೇ ೨೪ ತಾರೀಕಿನ ದಿವಸದ ಸ್ಮರಣವು ಯಾರಿಗಾದರೂ ಆಗದೆ ಇರುವದು ಅಪರಿಹಾರ್ಯವಾಗಿದೆ. ಕಳೆದ ಮೇ ತಿಂಗಳು ತಾ ೨೪ರಲ್ಲಿ ತುಂಬಿದ ಕಾಯಿದೆ ಕೌನ್ಸಿಲಿನಲ್ಲಿ ಗವರ್ನರ ಸಾಹೇಬರು ಜನರ ಹೋಮ್ ರೂಲಿನ ಚಳವಳವನ್ನು ಒಂಥಿಸಲು ಕೌನ್ಸಿಲಿನ ಸಭಾಸದರಿಗೂ ಬೇರೆ ಪ್ರತಿಷ್ಠಿತರಿಗೂ ಸೂಚಿಸಿದರು. ಆದರೆ ಸ್ಥಾನಿಕ ಮತ್ತು ವರಿಷ್ಠ ಕೌನ್ಸಿಲಿನ ಸಭಾಸದರೂ ಸರ್ ಎಸ್ ಸುಬ್ರಹ್ಮಣ್ಯರಂಥ ಮಾನ್ಯಪತಿಷ್ಠಿತ ವೃಂದರೂ ಮುಂದೆ ಒಂದು "ಗವರ್ನರ ದೊರೆಗಳು ಕೈಕೊಂಡ ಪದ್ಧತಿಯು ತಪ್ಪಿನದು, ನಮ್ಮ ಮಾರ್ಗದಲ್ಲಿ ಘಾತಕವಾಗಲೀ, ದ್ರೋಹವಾಗಲೀ ಇಲ್ಲ, ಅಂಥ ನಮ್ಮ ಮಾರ್ಗವನ್ನು ನಾವು ಬಿಡೆವು" ಎಂದು ಸ್ಪಷ್ಟವಾಗಿ ಹೇಳಿದರು. ಹೋಮ್ ರೂಲಿನ ಹೆಸರನ್ನು ಎತ್ತಿ ಸನದಶೀರ ಮಾರ್ಗದಿಂದ ಚಳವಳವನ್ನು ಮಾಡಿದ್ದ ಮಿಸೆಸ್ ಬಿಸೆಂಟರಿಗೆ ಪ್ರತಿಬಂಧದ ಶಾಸನಕ್ಕೆ ಹೊಂದಿದಲ್ಲಿ ಹೋಗಬೇಕಾಯಿತು. ಅಧಿಕಾರಿಗಳ ತಪ್ಪುದಾರಿಯನ್ನು ತೋರಿಸಿ ಕೊಟ್ಟದ್ದಕ್ಕೆ ಪ್ರತಿಬಂಧದ ಶಿಕ್ಷೆಯನ್ನು ಕೊಟ್ಟ ಮದ್ರಾಸಿನ ಸರಕಾರಕ್ಕೆ ಸಾಹಸಿಗಳಾದ ಎಂಗ್ಲೋ-ಇಂಡಿಯನ್ ಆಲೋಚಕರು ಇನ್ನೂ ಅನೇಕ ಕ್ರೂರೋಪಾಯಗಳನ್ನು ತೋರಿಸಹತ್ತಿದರು. ಇದರಿಂದ ದೇಶ ತುಂಬಾ ಚಿಂತೆ ಮತ್ತು ಭೀತಿಯು ಕವಿದುಕೊಂಡವು. ಆದರೆ ಕೆಟ್ಟದ್ದರಿಂದ ಅನೇಕ ಸಾರೆ ಒಳ್ಳೆದು ಬರುತ್ತದೆಂದು ಹೇಳುತ್ತಾರೆ. ಹಾಗೆಯೇ ಈ ಸಂದರ್ಭದಲ್ಲೂ ಘಟಿಸಿತೆನ್ನಬಹುದು. ಲಾರ್ಡ ಪೆಂಟಲೆಂಡರು ಮೇ ೨೪ರಲ್ಲಿ ಕಠೋರೋಕ್ತಿಗಳಿಂದ ಹೋಮ್ ರೂಲಿನ ಚಳವಳವನ್ನು ನಿರ್ಭತ್ಸಿದರೂ ಪ್ರತಿಗಾಮಿ ಮತ್ತು ಒತ್ತಾಯದ ಧೋರಣದಿಂದ ಅದನ್ನು ತಗ್ಗಿಸಲಾರಂಭಿಸಿದರೂ ಸರ್ ಸುಬ್ರಹ್ಮಣ್ಯ ಐಯ್ಯರರಂಥ ಶ್ರೇಷ್ಠತಮ ಪುರುಷರು ಕಂಕಣಬದ್ಧರಾಗಿ ಮುಂದರಿಸಿದರು. ಅವರು ಅಮೇರಿಕದ ಪ್ರೆಸಿಡೆಂಟ ವಿಲ್‌ಸನರಿಗೆ ಇಲ್ಲಿಯ ರಾಜಕೀಯ ಚಿತ್ರವನ್ನು ಬರೆದು ಕಳುಹಿಸಿದರು. ಅಮೇರಿಕದಲ್ಲಿ ಹಿಂದೂಸ್ಥಾನದ ಬಗ್ಗೆ ಜಾಗೃತಿಯುಂಟಾಯಿತು. ಬ್ರಾಡಕರು ಸಹ ಇದೇ ಕಾಲದಲ್ಲಿ ಆಗಸ್ಟನ ಜಾಹೀರನಾಮೆಯನ್ನು ಪ್ರಕಟಿಸಿದರು. ಹಿಂದುಸ್ಥಾನ ಸರಕಾರಕ್ಕೆ ಮದ್ರಾಸಿನ ಪ್ರತಿಬಂಧದ ಸಂಕೋಲೆಗಳನ್ನು ಕಳಚಬೇಕಾಯಿತು. ಮಿ. ಮೊಂಟೆಗ್ಯೂರವರಿಗೆ ಹಿಂದಿ ಸ್ವರಾಜ್ಯದ ಪ್ರಶ್ನೆಯನ್ನು ಕೇಳಲು ೧ ಸಾವಿರ ಮೈಲಿನ ಪ್ರಯಾಣಮಾಡಿ ಹಿಂದೂಸ್ಥಾನಕ್ಕೆ ಬರಬೇಕಾಯಿತು. ಇಷ್ಟೆಲ್ಲ ಸ್ಥಿತ್ಯಂತರಗಳು ಉಂಟಾದವು. ಇವೆಲ್ಲ ಒಳ್ಳೆ ಸಂಗತಿಗಳೇ. ದೇಶದ ಹಿತಕ್ಕೆ ಬೇಕಾದ ಸಂಗತಿಗಳೇ. ಆದರೆ ಇವು ಹ್ಯಾಗೆ ಆದವು? ತನ್ನಷ್ಟಕ್ಕೆ ಆದವೋ? ಅಲ್ಲ. ನಿಜವಾಗಿ ನೋಡಿದರೆ ಇವು ಲಾರ್ಡ ಪೆಂಟಲೆಂಡರ ಅನುಗ್ರಹದಿಂದಲೇ ಆದವು. ಲಾರ್ಡ ಪೆಂಟಲೆಂಡರ ಕಳೆದ ವರ್ಷದ ಸುಪ್ರಸಿದ್ಧ ಭಾಷಣದೊಳಗಿನ ಹೋಮ್‌ರೂಲ್ ವಿರೋಧದ ಅಂಶವನ್ನು ಬಿಟ್ಟು ಬೇರೆ ಯಾವ ಒಂದು ಒಳ್ಳೆ ಮಾತು ಇರುವದೋ ಮತ್ತು ಯಾವುದನ್ನು ನಾವು ಈ ಲೇಖದ ಶಿರೋಭಾಗದಲ್ಲಿ ಅವತರಿಸಿರುವೆವೋ ಆ ವಿಧಾನವ ಈ ಹೊತ್ತಿಗೆ ಎಷ್ಟೋ ಅಂಶದಿಂದ ಯಥಾರ್ಥವಾಗಿದೆಂದು ನಿವೇದಿಸಲು ನಾವು ಸಂತೋಷಪಡುತ್ತೇವೆ. "ಎಲ್ಲ ಸಾಮಾನ್ಯ ಜನರಲ್ಲಿ ಸನದಶೀರ ಪದ್ಧತಿಯಿಂದ ರಾಜಕೀಯ ಚಳವಳವನ್ನು ಹಬ್ಬಿಸಿ ಜವಾಬದಾರ ರಾಜ್ಯಪದ್ಧತಿಯ ಪಾತ್ರತೆಯನ್ನು ಅವರಲ್ಲಿ ತಂದು ಕೊಡುವದು ಮುಂದಿನ ಕಾಲಗಳ ಮುಖ್ಯ ಕರ್ತವ್ಯವು" ನಿಜ ಮತ್ತು ನಮ್ಮ ಗವರ್ನರರ ಈ ಅಭಿಪ್ರಾಯವು ಈ ಹೊತ್ತು ಯಶಸ್ವಿಯಾಗುತ್ತ ಬಂದಿದೆ. ಹಿಂದುಸ್ಥಾನಕ್ಕೆ ಸ್ವರಾಜ್ಯವು ಬೇಕೆಂಬ ಮಾತನ್ನು ಈಗ ಯಾರಾಡುವದಿಲ್ಲ? ಸ್ವರಾಜ್ಯದ ಶಿಕ್ಷಣವು ಈಗ ಯಾರಿಗ ದೊರೆಯುವದು ಬಾಕಿ ಉಳಿದದೆ? ಮಿ ಬಿಸೆಂಟರು ಪ್ರತಿಬಂಧದಲ್ಲಿ ಬಿದ್ದು ಬಿಡುಗಡೆ ಹೊಂದುವ ತನಕ ಮಾಸವಾಸದಲ್ಲಿ ವೃತ್ತವು ನಡೆಯುವಂತೆ ಈ ಸಂಸ್ಥಾನದೊಳಗಿನ ಹಳ್ಳಿಹಳ್ಳಿಗಳಲ್ಲಿ ಕೂಡ ಅವರ ಪ್ರತಿಬಂಧದ ದಿನಾಚರಣವು ನಡೆದಿರಲಿಲ್ಲವೆ? ಈ ದಿನಾಚರಣದ ಸಭೆಗಳಲ್ಲಿ ಸ್ವರಾಜ್ಯವೆಂದರೇನು, ಮಿಸೆಸ ಬಿಸೆಂಟರು ಯಾರು, ಅವರನ್ನು ಯಾಕೆ ಪ್ರತಿಬಂಧದಲ್ಲಿಟ್ಟಿದೆ ಇತ್ಯಾದಿ ವಿಷಯಗಳ ಚರ್ಚೆಯು ಹಳ್ಳಿಗಳೊಳಗಿನ ಅತಿಕ್ಷಿತರವರೆಗೆ ನಡೆದಿರಲಿಲ್ಲವೆ? ಹಾಗೆಯೆ ಇನ್ನೊಂದು ಪರ್ಯಾಯವನ್ನು ದೃಷ್ಟಾಂತಕ್ಕಾಗಿ ಉದಾಹರಿಸಿ ಒಹುದು. ಮಿ ಮೊಂಟೆಗ್ಯೂ ಹಿಂದುಸ್ಥಾನದ ವಿಚಾರಧಾರಿಗಳ ವಕ್ತಿ ವಿಪಕ್ಷಗಳನ್ನು ಕೇಳಲು ಬರುವವರಿದ್ದಾರೆಂದು ಸಿಕ್ಷಿತವಾದ ಕೂಡಲೇ ದೇಶಭಕ್ತರಾದ ಗಾಂಧಿಗಳ ಸೂಚನೆಯಿಂದ ಮೇರೆಗೆ ಕಾಂಗ್ರೆಸ್‌ಲೀಗ ಸ್ಕೀಮದ ಯೋಜನೆಯು ದೇಶದೊಳಗಿನ ಒಡೆ ಜನತೆಯ ಸಮ್ಮತಿ ಒಲಿಲ್ಲವೆ? ಗ ಜಂಜಾಬ, ಮಹಾರಾಷ್ಟ್ರ, ಮದ್ರಾಸ ಮತ್ತು ಪ್ರಾಂತಗಳಲ್ಲಿ ಅಶಿಕ್ಷಿತ ಜನರಿಗ ಅಲ್ಲಲ್ಲಿಯ ಮುಖಂಡರ ಮತ್ತು ಸುಶಿಕ್ಷಿತರು ಕಾಂಗ್ರೆಸ್ಲೀಗುಗಳ ಸಂಯುಕ್ತ ಯೋಜನೆಯ ಸ್ವರೂಪವನ್ನು ತಿಳಿಸಿಕೊಟ್ಟರು. ಮತ್ತು ಅವರ ದಸ್ತುಗಳನ್ನು ತೆಕ್ಕೊಂಡರು. ಇಂಥ ದಸ್ಕತಗಳ ಸಂಖ್ಯೆಯು ೬ಲಕ್ಷಕ್ಕಿಂತ ಮಿಕ್ಕಿಹೋಗಿದೆ. ಲಾರ್ಡ ಪೆಂಟಲೆಂಡ ಪ್ರಭುಗಳ ಹೇಳಿದಂತೆ ರಾಜಕೀಯ ವಿಷಯದ ಶಿಕ್ಷಣವು ಎಲ್ಲರಿಗೆ ಸಿಗುವದು ಅಗತ್ಯವೆಂಬುದರಲ್ಲಿ ಸಂದೇಹವಿಲ್ಲ. ಸಾಮಾನ್ಯರು ಸಹ ಶಿಕ್ಷಿತರು, ನಮಗೆ ಕೆಲ ಹಕ್ಕುಗಳು ಬೇಕು, ಈ ಹಕ್ಕುಗಳು ಬೇಕು, ನಮಗೆ ಸ್ವರಾಜ್ಯವು ಬೇಕು ಎಂದು ಕೇಳುವಷ್ಟು ಕೇಳ್ತಿರುವದು ಮತ್ತು ಇಷ್ಟು ಹಿಡಿದು ಸಮಾಜವು ಎಚ್ಚರವಾದ ಸದ್ದೆಯಲ್ಲಿ ಗೂರಕೆಯನ್ನು ತೆಗೆಯುತ್ತಿದ್ದದ್ದು ಇವು ಎಲ್ಲದರಿಂದ ಹಿಂದೀದೇಶದ ಹಿತಕ್ಕಾಗಿಯೇ ಮಾರ್ಗದೆ. ಲಾರ್ಡ ಪೆಂಟಲೆಂಡರ ಮೇಲಿನ ನಿರ್ವಚನವನ್ನು ತಿದ್ದಿಕೊಂಡ ಸ್ವರಾಜ್ಯದ ಶಿಕ್ಷಣವನ್ನು ಅತಿಕ್ಷಿತರಿಗೂ ಇನ್ನೂ ಅಧಿಕಪ್ರಮಾಣದಿಂದ ಹಬ್ಬಿಸಲು ಯತ್ನಿಸಬೇಕು. ಕನ್ನಡಪ್ರಾಂತದ ಪ್ರಗತಿ ಹೇಳುವದಾದರೆ ಹೋಮ್‌ರೂಲಿನ ಶಾಖೆಯವನ್ನು ಸಭಾಭಾಷೆಯಿಂದ ತಿಳಿಸುವುದಕ್ಕಾಗಿ ರೂಪದಲ್ಲಿ ತಂದಿಧವಾಗಿ ರಾಜಕೀಯ ವಿಷಯವನ್ನು ಅಶಿಕ್ಷಿತರ ಮುಂದೆ ಇಡಲಿಕ್ಕೆ ಕೀರ್ತನಕಾರರೂ ಹರಿದಾಸರೂ ಭಾಗವತರೂ, ಹಾಗು ಸುಪ್ರಸಿದ್ಧ ಪದಗಳನ್ನು ಹಾಡಿ ತಿರಗಾಡುವ ತಿರುಕರೂ ಹಿಂದೀ ಹೋಮ್ ರೂಲಿನ ಕೃತಿಗಳನ್ನು ಹಾಡಿ, ಹೋಮ್‌ರೂಲಿನ ವಿಷಯವನ್ನು ಜನಸಮಾಜಕ್ಕೆ ಶಿಕ್ಷಣವನ್ನು ಕೊಡಬೇಕು. ನಮ್ಮ ದಕ್ಷಿಣದಲ್ಲಿ ದಶಾವತಾರದ ಆಟಗಳು ಸುಶಿಕ್ಷಿತ ಮತ್ತು ಅಶಿಕ್ಷಿತರಲ್ಲಿ ಮೊದಲಿನಿಂದಲೂ ಸುಪ್ರಸಿದ್ಧ ಸಂಸ್ಥೆಗಳು. ಅದ್ದರಿಂದ ಇದರಲ್ಲಿ ಹೋಮ್‌ರೂಲಿಗೆ ಎಡೆಸಿಕ್ಕಿದ್ದಾದರೆ ಅದು ಎಲ್ಲರಿಗೆಯೂ ಒಂದು, ಸಾರ್ವತ್ರಿಕ ಪ್ರಸಾರವನ್ನು ಹೊಂದೀತೆಂಬುದು ಇಲ್ಲ. ಆದರೆ ತಾಳಮದ್ದಳೆ, ಹರಿಕಥೆ ಮುಂತಾದ ಸಂಸ್ಥೆ ಹೋಮ್ ರೂಲಿನ ಸಮಾವೇಶವನ್ನು ಮಾಡುವಾಗ ಜನರ ಕಾಯಿದೆ ಶಕ್ತಿಯನ್ನು ಮೊದಲಾದ ರಾಜಮಾನ್ಯ ಸಾಧನಗಳಿಗೆ ವಿರೋಧ ಹುಟ್ಟಿಸುವಾಗ ಬಾಧಕಾಹಿಪತ್ಯ, ಬ್ರಿಟಿಶ ಸ್ನೇಹಗಳ ವಿಷಯದಲ್ಲಿ ಯೋಗ್ಯ ಪ್ರೀತಿಯು ವೃದ್ಧಿಯಾಗುವದಕ್ಕಾಗಿ ಗಳಿಗೆ ತಕ್ಕ ಎಚ್ಚರವನ್ನು ತೆಕ್ಕೊಳ್ಳಬೇಕೆಂದು ವಕ್ತೃಗಳು ಲಾರ್ಡ ಪೆಂಟಲೆಂಡರ ಕಳೆದ ವರ್ಷದ ನಮ್ಮವಿರೋಧ ಚಿರಸ್ಮರಣೀಯ ಭಾಷಣದೊಳಗಿನ ಉಪದೇಶ ನಯ ತಾರೀಕಿನ ರೀತಿಯಿಂದ ಸರಿಯಾಗಿ ಸ್ವೀಕರಿಸಿದ್ದಾದರೆ ಅವನ್ನು ಜನರು ಈ ಗಳಿಗೆ ನಿಜವಾಗಿ ಸಂತೋಷವಾಗದೆ ಇರದು. ಲಾರ್ಡ ಪ್ರಭುಗಳಿಗೆ ಬರುವ ವರ್ಷದೊಳಗೆ ಈ ಒಂದು ವರ್ಷಕ್ಕಿಂತ ರಾಜಕೀಯದ ಶಿಕ್ಷಣವು ಜನಸಮಾಜಕ್ಕೆ ಹೆಚ್ಚಿನ ಪ್ರಮಾಣದಲ್ಲಿ ದೊರೆಯಲಿ. ಕೋಲಿಂದರೆ ಅದು ತಪ್ಪಾಗಲಿಕ್ಕಿಲ್ಲ. ಈ ರೀತಿಯಿಂದ ಸಾಮಾನ್ಯರಲ್ಲಿ ಸ್ವರಾಜ್ಯ ಪ್ರಸಾರವು ಆದಲ್ಲಿ ವಿಲಾಯತಿಗೆ [illegible] ಹೋಮ್‌ರೂಲಿನ [illegible] ಸಂಸ್ಥಾನಗಳೂ [illegible] [illegible]

ವರ್ಷದೊಳಗೆ ಉಂಟಾಯಿತು. ಇದರ ಶ್ರೇಯಸ್ಸು ಬೇರೆಯವರಿಗೆ ಕೊಡುವದಕ್ಕಿಂತ ನಮ್ಮ ಮಹಾ ಲಾ. ಪೆಂಟಲೆಂಡ್ ಮತ್ತು ಅವರ ಸರಕಾರ ಇವರಿಗನ ಕೊಡುವದು ಯುಕ್ತವಾಗಿದೆ. ಸಾಮಾನ್ಯ ಜನಸಮಾಜದಲ್ಲಿ ರಾಜಕೀಯ ಶಿಕ್ಷಣವನ್ನು ಹಬ್ಬಿಸಬೇಕೆಂಬ ಮಾತು ಸರ್ವಸಮ್ಮತವೆ ಮತ್ತು ಮೇಲೆ ದಿಗ್ದರ್ಶಿಸಿದ ಪ್ರಕಾರ ಹಿಂದೂಸ್ಥಾನದೊಳಗಿನ ಜನರಲ್ಲಿ ತುಂಬಾ ಪ್ರಸಾರಹೊಂದಿದ್ದೆ.

ಸ್ಫುಟವಿಚಾರಗಳು.

೧ ಉತ್ತರ ಹಿಂದುಸ್ಥಾನದಲ್ಲಿ, ವಿಶೇಷವಾಗಿ ಪಂಜಾಬ ಪ್ರಾಂತದಲ್ಲಿ ಭಯಂಕರವಾದ ಬರಗಾಲವು ಪಸರಿಸಿಕೊಂಡಿದೆ. ಹರಿದ್ವಾರದಿಂದ ಬದರಿನಾರಾಯಣ ಮುಂತಾದ ಕ್ಷೇತ್ರ ಸ್ಥಳಗಳಲ್ಲಿ ಅನ್ನಾನ್ನ ದಶೆಯು ಪ್ರಾಪ್ತವಾಗಿ ಗಂಡಸರು, ಹೆಂಗಸರು, ಮಕ್ಕಳು ಸಾಯುತ್ತಿದ್ದಾರೆ. ಈ ಭಯಂಕರ ಬರದ ಸ್ವರೂಪವು ಎಷ್ಟರ ಮಟ್ಟಿಗೆ ಉಗ್ರವಾಗಿದೆ ಎಂದರೆ, ತಂದೆ ತಾಯಿಯು ಸಾಕಲು ಹಾಗು ಸಲಹಲು ಆಗದೆ ಮಾತ್ರವಲ್ಲ ತಮ್ಮ ಜೀವಕ್ಕಾಗಿ ಒಡಹುಟ್ಟಿದ ಚಿಕ್ಕ ಮಕ್ಕಳನ್ನು ಮಾರುತ್ತಿದ್ದಾರೆ! ಇಂಥ ಸಂದಿಗ್ಧವಾದ ಪ್ರಸಂಗವು ಅಲ್ಲಿಯ ಪಾದ್ರಿಗಳಿಗೆ ಎಂದರೆ ಮಿಶನರಿಗಳಿಗೆ ಒಳ್ಳೆ ಫಲಕಾರಿಯಾಗಿದೆ. ಕ್ರೈಸ್ತ ಮಿಶನರಿಗಳು ಅಲ್ಲಿಗೆ ಹೋಗಿ ಆ ಬಂಧುಭಗಿನಿಯರಿಗೆ ಅನ್ನಗ್ರಾಸವನ್ನು ದಾನಮಾಡಿ ಅವರನ್ನು ಸ್ವಮತದಲ್ಲಿ ತರುತ್ತಿದ್ದಾರೆ. ಹಿಂದುಸ್ಥಾನದೊಳಗಿನ ಬಂಗಾಲ ಮೊದಲಾದ ಪ್ರಾಂತಗಳೊಳಗಿಸುವವರಿಗೆ ಹಿಂದು ಸುಕಾಲವೆ ಸರಿ ಅಥವಾ ದುಃಕಾಲವೆ ಸರಿ. ಇರಲಿ. ಅನ್ನದ ಕುತ್ತಿಲ್ಲದೆ ಯಾತನೆ ರಾಜನ ಆಗುವ ಹಾಗು ಕ್ರೈಸ್ತ ವೈದಿಕರ ಅಧ್ಯಾಗತರಾಗುವ ಈ ಜನರನ್ನು ಉಳಿಸುವದಕ್ಕಾಗಿ ಅಲ್ಲಿಯ ಆರ್ಯಸಮಾಜದ ಮುಖಂಡರು ಹರಿದ್ವಾರದಲ್ಲಿ ಒಂದು ಫಂಡನ್ನು ಏರ್ಪಡಿಸಿಕೊಂಡಿದ್ದಾರೆ. ಅಂಥವರಿಗೆ ಸಹಾಯ ಮಾಡಿ ಪ್ರಾಣರಕ್ಷಣದ ಪುಣ್ಯವನ್ನು ಸಂಪಾದಿಸುವ ಸ್ವರುವವರು "ಮಹಾತ್ಮಾ ಹಂಸರಾಜ, ಪ್ರೆಸಿಡೆಂಟ, ಆರ್ಯಸಮಾಜ್ ಕಾಲೇಜ, ಲಾಹೋರ, ಪಂಜಾಬ" ಈ ವಿಳಾಸಕ್ಕೆ ಅವಶ್ಯವಾಗಿ ಧಾರಕತ್ತಿ ದ್ರವ್ಯಸಹಾಯವನ್ನು ಮಾಡಬಹುದೆಂದು ಪ್ರಾರ್ಥಿಸು.

೨ ಸೈನ್ಯಭರತಿಯ ಕೆಲಸವು ಈಗ ಒಂದು ಒಂದುವರೆ ವರ್ಷ ಹಿಂದುಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ನಡಕೊಂಡಿದೆ. ಇದು ಕರಿಗೆ ಗೊತ್ತಿದ್ದ ಸಂಗತಿಯೆ ಎನ್ನೋಣ. ಸೈನ್ಯಭರತಿಗೆ ಜನರ ಸೇರಿಸಿಕೊಳ್ಳುವಾಗ ಅಧಿಕಾರಿಗಳು ಅಥವಾ ಏಜಂಟರು ಜನರ ಬಲಾತ್ಕಾರವನ್ನು ಮಾಡಕೂಡದು. ಜನರೆ ಆತ್ಮಸಂತೋಷದಿಂದ ಸೇರಬೇಕು ಎಂದು ಸರಕಾರದ ಹಾಗು ಸೈನ್ಯದ ಮತ್ತು ವರ್ಮಾಧಿಕಾರದ ದೊಡ್ಡ ದೊಡ್ಡ ಅಧಿಕಾರಿಗಳ ಇಚ್ಛೆಯು. ಅವರು ಕಂಗಳಲ್ಲಾಗಲಿ, ಬೇರೆ ಪ್ರಸಂಗಗಳಲ್ಲಾಗಲಿ ಈ ಇಚ್ಛೆಯನ್ನು ಆಗಾಗ್ಗೆ ವ್ಯಕ್ತಮಾಡುವರು. ಮಾತ್ರವಲ್ಲ, ಮನುಷ್ಯ ಒಲದ ದಿನೇ ದಿನೇ ಹೆಚ್ಚಿನ ಅವಶ್ಯಕತೆಯು ಕಂಡು ಬರುವ ಈಗಿನಂಥ ದಿವಸಗಳಲ್ಲಿ ಸಹ ಸೈನ್ಯಸಂಗ್ರಹಯರಂಥವರು ಬಲಾತ್ಕಾರದ ಉಪಾಯಗಳನ್ನು ಸೂಚಿಸುವದಿಲ್ಲ, ಸಮ್ಮತಿಸುವವರನ್ನು ಸೇರಿಸಿಕೊಳ್ಳಬೇಕೆಂದು ಹೇಳುವರು. ದೊಡ್ಡ ಅಧಿಕಾರಿಗಳ ಈ ಇಚ್ಛೆಯಾಗಲಿ, ಭಾಷಣಗಳಾಗಲಿ ಸರಿ ಇದ್ದಾವೆ, ಆಕ್ಷೇಪಕರಲ್ಲ ಎಂಬುದಕ್ಕೆ ಅಡ್ಡಿ ಇಲ್ಲ. ಇದರಿಂದ ಅವುಗಳ ಮಟ್ಟಿಗೆ ಅವು ಸರಿ. ಪರಂತು ನದಿಯ ಪ್ರವಾಹವು ಉದ್ಭವದ ಸ್ಥಾನದಲ್ಲಿ ಶುದ್ಧವಿದ್ದರೂ ಕೆಳಕೆಳಗೆ ಬಂದಂತೆ ಅದು ಹ್ಯಾಗೆ ಬೇರೆ ಬೇರೆ ತರದ ಮಣ್ಣಿನ ಸಂಸರ್ಗದಿಂದ ಅಸ್ವಚ್ಛವಾಗುತ್ತ ಬರುವದೂ ಹಾಗೆಯೆ ಸಂಕಾಲಿ ಕಾಯಿದೆ ಕಾನೂನಿನ ಅಥವಾ ಹುಕುಮ ಜಾರಿಯ ಕ್ರಮವು ಮೇಲಿನವರ ಕೈಯಲ್ಲಿರುವಾಗ ನಿರ್ದೋಷವಾಗಿದ್ದರೂ ಕೆಳಕೆಳಗಿನ ಅಧಿಕಾರಿಗಳ ಕೈಯಲ್ಲಿ ಅದರ ಸ್ವರೂಪವು ಬದಲಾಯಿಸಿಹೋಗುವದು. ಸೈನ್ಯಭರತಿಯ ವಿಷಯದಲ್ಲಿ ಬಲಾತ್ಕಾರವು ಕೂಡದೆಂದು ಲಾರ್ಡ ಚೆಮ್ಸ್‌ಫೋರ್ಡರು ಹೇಳುತ್ತಿದ್ದರೂ ಕೆಲ ಕೆಲವು ಕಡೆಗಳಲ್ಲಿ ಎಷ್ಟೋ ಇಂಥ ಅಯೋಗ್ಯ ಪ್ರಕಾರಗಳು ನಡೆಯುತ್ತಿವೆ ಎಂದು ಆಗಾಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದೆ. ಕೆಳಗಿನ ಅಧಿಕಾರಿಗಳು ಸೈನ್ಯಭರತಿ, ಯುದ್ಧಸಾಲ ಮುಂತಾದ ಸಂಗತಿಗಳಲ್ಲಿ ಒತ್ತಾಯ ನಡೆಸುವದು ಯೋಗ್ಯವಲ್ಲವೆಂದು ಸ್ವಪ್ನಕ್ಕನರ ಟೀಕೆಯಿಂದ ಹೇಳಬೇಕಾದ್ದಿಲ್ಲ. ಮುಂಬಯಿ ಸರಕಾರದಂಥ ಪ್ರಾಂತಿಕ ಸರಕಾರಗಳು ಕೆಲವು ತಿಂಗಳ ಹಿಂದೆ ಇಂಥ ಅನುಚಿತ ಪ್ರಕಾರಗಳ ನಿಷೇಧಾರ್ಥವಾಗಿ ಪ್ರೆಸ್ ನೋಟ ಗಳನ್ನು—ಜಾಹೀರನಾಮೆಗಳನ್ನು ಪ್ರಕಟಿಸಿದ್ದ ವಾಚಕರು ಮರೆತಿರಲಾರರು.

೩ ಈ ಹೊತ್ತು ಮೇಲಿನ ಆಲೋಚನೆಗಳು ಬರಲು ಕಾರಣವೇನೆಂದರೆ, ಸೈನ್ಯಭರತಿಯ ವಿಷಯದಲ್ಲಿ ಕೆಳಗಿನ ಅಧಿಕಾರಿಗಳು ಒತ್ತಾಯ, ಶಿಕ್ಷೆಗಾರಿಕೆ ಮುಂತಾದ ಅಯೋಗ್ಯ ಸಂಗತಿಗಳನ್ನು ಈಚೆಗೆ ಮಾಡಿದ್ದು ಮುಂಬಯಿ ಪ್ರಾಂತಿಕ ಪರಿಷತ್ತಿನಲ್ಲೂ, ಪತ್ರಿಕೆಗಳಲ್ಲೂ ವ್ಯಕ್ತವಾಗಿದೆ. ಮುಂಬಯಿ ಸಂಸ್ಥಾನಕ್ಕೆ ಸೇರಿದ ಸೋಲಾಪುರ ಜಿಲ್ಲೆಯಲ್ಲಿ ಸೈನ್ಯಭರತಿಯು ಅತ್ಯಂತ ಎಲಕ್ಷಣವಾಗಿ ನಡಕೊಂಡುದು ಮುಖಾಂತರ ವ್ಯಕ್ತವಾದ ತಿಳಿದುಬರುತ್ತದೆ. ವಿಜಾಪುರದಲ್ಲಿ ಸೇರಿದ ಮೊನ್ನಿನ ಪ್ರಾಂತಿಕ ಪರಿಷತ್ತಿನಲ್ಲಿ "ಸೈನ್ಯಭರತಿಯು" ಠರಾವಿನ [illegible] [illegible] ಮ. ರಾ. [illegible]

ಹೇಳಿದರು ಸೋಲಾಪುರದ ಸೆಶ್ಶನಕೋರ್ಟಿನಲ್ಲಿ ಸಾಕ್ಷಿಗಾರರಾಗಿ ಬಂದ ಕೆಲವು ಗೃಹಸ್ಥರನ್ನು ಮಧ್ಯದಲ್ಲಿ ಸೈನ್ಯಭರತಿಯಲ್ಲಿ ಸೇರಿಸೋಣವಾಯಿತು ಸಾಕ್ಷಿಗಾರರು ಕೋರ್ಟಿಗೆ ಬರಲೊಲ್ಲರು. ಇವರನ್ನು ರಿಕ್ರೂಟಿಂಗಿನಲ್ಲಿ ಹಿಡಿದಿಟ್ಟಿದ್ದಾರೆಂತ ಆಗ ಗೊತ್ತಾಯಿತು. ಸೆಶ್ಶನ್ಸ ಜಡ್ಜರು ಕಾಗದ ಬರೆದು ಮತ್ತೆ ಅವರನ್ನು ಬಿಡಿಸಿದರು ಸೋಲಾಪುರದ ರೈಲ್ವೆ ಸ್ಟೇಶನಿನ ಸಮೀಪವಿರುವ ಧರ್ಮಶಾಲೆಯಲ್ಲಿ ರಿಕ್ರೂಟಿಂಗ್ ಏಜಂಟರಿದು ಅವರು ಹೋದಬಂದವರನ್ನು ಬಲೆಯಲ್ಲಿ ಹಿಡಿಯುತ್ತಿದ್ದಾರೆ ಈ ಸಂಗತಿಯನ್ನು ಕೂಡ ಮ॥ ರಾ॥ ಸಾಮಂತರು ವರ್ಣಿಸಿದರು ಶ್ರೀಯುತ ಕೇಳಕರರು ಕೂಡ ಕಳೆದ ವರ್ಷ ತಪ್ಪಿ ಕಿವಿಯ ಮೇಲೆ ಬಂದ ಕೆಲವು ವಿಷಯಗಳನ್ನು ಹೇಳಿದರು. ಡೊಂಬಿರೂರಕರ ಇವರಂತು ಔಷಧದ ಬಿಲ್ಲು ವಸೂಲು ಮಾಡಲು ಹೋದ ತನ್ನ ನೋಕರನನ್ನು ಮಧ್ಯದಲ್ಲೇ ಹ್ಯಾಗೆ ಹಿಡಿಯೋಣ ಆಯಿತು, ಇದನ್ನು ಪರಿಷತ್ತಿನ ಮುಂದೆ ಇಟ್ಟರು ಪ್ರಪಂಚ ದೊಳ್ಳರರ ಬಿಲನ್ನು ವಸೂಲು ಮಾಡಲು ಆಸ್ಪತ್ರೆಯಿಂದ ಹೊರಟವನು, ಸಾಕ್ಷಿ ಕೊಡಲು ಬಂದ ಸಾಕ್ಷಿಗಾರನು, ಮಾಲನ್ನು ಖರೀದಿ ಮಾಡಲು ಬಂದ ೫೦ ವರ್ಷ ದಾಟಿದ ವ್ಯಾಪಾರಿ ಮುಂತಾದವರ ಗೊತ್ತುಗುರಿ ಇಲ್ಲಾಗಿ ಕೊನೆಗೆ ಅವರು ರಿಕ್ರೂಟಿಂಗ್ ಒಫೀಸಿನಲ್ಲಿ ಸಿಗುವದೆಂದರೆ ಇದು ತೀರಾ ಆಶ್ಚರ್ಯವಲ್ಲವೆ? ನಮ್ಮ ನಿಜವಾದ ಅಭಿಪ್ರಾಯ ಕೇಳಿದರೆ ಸೈನ್ಯಭರತಿಯು ಅಥವಾ ಸೈನ್ಯಶಿಕ್ಷಣದ ಕಾಯಿದೆಯನ್ನು ಈಗ ಇಂಗ್ಲೆಂಡಿನಲ್ಲಿರುವ ರೀತಿಯಲ್ಲಿ ಒತ್ತಾಯದ ತತ್ವದ ಮೇಲೆಯೆ ಮಾಡಬೇಕಾದ್ದು ಆದರೆ ಕಾಯಿದೆಯು ಆತ್ಮಸಂತೋಷದಿಂದ ಸೇರುವವರಿಗೆ ಇದ್ದು ಅಧಿಕಾರಿಗಳು ಮಾತ್ರ ಒತ್ತಾಯನಡಿಸುತ್ತಾರೆ ಇದು ಅನುಚಿತವಲ್ಲವೆ? ಅಲ್ಲದೆ ಆತ್ಮಸಂತೋಷವಿಲ್ಲದ ಮಾನವ ಶರೀರಗಳನ್ನು ಸೈನ್ಯದಲ್ಲಿ ಸೇರಿಸಿದರೂ ಅದರಿಂದ ಲಾಭವೇನು? ಒಂದುವೇಳೆ ಕೆಳಗಿನ ಅಧಿಕಾರಿಗಳಿಗೆ 'ತಾವು ಇಂತಿಷ್ಟು ಜನರನ್ನು ಸೇರಿಸಿದೆವು' ಎಂದು ಲೆಕ್ಕ ಕೊಡಲಿಕ್ಕೆ ಮಾತ್ರ ಪ್ರಯೋಜನವಾದೀತಲ್ಲದೆ ಬೇರೆ ಉಪಯೋಗವಿಲ್ಲ

೪ ಖೇಡಾ ಜಿಲ್ಲೆಯೊಳಗಿನ ಬಡ ರೈತ ಜನರ ಮೇಲೆ ಅಧಿಕಾರಿಗಳ ಹಟ ಮತ್ತು ದುರಾಗ್ರಹದ ಶಸ್ತ್ರವು ಬಿದ್ದದರಿಂದ ಜನರಿಗೆ ಮಹಾತ್ಮಾ ಗಾಂಧಿಯವರ ನಾಯಕತ್ವದ ಕೆಳಗೆ ಸತ್ಯಾಗ್ರಹದ ಶಸ್ತ್ರವನ್ನು ಹ್ಯಾಗೆ ತೆಕ್ಕೊಳ್ಳಬೇಕಾಯಿತು ಈ ವಿಷಯವನ್ನು ವಾಚಕರಿಗೆ ಮೊದಲು ಎರಡುಮೂರು ಸಾರಿ ತಿಳಿಸಿದ್ದೇವಷ್ಟೆ ರೂಪಾಯಿಗೆ ೪ ಆಣೆ ಕೂಡ ಬೆಳೆಯು ಬಾರದೆ ಕಡೆಯಲ್ಲಿ ಜನರು ಹ್ಯಾಗೆ ಸರಕಾರಿ ಕಂದಾಯವನ್ನು ಕೊಟ್ಟಾರೆಂಬುದನ್ನು ಅಧಿಕಾರಿಗಳು ಶಾಂತವೃತ್ತಿಯಿಂದ ಆಲೋಚಿಸಿ ಜನರ ಅಪೇಕ್ಷೆಯಂತೆ ಬರುವ ವರ್ಷ ಕಂತ ಕಂತಿನಿಂದ ಬಾಕಿಬಿದ್ದ ಕಂದಾಯದ ರಕಮನ್ನು ವಸೂಲು ತೆಕ್ಕೊಳ್ಳಲು ಒಪ್ಪಿಕೊಳ್ಳಬಹುದಿತ್ತು ಆದರೆ ವಿಕಮುಖಿರುದ್ರಾಕ್ಷದಂತೆ ವಿರಳವಾದ ತಂತ್ರದ ಶಾಲೆಯಲ್ಲಿ ಕಲಿತಬಿಟ್ಟಿಯ ಬಿರೊಕ್ರಸಿಗೆ ಜನರ ನ್ಯಾಯ್ಯವಾದ ಅಂಬೋಣವು ಮಾನ್ಯವಾಗದೆ ಜಮೀನಿನ ಕಂದಾಯ ವನ್ನು ಕೂಡದ ಬಾಕಿ ಹಾಕಿಸಿಕೊಂಡವರ ಜಮೀನುಗಳನ್ನು ಜಪ್ತಿಯಿಂದ ಸರಕಾರಕ್ಕೆ ಸೇರಿಸಿ ಇನ್ನು ಮುಂದೆ ಕೂಟ ಅಂಥವರಿಗೂ ಅವರ ಮಕ್ಕಳಿಗೂ ಯಾವ ಜಮೀನಿನ ಮೇಲೂ ಹಕ್ಕಿರದಂತೆ ವ್ಯವಸ್ಥೆ ಮಾಡಲಾದೀತೆಂಬ ಜಾಹೀರನಾಮೆಯನ್ನು ಖೇಡಾ ಜಿಲ್ಲೆಯ ಅಧಿಕಾರಿಗಳು—ಕಲೆಕ್ಟರರು ಮತ್ತು ಕಮಿಷನರುಗಳು—ಹೊರಡಿಸಿದಕಾರಣ ಅರ್ಥಾತ್ ರೈತ ಜನರಿಗೆ 'ಸತ್ಯಾಗ್ರಹದ ತತ್ವವನ್ನು ಅವಲಂಬಿಸಬೇಕಾಗಿ ಬಂತು ಈ ತತ್ವವನ್ನು ಸಾಧಾರಣ ೩, ೪ ಸಾವಿರ ಜನರು ಕ್ರಮೇಣ ಅವಲಂಬಿಸುತ್ತ ಬಂದರು ಯಾರೂ ಹಿಂದಕ್ಕೆ ಕಾಲು ತೆಕ್ಕೊಳ್ಳಲಿಲ್ಲ ಆಗ ಅಧಿಕಾರಿಗಳ ನಾರಸಿಂಹ ಸ್ವರೂಪವು ಮೆಲ್ಲಮೆಲ್ಲನೆ ಕಡಿಮೆಯಾಗಹತ್ತಿತು ಮುಂಬಯಿಯ ನ್ಯಾಯ ಪ್ರಿಯ ಹಾಗೂ ಉದಾರಮನಸ್ಕರಾದ ಲೊರ್ಡ ವಿಲಿಂಗ್ಡನ್ ದೊರೆಗಳು ಕೆಳ ಅಧಿಕಾರಿಗಳ ಈ ದುರಾಗ್ರಹಕ್ಕೆ ಎಡೆಕೊಡಲಿಲ್ಲವೆಂದು ತೋರುತ್ತದೆ ಯಾಕೆಂದರೆ, ವಿಲಿಂಗ್ಡನ್ ಪ್ರಭುಗಳು ಸಿಂಧಪ್ರಾಂತದ ಕಡೆಗೆ ಜಲಪರ್ಯಟನ ಮಾಡಿ ಬಂದ ನಂತರ, ಖೇಡಾಜಿಲ್ಲೆಯೊಳಗಿನ ಜಮೀನುಗಳನ್ನು ಜಪ್ತಿಮಾಡುವ ಯಜ್ಞವು ಯಾವದು ನಡೆದಿತ್ತೊ ಅದು ನಿಂತುಹೋಯಿತು ಇದು ಸಂತೋಷದ ಮಾತಾಗಿದೆ ಜಮೀನುಗಳ ಜಪ್ತಿಯು ನಿಂತುಹೋದರೂ ದನಕರು ಮುಂತಾದ ಚರ ಆಸ್ತಿಯ ಜಪ್ತಿಯು ನಡೆದೆ ಇದೆ ಎಂದು ತಿಳಿಯುತ್ತದೆ ಆದರೆ ನಾಲ್ಕಾಣೆ ಕೂಡ ಬೆಳೆಯು ಬೆಳೆಯದ ಕಡೆಯಲ್ಲಿ ಮುಂದಿನ ಬೆಳೆಯು ವರೆಗೆ ಸರಕಾರಿ ಕಂದಾಯವನ್ನು ಭರಾಯಿಸಲು ಅಧಿಕಾರಿಗಳು ಯಾಕೆ ರೈತರಿಗೆ ಪುರಸತ್ತು ಕೊಡಬಾರದು? ಈ ವಿಷಯವನ್ನು ಪ್ರಭುಗಳವರು ಆಲೋಚನೆಗೆ ತೆಕ್ಕೊಳ್ಳುವರೆಂದು ನಂಬುತ್ತೇವೆ

೫ 'ಕೃಷಿ ಇಲಾಖೆಯ ೧೯೧೬ ೧೭ನೆ ವರ್ಷದ ಹಿಂದುಸ್ಥಾನ ಸರಕಾರದ ವರದಿಯು ಗೋಪನಾಳಿಯು ಈಚೆಗೆ ಪ್ರಕಟವಾಗಿದೆ ಅದನ್ನು ನೋಡುವಾಗ ಅದರ ಹಿಂದಿನ ವರ್ಷಕ್ಕಿಂತ ೧೯೧೬ ೧೭ನೆ ವರ್ಷ ಸಾಗುವಳಿ ಜಮೀನಿನ ಎಕ್ರೆಗಳು ಏರಿನಲ್ಲಿದ್ದಾವೆಂದು ಗೊತ್ತಾಗುತ್ತದೆ ೧೯೧೫ ೧೬ನೆ ಇಸವಿಯಲ್ಲಿ ಹಿಂದುಸ್ಥಾನದಲ್ಲಿ [illegible] ಲಕ್ಷ [illegible] ಸಾವಿರ ಎಕ್ರೆ ಜಮೀನು ಸಾಗಾಗುತ್ತಿತ್ತು, ಆದರೆ ಈಗ [illegible] ಲಕ್ಷ [illegible] ಸಾವಿರ ಎಕ್ರೆ ಸಾಗಾಗುತ್ತದೆ ಎಂದರೆ ಮೊದಲಿನಿಗಿಂತ ಕಳೆದ ವರ್ಷ ೧ ಲಕ್ಷ ಎಕ್ರೆ ಜಮೀನು ಹೆಚ್ಚು ಸಾಗುವಳಿಯಾಗಿದೆ ಎಂದು ಕಂಡುಬರುತ್ತದೆ ಸಾಗುವಳಿ ಹೊಂದಿದ ಜಮೀನುಗಳಲ್ಲಿ ಕೂಡ ಅಕ್ಕಿ, ಧಾನ್ಯ ಮುಂತಾದ ಆಹಾರ ಜೀನಸುಗಳು ಬೆಳೆಯುವ ಜಮೀನುಗಳೆ ಹೆಚ್ಚಿದ್ದಾವೆ. ಹಾಗು ದಿನ್ ಆಹಾರದ ಜೀನಸುಗಳನ್ನು ಬೆಳೆಸುವ ಸ್ಥಲಗಳು ಕೂಡ ಕ್ರಮೇಣ ಬೆಳೆಯುತ್ತ ಬಂದಿದ್ದಾವೆ ಅಲ್ಲದೆ ಕಾಲುವೆ ಹಾಕಿದ ಜಮೀನುಗಳ ಸಂಖ್ಯೆಯು ಕಳೆದ ವರ್ಷ ಮೊದಲಿನಿಗಿಂತ ೩೦ ಲಕ್ಷದಿಂದ ಹೆಚ್ಚಾಗಿದೆ. ಈ ರೀತಿಯಿಂದ ಕೃಷಿ ಇಲಾಖೆಯ ಪ್ರಸಿದ್ಧವಾದ ವರದಿಯನ್ನು ಪರಿಶೀಲಿಸಿ ನೋಡಿದ್ದಲ್ಲಿ ಕೃಷಿ ಇಲಾಖೆಯು ಹೆಚ್ಚಿಯು ಮುಂದಗತಿಯಿಂದಲಾದರೂ ಮುಂದಮುಂದಕ್ಕೆ ಬೀಳುತ್ತಿದೆ ಇದು ಸಂತೋಷದ ಮಾತು. ಆದರೆ ವರದಿಯಲ್ಲಿ ಕೃಷಿಯು ಅಭಿವೃದ್ಧಿಯಾದದ್ದು ಕಂಡುಬಂದರೂ ದೇಶದೊಳಗಿನ ಬರಗಾಲವು ಮಾತ್ರ ಕಡಿಮೆಯಾಗುವದಿಲ್ಲ [illegible] ಜೀವಿತ ಮಾತಾಗಿದೆ [illegible] ಜನ ಧಣ್ಯರ [illegible]

ವಾಗ ಕೃಷಿಯ ಈ ಅಭಿವೃದ್ಧಿಯು ಸಮಾಧಾನಕರವಲ್ಲವೆಂದು ಬಹು ಕಷ್ಟದಿಂದ ಹೇಳಬೇಕಾಗುತ್ತದೆ.

೬ ಹಿಂದುಸ್ಥಾನದಲ್ಲಿ ಪೋಲಿಸ್‌ಖಾತೆಯ ಹೆಸರು ಕೆಟ್ಟುಹೋದದ್ದು ಈಗ ಯಾರಿಗೂ ಹೊಸ ಸಂಗತಿಯಲ್ಲ. ಜನತೆಯ ರಕ್ಷಣ, ಅಪರಾಧಿಗಳನ್ನು ಹಿಡಿಯೋಣ, ಶಾಂತತೆಯ ಸಂರಕ್ಷಣ ಇತ್ಯಾದಿಗಳಿಗಾಗಿ ಪೋಲಿಸ್ ಖಾತೆಯ ಉಪಯೋಗವಿರುತ್ತದೆ ಮೇಲಿನ ಉದ್ದೇಶಕ್ಕಾಗಿ ಪೋಲಿಸರ ಸಂಖ್ಯೆಯನ್ನು ಹೆಚ್ಚಿಸುವದು ಇತ್ತಲಾಗೆ ಸರಕಾರದ ಒಂದು ನಿಶ್ಚಿತವಾದ ಕ್ರಮವೆ ಆಗಿದೆ ಆದರೆ ಇದರಿಂದ ಅಪರಾಧಿಗಳ ಸಂಖ್ಯೆಯು ಕಡಿಮೆಯಾದದ್ದು ಕಂಡು ಬರುವದಿಲ್ಲ ಪೋಲಿಸಖಾತೆಯ ವಿಷಯವನ್ನು ವಿಮರ್ಶಿಸುವಾಗ ಬಂಗಾಳದ ಕಡೆಯ ಒಬ್ಬ ದೊಡ್ಡ ಪೆನ್ಶನ್‌ಹೊಂದಿದ ಗೃಹಸ್ಥರು ಈ ಅಂಶವನ್ನು ಕನ್ನಡಿ ಇಟ್ಟು ತೋರಿಸಿದ್ದಂತೆ ಅಂಕೆ ಮುಂತಾದ್ದನ್ನು ಕೊಟ್ಟು ಬಹು ಚೆಂದವಾಗಿ ತೋರಿಸಿಕೊಟ್ಟಿರುವರು ಅವರ ಅಭಿಪ್ರಾಯದಂತೆ ಕನ್ನ ಕೊರೆಯುವವರ ಮತ್ತು ಇತರ ಕಳ್ಳರ ಸಂಖ್ಯೆಯು ದಿನೇದಿನೇ ಹೆಚ್ಚುತ್ತಿದೆ ಎಂದು ಹೇಳಬೇಕಾಗುತ್ತದೆ ಈ ಸ್ವಭಾವದ ಅಪರಾಧಗಳನ್ನು ನಿಲ್ಲಿಸಲಿಕ್ಕೆ ಸರಕಾರವು ಯೋಜಿಸುವಂತ ಅಥವಾ ವರ್ತಿಸುವಂತೆ ಪೋಲಿಸರ ತುಕಡಿಯನ್ನು ಹೆಚ್ಚಿಸುವದಲ್ಲ, ಇಲ್ಲವೆ ಅವರ ಸಂಬಳವನ್ನು ಹೆಚ್ಚಿಸುವದೂ ಅಲ್ಲ ಜನರು ಕಳ್ಳತನದ ಅಥವಾ ಕನ್ನ ಹಾಕುವ ಕೆಲಸವನ್ನು ಮಾಡುವವರಾದರೆ ಪೋಲಿಸರನ್ನು ಹೆಚ್ಚಿಸುವದರಿಂದ ಫಲವೇನು? ಅದಕ್ಕೂ ಇದಕ್ಕೂ ಬಾದರಾಯಣ ಸಂಬಂಧವಲ್ಲದೆ ಇನ್ನೇನಿದೆ? ಕಳ್ಳತನ ಅಥವಾ ಕನ್ನ ಕೊರೆಯುವಂಥ ಅಪರಾಧಗಳಲ್ಲಿ ಯಾರಿಗಾದರೂ ಯಾಕೆ ಪ್ರವೃತ್ತಿಯುಂಟಾಗುತ್ತದೆ ಇದನ್ನು ಸರಿಯಾಗಿ ವಿಮರ್ಶಿಸಿ ಅದರ ಕಾರಣವನ್ನು ಕಂಡ ಹಿಡಿದು ಹೊಟ್ಟೆಗಿಲ್ಲದೆ ಇದ್ದ ಕಾರಣ ಇಂಥ ಅಪರಾಧಗಳು ಹೆಚ್ಚಾಗುತ್ತವೆಂದು ಕಂಡುಬಂದರೆ—ಮತ್ತು ಹಾಗೆ ಕಂಡುಬರುವದೆ ಸಹಜವು—ಅದಕ್ಕೆ ತಕ್ಕ ಪ್ರತಿಕಾರ ಮಾಡಬೇಕಲ್ಲದೆ ಬರಿ ಪೋಲಿಸರ ಸಂಖ್ಯೆಯನ್ನು ಏರಿಸಿ ಫಲವೇನು? ವೈದ್ಯನು ಜ್ವರದ ನಿಧಾನವಮಾಡಿ ಅದರ ದೋಷವನ್ನು ಪರಿಹರಿಸಲು ಸರಿಯಾದ ಔಷಧವನ್ನು ಕೊಡಬೇಕಲ್ಲದೆ ಬರೆ ಇಂತಿಷ್ಟು ಡಿಗ್ರಿ ಜ್ವರವು ಇಂತು ಏರಿದ್ದನ್ನು ನೋಡಿ ಹೇಳಿ ನವನನ್ನು ಇಟ್ಟರೆ ಮಾತ್ರ ಸಾಲದು ಅದು ಸದ್ವೈದ್ಯನ ಕರ್ತವ್ಯವೂ ಅಲ್ಲ ಹಾಗೆಯೆ ಹಿಂದ ಸ್ಥಾನದೊಳಗಿನ ಬಡ ಜನರಿಗೆ ನಿರ್ವಾಹದ ಸಾಧನಗಳು ಸರಿಯಾಗಿ ಸಿಗುವಂತೆ ಮಾಡಿ ಜ್ವರ, ಆಹಾರ ಇತ್ಯಾದಿ ದೋಷಗಳಲ್ಲಿ ಜನರ ಮನಸ್ಸು ಹೋಗದಂತೆ ಮಾಡುವದು ಸರಕಾರದ ಮುಖ್ಯ ಕರ್ತವ್ಯವಾಗಿದೆ

೭ ಸ್ವರಾಜ್ಯದ ಸಂಧಾನವನ್ನು ಕೊಡಿಸಲು ಹೋಗುತ್ತಿರುವ ಹೋಮ್ ರೂಲ್ ಮಂಡಲವನ್ನು ಒರ್ಧದಾರಿಯಿಂದ ಹಿಂದೆ ಕಳಿಸಿದ್ದು ಜನರು ಸೃಷ್ಟಿಯಿಂದ ಆಯು ಕ್ಷೀಣವಾಗಿ ತೋರಿದರೂ ಸರಕಾರದ ದೃಷ್ಟಿಗೆ ಅದು ಯುಕ್ತವೆಂದೆ ತೋರಿರುವುದು ಹಿಂದಿಸ್ವರಾಜ್ಯದ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಮತ್ತು ಸರಕಾರದಲ್ಲಿ ಇಲ್ಲಿಯ ಪ್ರತಿನಿಧಿಗಳನ್ನು ಅಪೇಕ್ಷಿಸದೆ ಇರತಕ್ಕ ಸುವ್ಯವಸ್ಥೆ ಈ ಪ್ರತಿನಿಧಿಗಳು ಒರುವದು ಯಾಕೆ? ಎಂಬದೊಂದು ಯಥಾರ್ಥವಾದ ಪ್ರತಿನಿಧಿ ಮಂಡಲದ ಪಾಸಪೋರ್ಟನ್ನು ನಾವ ರದ್ದುಮಾಡಿದ್ದು [illegible] ಸರಕಾರದ ಕಡೆಯಿಂದ ಹೇಳಲಾಗಿತ್ತು ಆದರೆ ಈ ಕಾಲದಲ್ಲಿ ಮದ್ರಾಸಿ ಪತ್ರಿಕೆಗಳಲ್ಲಿ ಪ್ರಸಿದ್ಧವಾದಂತೆ ಡಾಕ್ಟರ ನಾಯರರು ಇಂಗ್ಲಂಡಿಗೆ ಹೊರಟಿದ್ದಾರಂತೆ ಇವರನ್ನು ಯಾರು ಕರೆದಿದ್ದಾರೆ? ಪಾರ್ಲಿಮೆಂಟ ಆಮಂತ್ರಿಸಿದೆಯೋ ಅಥವಾ ಸ್ವರಾಜ್ಯಬಾಧಕರು ಆಮಂತ್ರಿಸುವರೊ? ಇಲ್ಲವೆ ಮದ್ರಾಸ್ ಟೈಮ್ಸ್ ಪತ್ರಿಕೆಯ ಸಂಶಯದಿಂದ ಯೋಚಿಸುವಂತೆ ಯುದ್ಧದೊಳಗಿನ ಡಾಕ್ಟರ ಇಲಾಖೆಯಲ್ಲಿ ಕೆಲಸಮಾಡಲು ಹೋಗುವರೊ? ಯುದ್ಧದ ಸಹಾಯಾರ್ಥವೂ ಅಲ್ಲ, ಬಾಧಕರ ಆಮಂತ್ರಣವೂ ಇರಲಿಲ್ಲ ಪಾರ್ಲಿಮೆಂಟಿನ ಅಪೇಕ್ಷೆಯೂ ಇರಲಿಲ್ಲ, ಎಂದಾದರೆ ಡಾಕ್ಟರ ನಾಯರರು ವಿಲಾಯಿತಿಗೆ ಯಾಕೆ ಹೊರಟಿರುವರು? ಮತ್ತು ಅಂಥವರನ್ನು ಹೋಮ್ ರೂಲಿನ ಮಂಡಲವನ್ನು ನಿಲ್ಲಿಸಿದ ಅಧಿಕಾರಿಗಳು ಹ್ಯಾಗ ಮನ್ನಿಸಿ ಬಿಡುವರು?

ಸ್ಥಳೀಕ—ಮಂಗಳೂರು.

ಕಳೆದ ಮಂಗಳವಾರ ಇಲ್ಲಿಯ ಜಿಲ್ಲಾ ಕಲೆಕ್ಟರ ದೊರೆಗಳವರ ಅಧ್ಯಕ್ಷತೆಯಲ್ಲಿ ಹಜೂರು ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನ ನಂತರ ಎರಡನೇ ಸರ್ತಿಯ ಯುದ್ಧಸಾಲವನ್ನು ಈ ಜಿಲ್ಲೆಯಲ್ಲಿ ಸಂಗ್ರಹಿಸುವರೆ ಏನೆಲ್ಲಾ ವ್ಯವಸ್ಥೆ ಮಾಡಬೇಕೆಂಬ ವಿಷಯವನ್ನು ಆಲೋಚಿಸುವರೆ ಸಭೆಯು ಕೂಡಿತ್ತು ಸಭೆ ಕೂಡಿದ ಉದ್ದೇಶವು ಸಭೆಯಲ್ಲಿ ವ್ಯಕ್ತಗೊಳಿಸಿದ ನಂತರ ಅಲ್ಲಿಯೇ ಸಾಲವನ್ನು ಕಲವರು ವಾಗ್ದಾನ ಮಾಡಿದರು ಇಲ್ಲಿಯ ಮಿ॥ ಮೋರ್ಗನ್ ದೊರೆಗಳವರು ರೂ ೧ ಲಕ್ಷ ಮತ್ತು ತಮ್ಮ ಕುಟುಂಬದ ಮೆಂಬರರಿಂದ ರೂ ೧೫,೦೦೦ವನ್ನು ವಾಗ್ದಾನ ಮಾಡಿದರು, ಮ॥ ರಾ॥ ರಾ॥ ರಿಟಾಯರ್ಡ ಡಿಸ್ಟ್ರಿಕ್ಟ್ ರಜಿಸ್ಟ್ರಾರರಾದ ಮ॥ ರಾ॥ ಎಮ್ ಮುಕುಂದರಾವ್ ಮತ್ತು ಇವರ ಪುತ್ರ ಮ॥ ರಾ॥ ವಕೀಲ ಎಮ್ ಎಸ್ ಪ್ರಭುಗಳವರು ರೂ ೪೦೦೦, ಮ॥ ರಾ॥ ಎನ್. ಸುಬ್ಬರಾವ್‌ರವರು ರೂ ೧೫೦೦, ಮ॥ ರಾ॥ ಮಣೇಲ ಕೃಷ್ಣನಾಯಕ ಎಂಡ್‌ಸನ್ಸ್ ರೂ ೧೦೦೦, ಮ॥ ರಾ॥ ತಾಲೂಕು ಬೋರ್ಡ ಮೆಂಬರರಾದ ರಘುಚಂದ್ರ ಬಲ್ಲಾಳರು ರೂ ೧೦೦೦, ಮ॥ ರಾ॥ ದೇವಪ್ಪಪೂಂಜರು ರೂ ೧೦೦೦, ಮತ್ತು ಇಲ್ಲಿಯ ನಿರಾಶ್ರಿತ ಸಹಾಯ ಸಂಘದವರ ಪರವಾಗಿ ರೂ. ೩೦೦೦, ಈ ರೀತಿ ಜಾಮೂಲಾ ಒಂದು ಲಕ್ಷ ೪೩ ಸಾವಿರ ರೂಪಾಯಿಗಳ ಸಾಲವು ವಾಗ್ದಾನಮಾಡಲ್ಪಟ್ಟಿರುವದು ಸಾಲದ ಮೊಬಲಗುಗಳ ವಿವರದ ಪಟ್ಟಿಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು. ಇಲ್ಲಿಯ ನಿರಾಶ್ರಿತ ಸಂಘಕ್ಕೆ ಡಾಕ್ಟರ್ ಕಾರ್ನಾಡರವರು ದಾನವಾಗಿ ಕೊಟ್ಟ ಹಣದಿಂದ ಯುದ್ಧಸಾಲಕ್ಕೆ ರೂ. ೩೦೦೦ ಕೊಡೋಣವಾಗಿರುವದು [illegible] ಮಾತ್ರ ಸಂಘದ ಬಗ್ಗೆ ಉಪಯೋಗಿಸಲ್ಪಡುವ [illegible] ವಿಶ್ವಾಸಾರ್ಹ [illegible] ಡಾಕ್ಟರ್ ಕಾರ್ನಾಡರವರು [illegible] ದಾನದಲ್ಲಿದೆ. ಇವರ [illegible] ರಾವ್ [illegible]

ಹಿರ ಜೆರದಲ್ಲಿ ಕೇವಲಾತಿಯಾಗಿಲ್ಲ ಈ ಮೊಬಲಗಿನಲ್ಲಿ ರೂ. ೩೦೦೦ವನ್ನು ಹೆಚ್ಚಿಗೆ ದರದ ಬಡ್ಡಿಯ ಸಾಲಕ್ಕೆ ಕೊಟ್ಟಿರುವರು, ಅಲ್ಲದೆ ರೂ. ೩೦೦೦ವನ್ನು ಯುದ್ಧಸಾಲವಾಗಿ ಕೊಡುವಷ್ಟು ಸಂಪನ್ನತೆಯು ಇಲ್ಲಿಯ ನಿರಾಶ್ರಿತ ಜನಸಹಾಯಸಂಘಕ್ಕೆ ಇರದು ಆಯಾ ತಾಲೂಕುಗಳಿಗೆ ಪ್ರತ್ಯೇಕ ಕಮ್ಮಿಟಿಗಳನ್ನು ಏರ್ಪಡಿಸಿ ಅಲ್ಲಲ್ಲಿ ಡಿವಿಜನಲ್ ಆಫೀಸರರುಗಳ ಮತ್ತು ತಹಸೀಲ್ದಾರರ ಸಹಾಯವನ್ನು ಪಡದು ಈ ಜಿಲ್ಲೆಯಲ್ಲಿ ಈ ಸಾಲವನ್ನು ಎತ್ತಬೇಕೆಂತ ನಿರ್ಣಯಿಸಿರುತ್ತಾರೆ.

ಗಣಪತಿ ಸೆಂಕೆಡರಿ ಶಾಲೆಯಲ್ಲಿ ರಾಷ್ಟ್ರೀಯಶಿಕ್ಷಣ ಶಾಖೆಯ ಸಭೆಯು ಕಳೆದ ಸಂಚಿಕೆಯಲ್ಲಿ ಸೂಚಿಸಲ್ಪಟ್ಟಂತೆ ಕಳೆದ ತಾ. ೧೬ನೇ ಶನಿವಾರ ದಿನ ಕೂಡಿತ್ತು ಶಾಖೆಯ ಸ್ಥಾಪನೆ ಕಾರ್ಯವನ್ನು ನೆರವೇರಿಸಿದ ನಂತರ ಈ ಶಾಖೆಯ ಬಗ್ಗೆ ಅಧಿಕಾರಿಗಳು ನೇಮಿಸಲ್ಪಟ್ಟರು. ಮ॥ ರಾ॥ ರಾ॥ ರಾವ್ ಬಹದ್ದೂರ್ ಅತ್ತಾವರ ರಾಮಯ್ಯ ಪೂಂಜರವರು ಈ ಶಾಖೆಯ ಅಧ್ಯಕ್ಷರಾಗಿಯೂ ಮ॥ ರಾ॥ ರಾ॥ ಕಾರ್ನಾಡ ಸದಾಶಿವ ರಾಯರು ಖಜಾನಜಿಯರಾಗಿಯೂ ಮತ್ತು ಮ॥ ರಾ॥ ರಾ॥ ಅತ್ತಾವರ ಬಾಲಕೃಷ್ಣಶೆಟ್ಟಿ ಮತ್ತು ವಿಕಂಬರರಾವ್‌ರವರು ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿರುವರು ಈ ಅಧಿಕಾರಿಗಳು ಕೂಡಿಕೊಂಡು ೧೫ ಜನರ ಒಂದು ಆಡಳಿತ ಕಮ್ಮಿಟಿಯು ನೇಮಿಸಲ್ಪಟ್ಟಿರುತ್ತದೆ. ಈ ಕಮ್ಮಿಟಿಯ ಆಯಾ ಜಾತಿಗಳ ಗೃಹಸ್ಥರು ಮೆಂಬರರಾಗಿರುವರು ಬಾಲಿಕಾ ಪಾಠಶಾಲೆ ಮತ್ತು ವ್ಯಾಪಾರ ಶಿಕ್ಷಣ ಶಾಲೆಯ ವಿಷಯಗಳು ಇದೇ ತಿಂಗಳ ತಾ ೨೭ರಲ್ಲಿ ಕೆನರಾಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಸಾಯಂಕಾಲ ಗಂಟೆ ೪ಕ್ಕೆ ಕೂಡುವ ಸಭೆಯಲ್ಲಿ ಪರ್ಯಾಲೋಚಿಸಲ್ಪಡುವವು ಕೆನರಾಹೈಸ್ಕೂಲಿನಲ್ಲಿ ಕೂಡುವ ಈ ಸಭೆಗೆ ಸಹಾ ರಾಷ್ಟ್ರೀಯ ಶಿಕ್ಷಣದ ಬಗ್ಗೆ ಮಂತಿಗೆ ವಾಗ್ದಾನ ಮಾಡಿದವರೂ ಇತರ ಪ್ರೋತ್ಸಾಹಕರೂ ದಯಮಾಡಿ ಬರಬೇಕೆಂತ ಕಾರ್ಯದರ್ಶಿಗಳು ವಿಜ್ಞಾಪಿಸಿಕೊಂಡಿರುತ್ತಾರೆ

೧೯೧೭ನೆ ಇಸವಿಯಲ್ಲಿ ಯುದ್ಧಸಾಲಕ್ಕೆ ವಂತಿಗೆ ಹಾಕಿದವರಲ್ಲಿ ಅನೇಕರಿಗೆ ವರ್ಷಾಂತ್ಯದ ಬಡ್ಡಿ ಸಿಕ್ಕದೆಹೋದ್ದರಿಂದ ಈ ಹಣವನ್ನು ಸರಕಾರದವರು ಸಾಲವಾಗಿ ಪಡೆದದ್ದಲ್ಲ, ಉಚಿತವಾಗಿ ಪಡೆದರು ಎಂಬ ತಪ್ಪು ಗ್ರಹಿಕೆಯು ಬಂದಿರಬಹುದು ಆದರೆ ಇದನ್ನು ಹೋಗಲಾಡಿಸುವದಕ್ಕೆ ಸರಕಾರದವರು ಈ ರೀತಿಯಲ್ಲಿ ೧೯೧೭ನೇ ಮೇ ೧೯ನೇ ತಾರೀಕಿನ ನಂಬ್ರ ೩೬೭ ಪಿನೆನ್ಸಲ್ ಹುಕುಮನ್ನು ಪ್ರಕಟಿಸಿರುವರು ಇದರ ಮೇರೆಗೆ ಸಾಲದ ಬಡ್ಡಿಯು ಪ್ರತಿವರ್ಷಾರ್ಧದಲ್ಲಿ ಫೆಬ್ರುವರಿ ೧೫ನೆ ಮತ್ತು ಆಗೋಸ್ತು ೧೫ನೇ ತಾರೀಕಿಗೆ ವಂತಿಗೆದಾರರಿಗೆ ಸಲ್ಲತಕ್ಕದ್ದು ಇದೆ ಈ ಪ್ರಕಾರ ಪಡೆಯದೆ ಇದ್ದವರು ಕೂಡಲೇ ಈ ವಿಷಯವನ್ನು ಆಯಾಯ ತಾಲೂಕು ಅಥವಾ ಹಜೂರು ಖಜಾನೆಗೆ ತಿಳಿಸಿ ಅಲ್ಲಿ ತಮ್ಮ ಗವರ್ನಮೆಂಟ ಪ್ರೊಮಿಸರಿ ನೋಟುಗಳನ್ನು ಹಾಜರ ಪಡಿಸಿ ಅವುಗಳ ಬಡ್ಡಿಯನ್ನು ಬೇಗನೆ ಹೊಂದುವದಕ್ಕೆ ವಿಚಾರ ಮಾಡಬೇಕು, ಮತ್ತು ಈ ವಿಷಯದಲ್ಲಿ ಏನೊಂದು ಸುಸ್ತಿಯಾಗಬಾರದೆಂದು ಸರಕಾರದವರು ಎಲ್ಲಾ ಖಜಾನೆಗಳಿಗೆ ತಿಳಿಸಿರುವರು

ಮಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಹಾಗಲವಾಡಿ ಮಹಮ್ಮದ ಸಾಹೇಬ ಬಹದ್ದೂರರವರು ಕೊಡಿಯಾಲ್‌ಬೈಲ್ ವೆಸ್ಟ್ ವಾರ್ಡಿಗೂ ಮಿ ಪಿ ಎಫ್ ಬಿ ಅಲ್ಬುಕರ್ಕರು ಜಪ್ಪು ವಾರ್ಡಿಗೂ, ಡಾ॥ ಎಲ್. ಪಿ ಫೆರ್ನಾಂಡಿಸರು, ಮಿ॥ ಜೆ ಎ ಸಲ್ಡಾನ್ಹರು ಕೊಡಿಯಾಲ್‌ಬೈಲ್ ಈಸ್ಟ್ ವಾರ್ಡಿಗೂ ಚುನಾಯಿಸಲ್ಪಟ್ಟದ್ದು ಮಂಜೂರಾಗಿದೆ.

ದಕ್ಷಿಣ ಕನ್ನಡಾ ಜಿಲ್ಲಾ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ ಮ॥ ರಾ॥ ಎಮ್ ನಾರಾಯಣರಾಯರಿಗೆ ಉಪಯೋಗಿಸಿದ ತಾರೀಕಿನಿಂದ ಒಂದು ತಿಂಗಳ ಪ್ರಿವಿಲಜ ರಜೆ—ಜೋಯಿಂಟ್ ಸಬ್ ರಿಜಿಸ್ಟ್ರಾರರಾದ ಎನ್ ದೇವರಾಯರು ಇವರ ಚಾರ್ಜನ್ನು ನೋಡುತ್ತಿರುವರು.

ಫರ್ನಿಚರ್ ಗ್ರೆಂಟ್—೨೦೦ ರೂಪಾಯಿ ವರೆಗೆ ಫರ್ನಿಚರ್ ಗ್ರೆಂಟನ್ನು ಶಾಲೆಗಳಿಗೆ ಕೊಡುವ ಅಧಿಕಾರವು ಈಗ ಸರ್ಕಲ್ ಇನ್ಸ್‌ಪೆಕ್ಟರಗಳಿಗೆ ಬಂದಿದೆ

ಪ್ರಿಸರ್ವೆಟಿಂಗ್ ಟೆಸ್ಟ್—ಈ ಪರೀಕ್ಷೆಯನ್ನು ಈ ವರ್ಷದಿಂದ ತೆಗದುಹಾಕಿದೆ

ರಾವ್ ಬಹದ್ದೂರ ಸವೂರ ಮಂಗೇಶರಾವ್ ಬಿ ಎ ಇವರು ಕಳೆದ ಗುರುವಾರ ಕಾಲವಾದರೆಂದು ಕೇಳಲಿಕ್ಕೆ ದುಃಖಪಡುತ್ತೇವೆ. ಇವರು ಒಂದು ಕಾಲದಲ್ಲಿ ಮಂಗಳೂರು ಗವರ್ನಮೆಂಟ ಕೋಲೇಜಿನಲ್ಲಿ ಆಸಿಸ್ಟಾಂಟ ಮಾಸ್ತರರಾಗಿದ್ದು ಅಲ್ಲಿಂದ ಪ್ರೆಸಿಡೆನ್ಸಿ ಕೋಲೇಜಿನಲ್ಲಿ ಮೊದಲು 'ಫಿಲೊಸೊಫಿ'ಯ ಆಸಿಸ್ಟಾಂಟ ಪ್ರೊಫೆಸರರಾಗಿಯೂ ಅನಂತರ ಪ್ರೊಫೆಸರರಾಗಿಯೂ ಕೆಲಸನಡಿಸಿ ಕಡೆಗೆ ಪೆನ್‌ಶನ್ ಹೊಂದಿದ್ದರು.

ಒಬ್ಬ ಬಾತ್ಮೀದಾರರಿಂದ—ಇದೇ ತಿಂಗಳ ತಾರೀಕು ೨೭ನೇ ಬುಧವಾರ ೬॥ ಗಂಟೆಗೆ ಇಲ್ಲಿಯ ಬಲ್ಮಠದಲ್ಲಿ ಒಂದು ಕ್ರೈಸ್ತ ಪರಸ್ಪರ ಸಹಾಯಕ ಸಂಘವು ಸ್ಥಾಪಿಸಲ್ಪಟ್ಟಿತು ಇದರಿಂದ [illegible] ಕ್ರೈಸ್ತರ ಅಪೇಕ್ಷೆಯು ಕೂಡಿಬಂತು. ಪರಸ್ಪರ ಸಹಾಯಕ ಸಂಘಗಳ ಇನ್ಸ್‌ಪೆಕ್ಟರರಾದ ಮ॥ ರಾ॥ ರಾ॥ ಗಿರಿಯಪ್ಪನವರು ಈ ಕಾರ್ಯದಲ್ಲಿ ವಿಶೇಷ ಪ್ರಯತ್ನವನ್ನು ತೆಕ್ಕೊಂಡದಲ್ಲದೆ ಈ ದಿವಸದ ಸಭೆಯಲ್ಲಿ ಹಾಜರಿದ್ದು ಪರಸ್ಪರ ಸಹಾಯಕ ಸಂಘಗಳ ಪ್ರಯೋಜನವನ್ನು [illegible] ವಾಗಿ ವಿವರಿಸಿ ಸಂಘದ ಉತ್ತರೋತ್ತರಾಭಿವೃದ್ಧಿಯನ್ನು [illegible] ಈ ಸಂಘಕ್ಕೆ ಮಿ. ಸಿ. ಮಾಡೆಸರು ಪ್ರೆಸಿಡೆಂಟರು [illegible] ಸ್ಯಾಮುಸರು ಸಕ್ರೆಟರಿ, ಮೆಸ್ಸರ್ಸ್ ಇ. [illegible] ಎಸ್ ಗೋಬರ್ಸ್ ಎಸ್. [illegible] ರವರು [illegible] ರಾಗಿಯೂ ಆರಿಸಲ್ಪಟ್ಟರು [illegible] ಮಂಗಳೂರಿನಲ್ಲಿರುವ [illegible] ಕ್ರೈಸ್ತರಿಗೆ [illegible]

ನಿಜವಾಗಿ ಕನ್ನಡಕ್ಕೆ ಇದು ಲಾಂಛನಾಸ್ಪದವಲ್ಲವೆ? ಒಂದು ವರುಷದ ಹಿಂದೆ ಕನ್ನಡವು ಯಾವ ಕಡೆಯಲ್ಲಿತ್ತು ಈ ಹೊತ್ತಾದರೂ ಅದು ಅಲ್ಲಿ ಇದೆ ಇದರ ಕಾರಣವೇನು? ಕಳೆದ ರಜೆಯಿಂದ ಇಂದಿನವರೆಗೆ ಬೇರೆ ಎಷ್ಟು ಸಂಗತಿಗಳಲ್ಲಿ ಯಾಕೆ ಸಾಧಾರಣವಾಗಿ ಎಲ್ಲ ಸಂಗತಿಗಳಲ್ಲಿ ಎಷ್ಟು ಸ್ಥಿತ್ಯಂತರಗಳಾಗಿರಲಿಲ್ಲ? ಅಂದಿನಿಂದ ಇಂದಿನವರೆಗೆ ಎಷ್ಟು ಸೂರ್ಯೋದಯಗಳಾಗಿರಲಿಲ್ಲ? ಎಷ್ಟು ಸೂರ್ಯಾಸ್ತಗಳಾಗಿರಲಿಲ್ಲ? ಋತುಗಳಲ್ಲಿ ಎಷ್ಟು ಬದಲಾವಣೆಯಾಗಿರಲಿಲ್ಲ? ಜಗತ್ತಿನ ರಾಜಕಾರಣವೆ ಎಂದಲ್ಲ, ಹಿಂದುಸ್ಥಾನದ ರಾಜಕಾರಣವು ಎಷ್ಟು ಬದಲಾಯಿಸಿರಲಿಲ್ಲ? ಆದರೆ ಕನ್ನಡ ವಾಙ್ಮಯವು ಮಾತ್ರ ಒಂದಿಷ್ಟು ಮುಂದರಿಸಲಿಲ್ಲ, ಇದು ಯಾಕೆ? ಬೇರೆ ವಾಙ್ಮಯಗಳು ಈ ಒಂದು ವರುಷದಲ್ಲಿ ಹ್ಯಾಗೆ ಮುಂದೆ ಮುಂದಕ್ಕೆ ಹೆಜ್ಜೆಗಳನ್ನು ಇಡುತ್ತಿದ್ದಾವೋ ಹಾಗೆ ಕನ್ನಡವು ಯಾಕೆ ಇಡುವದಿಲ್ಲ? ಈ ಒಂದು ವರುಷದ ೩೬೫ ದಿವಸಗಳಲ್ಲಿ — ಈ ದೀರ್ಘ ಅವಧಿಯಲ್ಲಿ ಬೇರೆ ಬೇರೆಯವುಗಳು ಬದಲಾವಣೆಯನ್ನು ಹೊಂದಿರುತ್ತ ಕನ್ನಡವು ಮಾತ್ರ, ಕಲ್ಲಿದ್ದಲಿಯು ತೀರಿದ ರೈಲಗಾಡಿಯಂತೆ ಇದ್ದ ಕಡೆಯಲ್ಲಿ ಯಾಕೆ ನಿಂತಿದೆ? ಕನ್ನಡ ವಾಙ್ಮಯದ ಕಾಲಗಳನ್ನು ಕಡಿದುಬಿಡುವವರು ಯಾರು? ಇಲ್ಲವೆ ಕಡಿದು ಹಿಡಿಯುವವರ ಯಾರು?

ಆದರೆ ನಮ್ಮ ಈ ಬರವಣಿಗೆಯು ಅನೇಕರಿಗೆ ರುಚಿಸಲಿಕ್ಕಿಲ್ಲ ಅಲ್ಲದೆ ಬಣ್ಣಕೊಟ್ಟು ಕನ್ನಡದ ಕಾಲುಮುರುಕತನದ ಈ ಹಾಡನ್ನು ಹಾಡುವದಲ್ಲದೆ ಇದರಲ್ಲಿ ಸತ್ಯಾಂಶವು ಕಡಿಮೆ ಎಂದು ಅನೇಕರು ನೆನಿಸಬಹುದು ಕನ್ನಡವು ಈ ವರುಷದಲ್ಲಿ ಮುಂದರಿಸಲಿಲ್ಲವೆ? ಕನ್ನಡಕ್ಕೆ ಸಾಹಿತ್ಯ ಸಮ್ಮೇಳನವಿಲ್ಲವೆ? ಅದರ ಸಭಾ [illegible]

[illegible]

ಜೈಲ್ ಸಜಾ ಮೂಲಕ ಸಾಲ ವಸೂಲಿ.

[illegible]

ದನ್ನು ಕೋರ್ಟುಗಳಿಗೆ ಕೊಡಬೇಕೆಂತಲೂ ಮಾಡಿದ ಸೂಚನೆಯು ಸರಕಾರದ ವಿಚಾರದಲ್ಲಿರುವದಂತೆ.

ಇದರಲ್ಲಿ ಸರಕಾರದವರು ಹೆಚ್ಚಿನ ಆಲೋಚನೆ ಮಾಡುವುದು ಯಾಕೆ ಅಗತ್ಯವಿದೆ ಎಂಬುದು ಗೊತ್ತಾಗುವದಿಲ್ಲ. ದಿವಾಳಿ ಅರ್ಜಿಯನ್ನು ಕೊಡುವಾಗಲೇ ಪ್ರಮಾಣ ಪಡಿಸಿ ಅಫಿದಾವಿತು ಕೊಟ್ಟು ಅದರಲ್ಲಿ ಇನ್ನು ಬೇರೆ ಸೊತ್ತು ಸಾಲ ಇಲ್ಲವೆಂದು ದೃಢೀಕರಿಸಿದ ಮೇಲೆ ಅದರಲ್ಲಿ ಸುಳ್ಳು ಕಂಡುಬಂದರೆ ಕ್ರಿಮಿನಲ್ ವ್ಯವಹರಣೆ ನಡಿಸಲಿಕ್ಕೆ ಸಾಧ್ಯವಿದೆ ಆಗ ಉದ್ಘಾಟಕತನದಿಂದ ಯಾರಾದರೂ ಅಂಥ ಸುಳ್ಳನ್ನು ಹರಡಾರರು. ಎರಡನೆ ಸಂಗತಿಯಲ್ಲಿ ಡಿಕ್ರಿಯಲ್ಲಿದ್ದ ವಾಯಿದೆ ಅಗ್ರಹ್ಯವಾದರೆ ಬದಲಾಯಿಸುವುದು ಇತ್ತಟ್ಟಿನವರ ಪ್ರಯೋಜನಕ್ಕೆ. ಡಿಕ್ರಿಯ ಕಂತುಗಳನ್ನು ಕ್ರಮವಾಗಿ ತರಲಿಕ್ಕೆ ಅನಾನುಕೂಲವಾದ್ದರಲ್ಲಿ ದಾರಿದ್ರ್ಯವೇ ಮೂಲಕಾರಣವಾದ್ದೆಂದು ಕೋರ್ಟಿನವರು ಅಭಿಪ್ರಾಯ ಪಟ್ಟರೆ ಇನ್ನೂ ಸಣ್ಣ ಮೊಬಲಗನ್ನು ಹೆಚ್ಚು ಕಂತುಗಳಿಂದ ತೆರುವ ಹಾಗೆ ಮಾಡಿದರೆ ಕಾಲ ವಿಳಂಬವಾದರೂ ಸಾಲ ವಿಮೋಚನೆಯಾಗುವುದಕ್ಕೆ ಎಡೆ ಇದೆಯಲ್ಲವೇ?

ಈಗಿನ ಕ್ರಮದಲ್ಲಿ ಡಿಕ್ರಿಯಾದ ೩ ವರುಷಗಳೊಳಗೆ ಅದು ಅಮ್ಲಾರಿಯಾಗದಿದ್ದರೆ ಡಿಕ್ರಿಯು ರದ್ದಾಗುತ್ತದೆ. ಇದಕ್ಕಾಗಿ ಈ ಡಿಕ್ರಿಯನ್ನು ಊರ್ಜಿತಪಡುವುದಕ್ಕೆ ಮೂರು ವರುಷಗಳಲ್ಲಿ ಒಂದು ಸಲ ಅಮಲ್ದಾರಿ ಮಾಡಿ ನೋಟೀಸು ಕೊಟ್ಟು ಸ್ವಲ್ಪ ಹಣ ವಸೂಲಾಗುವಂತೆ ಏರ್ಪಾಡು ಡಿಕ್ರಿದಾರನು ಮಾಡಿ ೧೨ ವರುಷಗಳ ವರೆಗೆ ಡಿಕ್ರಿಯಲ್ಲಿ ಜೀವಕಳೆ ಇರುವಂತೆ ಉಪಾಯ ಮಾಡುತ್ತಾನೆ ಮಿ| ಕರ್ಗನವೆನ್ನರ ಸೂಚನೆ ಮೇರೆಗೆ ಈ ರೀತಿಯು ಹೊಸ ಜೀವ ಬಾರದೆ ಅದು ೩ ವರುಷಗಳ ಅಂತ್ಯದಲ್ಲಿಯೇ ಸತ್ತುಹೋಗಬೇಕು ಎಂದು ಇದೆ ಚಿಲ್ಲರೆ ಮೊಬಲಗುಗಳಿಗೆ ಇದಕ್ಕೂ [illegible]

[illegible]

ಅಂಡವಾನಕ್ಕೆ ಅಟ್ಟಬಿಡಲಾಗುವುದಿಲ್ಲ ಬೇರೆ ರೀತಿಯಲ್ಲಿ ಬಡ ಜನರಿಗೆ ಉದರ ನಿರ್ವಾಹ ಹೋಗಲು ಕಷ್ಟವಾದಾಗ ಇಂಥವರು ದ್ರವ್ಯದಾಹದಿಂದ ಪೀಡಿತರಾಗಿರುವಾಗ ವರುಷವಿಡೀಯಲ್ಲಿ ಒಸರುವ ಹನಿಯಾಗಿರುವ ಈ ಸಾಲ ಕೊಡುವ ಜನರನ್ನು ಕಾನೂನು ಮೂಲಕ ತೀರಾ ಬತ್ತಿಸಿಬಿಡುವುದೂ ಸರಿಯಾಗದು

ಪತ್ರವ್ಯವಹಾರ.

ಟಪ್ಪಾಲ ಮತ್ತು ತಂತಿ ಇಲಾಖೆ.

ಪತ್ರಕರ್ತರೇ,

ಮುವರ್ಗಲದಲ್ಲಿರುತ್ತಿದ್ದ ಟಪ್ಪಾಲ ಬ್ರಾಂಚು ಮುಚ್ಚಲ್ಪಟ್ಟದ್ದರಿಂದ ಒದಗುವ ಕಷ್ಟನಷ್ಟಗಳನ್ನು ಆಗಾಗ್ಗೆ ಈ ಇಲಾಖಾ ಆಫೀಸರರಿಗೆ ಅರಿಕೆಮಾಡಿಕೊಂಡರೂ ಅರಣ್ಯರೋದನವಾದ ದೆಸೆಯಾಗಿ ತುಂಬಾ ವಿಷಾದಪಡಬೇಕಾಗಿದೆ ಬಹಳ ಸಮಯ [illegible] ಇಲ್ಲಿಯವರ ದರ್ಕಾರಿಯನ್ನು ಸೂಚಿಸುತ್ತ ತೂಗಾಡುತ್ತಿದ್ದ ಒಂದು ಟಪ್ಪಾಲು ಪೆಟ್ಟಿಗೆಯೂ ಸಹ ಇದ್ದಕ್ಕಿದ್ದ ಹಾಗೆ ಕಾಣೆಯಾಗಿಹೋಗಿದೆ ಟಪ್ಪಾಲಿಗೆ ಹಾಕುವ ಪತ್ರಗಳನ್ನೆಂತೂ ಹಿಡಕೊಂಡು ವಡಬಿದ್ರೆ ಪೇಟೆಗೆ ಸಂಚಾರ್ಣ ಹೋಗಬೇಕಾಗುವದು. ಅತಿ ಅಗತ್ಯದ ಪತ್ರವ್ಯವಹಾರಕ್ಕೆ ಬೇಕಾಗುವ ಚೀಟು ಸಹ ಇಲ್ಲಿ ದೊರೆಯುವದು ದುರ್ಲಭ ತುರಕ್ಕಾರ್ಯಕ್ಕೆ ಬೇಕಾಗುವ [illegible] ಒಂದು ಕಾರ್ಡನ್ನು ಪಡೆಕೊಂಡು ಬರುವದಾದರೆ ಹೆಚ್ಚಿಗೆ [illegible] ಗಾಡಿಗೆ ತಗಲುವದು ಅವರ ಬದಲಿಗೆ ಕಾಪಿನಿಂದ ಹೊಂದುಹ ದೆಂದರೆ ಕ್ರಿಸೀ ರೂಪಾಯಿಯ ಅಧಿಕ ಮೌಲ್ಯವು ಜೇಬಿನಲ್ಲಿ ಬೇಕೇ ಬೇಕಾಗುವದು ಇದಲ್ಲದೆ ತಪ್ಪರಟ್ಟಿಗಿನ ಅನರ್ಥವಂತು ಸ್ಪಷ್ಟವಾಗಿ ಕಾಣುವದು ಟಪ್ಪಾಲು ಆಫೀಸುಗಳನ್ನು ಹುಡುಕಿಕೊಂಡುಹೋದ ಕಡೆಗಳಲ್ಲಿ ಆ ಟಪ್ಪಾಲಾಫೀಸಿನ ಬಾಗಿಲಲ್ಲಿ ನಿಂತು ಮಾಸ್ತರರನ್ನು ಕರೆದರೆ ಸಾಧಾರಣ ಕಾಲ ಘಂಟೆ ನಂತರ — "ಅವರು ಸವಾರಿಯು ಹೊರಗೆತ್ತಕಡೆಯೋ ಹೋಗಿಯದೆ" ಎಂಬ ಉತ್ತರವು ಸಿಗುವದು ಇನ್ನೊಂದು ಕಡೆಗೆ ಹೋದರೆ "ನೀವು ಆ ಟಪ್ಪಾಲಾಫೀಸನ್ನು ಬಿಟ್ಟು ಇಲ್ಲಿಗೇಕೆ ಬಂದಿರಿ" ಎಂಬ ಬಿರುನುಡಿ ಕೇಳಬರುವದು ಆಹಾ! ನಮ್ಮ ಕಷ್ಟವೇ!! ಇದರಿಂದ [illegible] ಬಹಳ ಕಳಕಳಿ ಪಡಬೇಕಾಗುವದು

ಟಪ್ಪಾಲು ಕಾಗದ ಇತ್ಯಾದಿಗಳ ಗತಿಯು ನಮ್ಮ ಕಡೆಗೆ ಹೀಗಾಯಿತು ತಂತಿ ಸಮಾಚಾರದ ಸಂಗತಿ ಇನ್ನೇನೆಂದು ಹೇಳಲಿ! ಇದೂ ಕೂಡ ಹಳ್ಳಿಯವರದ್ದಲ್ಲ — ಪಟ್ಟಣಿಗರ ಹಿತಾಪೇಕ್ಷೆಯಾಗಿ ಗಣ್ಯಸಂತತಿಯಾಗಿರುವುದು ತಮ್ಮ ವರ್ತಮಾನವು ಶೀಘ್ರವಾಗಿ ಕಳುಹಿಸಲ್ಪಡುವ ತಂತಿ ಸಮಾಚಾರವೂ ಕೂಡ ನಮಗೆ ಐದಾರು ದಿನಸಗಳ ನಂತರ ಟಪ್ಪಾಲುದ್ವಾರದಿಂದಲೇ ಸಿಗುವದು ಎಂಥಾ ನಷ್ಟ! ಇಂತಹ ತಂತಿಗೆ ವೆಚ್ಚಮಾಡುವ ಹಣದ ಲೆಖ್ಖವನ್ನು ದುರ್ವಿನಿಯೋಗದ ಖಾತೆಯಲ್ಲಿ ಜಮಾ ಬರೆದರೆ ತಪ್ಪಾಗಬಹುದೇ? ಇದರ ಬದಲಿಗೆ ಮಾಸಕ್ಕೆರಡಾವರ್ತಿ ಟಪ್ಪಾಲ ಪೇದೆದೇವರ ಮೂಲಕ ದರುಶನವನ್ನೀವ ಚೀಗೆ ಒಂದು ಅಧೀನತೆಯನ್ನು ವೆಚ್ಚಮಾಡ ಮ ಶ್ರಮವನ್ನು ಹಳ್ಳಿಯವರು [illegible] ವನು ಒಲ್ಲೆವಲ್ಲ ಇರಲಿ, ಮಂಗಳೂರು ತಾಲೂಕು ಮುಲ್ಕಿಯಿಂದ ಉಡುಪಿ ತಾಲೂಕು ಪಟ್ಟಣವರೆಗಿನ ಆರು ಹರದಾರಿ ವಿಸ್ತೀರ್ಣದ ಮಧ್ಯೆ ತಂತಿ ಆಫೀಸೇ ಇಲ್ಲದಿರುವದು ಎಂತಹ ಕಷ್ಟ! ಈ ಮಧ್ಯೆ ಇರುವ ಊರುಗಳೆಲ್ಲಾ ಬರೇ ಹಳ್ಳಿಯಾಗಿರದೆ ಸಣ್ಣ ದೊಡ್ಡ ಪಟ್ಟಣಗಳೂ ಆಗಿರುತ್ತವೆ. ಈ ಪೈಕಿ ಮುಲ್ಕಿಗೂ ಉಡುಪಿಗೂ ಮಧ್ಯಸ್ಥಳವಾದ ಕಾಪು ಪಟ್ಟಣವು ಸರ್ವ ವಿಷಯದಲ್ಲೂ ಯೋಗ್ಯವಾದ ಸ್ಥಳವಾಗಿರುವುದರಿಂದ ತಂತಿ ಮೇಲಾಧಿಕಾರಿಗಳು ದಯಮಾಡಿ ಇಂದು ತಂತಿ ಬ್ರಾಂಚಾಫೀಸನ್ನು ಕಾಪಿನಲ್ಲಿ ತೆರೆದರೆ [illegible] ಬಡನಿವಾಸಿಗರಿಗೆ ತಕ್ಕ ನಿವೃತ್ತಿಯನ್ನು ಕೊಡುತ್ತಿದ್ದರೆ ಉಪಕಾರವಾಗುತ್ತಿತ್ತು.

ಬಡಹಳ್ಳಿ ನಿವಾಸಿ

ದಕ್ಷಿಣ ಕನ್ನಡ.

ಕುಂಬಳೆ:— ಇದೇ ತಾ॥ [illegible] ದಿನದಲ್ಲಿ ಮಲಬಾರ ಜಿಲ್ಲೆಯಿಂದ [illegible]

[illegible]

ಫಿನೆನ್ಸಿಯಲ್ ಇಲಾಖೆ.

ಪ್ರಕಟಣೆ.

ಉಟಾಕಮಂಡ್, ತಾರೀಖು 11ನೇ ಮೇ 1918ನೇ ಇಸವಿ

ನಂ 18 —ಇಂಡಿಯಾ ಗವರ್ನ್‌ಮೆಂಟಿನವರ ಈ ಕೆಳಗಿನ ಇಸ್ತಿಹಾರುಗಳು ಪುನಃ ಪ್ರಕಟಿಸಲ್ಪಟ್ಟಿವೆ —

ಫಿನೆನ್ಸು ಇಲಾಖೆ

ನಂ 1250-F

ಸಿಮ್ಲಾ, ತಾರೀಖು 11ನೇ ಮೇ 1918ನೇ ಇಸವಿ

ಯುದ್ಧದಬಗ್ಗೆ ಇಂಡಿಯದಿಂದ ಎತ್ತಲ್ಪಡುವ ಎರಡನೆಯ ಸಾಲವು

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವಬಗ್ಗಾಗಿ ಇಂಡಿಯಾ ದೇಶವು ಕೊಡುವ ಸಹಾಯಾರ್ಥವಾದ 100 ಮಿಲಿಯನ್ ಪವನುಗಳ ಭಾಗವಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವುವು

ಈ ಕೆಳಗಿನ ಸಾಲಪತ್ರಗಳು ಸಾದರುಮಾಡೋಣಾಗುವವು

1921ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ, ವಾರ್ ಬಾಂಡುಗಳೆಂಬ ಸಾಲಪತ್ರಗಳು

ಸೇಕಡಾ 100ರ ಪ್ರಕಾರ 1921ನೇ ಇಸವಿ ಸಪ್ಟಂಬರು 15ನೇ ತಾರೀಖಿನಲ್ಲಿ ಮರು ಪಾವತಿಯಾಗತಕ್ಕವು

1923ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್ ಬಾಂಡುಗಳು

ಸೇಕಡಾ 100ರ ಪ್ರಕಾರ 1923ನೇ ಇಸವಿ ಸಪ್ಟಂಬರು 15ನೇ ತಾರೀಖಿನಲ್ಲಿ ಮರುಪಾವತಿಯಾಗತಕ್ಕವು

1925ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್‌ಬಾಂಡುಗಳು

ಸೇಕಡಾ 103ರ ಪ್ರಕಾರ 1925ನೇ ಇಸವಿ ಸಪ್ಟಂಬರು 15ನೇ ತಾರೀಖಿನಲ್ಲಿ ಮರುಪಾವತಿಯಾಗತಕ್ಕವು

1928ನೇ ಇಸವಿಯ, ಸೇಕಡಾ 5½ರ ದರದ ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್‌ಬಾಂಡುಗಳು

ಸೇಕಡಾ 105ರ ಪ್ರಕಾರ 1928ನೇ ಇಸವಿ ಸಪ್ಟಂಬರು 15ನೇ ತಾರೀಖಿನಲ್ಲಿ ಮರು ಪಾವತಿಯಾಗತಕ್ಕವು

ಮತ್ತು

ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು

ಇನ್ಕಮ್ ಟಾಕ್ಸ್ ಮಾಫಿ

ಅಸಲ್ ವ ಬಡ್ಡಿಯ ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಕಂದಾಯಗಳ ಜವಾಬ್ದಾರಿ ಇರುವುದು

1921, 1923, 1925 ವ 1928ನೇ ಇಸವಿಯಲ್ಲಿ ಸಂದಾಯವಾಗತಕ್ಕ ವಾರ್ ಬಾಂಡುಗಳು

ಸಾದರು ಮಾಡುವ ಬೆಲೆ ದರಖಾಸ್ತು ಮಾಡಿದ ಪ್ರತಿ 100 ರೂಪಾಯಿಗಳ ಬಗೆ ರೂ 100

ಬಡ್ಡಿ —ವರ್ಷ ಒಂದರ ಸೇಕಡಾ 5½ಯ ಮೇರೆಗೆ ಮಾರ್ಚಿ 15ನೇ ತಾರೀಖಿನಲ್ಲಿ ಮತ್ತು ಸಪ್ಟಂಬರು 15ನೇ ತಾರೀಖಿನಲ್ಲಿ ಪಾವತಿಯಾಗುವುದು

ಬಾಂಡುಗಳನ್ನು ಕೊಂಡುಕೊಳ್ಳುವ ಕಾಲದಲ್ಲಿ ಕೊಂಡ ಕೊಂಡ ತಾರೀಖಿನಿಂದ 1918ನೇ ಇಸವಿಯ ಸಪ್ಟಂಬರು 14ನೇ ತಾರೀಖಿನ ವರೆಗಿನ ಬಡ್ಡಿಯು ಮುಂಗಡವಾಗಿ ಪಾವತಿಮಾಡಲ್ಪಡುವುದು

1918ನೇ ಇಸವಿಯ ಸಪ್ಟಂಬರು 14ನೇ ತಾರೀಖಿನ ನಂತರ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳೋಣಾದ ಬಾಂಡುಗಳ ಸಂಗತಿಯಲ್ಲಿ ಕೊಂಡ ಕೊಂಡ ತಾರೀಖಿನಿಂದ 1919ನೇ ಇಸವಿಯ ಮಾರ್ಚಿ 14ನೇ ತಾರೀಖಿನ ವರೆಗಿನ ಬಡ್ಡಿಯು ಮುಂಗಡವಾಗಿ ಕೊಡಲ್ಪಡುವುದು

ವಿಶೇಷ ಹಕ್ಕುಗಳು —1921, 1923, 1925 ವ 1928ನೇ ಇಸವಿಯ ವಾರ್ ಬಾಂಡುಗಳು, ಅವು ಚಲಾವಣೆಯಲ್ಲಿರುವ ಕಾಲದಲ್ಲಿ, ಇನ್ನು ಮುಂದೆ ಇಂಡಿಯಾ ಗವರ್ನ್‌ಮೆಂಟಿನವರು ಸಾದರ ಮಾಡುವ ಯಾವದಾದರೂ ದೀರ್ಘಕಾಲದ ಸಾಲಕ್ಕೆ ಚಂದಾ ಹಾಕುವ ಉದ್ದೇಶದ ಬಗ್ಗೆ, ಅಂಥ ಸಾಲಕ್ಕೆ ಯಾವ ದರದಲ್ಲಿ ಬಡ್ಡಿ ಕೊಡುವುದಾದರೂ ಸರಿಯೇ, ರೊಕ್ಕಕ್ಕೆ ಸಮಾನವಾಗಿ ನೂರಕ್ಕೆ ನೂರರಂತೆ ಸ್ವೀಕರಿಸಲ್ಪಡುವುವು

1921, 1923, 1925 ವ 1928ನೇ ಇಸವಿಯ ವಾರ್ ಬಾಂಡುಗಳ ಮೇಲಿನ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಡುವುದು ಆದರೆ ಇತರ ಆದಾಯದ ಮೇಲೆ ಹೊರಿಸಲ್ಪಡುವ ತೆರಿಗೆಯ ದರವನ್ನು ನಿರ್ಣಯಿಸುವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲ್ಪಡುವದು, ಮತ್ತು ಸೂಪರ್ ಟಾಕ್ಸಿಗೆ ಗುರಿಪಡುವುದು

ಸೆಕ್ಯೂರಿಟಿ ಪತ್ರಗಳ ನಮೂನೆ —ವಾರ್ ಬಾಂಡುಗಳು (a) ಇನ್ಸ್‌ಕ್ರಾಯಿಬ್ಡ್ (ಹೆಸರು ರಿಜಿಸ್ಟ್ರಿಮಾಡಿರುವ) ಸ್ಟಾಕ್ ಸರ್ಟಿಫಿಕೇಟುಗಳು, ಅಥವಾ (b) ಪ್ರಾಮಿಸರಿ ನೋಟುಗಳ ನಮೂನೆಯಲ್ಲಿ ಕೊಡಲ್ಪಡುವವು ಇವುಗಳು ತದನಂತರ, ಅಪೇಕ್ಷಿಸುವುದಾದರೆ, ಬ್ಯಾರರ್ ಬಾಂಡುಗಳಬಗ್ಗೆ ಅವು ಸಿಕ್ಕುವಲ್ಲಿ, ಖರ್ಚು ಇಲ್ಲದೇನೇ, ಬದಲಾಯಿಸಲ್ಪಡುವುವು

ಯಾವ ನಮೂನೆಯಲ್ಲಿ ಸಿಕ್ಕಿದರೆ ಉತ್ತಮವೆಂದು ಕೊಂಡುಕೊಳ್ಳುವವನು ಸೂಚಿಸದಿದ್ದ ಪಕ್ಷದಲ್ಲಿ, ವಾರ್‌ಬಾಂಡುಗಳು ಇನ್ಸ್‌ಕ್ರಾಯಿಬ್ಡ್ ಸ್ಟಾಕ್ ಸರ್ಟಿಫಿಕೇಟಿನ ರೂಪವಾಗಿ ಸಾದರುಮಾಡಲ್ಪಡುವವು

ಪ್ರಾಮಿಸರಿ ನೋಟುಗಳು, ಕಾಲವಿಳಂಬವನ್ನು ತಪ್ಪಿಸುವುದಕ್ಕಾಗಿ, ಪ್ರಥಮತಃ ಸಾಧ್ಯವಿರುವಮಟ್ಟಿಗೆ ಅದಷ್ಟು ಕಡಿಮೆ ಬೇರೆ ಬೇರೆ ಪತ್ರಗಳಾಗಿ ಕೊಡಲ್ಪಡುವುವು, ಆದರೆ, ಕ್ರಮೇಣ ಏನೂ ಖರ್ಚು ಹೊರಿಸಲ್ಪಡದೆನೇ, ಯಾವ ತರಗತಿಯವುಗಳು ಬೇಕೆಂದು ಅಪೇಕ್ಷಿಸಲ್ಪಡುತ್ತದೋ ಆ ತರಗತಿಯವುಗಳ ಬಗ್ಗೆ ಬದಲಾಯಿಸಲ್ಪಡಬಹುದು ದರಖಾಸ್ತು ಮಾಡಿದ ಮೊಬಲಗಿನ ಬಗ್ಗೆ ಒಂದೇ ಸ್ಟಾಕ್ ಸರ್ಟಿಫಿಕೇಟು ಕೊಡಲ್ಪಡುವುದು

1 100 ರೂಪಾಯಿಗಳ—ಯಾ—ಅದರ ಅಪವರ್ತ್ಯಗಳ (ಎಂದರೆ, ರೂ. 100, 200, 300 ಈ ಮೇರೆಗಿನ ತರಗತಿಗಳಲ್ಲಿ ಪ್ರಾಮಿಸರಿ ನೋಟುಗಳ ರೂಪವಾಗಿ ವಾರ್ ಬಾಂಡುಗಳನ್ನು 1918ನೇ ಇಸವಿಯ ಜೂನ್ 3ನೇ ತಾರೀಖಿನಿಂದ 1918ನೇ ಇಸವಿಯ ಸಪ್ಟಂಬರು 14ನೇ ತಾರೀಖಿನ ವರೆಗೆ, ಸಲಬೇಕಾದ ಮೊಬಲಗನ್ನು ಪಾವತಿಮಾಡಿದ್ದಲ್ಲಿ,

ಬ್ಯಾಂಕುಗಳಲ್ಲಿ ಮತ್ತು ಗವರ್ನ್‌ಮೆಂಟ್ ಆಫಿಸುಗಳಲ್ಲಿ ಪ್ರಾಮಿಸರಿ ನೋಟುಗಳ ರೂಪವಾಗಿ ಬಾಂಡುಗಳನ್ನು ಕೊಂಡುಕೊಳ್ಳೋಣ

(a) ಕ್ರಮವಾಗಿ ಅರ್ಜಿಕೊಡದೇನೇ, ಬಂಗಾಳ, ಬೊಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಹೆಡ್ ಆಫಿಸುಗಳಲ್ಲಿ, ಅಥವಾ ಅವುಗಳ ಯಾವದಾದರೂ ಇಂಡಿಯದಲ್ಲಿರುವ ಶಾಖೆಯಲ್ಲಿ, ಮತ್ತು

(b) ಅರ್ಜಿಯನ್ನು ಮಾಡಲಾಗಿ, ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಆಫಿಸಿನಲ್ಲಿ, ಅಥವಾ ಯಾವನಾದರೂ ಅಕೌಂಟಾಂಟ್ ಜನರಲ್‌ರ—ಯಾ—ಕಂಟ್ರೋಲರರ ಆಫಿಸಿನಲ್ಲಿ, ಅಥವಾ ಯಾವದಾದರೂ ಗವರ್ನ್‌ಮೆಂಟ್ ಟ್ರೆಜರಿ—ಯಾ—ಸಬ್ ಟ್ರೆಜರಿಯಲ್ಲಿ

ಕೊಂಡುಕೊಳ್ಳಬಹುದು

ಅರ್ಜಿಗಳು ಇದಕ್ಕೆ ಲಗತ್ತುಮಾಡಲ್ಪಟ್ಟಿರುವ ನಮೂನೆಯಲ್ಲಿ (A ಫಾರ್ಮಿನಲ್ಲಿ) ಮಾಡಲ್ಪಡಬಹುದು, ಅಥವಾ ದರಖಾಸ್ತು ಮಾಡಿರುವ ಬಾಂಡುಗಳ ಮೊಬಲಗನ್ನು ಮತ್ತು ವಿವರವನ್ನು, ಕೊಂಡುಕೊಳ್ಳುವವನ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು ಮತ್ತು ಬಡ್ಡಿಯು ಯಾವ ಖಜಾನೆಯಲ್ಲಿ ಪಾವತಿಯಾಗಬೇಕೋ ಆ ಖಜಾನೆಯನ್ನು ಸ್ಪಷ್ಟವಾಗಿ ನಮೂದಿಸಿ ಇತರ ಯಾವದಾದರೂ ನಮೂನೆಯಲ್ಲಿ ಮಾಡಲ್ಪಡಬಹುದು.

2 ಇನ್ಸ್‌ಕ್ರಾಯಿಬ್ಡ್ ಸ್ಟಾಕ್ ರೂಪವಾದ ವಾರ್ ಬಾಂಡುಗಳನ್ನು 100 ರೂಪಾಯಿಗಳ ಯಾ—ಅದರ ಅಪವರ್ತ್ಯಗಳ ತರಗತಿಗಳಲ್ಲಿ, 1918ನೇ ಇಸವಿಯ ಜೂನ್ 3ನೇ ತಾರೀಖಿನಿಂದ 1918ನೇ ಇಸವಿಯ ಸಪ್ಟಂಬರು 14ನೇ ತಾರೀಖಿನ ವರೆಗೆ, ಸಲಬೇಕಾದ ಮೊಬಲಗನ್ನು ಪಾವತಿಮಾಡಿ ಅರ್ಜಿ ಮಾಡಲಾಗಿ, ಪಬ್ಲಿಕ್ ಡೆಟ್ ಆಫೀಸ್, ಕಲ್ಕತ್ತಾ ಅವರಿಂದ ನೇರಾಗಿ ಅಥವಾ ಈ ಕೆಳಗಿನ ಯಾವದಾದರೂ ಆಫೀಸುಗಳಿಂದ ಪಡೆಯಬಹುದು —

ಗವರ್ನ್‌ಮೆಂಟ್ ಆಫೀಸುಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ಇನ್ಸ್‌ಕ್ರಾಯಿಬ್ಡ್ ಸ್ಟಾಕ್ ರೂಪವಾಗಿ ಬಾಂಡುಗಳನ್ನು ಕೊಂಡುಕೊಳ್ಳೋಣ

(a) ಕರೆನ್ಸಿಯ ಕಂಟ್ರೋಲರರ ಆಫಿಸು, ಕಲ್ಕತ್ತಾ, ಅಥವಾ ಯಾವನಾದರೂ ಅಕೌಂಟಾಂಟ್ ಜನರಲ್—ಯಾ—ಕಂಟ್ರೋಲರ್

(b) ಬಂಗಾಳ ಬೊಂಬಾಯಿ—ಯಾ—ಮದ್ರಾಸ್ ಬ್ಯಾಂಕುಗಳ ಹೆಡ್ ಆಫಿಸುಗಳಲ್ಲಿ ಯಾ—ಇಂಡ್ಯದಲ್ಲಿರುವ ಸದರೀ ಬ್ಯಾಂಕುಗಳ ಯಾವದಾದರೂ ಬ್ರಾಂಚು ಯಾನೆ ಶಾಖೆ,

(c) ಯಾವದಾದರೂ ಗವರ್ನ್‌ಮೆಂಟ್ ಟ್ರೆಜರಿ—ಯಾ—ಸಬ್ ಟ್ರೆಜರಿ

ಅರ್ಜಿಗಳು ಇದಕ್ಕೆ ಲಗತ್‌ಮಾಡಿರುವ ನಮೂನೆಯಲ್ಲಿ (A ಫಾರ್ಮಿನಲ್ಲಿ)—ಯಾ—ದರಖಾಸ್ತು ಮಾಡಿರುವ ಬಾಂಡುಗಳ ಮೊಬಲಗು ಮತ್ತು ವಿವರವನ್ನು, ಅರ್ಜಿದಾರನ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು ಮತ್ತು ಬಡ್ಡಿಯು ಯಾವ ಖಜಾನೆಯಲ್ಲಿ ಪಾವತಿಯಾಗಬೇಕೆಂದು ಆತನು ಅಪೇಕ್ಷಿಸುತ್ತಾನೋ ಆ ಖಜಾನೆಯನ್ನು ಸ್ಪಷ್ಟವಾಗಿ ನಮೂದಿಸಿ ಇತರ ಯಾವದಾದರೂ ನಮೂನೆಯಲ್ಲಿ ಮಾಡಲ್ಪಡಬಹುದು

3 ಇನ್ಸ್‌ಕ್ರಾಯಿಬ್ಡ್ ಸ್ಟಾಕ್—ಯಾ—ಪ್ರಾಮಿಸರಿ ನೋಟುಗಳ ರೂಪವಾಗಿ ವಾರ್ ಬಾಂಡುಗಳನ್ನು 25 ರೂಪಾಯಿಗಳ—ಯಾ—ಅದರ ಅಪವರ್ತ್ಯಗಳ ತರಗತಿಗಳಲ್ಲಿ ಅತ್ಯಧಿಕ 10,000 ರೂಪಾಯಿಗಳ ಮಿತಕ್ಕೆ ಒಳಪಟ್ಟು, 1918ನೇ ಇಸವಿಯ ಜೂನ್ 3ನೇ ತಾರೀಖಿನಿಂದ 1918ನೇ ಇಸವಿಯ ಡಿಸೆಂಬರು 21ನೇ ತಾರೀಖಿನ ವರೆಗೆ, ಸೇವಿಂಗ್ಸ್ ಬ್ಯಾಂಕ್ ಕೆಲಸ ನಡೆಯಿಸುವ ಯಾವದಾದರೂ ಪೋಸ್ಟ್ ಆಫಿಸಿನಲ್ಲಿ ಸಲಬೇಕಾದ ಮೊಬಲಗನ್ನು ಪಾವತಿಮಾಡಿ ಅರ್ಜಿಮಾಡಲಾಗಿ ಕೊಂಡುಕೊಳ್ಳಬಹುದು ಅರ್ಜಿಗಳು ಇದಕ್ಕೆ ಲಗತ್‌ಮಾಡಿರುವ ನಮೂನೆಯಲ್ಲಿ (B ಫಾರ್ಮಿನಲ್ಲಿ) ಅಥವಾ ದರಖಾಸ್ತು ಮಾಡಿರುವ ಬಾಂಡುಗಳ ಮೊಬಲಗು ವ ವಿವರವನ್ನು ಅರ್ಜಿದಾರನ ಸಂಪೂರ್ಣ ಹೆಸರ ವ ವಿಳಾಸವನ್ನು ಮತ್ತು ಬಡ್ಡಿಯು ಯಾವ ಖಜಾನೆಯಲ್ಲಿ ಪಾವತಿಯಾಗಬೇಕೆಂದು ಆತನು ಅಪೇಕ್ಷಿಸುತ್ತಾನೋ ಆ ಖಜಾನೆಯಲ್ಲಿ ಸ್ಪಷ್ಟವಾಗಿ ನಮೂದಿಸಿ ಇತರ ಯಾವದಾದರೂ ನಮೂನೆಯಲ್ಲಿ ಮಾಡಲ್ಪಡಬಹುದು.

ಪೋಸ್ಟ್ ಆಫಿಸುಗಳಲ್ಲಿ ಬಾಂಡುಗಳನ್ನು ಕೊಂಡುಕೊಳ್ಳೋಣ

ಪೋಸ್ಟ್ ಆಫಿಸಿನ ಮುಖಾಂತರ ಕೊಂಡುಕೊಳ್ಳೋಣಾದ ಬಾಂಡುಗಳನ್ನು, ಹಾಗೆ ಇಷ್ಟಪಡುವದಾದರೆ, ಪೋಸ್ಟ್ ಮತ್ತು ಟೆಲಿಗ್ರಾಫ್‌ಗಳ ಅಕೌಂಟಾಂಟ್ ಜನರಲ್‌ರ ತಾಬೆಯಲ್ಲಿ ಇರಗೊಡಿಸಬಹುದು.

4 ಪಾವತಿಯನ್ನು ರೊಕ್ಕದ ರೂಪವಾಗಿಯಾಗಲಿ ಚೆಕ್ಕಿನ ಮೂಲವಾಗಿಯಾಗಲಿ ಮಾಡಬಹುದು, ಬಾಂಡುಗಳನ್ನು ಕೊಂಡ ಕೊಳ್ಳುವ ಸಂಗತಿಯಲ್ಲಿ, ಚೆಕ್ಕುಗಳನ್ನು ಕೊಂಡುಕೊಳ್ಳೋಣವು ಒಂದು ಪ್ರೆಸಿಡೆನ್ಸಿ ಬ್ಯಾಂಕಿನ ಹೆಡ್ ಆಫಿಸಿನಲ್ಲಾದರೆ ಅದರ ಸೆಕ್ರೆಟರಿ ವ ಟ್ರೆಜರರ್ ಇವರ ಹೆಸರಲ್ಲಿ, ಸದರೀ ಪ್ರೆಸಿಡೆನ್ಸಿ ಬ್ಯಾಂಕುಗಳ ಶಾಖೆಯಲ್ಲಾದರೆ ಅದರ ಏಜಂಟನ ಹೆಸರಲ್ಲಿ ಬರೆಯಲ್ಪಟ್ಟು ಒಂದು ಗವರ್ನ್‌ಮೆಂಟ್ ಆಫಿಸಿನಲ್ಲಿ ಯಾ ಒಂದು ಪೋಸ್ಟ್ ಆಫಿಸಿನಲ್ಲಿ ಕೊಂಡ ಕೊಳ್ಳುವ ಸಂಗತಿಗಳಲ್ಲಿ ಚೆಕ್ಕು ಅರ್ಜಿಯು ಯಾರ ಮುಂದೆ ಹಾಜರು ಪಡಿಸೋಣಾಗುತ್ತದೋ ಆ ಆಫಿಸರನ ಹೆಸರಲ್ಲಿ ಬರೆಯಲ್ಪಡತಕ್ಕದು

ಪಾವತಿ

ಪೋಸ್ಟ್ ಆಫಿಸುಗಳು ಪಾವತಿಮಾಡೋಣವು ಪೋಸ್ಟ್ ಆಫಿಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಅರ್ಜಿದಾರನ ಹೆಸರಲ್ಲಿ ಜಮೆಯಿರುವ ಮೊಬಲಗುಗಳನ್ನು ಹಿಂದಕ್ಕೆ ಪಡೆಯುವದರ ಮೂಲವಾಗಿ ಸಹಾ ಮಾಡಲ್ಪಡಬಹುದು

ಪ್ರೆಸಿಡೆನ್ಸಿ ಬ್ಯಾಂಕುಗಳ ಹೆಡ್ ಆಫಿಸುಗಳಲ್ಲಿ ಪಾವತಿಮಾಡೋಣವು ಇಂಡಿಯದ ಟ್ರೆಜರಿ ಬಿಲ್ಲುಗಳ ರೂಪವಾಗಿ ಸಹಾ ಮಾಡಲ್ಪಡಬಹುದು, ಸದರೀ ಬಿಲ್ಲುಗಳು, ಬಿಲ್ಲಿನ ವಾಯಿದೆಯ ಪೈಕಿ ಕಳೆದು ಹೋಗದೆ ಇರುವ ಭಾಗದ ಮೇಲೆ ವರ್ಷಕ್ಕೆ ಸೇಕಡಾ 4ರ ದರದಲ್ಲಿ ಎಣಿಸಲ್ಪಡುವ ಡಿಸ್ಕೌಂಟನ್ನು ವಜಾ ಮಾಡಿ ಅವುಗಳ ಅಂಕಿತ ಮೌಲ್ಯಕ್ಕೆ ಸರಿಯಾಗಿ ನಗದು ಪಾವತಿಯಾಗಿ ಸ್ವೀಕರಿಸಲ್ಪಡುವವು.

5 ಪ್ರೆಸಿಡೆನ್ಸಿ ಬ್ಯಾಂಕುಗಳು ಅಂಗೀಕರಿಸಲ್ಪಟ್ಟ ಬ್ಯಾಂಕರುಗಳಿಗೂ, ದಲಾಲಿಗಳಿಗೂ, ವಾರ್ ಬಾಂಡುಗಳನ್ನು ಕೊಂಡುಕೊಳ್ಳುವುದಕ್ಕಾಗಿ ರೊಕ್ಕವಾಗಿಯಾಗಲೀ ಚೆಕ್ಕು ಮೂಲವಾಗಿಯಾಗಲಿ ಅವರ ಮುಖಾಂತರ ಮಾಡಿದ ಪಾವತಿಯ ಮೇಲೆ ಸೇಕಡಾ ⅛ರ ಪ್ರಕಾರ ದಲಾಲಿಯನ್ನು ಕೊಡುವವು

ದಲಾಲಿ

ಅಂಗೀಕರಿಸಲ್ಪಟ್ಟ ಬ್ಯಾಂಕರುಗಳಿಗೂ ದಲಾಲಿಗಳಿಗೂ, ಅವರ ಮೊಹರು ಇದ್ದು, ಕಂಟ್ರೋಲರ್ ಆಫ್ ಕರೆನ್ಸಿ, ಇವರ ಮುಂದೆ ಯಾ ಯಾವನಾದರೂ ಅಕೌಂಟೆಂಟ್ ಜನರಲ್ ಅಥವಾ ಕಂಟ್ರೋಲರರ ಮುಂದೆ ಯಾ ಯಾವದಾದರೂ ಗವರ್ನ್‌ಮೆಂಟ್ ಟ್ರೆಜರಿ ಯಾ ಸಬ್ ಟ್ರೆಜರಿಯಲ್ಲಿ ಹಾಜರುಪಡಿಸೋಣಾದ ವಾರ್ ಬಾಂಡುಗಳ ಬಗ್ಗಿನ ಅರ್ಜಿಗಳ ಸಂಗತಿಯಲ್ಲಿ ಸೇಕಡಾ ⅛ರ ಪ್ರಕಾರ ದಲಾಲಿಯು ಕೊಡಲ್ಪಡುವುದು.

ಪ್ರೆಸಿಡೆನ್ಸಿ ಬ್ಯಾಂಕುಗಳು ಅಂಗೀಕರಿಸಲ್ಪಟ್ಟ ಬ್ಯಾಂಕರುಗಳಿಗೂ, ದಲಾಲಿಗಳಿಗೂ, ವಾರ್ ಬಾಂಡುಗಳನ್ನು ಕೊಂಡುಕೊಳ್ಳುವದಕ್ಕಾಗಿ ಇಂಡಿಯದ ಟ್ರೆಜರಿ ಬಿಲ್ಲುಗಳ ರೂಪವಾಗಿ ಅವರ ಮುಖಾಂತರ ಮಾಡೋಣಾದ ಯಾವದಾದರೂ ಪಾವತಿಯ ಮೇಲೆ ಸೇಕಡಾ 1/16ರ ಪ್ರಕಾರ ದಲಾಲಿಯು ಕೊಡಲ್ಪಡುವುದು.

ಪೋಸ್ಟ್ ಆಫೀಸಿನ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು (ಇನ್ಕಮ್‌ಟಾಕ್ಸ್ ಮಾಫಿ).

ರೂ 10, ರೂ. 20, ರೂ. 50, ರೂ. 100 ಮತ್ತು ರೂ. 500ರ ಬಾಬತು

ಸಾದರು ಮಾಡಲ್ಪಟ್ಟ 5 ವರ್ಷಗಳ ನಂತರ ಪಾವತಿಯಾಗತಕ್ಕವು.

ಸಾದರುಮಾಡುವ ಬೆಲೆ ರೂ 7-12, ರೂ 15-8, ರೂ. 38-12, ರೂ 77 8 ಮತ್ತು ರೂ. 387-8.

6. ಪೋಸ್ಟ್ ಆಫಿಸಿನ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳನ್ನು, ಯಾವ ಕಾಲದಲ್ಲಾದರೂ, ಯಾವನೊಬ್ಬ ಮನುಷ್ಯನು ಅತ್ಯಧಿಕ 10,000 ರೂಪಾಯಿಗಳಿಗೆ ಮೀರಿ ಹೊಂದ ಕೂಡದೆಂಬುವದಕ್ಕೆ ಒಳಪಟ್ಟು, ಸೇವಿಂಗ್ಸ್ ಬ್ಯಾಂಕ್ ಕೆಲಸ ನಡೆಯಿಸುವ ಯಾವದೇ ಪೋಸ್ಟ್ ಆಫಿಸಿನಲ್ಲಾದರೂ ಕೊಂಡುಕೊಳ್ಳಬಹುದು.

7. ಈ ಸರ್ಟಿಫಿಕೇಟುಗಳನ್ನು ಅವನ್ನು ಕೊಟ್ಟ ಪೋಸ್ಟ್ ಆಫೀಸಿನಲ್ಲಿ ಸದರೀ 5 ವರ್ಷಗಳ ಕೆಯದೆಯಲ್ಲಿಯೂ ಯಾವ ಕಾಲದಲ್ಲಾದರೂ, ಯಾವ ಸಂಗತಿಯಲ್ಲಿಯೂ ಅವುಗಳಿಗಾಗಿ ಪ್ರಥಮತಃ ಇವತಿಮಾಡಿದ ಮೊಬಲಗಿಗೆ ಕಡಿಮೆಯಾಗದ ದರಗಳಲ್ಲಿ ವಟಾಯಿಸಬಹುದು ಸದರೀ ದರಗಳನ್ನು ಎತ್ತು ಇತರ ತಪ್ಸೀಲುಗಳನ್ನು ಯಾವ ಪೋಸ್ಟ್ ಆಫೀಸಿನಿಂದಲಾದರೂ ತಿಳಿದುಕೊಳ್ಳಬಹುದು

A ಫಾರ್ಮು.

ಒಂದು ಗವರ್ನಮೆಂಟು ಆಫೀಸಿನಲ್ಲಿ ಕೊಂಡುಕೊಳ್ಳುವಾಗ ಉಪಯೋಗಿಸಲ್ಪಡತಕ್ಕ ಫಾರ್ಮು

ನಾನು / ನಾವು ——— ರೂ

——— ನ್ನು ಅದಕ್ಕೆ ಸಮಾನವಾದ ಮೌಲ್ಯದ ಪ್ರಾವಿಸರಿ ನೋಟುಗಳ / ಕ್ಯಾಷ್ ಸರ್ಟಿಫಿಕೇಟಿನ ರೂಪವಾಗಿ ನನಗೆ / ನಮಗೆ

ಕೊಡತಕ್ಕ 1921 / 1923 / 1925 / 1928 ನೇ ಇಸವಿಯ ವಾರ್ ಬಾಂಡುಗಳೆಂಬ ಯುದ್ಧದ ಸಾಲಪತ್ರಗಳ ಒಗ್ಗಿನ ಪಾವತಿಯಾಗಿ

ಇದರೊಂದಿಗೆ ಒಪ್ಪಿಸುತ್ತೇನೆ ಬಡ್ಡಿಯ ಮೊಬಲಗನ್ನು ——— ಲ್ಲಿ ಕೊಡತಕ್ಕದ್ದು

ದಸ್ಕತು

ಹೆಸರು

ವಿಳಾಸ

ತಾರೀಕು

B ಫಾರ್ಮು.

ಪೋಸ್ಟ್ ಆಫೀಸಿನಲ್ಲಿ ಕೊಂಡುಕೊಳ್ಳುವಾಗ ಉಪಯೋಗಿಸಲ್ಪಡತಕ್ಕ ಫಾರ್ಮು.

ನಾನು / ನಾವು ——— ಪೋಸ್ಟ್ ಆಫೀಸಿನಲ್ಲಿರುವ ನನ್ನ/ನಮ್ಮ ಲೆಕ್ಕದಿಂದ/ಗಳಿಂದ ——— ರೂಪಾಯಿಗಳನ್ನು ತಗೆದುಕೊಳ್ಳುವುದಕ್ಕೆ ರಕ್ತಪಾಯಿಗಳನ್ನು / ಇದಕ್ಕೆ ಸಮಾನವಾದ ಮೌಲ್ಯದ ಪಾವತಿಸಿ ತಗೆಯುವಬಗ್ಗೆ ನನ್ನ/ನಮ್ಮ ಸೇವಿಂಗ್ಸ್ ಬ್ಯಾಂಕ್ ಪಾಸ್ ಪುಸ್ತಕವನ್ನು/ಗಳನ್ನು ಪ್ರಾವಿಸರಿ ನೋಟುಗಳ / ಕ್ಯಾಷ್ ಸರ್ಟಿಫಿಕೇಟಿನ ರೂಪವಾಗಿ ನಾದರುಮಾಡಿ ನನಗೆ/ನಮಗೆ ಒಪ್ಪಿಸಬೇಕಾದ ಪೋಸ್ಟ್ ಮತ್ತು ಟೆಲಿಗ್ರಾಫ್‌ಗಳ ಡೈರೆಕ್ಟರ್ ಜನರಲ್‌ರವರ ಖಾತೆಯಲ್ಲಿಟ್ಟುಕೊಳ್ಳಬೇಕಾದ 1921 / 1923 / 1925 / 1928 ನೇ ಇಸವಿಯ ವಾರು ಬಾಂಡುಗಳೆಂಬ ಯುದ್ಧದ ಸಾಲಪತ್ರಗಳ ಬಗ್ಗಿನ ಪಾವತಿಯಾಗಿ ಇದರೊಂದಿಗೆ ಒಪ್ಪಿಸುತ್ತೇನೆ

2 ಬಡ್ಡಿಯ ಮೊಬಲಗು—

(1) ——— ಟ್ರಿಜರಿಯಲ್ಲಿ,

(2) ——— ಪೋಸ್ಟ್ ಆಫೀಸಿನಲ್ಲಿ ತೆರೆಯಲ್ಪಟ್ಟ ನನ್ನ ನಂ ——— ನೇ ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ

(3) ——— ಪೋಸ್ಟ್ ಆಫೀಸಿನಲ್ಲಿ ನನ್ನ ಹೆಸರಲ್ಲಿ ತೆರೆಯಲ್ಪಡತಕ್ಕ ಸೇವಿಂಗ್ಸ್ ಬ್ಯಾಂಕ್ ಲೆಕ್ಕಕ್ಕೆ

ಪಾವತಿಯಾಗತಕ್ಕದ್ದು

ದಸ್ಕತು

ಸಂಪೂರ್ಣ ಹೆಸರು

ತಾರೀಕು ವಿಳಾಸ

(ಪೋಸ್ಟ್ ಆಫೀಸಿನವರಿಂದ ಭರಾಯಿಸಲ್ಪಡತಕ್ಕದ್ದು)

ಪೋಸ್ಟ್ ಆಫೀಸಿನಲ್ಲಿ ಹಾಜರುಪಡಿಸಿದ ತಾರೀಕು

ಹೆಡ್ ಆಫೀಸ್ ಮೊಹರು

ರಜಿಸ್ಟರ್ ನಂ

ಅಂಗೀಕರಿಸುವ ಪೋಸ್ಟ್‌ಮಾಸ್ಟರನು ಬರೆಯತಕ್ಕದ್ದು

(ಹೆಡ್ ಪೋಸ್ಟ್‌ಮಾಸ್ಟರನು ಬರೆಯತಕ್ಕದ್ದು)

ಫಿನೆನ್ಸು ಇಲಾಖೆಯ, 1917ನೇ ಇಸವಿಯ ಅಕ್ಟೋಬರು 13ನೇ ತಾರೀಕಿನ ನಂ 2255 F ನೇ ಇಸ್ತಿಹಾರಿನ 2ನೇ ಕಲಮಿಗೆ ಸಂಬಂಧಪಟ್ಟು, 1918ನೇ ಇಸವಿಯ ಮೇ 13ನೇ ತಾರೀಕು ಸೋಮವಾರದ ಲಾಗಾಯಿತು ಮತ್ತು ಮುಂದೆ ನೋಟೀಸು ಕೊಡಲ್ಪಡುವ ವರೆಗೆ ಆರು ಒಂಭತ್ತು ಮತ್ತು ಹನ್ನೆರಡು ತಿಂಗಳ ಒಗ್ಗಿನ ಟ್ರಿಜರಿ ಬಿಲ್ಲುಗಳ ಮಾರಾಟವು ನಿಲ್ಲಿಸಲ್ಪಡುವುದು ಸದರೀ ತಾರೀಕಿನ ಲಾಗಾಯಿತು ಮತ್ತು ಮುಂದೆ ನೋಟೀಸು ಕೊಡಲ್ಪಡುವ ವರೆಗೆ, ಮೂರು ತಿಂಗಳ ಒಗ್ಗಿನ ಟ್ರಿಜರಿ ಬಿಲ್ಲುಗಳ ಗರಿಷ್ಠ ಸೇಕಡಾ ತೊಂಭತ್ತೆಂಟು ರೂಪಾಯಿ ಹದಿನಾಲ್ಕು ಆಣೆಯಾಗಿರುವುದು

(ಆಲೋಚನಾ ಸಭೆಯೊಳಗಣ ಗವರ್ನರ್ ಜನರಲ್‌ರವರ ಅಪ್ಪಣೆಯ ಪ್ರಕಾರ)

ಎಚ್. ಎಫ್. ಹೌವಾರ್ಡ್,
ಇಂಡಿಯಾ ಗವರ್ನಮೆಂಟ್ ಸೆಕ್ರೆಟರಿ

(ಆಲೋಚನಾ ಸಭೆಯೊಳಗಣ ಘನತೆಯಿಂದ ಗವರ್ನರ್‌ರವರ ಅಪ್ಪಣೆಯ ಪ್ರಕಾರ)

ಎಲ್. ಡೇವಿಡ್ಸನ್,
ಆಕ್ಟಿಂಗ್ ಚೀಫ್ ಸೆಕ್ರೆಟರಿ

(A true translation)

C. N SARAVANA MUDALIYAR,
for *Senior Translator to Government*

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(೧ನೇ ಭಾಗ ಮತ್ತು ೨ನೇ ಭಾಗ)



ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರ ಗಳಿಗೆ ಬಹಳ ಉಪಯುಕ್ತವಾದವುಗಳು ಇದರಲ್ಲಿ ಒಂದನೇ ಭಾಗ ಮದರಾಸು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟದ್ದು ಮತ್ತು ಮೈಸೂರ ಗವರ್ನಮೆಂಟ ನವರಿಂದಲೂ ಅಕ್ಷಯ ಕೊಡಲ್ಪಟ್ಟಿದೆ ೨ನೇ ಭಾಗದಲ್ಲಿ ದಂಡೆಗಳನ್ನು ಬಸ್ಕಿಗಳನ್ನು ಸೇರಿದ ೭೮ ಪ್ರತಿಮೆಗಳನ್ನು ಎರಡನೇ ಭಾಗದಲ್ಲಿ 43 ಪ್ರತಿಮೆ ಆಯಾಯ ಪ್ರತಿವೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳ ತೆಲುಗು ಕನ್ನಡ ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ ರೂ 0—12—0
ವಿ ಪಿ ಚಾರ್ಜು 0—2—0

ಎರಡು ಭಾಗಗಳು ಸೇರಿ ಕ್ರಯ ರೂ 1—4—0 „ 2 ಆ

ವಿಳಾಸ — ಬಿ. ರಾಘವುಲು ನಾಯುಡು,
ಜಿಮ್ನಾಸ್ಟಿಕ್ಸ್ ಇನ್‌ಸ್ಟ್ರಕ್ಟರ್, ಪಾಚಿಯಪ್ಪಾಸ್ ಕಾಲೇಜ್, ಮದರಾಸು

B RAGHAVULU NAIDU,
Senior Gymnastic Instructor,
Pachiyappa's College, MADRAS

N. B — ಆರ್ಡರು ಮಾಡತಕ್ಕವರು ದಯವಿಟ್ಟು ಈ ಪತ್ರಿಕೆ ಹೆಸರನ್ನು ಬರೆಯಬೇಕು ಮತ್ತು ಕಾಗದಗಳನ್ನು ಇಂಗ್ಲಿಷಿನಲ್ಲಿಯೇ ಬರೆಯಬೇಕೆಂದು ಕೋರಲಾಗಿದೆ.

ಖರೀದಿಗೆ ಸಿದ್ಧವಾಗಿರುವವು! ಈಗಲೇ ಅಚ್ಚಾಗಿರುವವು!

ವೃತ್ತಿಶಿಕ್ಷಣ.

ಒದುಬರಹ ಗೊತ್ತಿಲ್ಲದವರಿಗೆ ಕೂಡಾ ಒಳ್ಳೇ ಸಂದರ್ಭ

ಒರೇ ಸ್ವಲ್ಪ ಮೂಲಧನದಿಂದ ಜೀವನ ಮಾಡುವಿಕೆಗೆ ಅನುಕೂಲವಾಗುವ ಮತ್ತು ಎಲ್ಲರಿಗೂ ಯಾವಾಗಲೂ ಅಗತ್ಯವಿರುವ ವೃತ್ತಿಯೇ

ಹೊಲಿಗೆವೃತ್ತಿ

ಇದನ್ನು ಶಾಸ್ತ್ರಪ್ರಕಾರ ಸಮಯೋಚಿತ ಚಾಲ್ತಿ ಅಂದಚಂದಗಳಿಗೆ ಅನುಸರಿಸಿ ಯೋಗ್ಯರೀತಿಯಿಂದ ಮಾಡುವ ದರ್ಜಿಗಳು ಯಾವಾಗಲೂ ಎಲ್ಲೆಲ್ಲಿಯೂ ಅಗತ್ಯಬೇಕು

ಉಡಿಗೆಯೇ ಮನುಷ್ಯನ ಮುಖ್ಯ ಶೃಂಗಾರ

ಉಡಿಗೆಯು ಮನುಷ್ಯನ ಇತರ ಗುಣಗಳಂತೆಯೇ ಎಲ್ಲಿಯೂ ಮಾನ್ಯ ಉಡಿಗೆಗಳು, ಗಿರಾಕಿಗಳ ಪಸಂದಿಗೆ ಬರಬೇಕಾದರೆ ಪ್ರಕೃತ ಇಂಗ್ಲಿಷ್ ಸಿಸ್ಟಮುಗಳಿಗೆ ಅನುಸರಿಸಿ ಅವರವರ ಅಂಗೋಪಾಂಗಗಳಿಗೆ ಒಪ್ಪುವಂತೆ ಕತ್ತರಿಸಲ್ಪಟ್ಟವುಗಳಾಗಿಯೂ ಯೋಗ್ಯ ರೀತಿಯಿಂದ ಹೊಲಿಯಲ್ಪಟ್ಟವುಗಳಾಗಿ ಕ್ರಮಪ್ರಕಾರವಾಗಿಯೂ ಇರಲೇ ಬೇಕ

ಹೊಸ ಇಂಗ್ಲಿಷ್ ವಗೈರೆ ಸಿಸ್ಟಮುಗಳೂ ಹೊಲಿಗೆಗೆ ಬೇಕಾದ ಇತರ ಮಾಹಿತಿಗಳೂ ಕಲಿಯುವವರಿಗೆ ಅನುಕೂಲವಾದ ಸಮಯಗಳಲ್ಲಿ ಸ್ವಲ್ಪ ಕಾಲದೊಳಗೇನೇ ಸುಲಭ ದರಗಳಲ್ಲಿ ಕಲಿಸುವ ಏರ್ಪಾಟು ನಮ್ಮ ಟೈಲರಿಂಗ್ ಹೌಸಿನಲ್ಲಿ ಮಾಡಿರುವೆವು ಹೆಚ್ಚಿನ ಮಾಹಿತಿಯನ್ನು ನಮ್ಮಲ್ಲಿ ವಿಚಾರಿಸಿಕೊಳ್ಳಬಹುದು

M Anantha Prabhu,
The Tailoring House,
MANGALORE, S. K

ಜೀನಸು ಧಾರಣೆ.

(ರಖಂ)

ಹೊಸ ಮುಷ್ಟಿ ಅಕ್ಕಿ	6— 8—0	ರಿಂದ	7— 2—0
ಸುಗ್ಗಿ	6— 0—0	„	6— 8—0
ರಾಶಿ	6— 2—0	„	6— 8—0
ಗುಡ್ಡ ಅಕ್ಕಿ	6— 4—0	„	6—12—0
ಅಪ್ಪಲ್ ಬೆಳ್ತಿಗೆ	6—14—0	„	7— 4—0
ರಂಗೂನು ಬೆಳ್ತಿಗೆ ಗೋಣಿ ೧ರ	12— 0—0	„	12— 8—0
ಗೋದಿ ಗೋಣಿ ೧ರ	18— 0—0	„	18— 8—0
ಹುರುಳಿ ಗೋಣಿ ೧ರ	8 0—0	„	8—14—0
ಕಡಲೆ ಗೋಣಿ ೧ರ ಚೊಂಬು	12— 8—0	„	13— 0—0
ತೊಗರಿ ಗೋಣಿ ೧ರ		„	13— 0—0
ತೊಗರಿಬೇಳೆ ಗೋಣಿ೧ರ 13—8—0	14— 8—0	„	16— 8—0
ಉದ್ದು ಗೋಣಿ ೧ರ	12— 8—0	„	13— 0—0
ಊರುಬೆಲ್ಲ ಮುಡಿ ೧ರ	32— 8—0	„	35— 0—0
ಉಪ್ಪು ಗೋಣಿ ೧ರ	6—4—0	„	6— 0—0
ಕೊಬ್ಬರಿ ಮುಡಿ ೧ರ	60— 0—0	„	68— 0—0
ತೆಂಗಿನಕಾಯಿ ಮುಡಿ ೧ರ	17— 8—0	„	18— 0—0
ಎಳ್ಳಿಂಡಿ ಮುಡಿ ೧ರ ಚೊಂಬು	35— 0—0	„	50— 0—0
ಕೊಬ್ಬರಿ ಎಣ್ಣೆ ಮಣ ೧ರ		„	5— 2—0
ಎಳ್ಳೆಣ್ಣೆ ಮಣ ೧ರ(ಕುಡಾಸದ)		„	5— 2—0
ಹರಳೆಣ್ಣೆ ಪಟ್ಟಿಗೆ ೧ರ	7— 2—0	„	9— 0—0
ಸೀಮೆಎಣ್ಣೆ ಸಕ್ಕರೆ ಮಣ ೧ರ		„	5— 4—0
ಶಾಕ ಮುಡಿ ೧ರ	165— 0—0	„	200— 0—0
ಬೆಳ್ಳುಳ್ಳಿ ಮುಡಿ೧ರ	110— 0—0	„	121— 0—0
ಗೇರುಬೀಜ ಮುಡಿ ೧ರ		„	1— 6—0
ಕಬ್ಬಿಣ ಮುಡಿ ೧ರ	105— 6—0	„	115— 0—0
ಕಾಂಬು ಕಗದು ಮಣ ೧ರ	38— 8—0	„	41— 0—0
ಕಾಂಬು ಪಾತ್ರಗಳು ಮಣ ೧ರ	40— 0—0		
ಬೀಡಿ ಬೆಲ್ಲ ತೇರು ೧ರ	33— 8—0	„	26— 4—0
ರಕ್ತಚಂದನ ಮುಡಿ ೧ರ		„	5—12—0
ಅಡಿಕೆ ಮುಡಿ೧ಕ್ಕೆ	170—0—0	„	180— 0—0

ಕನ್ನಡ ಮಾತನ್ನು ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದವುಗಳು.

ಅಜ್ಜಿ ಕಥೆಗಳು:

ಮೂರು ಕರಡಿಗಳು.

ಹೇನು ಸತ್ತು ಕಾಗೆ ಬಡವಾಯಿತು.

ಮೆಣಸಿನ ಕಾಳಪ್ಪ.

ಅರ್ಗಣೆ ಮುದ್ದೆ.

ಇಲಿಗಳ ಥಕ ಥೈ.

ಅಕ್ಷರಜ್ಞಾನವನ್ನು ಮಾಡುವದರಲ್ಲಿ ಸಹಕಾರಿಯಾಗಿವೆ. ಶಬ್ದಗಳ ಉಪಯೋಗ, ಅವುಗಳ ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಕೊಳ್ಳಬಹುದು. ವಾಕ್ಯ ಪ್ರಾಯದಿಂದಲೇ ಕ್ರಮವಾಗಿ ಬೆಳೆದು ಬರಬೇಕಾಗಿರುವ ವಾಚನಪ್ರೀತಿಯು ಮಕ್ಕಳಲ್ಲಿ ಈ ಚಿಕ್ಕ ಕಥೆಗಳನ್ನು ಓದುವದರಿಂದ ಹುಟ್ಟುವದು.

ವಿಳಾಸ:— ಮ್ಯಾನೇಜರ್,
ಶಾರದಾ ಪಾಠಶಾಲೆ, ಮಂಗಳೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ
ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ 1 ಚಿಕ್ಕ ಸ್ವಾಜು ಆಣೆ 10 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ಶತಧೌತ ಘೃತಗಳಂಬ ಈ ಘೃತವೆ ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹ ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ವಾಜು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ ವಿ ಎಸ್ ಎ ಎಮ್ ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್
ಆಯುರ್ವೇದಾಶ್ರಮ,
೫೫ ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್

ತಂತಿ ವಿಳಾಸ — "ಪಂಡಿಟ್" ಮದರಾಸ್

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್ ಮಲೆಯ ಸ್ಟೇಟ್, ಗೋವಾ, ಜೀಜಿಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿದ್ದಾರೆ

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ನಿಮಗೆ ವೈದ್ಯರ ಸಮಯವನ್ನು ಕಾದು ನೋಡುವುದು ನಿಜವಾಗಿಯೂ ತಪ್ಪುವುದು

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು ಜ್ವರ ಮ ದ ಮಲಬದ್ಧ ಕೆಮ್ಮು, ಗಡಬೇನೆ ಬಲಹೀನತೆ ಕೆಟ್ಟ ಹವಾ ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಲವು ಜ್ವರ ಕೆಮ್ಮು ವಾಯು ಇವಲ್ಲದೆ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗುಣಪಡಿಸುತ್ತದೆ

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇ[illegible]
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ ೭–೭–
ಪ್ರತಿ ೭೮ ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇ[illegible]

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು ೭೫ ಮಾತ್ರೆಗಳುಳ್ಳ ಶೀಷೆಗೆ ೮ ಆಣೆ ಮಾತ್ರ

ಯೋಗ್ಯತಾ ಪತ್ರಗಳು

[illegible]

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ ಕ್ಯಾಟಲಾಗು ಉಚಿತ

ವಿಳಾಸ — ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜವೈದ್ಯರುಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bhishagmandir.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

ಸರ್ವಾಮಯಾಂತಕ ವಟಿಕಾ."

ಮೇಹಸಂಬಂಧವಾದ ಮೂತ್ರ ಘಾತಾಶ್ಮರಿ ಉರಿ ಮೂತ್ರಗಳನ್ನು 21 ಗಂಟೆಯ [illegible] ಇದರ ಸೇವನೆಯಿಂದ 20 ತರದ ಮೇಹಗಳು ಕೂಡಲೇ [illegible] ಅಶ್ಮರಿಯೆಂಬ ಕಲ್ಲು ಸಹಾ ಇದ್ದಲ್ಲಿ ಕೂಡಲೇ ಮೂತ್ರದೊಂದಿಗೆ ಬೀಳುವದು

12 ಮಾತ್ರೆ [illegible] ರೂ. 1—4—0.
12 [illegible] ತರಿಸಿಕೊಳ್ಳುವವರಿಗೆ ,, 13—12—0.
ವಿ ಪಿ ಚಾರ್ಜು ಬೇರೆ

ಇನ್ನೂ ನಮ್ಮಲ್ಲಿ ಅನೇಕ ಸಿದ್ಧೌಷಧಗಳು ದೊರೆಯುವವು. ಅಪೇಕ್ಷಕರು ಅರ್ಧಾಣೆ ಸ್ಟಾಂಪನ್ನಿಟ್ಟು ಪತ್ರಬರೆದಲ್ಲಿ ಕೆಟಲಾಗು ಕಳುಹಿಸಲಾಗುವದು.

ಸರ್ವ ವಿಳಾಸ — ವೈದ್ಯ ಬಿ. ವಿಠಲ ಭಟ್ಟ,
ಆಯುರ್ವೇದ ವೈದ್ಯಮಂದಿರ, ಉಡುಪಿ

ರೂ. 1,000 ಬಹುಮಾನ.
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.
(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳಿಸಿದ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಈ ಸಾಲಾಮಿಸ್ರಿ ಮುರಬ್ಬಾ "ದಿನ ಸೇವನೆ ಯಂದ — ವೀರ್ಯವು ಶರೀರಕಿ

ಇದ್ದರೂ ಸ್ವಪ್ನೇಂದ್ರಿಯವಾದರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು. ಮೆದುಳಿಗೆ ಬಲವನ್ನುಂಟುಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕೆಚ್ಚರಿಸುವುದು, ಸೊಂಟದ ನೋವು ಸ್ವಲ್ಪಮಾತ್ರವೂ ಇರದಾರದ ಈ ಸಾಲಾಮಿಸ್ರೀ ಎಂಬುದು ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್ ಪಿನಾಂಗ್, ಅಫ್ರಿಕ ಕಲ್ಕತ್ತ, ಬೊಂಬಾಯಿ, ಮದ್ರಾಸ್ ಮೊದಲಾದ [illegible] ಯೋಗ್ಯತಾಪತ್ರಿಕೆಗಳು ಬಂದಿವೆ ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು ಅವನ್ನು ಯಾರಾದರೂ [illegible] ಬಹುಮಾನವು ಕೊಡಲ್ಪಡುತ್ತ. [illegible] ಮೂಲಕ ಪಡೆಯಬಹುದು

ಒಂದು ಡಬ್ಬಿ [illegible] ದಿನಗಳು ಉಪಯೋಗಿಸುವುದರಿಂದ [illegible] ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ [illegible] ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು. ಕ್ರಯ ಡಬ್ಬಿ ೧ಕ್ಕೆ [illegible] ಟಪಾಲು ಖರ್ಚು ೧ರಿಂದ ೩ ಡಬ್ಬಿಗಳ ವರೆಗೆ ಆ. 6.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿತವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ ರೂ ೩ ಬಾಟ್ಲಿಗೆ ೨ ರೂ ೧೦ ಆಣೆ

೨. ಪ್ರಮೇಹಹರಿವು ಬಿಂದು. ಉಷ್ಣವನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ನಷ್ಟವಿಲ್ಲದೆ ಖಂಡಿತವಾಗಿ ಗುಣಕೊಡುವದು ಬಾಟ್ಲಿಗೆ ೨ ರೂ. ೮ ಆಣೆ.

೩. ಸೂರಶಾವ ಲೇಹ. ರಕ್ತ ಅಥವಾ ಬಿಳಿ ಕೆಂಪು ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೪. ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ರವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠ ಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

೫. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮೈಕಟನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೬. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೭. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೨ ರೂ.

ನಮ್ಮ ವಿಳಾಸ;—ಬಿ. ಎಮ್. ನಾಥ್ ಮತ್ತು ಕಂಪೆನಿ,
ಬೆಪರಿ ಪೋಸ್ಟು ಮದರಾಸು.
B. M. NATH & CO. [illegible]

ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರ ಲೇಖ್ಯಬೋಧಿನಿ

ಈ ಪುಸ್ತಕದಲ್ಲಿ ಅನೇಕ ಬಾಬುಗಳ ಅರ್ಜಿ ನಮೂನೆ ಕ್ರಯ ಭೋಗ್ಯವಲ್ ಮುಂತಾದ ಪತ್ರಗಳ ನಮೂನೆಗಳು ಮತ್ತು ಒಂದೂ ಊ ರ್ವ ಕಾನೂನು ಮುದ್ರಿಸಲ್ಪಟ್ಟಿರವದು ಅತ್ಯುಪಯುಕ್ತವಾದ ಪುಸ್ತಕ ಬೇಗ ತರಿಸಿಕೊಳ್ಳಿರಿ ಕ್ರಯ ೩೦೦ ಪುಟದ ಈ ಪುಸ್ತಕ 1ಕ್ಕೆ ರೂ 1—8—0

ವಿವೇಕ ಚೂಡಾಮಣಿ.

ಶ್ರೀ ಶಂಕರಾಚಾರ್ಯರವರ ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸ ಫವಶ್ಯಕೆ ವಿರಚಿಸಿದ ಈ ಗ್ರಂಥರತ್ನವು ಈಗ ಹೊಸ ಪ್ರಕಟವಾಗಿದೆ ಈ ಪುಸ್ತಕವು ಸಾಧನಶ್ರತುಷ್ಟಯ ಆತ್ಮಾನಾತ್ಮ ವಿವೇಕ, ಶರೀರತ್ರಯಾದಿ ಗುರುಶಿಷ್ಯ ಸಂವಾದ ಬ್ರಹ್ಮೋಪದೇಶ ಮುಂತಾದ ಅತಿ ಪ್ರಕರಣಗಳನ್ನು ಒಳಗೊಂಡಿದೆ ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡ ಭ್ರಕ್ತಲ್ಕಿನಂತೆ ಹಸ್ತಗತವೆಂದು ಹೇಳಬಹುದು. ಒಟ್ಟು ಫಿಲಸಾಫಿ [illegible] ಪ್ರತಿಯೊಬ್ಬ ಆಸಿಕನಿಗೂ ಅತ್ಯಾವಶ್ಯಕವಾದ ಪುಸ್ತಕ

ಬೆಲೆ ೧ಕ್ಕೆ ರೂ 2—4 ಟಪಾಲು 6 ಆಣೆ

ವಿಳಾಸ —
ಎಚ್ ಎಸ್. ರಾವ್. ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ

ನ್ಯಾಯದರ್ಪಣ.
ಹೊಸ ಪುಸ್ತಕ.

ಬೆಲೆ ರೂ 1—8—0. ವಿ. ಪಿ. 1—12—0.

ಇದರಲ್ಲಿ ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯೂಗೆ ಸಂಬಂಧಪಟ್ಟ ವಿಶಿಷ್ಟ ವಿಷಯಗಳೂ, ಅನೇಕ ತರದ ದಸ್ತಾವೇಜುಗಳ ನಮೂನೆಗಳೂ ಬರೆಯಲ್ಪಟ್ಟಿವೆ. ಇದು ಪ್ರತಿಯೊಬ್ಬ ಮನುಷ್ಯನ ಬಳಿಯಲ್ಲಿಯೂ ಯಾವಾಗಲೂ ಇರಬೇಕಾದ ಅಮೂಲ್ಯವಾದದ್ದು.

ಎಮ್. ಎಸ್. ಸುಬ್ಬಣ್ಣನವರು, [illegible]

ಕ್ರಯ ಸುಲಭ! ಕ್ರಯ ಸುಲಭ!!

ಕಾಶೀಯಲ್ಲಿ ತಯಾರಾಗುವ ಪೀತಾಂಬರ, ಮುಗುಟ ಪೇಟ, ರವಕೆ ಕಣಗಳು, ಕಸೂತಿ ವಸ್ತ್ರಗಳನ್ನೂ ಅನೇಕ ತರದ ಸಾಮಾನುಗಳು ಬೇಕಾದವರಿಗೆ ವಿ. ಪಿ. ಯಿಂದ ಕಳುಹಿಸಲಾಗುವುದು [illegible] ಅಗಲ ಗಳ ರೂ. [illegible] ವರೆಗೆ [illegible]

ADDRESS — Siromani Narayanacharya.
CHAUKHAMBA, BENARES CITY.
[illegible]

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೊಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವದು, ಮತ್ತು ಇದು ಮಧುರವಾಗಿ ರುವದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ 1ಕ್ಕೆ 12 ಆಣೆ ಟ ಖ 4 ಆಣೆ

ಕೆ. ಟಿ. ಡೊಂಗರೆ ಕಂಪೆನಿ,

ಗಿರಗಾಂವ, ಮುಂಬಯಿ

ಮಂಗಳೂರು ಏಜಂಟರು

ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್.

ಜ್ವರಾಂತಕ ಗುಳಿಗೆಗಳು.

ಇದು ಪ್ರಾಚೀನ ... ಮಹೌಷಧವು ಇದನ್ನು ... ಬಹುದು 40 ಗುಳಿಗೆಗಳುಳ್ಳ ಡಬ್ಬಿಗೆ ರೂ 1-0-0

ಕಾಸಾಂತಕ ಗುಳಿಗೆಗಳು.

ಇದು ಕ್ಷಯ, ಉಬ್ಬಸ ಮುಂತಾದ ಶ್ವಾಸನಾಳದ ರೋಗಗಳನ್ನು ... ಸುತ್ತ ... 50 ಗುಳಿಗೆಗಳ ಡಬ್ಬಿಗೆ ರೂ 1- -

ಕಾಮಶಾಸ್ತ್ರವೆಂಬ ಉತ್ತಮ ಪುಸ್ತಕವನ್ನು ... ಪುಸ್ತಕವು ಉಚಿತವು ... ಅಂಚೆ ಹಾಸಲ ಮಾಫ್

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳು ಉಪಯೋಗಿಸಿ ... ಅನ್ಯತ ... ಕ್ರಯ ... ವಿಳಾಸ —

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ ... ಬ್ರಾಂಚ್ ...

ಮತ್ತು 96 ಮೌಂಟ್ ರೋಡ್, ಮದ್ರಾಸು

Local Agents Raphael & Co.

Bruo Buildings

Hampankatta, MANGALORE

ಬೆಲೆ ಸುಲಭ! ... ಸುಳಾಧಿಕ

ಜಗತ್ಪ್ರಸಿದ್ಧವಾದ ಆಯುರ್ವೇದೀಯ ಔಷಧಗಳು.

ಚಂದ್ರಿಕಾ.

... ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವನ್ನು ... ಧಾತುವನ್ನು ... ಬಹುಮೂತ್ರ, ಮೂತ್ರದಲ್ಲಿ ... ಕೈಕಾಲುಕಣ್ಣು ಉರಿ ... ಒಂದು ಸೀಸೆ ಬೆಲೆ ರೂ 1-0-0 ಮಾತ್ರ.

ಕಸ್ತೂರಿಭೂಷಣ.

... ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿರುವ ನಮ್ಮ ಕಸ್ತೂರಿಭೂಷಣ ... ವಾಯು, ಅನುವಾಯು ... ರೋಗಗಳನ್ನೂ, ಗುಹ್ಯರೋಗ ... ಮಕ್ಕಳ ... ದೊಡ್ಡವರ ರೋಗಗಳನ್ನೂ ... ಸಂದರ್ಭದಲ್ಲಿ ... ನಮ್ಮ ಭೂಷಣವೇ!!!

ಪ್ರತಿ ಮಾತ್ರೆಯುಳ್ಳ ... ಬೆಲೆ ಸೀಸೆ ರೂ ... ಮಾತ್ರವೇ

ಬಾಲಸುಧಾ.

ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿ ... ನಮ್ಮ ಬಾಲಸುಧಾ ... ಜ್ವರ, ಹೊಟ್ಟೆಯುಬ್ಬರ, ಕೆಮ್ಮು ... ಬೆಲೆ ಸೀಸೆಗೆ ರೂ 1-0-0

ಕಸ್ತೂರಿಭೂಷಣ, ಬಾಲಸುಧಾ ಇವೆರಡರ ... ರೋಗಗಳ ... ಪುಸ್ತಕ ... ಪ್ರತ್ಯೇಕ.

ಧನ್ವಂತರಿ ಭವನ,

ಮೈಸೂರು.

Karnik's Ague Mixture

ಚಳಿಜ್ವರ, ಮಲೇರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರುವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್‍ಕ್ಷಣ ಗುಣಕೊಡುವಂಥ ಔಷಧಿಯಾದ ಮಿಕ್ಸ್ಚರ್! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಪ್ರಶಸ್ತಿಪತ್ರ ಕೊಡುತ್ತಾರೆ ಕ್ರಯ ಗ ಆಣೆಗಳು ದೊಡ್ಡ ಬಾಟ್ಲಿಯ ಕ್ರಯ ರೂ ೧

ಪೆಸೋ-ಪಿನ್.— ಕಾಲರಾ, ಹೊಟ್ಟೆನೋವು, ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು ಕ್ರಯ ... ಆಣೆ

ಗಜಕರ್ಣದ ಮುಲಾಮು:— ಬಾಟ್ಲಿ ೧ಕ್ಕೆ ೪ ಆಣೆಗಳು ಡಜನ್ ೧ಕ್ಕೆ ರೂ ೨-೮-೦ ಪೋಸ್ಟೇಜ ಬೇರೆ ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ

ಕರ್ಣಿಕ ಬ್ರದರ್ಸ್,

56 ಗಿರಗಾಂವ, ಮುಂಬಯಿ

Agent The Woollen Mart, *Mangalore*

ಪಂಡಿತ ಜಪ್ಪು ಅಂತೋನ ಫೆರ್ನಾಂದಿಸರವರ ಅನುಭವಸಿದ್ಧವಾದ ಆಯುರ್ವೇದ ಔಷಧಗಳು

ಗ್ರಹಚೈರವಿ ತೈಲ್ಯ

... ವ್ಯಾಧಿಯು ... ಕ್ರಯ ...

ಕೊಡಾಶಾದಿ ಮಾತ್ರೆ

... ಜ್ವರ ... ಡಜನ್ ... ಕ್ರಯ 6-

ವಜ್ರಕಂಠ ಧಾತುವೃದ್ಧಿ ಲೇಹ್ಯವು

... ಕ್ರಯ 1 -

ಪಂಡಿತ ಜೆಪ್ಪು ಅಂತೋನ್ ಫೆರ್ನಾಂದಿಸ್,

... ಕಂಕನಾಡಿ ಪೋಸ್ಟ್,

ಮಂಗಳೂರು ... ಕೆನರಾ

... ಡಿ ಸೂಜಾ

ಏಜಂಟ್ ... ಮಂಗಳೂರು

ಕನ್ನಡ ಕಾದಂಬರಿಗಳು.

ಸ್ವರ್ಣಲತಾ ರೂ 1-8-0	ಪೂರ್ಣಕಲಾ	ರೂ	1-4-0
... 0-2-0	ಹರಿದಾಸಿ		0-4-0
ಮನೋರಮ 1-0-0	...		0-6-0
... 0-6-0	...		0-12-0
... 1-4-0	... (ಚಿತ್ತ ... ಮೊ..ಲನೇ)		
... 1-4-	...	ರೂ	1-8-0

ನಮ್ಮ ... ದೊರೆಯ ತಕ್ಕವೆ ಪುಸ್ತಕ ...

ಬಿ. ಎಸ. ರಾವ್ ಕಂಪೆನಿ,

ಪುಸ್ತಕ ವ್ಯಾಪಾರಿಗಳು ಬೆಂಗಳೂರು ಸಿಟಿ

ಅನೇಕ ರೋಗಗಳಿಗೆ ಒಂದೇ ಔಷಧವು.-

... ಅಥವಾ ಆರೋಗ್ಯಬಿಂದು.

... ಪ್ರಶಂಸೆ ... ಸರ್ಟಿಫಿಕೇಟುಗಳನ್ನು ... ಪ್ರತ್ಯಕ್ಷ ... ರೋಗಗಳ ವಿವರ —

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾವ್ಯಾಧಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ, ಗಂಡಮಾಲೆ, ... ತಲೆನೋವು, ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ... ಇತ್ಯಾದಿ ... ರೋಗಗಳು ... ಬೆಲೆ ... ಬಾಟಲಿ ಒಂದಕ್ಕೆ 2 ರೂಪಾಯಿ ... ದೊಡ್ಡ ಬಾಟ್ಲಿ ಒಂದಕ್ಕೆ 8 ಆಣೆ, ವಿ ಪಿ ಖರ್ಚ ಬೇರೆ ... ಒಂದು ಡಜನ್ ಬಾಟ್ಲಿ ... ಕಮಿಷನ್ ... ವಿ ಪಿ ಖರ್ಚ 5 ಆಣೆ ... ನಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ಒಂದು ... 3 ಬಾಟಲಿಗಳು ... ಕಮಿಷನ್ ... ವಿ ಪಿ ಖರ್ಚ 5 ಆಣೆ ಬೀಳುತ್ತೆ.

ನಮ್ಮಲ್ಲಿ ಯಸ್ ಕೆ ... ಪ್ರಸಿದ್ಧ ಧಾತುಪೌಷ್ಟಿಕ (ಕಾಮ ಸಂಜೀವಿನಿ ಲೇಹ) ... ಡಬ್ಬಿ ೧ಕ್ಕೆ ರೂ 3-0-0 ವಿ ಪಿ ಖರ್ಚ ಬೇರೆ ...

ಎಚ್ ಎಮ್. ಮುಲ್ಲಾ,

ಆರೋಗ್ಯ ... ಹೆಡ್ ಆಫೀಸ್ ಶಹಾಪೂರ, (ಬೆಳಗಾವ).

The Indian Tooth-ache Specific

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲು ನೋವುಗಳೂ ... ಹಲ್ಲುಗಳ ... ಬಲಪಡಿಸುವ ... ಈ ಔಷಧದ ಗುಣವನ್ನು ... ಪರೀಕ್ಷಿಸಿ ...

ಸೀಸೆ ೧ಕ್ಕೆ ಕ್ರಯ ರೂ 1-4-0 ಟಪಾಲ ಖರ್ಚು 4 ಆಣೆ ಪ್ರತ್ಯೇಕ ... ರೂ 12 ಮಾತ್ರ ... ಈ ಕೆಳಗಿನ ವಿಳಾಸಕ್ಕೆ ಬರೆಯಲ್ಪಡುವದು

STANY BROTHERS MANGALORE

... ಕಾಫಿ ಹುಡಿ

I	ಕ್ಲಾಸ್	0-10-0	
II	ಕ್ಲಾಸ್	0- 8-0	
III	ಕ್ಲಾಸ್	0- 6-0	

ಹೊಟೇಲುಗಳಿಗೂ ... ವ್ಯಾಪಾರಿಗಳಿಗೂ ... ಈ ಕೆಳಗಿನ ವಿಳಾಸಕ್ಕೆ ಬರೆಯಲ್ಪಡುವದು

STANY BROTHERS, MANGALORE.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ ಸಿದ್ಧೌಷಧಗಳು.

ಶ್ರೀಕರಕಸ್ತೂರಿಮಾತ್ರೆ — ... ಮಕ್ಕಳ ... ಜ್ವರ, ಕೆಮ್ಮು, ... ಉಬ್ಬಸ, ತಲೆನೋವು, ಗಂಟಲು ನೋವು, ... ಶ್ರೀಕರಕಸ್ತೂರಿಮಾತ್ರೆ ... 6 ಗುಳಿಗೆಗಳಿಗೆ ರೂ 1 4 0 12ಕ್ಕೆ ರೂ 2 3 0 , 25ಕ್ಕೆ ರೂ 4 1 1 0 50ಕ್ಕೆ ರೂ 9 0 0 100ಕ್ಕೆ ರೂ 17 0 0 ಟಪಾಲ ಖರ್ಚು ಪ್ರತ್ಯೇಕ

ಜೀರಿಗೆರಸಾಯನ.— ... ಬೆಲೆ ೧ಕ್ಕೆ ... 12 ಆಣೆ ... ಬೆಲೆ 1-4-0 ಟಪಾಲು ಖರ್ಚು ಪ್ರತ್ಯೇಕ

ಖರ್ಜೂರಾಮಲಕರಸಾಯನ:— ... ಬೆಲೆ ೧ಕ್ಕೆ ... 12 ಆಣೆ ಟಪಾಲು ಖರ್ಚು ಪ್ರತ್ಯೇಕ

ಶತಾವರೀರಸಾಯನ:— ... ಬೆಲೆ ... 2 ... ಟ. ಖ. ಪ್ರತ್ಯೇಕ.

ಮಂಗಳೂರು ಏಜಂಟರು — ದಿ. ಊಲನ್ ಮಾರ್ಟ್, ಮಂಗಳೂರು. ಸದ್ವೈದ್ಯಶಾಲಾ, ನಂಜನಗೂಡು.

Printed & Published by V. S. Kamath at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಪ್ರತಿ-ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ' ಮತ್ತೆ ವಿಷವ ಸುಧುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ' । ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೦ | ಮಂಗಳೂರು, ತಾರೀಕು ೩೧ನೇ ಮೇ ಶುಕ್ರವಾರ ೧೯೧೮. | ಸಂಚಿಕೆ ೩೩.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತಂಕೆರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ

ಈ ಗೊಬ್ಬರವು ಹಕ್ಕಿಯ ಗೊಬ್ಬರದಂತೆ ಅಸಹ್ಯವಲ್ಲ, ಮೀನ ಗೊಬ್ಬರದಂತೆ ನಾತ ಬಡೆಯುವುದಿಲ್ಲ

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು

"ಕೃಷಿ ಸುಧಾರಣೆ" ಎಂಬ ಸಚಿತ್ರ ಪತ್ರಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತಾ,
The Chilean Nitrate Propaganda
1, Royal Exchange Place, Calcutta

ಹತ್ತಿರವೇ ಇಟ್ಟುಕೊಳ್ಳಿರಿ!

ಎಲ್ಲಾ ಬೇನೆಗಳನ್ನು ತಲೆಸಿಡಿತ, ಸೊಂಟದ ನೋವು, ಶೀತ, ಕಮ್ಮು, ಎದೆನೋವು ಗಂಟ್ಲುನೋವು ಮೊದಲಾದ ನೂರಾರು ವಿಧಾನಗಳ ನೋವುಗಳನ್ನು ತೀವ್ರದಲ್ಲಿ ಗುಣಪಡಿಸುವ

ಅಮೃತಾಂಜನವನ್ನು

ನೀವು ಯಾವಾಗಲೂ ಹತ್ತಿರವೇ ಇಟ್ಟುಕೊಳ್ಳಬೇಕು. ಆಣೆ ಎಂಟಕ್ಕೆ ಅದು ಎಲ್ಲಿಯೂ ದೊರಕುವದು

12 ಡಬ್ಬಿಗಳಿಗೆ 5—4—0 ವಿ. ಪಿ. ಪ್ರತ್ಯೇಕ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ 0—6—0 12 ಡಬ್ಬಿಗಳಿಗೆ 4—0—0 ವಿ ಪಿ ಪ್ರತ್ಯೇಕ

ದಂತಮಂಜನ.

(ರಾಜಾರಾಣಿ ಟ್ರೇಡ್ ಮಾರ್ಕ)

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ ಮುಂತಾದವುಗಳೆಲ್ಲಾ ನಿಲ್ಲುತ್ತವೆ ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ ಡಬ್ಬಿ ಒಂದಕ್ಕೆ 0—2—0 12 ಡಬ್ಬಿಗಳಿಗೆ 1—4—0 ವಿ. ಪಿ. ಪ್ರತ್ಯೇಕ.

ಅಮೃತಾಂಜನ ಡಿಪೊ,

6 7, ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ, **ಮದ್ರಾಸು.**

109 ಫ್ರೇಯರ್ ರೋಡ್,
ಮುಂಬಯಿ.

ಉಡುಪಿ—ಕೊಟ್ಟಿಕಾರ್ ಬ್ರದರ್ಸ್, ಇವರಲ್ಲಿಯೂ ದೊರಕುವದು.

ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ಮೇಲಾದ ಸಂಗ್ರಹ.

ಧನಿಕರಿಗೂ ಬಡವರಿಗೂ ಅತ್ಯಗತ್ಯವಾಗಿ ಬೇಕಾದಂಥ ಬಗೆಬಗೆಯ ವಸ್ತ್ರಗಳು ! ಸ್ವದೇಶದಲ್ಲಿಯೇ ಸ್ವದೇಶಸ್ಥರಿಂದ ತಯ್ಯಾರು ಮಾಡಲ್ಪಡುವಂಥವುಗಳು

ಬನಾರಿಸ, ಪೂನಾ ಮಹೇಶ್ವರ, ಬರೋಡಾ, ಇಳಕಲ್, ಗದಗ, ಹುಬ್ಬಳ್ಳಿ ಕೊಯಮುತ್ತೂರು, ನಾಗರಿ, ಬೆಂಗಳೂರು, ಆರಣಿಪೇಟ, ಮುಂಬಯಿ, ಮದ್ರಾಸ ಸೇಲಂ, ಅಹಮದಾಬಾದ ಮೊದಲಾದ ಪಟ್ಟಣಗಳಲ್ಲಿ ಪ್ರಖ್ಯಾತಪಟ್ಟ ಎಲ್ಲಾ ಊರುಗಳ ಸರಕುಗಳಿಂದ ನಮ್ಮ ಸಂಗ್ರಹವು ಪೂರ್ಣವಾಗಿದೆ

ಮದುವೆ, ಉಪನಯನ ಹಬ್ಬ, ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ಧೋತ್ರಗಳು, ಅಂಗೀ ವಸ್ತ್ರಗಳು, ಟೋಪಿಗಳು, ಇತ್ಯಾದಿ ಉಡುವತೊಡುವವುಗಳಿಗೆ ಸಂಬಂಧಪಟ್ಟ ಎಲ್ಲಾ ವಸ್ತ್ರಗಳು

ಪ. ನಾರಾಯಣ ವೈಜಪ್ಪಭಂಡಾರಿ,

ರಥಬೀದಿ, ಮಂಗಳೂರು,
ಇವರಲ್ಲಿ ದೊರಿಯುತ್ತವೆ.
ರಖಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು
ಚಿಲ್ಲರೆ ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡೋಣಾಗುತ್ತದೆ
ವಿಶೇಷ ಸೂಚನೆ:—ನಮ್ಮಲ್ಲಿ ಇತ್ತಲಾಗೆ ಬಂದಿರುವ ಸೀರೆಗಳ ರವಕುನ್ನು ಬಂದು ನೋಡಿರಿ.

ಮಡಿಕೇರಿ ಮುನ್ಸಿಫ್ ಕೋರ್ಟಿನಲ್ಲಿ

ಒರಿಜಿನಲ್ ನಂಬ್ರ $\frac{41}{1917}$

೧ ದಕ್ಷಿಣಕನ್ನಡಾ ಜಿಲ್ಲಾ ಕಾರ್ಕಳ ತಾಲೂಕು ಮಾಸ್ತಿಕಟ್ಟೆ ಗ್ರಾಮದಲ್ಲಿರುವ ಮುತ್ತಯ್ಯ ಪೂಜಾರಿ (೨) ಚೆನ್ನು ಹೆಂಗಸು.	ವಾದಿಗಳು	
೧. ಪಟೇಲ್ ಸೋಮೇಗೌಡನ ಹೆಂಡತಿ ನಂಜಮ್ಮ ಸೌತಿ ಆಕೆಯ ವಾರಿಸ್ತಾರರು ಸೆಕ್ರೆಟರಿ ಆಫ್ ಸ್ಟೇಟ್ ಫೊರ್ ಇಂಡಿಯಾ ಇನ್ ಕೌನ್ಸಿಲ್ (೨) ದಕ್ಷಿಣಕನ್ನಡಾ ಜಿಲ್ಲಾ ಕಾರ್ಕಳ ತಾಲೂಕು ದೊಳವಾಯು ಮೊಗಣ ಶಾಂತುವಾರ ಗ್ರಾಮದಲ್ಲಿದ್ದ ಹಾಲಿ ವಾಸಸ್ಥಳ ಗೊತ್ತಿಲ್ಲದ ಅಪ್ಪಣ್ಣ ಪೂಜಾರಿ	ಪ್ರತಿವಾದಿಗಳು	

ಮೇಲ್ಕಂಡ ನಂಬ್ರವು ಬರುವ ತಿಂಗಳ ತಾ. ೩೧ಕ್ಕೆ ಅಖೈರಿ ತೀರ್ಮಾನಕ್ಕೆ ಇಟ್ಟಿದೆ. ಸದರ್ ದಿನ ೨ನೆ ಪ್ರತಿವಾದಿಯು ಕೋರ್ಟ್ ... ಇಲ್ಲದಿದ್ದರೆ ... ತೀರ್ಮಾನವಾಗುವದು ಎಂದು ಈ ಮೂಲಕ ... ತಿಳಿಸಲ್ಪಟ್ಟಿದೆ.

ಆನಂದ ವಿಲಾಸಿನೀವಟಿಕಾ

ಈ ಔಷಧಿಯ ಹೆಸರು ಯಾವುದನ್ನು ಸೂಚಿಸುವದೋ ಆ ಗುಣಗಳೆಲ್ಲವೂ ಈ ಮಾತ್ರೆಗಳಲ್ಲಿ ನೆಲೆಗೊಂಡಿವೆ. ಈ ಮಾತ್ರೆಗಳಲ್ಲಿ ಒಂದನ್ನು ತಿಂದ ಕಾಲು ಗಂಟೆಯ ಕಾಲದಲ್ಲಿ ಈ ಔಷಧಿಯ ಗುಣವು ವ್ಯಕ್ತವಾಗುವದು.

ಕ್ರಯ 16 ಮಾತ್ರೆಗಳುಳ್ಳ ಡಬ್ಬಿಗೆ ರೂ 1

ಮೇಹ ಮರ್ದನ ಚೂರ್ಣ.

ಮೇಹಕಾರಕದಿಂದ ಮೂತ್ರದಲ್ಲಿ ಉರಿಯುವದು ... (ಕೆಸರು) ಬರುವದು ಮುಂತಾದ ವ್ಯಾಧಿಗಳನ್ನು ... 24 ಗಂಟೆಯಲ್ಲಿ ಗುಣಮಾಡುವದು.

ಕ್ರಯ ಡಬ್ಬಿಯೊಂದಕ್ಕೆ 1—0—0

ಒಂದೇ ಮಾತು

ಸ್ವಕೀ ಸೂಕೋಚದಿಂದ ವಿವರವಾಗಿ ಬರೆದು ತಿಳಿಸಲು ಆಗದು

ಬಹುದಿನ ಕೆಟ್ಟ ಚಾಲುಗಳಿಂದ ಬರುವ ... ಸಂಬಂಧವಾದ ಎಲ್ಲಾ ವ್ಯಾಧಿಗಳನ್ನು ಥಂಡಿ ... ಗುಣಮಾಡುವ

ಮದನಮಂಜರಿ ಮಾತ್ರೆಗಳು

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಹಸಿವೆ ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ... ಸೊಂಟದಲ್ಲಿ ನೋವಿದ್ದರೂ ಮೂತ್ರದಲ್ಲಿ ... ಈ ಮಾತ್ರೆಗಳನ್ನು ... ಈ ಮಾತ್ರೆಗಳಿಗೆ ...

ಮದನಮಂಜರಿ ...

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.

ithorised and issued Capital Rs.	300,000—0—0
bscribed Capital	246,500—0—0
id up Capital	243,050—0—0
posits	321,822—11—6
serve and other Funds ...	99,097—7—0

Fixed Deposits of Rs. 50/-and above in multiples Rs. 5/ received for 3, 6, 12 and 24 months @ 5½, 6, and 6½%. respectively at the discretion the managing committee. In the case of deposits r 12 months and 24 months interest will be paid alf yearly.

Short-notice Deposits requiring one week's notice withdrawal after one month received @ 2¼%. per num at the discretion of the managing committee.

Current Deposit Account opened free of charge.

Savings Bank Account opened for any sum ot less than 4 As. and multiples thereof and terest paid @ 4½%.

Loans granted on proper securities and pledges.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

ಅಧಿಕಾರಗೊಳಿಸಲ್ಪಟ್ಟ ಮತ್ತು ಚಂದಾ ಹಾಕಲಿಕ್ಕೆ

ಅರ್ಪಿಸಿದ ಮೂಲ ಧನವು	ರೂಪಾಯಿ	300,000—0—0
ಚಂದಾಹಾಕಿ ಯತ್ತಿದ ಮೂಲ ಧನವು	,,	246,500—0—0
ಮೌಲ್ಯ ತೆತ್ತ ಮೂಲ ಧನವು	,,	243,050—0—0
ಠೇವಣಾತಿಯಾಗಿ ಕೊಡೋಣವಾದ ಮೊಬಲಗುಗಳು		321,822—11-6
ಕ್ಷೇಮನಿಧಿ ಮತ್ತು ಇತರ ಫಂಡುಗಳು ...		99,097—7—0

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 5, 5½, 6; ಮತ್ತು 6½ ಬಡ್ಡಿ ಪ್ರಕಾರ ರೂ. 50 ಯಾ 5ರಿಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು. 12 ತಿಂಗಳ ವ 24 ತಿಂಗಳ ಠೇವಣಾತಿಗಳ ಸಂಗತಿಗಳಲ್ಲಿ ಅರ್ಧ ವರ್ಷಕ್ಕೊಮ್ಮೆ ಬಡ್ಡಿ ಕೊಡೋಣವಾಗುವದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2¼ ದರದಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣವಾಗುವವು.

ಸೇವಿಂಗ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣವಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣವಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣವಾಗುತ್ತವೆ.

Canara Bank Ltd.,
Mangalore, 1st May 1918.

P. Gopal Naik,
Secretary

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ಸ್ವದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 5, 3, 2-8-0, 1-0-0.

ಅರಗಜ ಮತ್ತು ಬಿಲ್ಲೆಗಳು. ತೋಲ 1ಕ್ಕೆ ರೂ. 3, 2, 1.

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿಚೇಷ್ಟೆಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ಉಪಯೋಗವಾದದ್ದು. ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 9 ಆಣೆ. ಈ ಸುಗಂಧವು ಬಿಳಿಯನ್ನು ತೇಗಲು ಉಪಯೋಗಕ್ಕೂ ಕಡವಂತೆ ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಎರಡಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರೆಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಭರಪುರ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ; ಕುಟುಂಬ ಜೀವನ ಮೊದಲಾದವುಗಳನ್ನು ಒಂದು ಸಲ ಮರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನವು, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಪ್ರಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. ಕ್ರಯ 16 ಮಾತ್ರೆ ರೂ. 1.

೨. ಸೂರ್ಯಪ್ರಭಾ. ಇದು ಸ್ಪರ್ಶೇಂದ್ರಿಯ ಸಕಲೇಂದ್ರಿಯವನ್ನು ಪುಷ್ಟಿಕ ಮಾಡುತ್ತದೆ. ತೊಲೆ 1ಕ್ಕೆ ರೂ. 1.

೩. ಅಶೋಕಾರಿಷ್ಟ. ಈ ಅರಿಷ್ಟವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುಷ್ಟಿದಾಯಕವಾಗಿರುತ್ತದೆ. ಬಾಟ್ಲಿ 1ಕ್ಕೆ 1-4-0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಜಾತಿ ರೋಗಗಳನ್ನು ಗುಣಪಡಿಸಿ ಸುಪುತ್ರಸಂತತಿಯನ್ನು ಸುಪುತ್ರನನ್ನು ಕೊಡುತ್ತದೆ. ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ತೊಂದರೆಗೆ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೊಮಿ ವ್ಯಾಧಿ, ಜ್ವರಗಟ್ಟಿ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ ರೂ. 1—8—0.

೭. ದದ್ರಾರಿ ಬ್ಯೂಟಿ ವೆಸಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0.

೮. ಅಮೃತಸಾರ. ಇದು ವಾಯು ಮುಖ್ಯ ಜಾಡ್ಯಗಳಿಗೆ ಅತಿ ಕೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ಪ್ರಾಶಕ್ಕೆ ರೂ. 1—0—0

N. B.— ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗೂ ಬೇಕಾದ ಔಷಧಗಳಿರುತ್ತವೆ. ನಮ್ಮ ಕೆಟಲಾಗನ್ನು ತರಸಿಕೊಳ್ಳಿರಿ.

ಎಮ್. ವಿ. ಶಂಕರಯ್ಯ, ಉಗ್ರಾಣಿಕಾರ್, ಮೆನೇಜರ್.

ಒರಿಯಂಟಲ್ ಗವರ್ನಮೆಂಟ್ ಸೆಕ್ಯುರಿಟಿ

ಲೈಫ್ ಇನ್ಸುರೆನ್ಸ್ ಕಂಪೆನಿ,

(ಲಿಮಿಟೆಡ್).

(1874ರಲ್ಲಿ ಹಿಂದುಸ್ಥಾನದಲ್ಲಿ ಸ್ಥಾಪಿಸಲ್ಪಟ್ಟಿತು.)

ಹೆಡ್ ಆಫೀಸು: ಒರಿಯಂಟಲ್ ಬಿಲ್ಡಿಂಗ್ಸ್, ಮುಂಬಯಿ.

ಮ್ಯಾನೇಜರ್: ಆರ್ ಪೆಟರ್‌ಸನ್ ಬ್ರೌನ್.

ಬ್ರಾಂಚ ಆಫೀಸುಗಳು ಮತ್ತು ಏಜನ್ಸಿಗಳು ಹಿಂದೂಸ್ಥಾನ ಬರ್ಮಾ ಮತ್ತು ಸಿಲೋನು ಈ ದೇಶಗಳ ಎಲ್ಲಾ ಕಡೆಗಳಲ್ಲಿಯೂ ಇವೆ.

ಈತನಕ ವಿಮೇದಾರರಿಗೆ ಕೊಡೋಣವಾದ ವಿಮೇ ಮೊಬಲಗು ಐದು ಕೋಟಿ ರೂ. (5,00,00,000)ಕ್ಕೆ ಮಿಕ್ಕಿರುವದು. ಜಮೆಯಾಗಿ ಬಂದು ಈಗ ಇರುವ ಫಂಡುಗಳು: ಐದುಕೋಟಿ ಐವತ್ತು ಲಕ್ಷ್ಯ ರೂ. (5,50,00,000.)

ಒರಿಯಂಟಲ್ ಕಂಪೆನಿಯಷ್ಟು ಭದ್ರವಾದಂಥಾದ್ದು ಸಮೃದ್ಧವಾದದ್ದು ಪುರಾತನವಾದಷ್ಟೇ ನೂತನವಾದ ಸ್ವದೇಶಿ ವಿಮೇ ಕಂಪೆನಿಯು ಮತ್ತೊಂದಿರದು.

ನಿಮ್ಮ ಕುಟುಂಬಕ್ಕೆ ಅಥವಾ ನಿಮ್ಮ ಮುದಿ ಪ್ರಾಯದ ಬಗ್ಗೆ ಬೇಕಾದ ಸಂಗ್ರಹವನ್ನು ಮಾಡಲೆಣಿಸುವವರಿಗೆ ಅನುಕೂಲವೂ ಭದ್ರವೂ ಮತ್ತು ಅತ್ಯಕೃಷ್ಟವೂ ಆದ ಉಪಾಯವು ಒರಿಯಂಟಲದಲ್ಲಿ ವಿಮೇ ಉತ್ತರಾಯಿಸುವದೇ ಆಗಿದೆ.

ವಿಮೇ ಉತ್ತರಾಯಿಸುವ ಬಗ್ಗೆ ಬೇಕಾದ ಫೋರ್ಮು ಇತ್ಯಾದಿಗಳನ್ನು ಮತ್ತು ಇನ್ನು ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರದು ತಿಳಕೊಳ್ಳಬಹುದು.

ಮಂಗಳೂರು ಏಜಂಟರು, ಡಿ. ವಾಸ್ ಎಂಡ್ ಸನ್ಸ್,
ಮಂಗಳೂರು ದ. ಕ.

ನವೀನ ಪುಸ್ತಕ! ನವೀನ ಪುಸ್ತಕ!!

ಹಿಂದೂ ಪತ್ರಿವಿವೇಕ

ಲೇಖಕ: ಒಡ್ಡಮನೆ ಆತ್ಮಾರಾಮ ಶಾಸ್ತ್ರಿ.

ಕ್ರಯ— ಪ್ರತಿ ಒಂದಕ್ಕೆ ಆಣೆ 10.

ವಿಳಾಸ:— ಮ್ಯಾನೇಜರ್, ಶಾರದಾ ಪ್ರಕಾಶನ, ಮಂಗಳೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದ ವರೆಗೆ ಘಟ್ಟಿಯಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಅನುನಿತ್ಯ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸಪ್ಪಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೀಗಿಕೊಂಡು ಆಹಾರ ತಿನ್ನುವದೆ ಅತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವದೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ

ಗುಣ ವಿಶೇಷ! ಕ್ರಯ ಕಮ್ಮಿ!! ಹೂಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ಪರವೂರುಗಳಲ್ಲಿ ಏಜಂಟರಾಗಲಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಸೋಲ್ ಏಜಂಟ್ಸ್:— ಜೆ. ಎಸ್. ಸೋಜ ಮತ್ತು ಕಂಪೆನಿ,
ಹಂಪನಕಟ್ಟಾ, ಮಂಗಳೂರು.

ಆರ್. ಮಾರ್ಟಿನ್ಸರ

ಸಾರಸಾಪರಿಲ್ಲಾ

ಈ ಸಾರ್ಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತೆಗೆದುಕೊಳ್ಳುವದರಿಂದ ಮೈಯೊಳಗಿನ ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗಿ, ಕೆಟ್ಟ ರಕ್ತಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬುವುದು. ನರಗಳಲ್ಲಿರುವ ನೋವು, ವಾತ, ಸಂಧಿವಾತ, ಯಕೃತ್ಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ, ಮತ್ತು ಚರ್ಮದ ರೋಗಗಳು, ವಿಷಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವೇ ಮೊದಲಾದುವನ್ನು ನಾಶಮಾಡಿ, ರಕ್ತದಲಿರುವ ವಿಷವಸ್ತುವನ್ನು ಎಂದರೆ ಪಾದರಸ ಮುಂತಾದ್ದರಿಂದ ಆದಮೃತಿಯನ್ನು ಹೋಗಲಾಡಿಸಿ ರಕ್ತವನ್ನು ಚೆನ್ನಾಗಿ ಶುದ್ಧಿಯಾಗಿಟ್ಟು ಮನುಷ್ಯನನ್ನು ಯಾವಾಗಲೂ ಆರೋಗ್ಯದಲ್ಲಿಡುತ್ತದೆ. ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟಿದ್ದಾಗಿರುತ್ತದೆ. ಬಾಟ್ಲಿ ೧ಕ್ಕೆ ಕ್ರಯ ರೂ. ೧-೧೪-೦

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸ್‌ಚರ್.

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾಳಿಜ್ವರ, ಸನ್ನಿಪಾತ, ಕೆಟ್ಟ ವಾಯುವಿನಿಂದುಂಟಾದ ರೋಗ ಇವೇ ಮೊದಲಾದ ಎಲ್ಲಾ ತರಹದ ಜ್ವರಗಳನ್ನೂ ಕೂಡಲೇ ನಾಶಮಾಡುತ್ತದೆ. ಎಲುಬುಗಳಲ್ಲಿ ಹರಡಿಕೊಂಡಿರುವ ಜ್ವರವನ್ನು ಸಹ ನಾಶಮಾಡುವುದಲ್ಲದೆ ಇದು ಸಿಹಿಯಾಗಿರುವುದರಿಂದ ಸಣ್ಣ ಕೂಸುಗಳು ಸಹ ಕುಡಿಯಲಿಕ್ಕೆ ಇಚ್ಛಪಡುತ್ತವೆ, ಅನೇಕ ಜನ ವಿದ್ವಾಂಸ ವೈದ್ಯರಿಂದ ಗುಣಮಾಡುವದಕ್ಕಾಗದ ಜ್ವರವನ್ನು ಈ ಎರಡೇ ಎರಡು ಬಾಟ್ಲಿಗಳ ಸೇವನೆಯಿಂದ ಹುಶಾರಾಗಿದೆ. ಬಾಟ್ಲಿ 1ಕ್ಕೆ ರೂ. ೦—೧೩—೦.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯನಿಗೆ ಮೂಲವ್ಯಾಧಿ ಆದಾಗ್ಯ ಬಹಳ ಸಲ ಉತ್ತೆ ಹೊಯ್ಯುವಿಕೆ, ಮರ್ಮಸ್ಥಾನದಲ್ಲಿ ಉರಿಯುವುದು, ಮಲಬದ್ಧತೆ ಇವೇ ಮುಂತಾದ್ದರಿಂದ ವ್ಯಥೆಪಡುತ್ತಾನೆ. ಈ ಔಷಧದ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ, ಕಂಠದಲ್ಲಿ ನೋಯುವ ಮೂಲವ್ಯಾಧಿ ಮತ್ತು ಎಂಥ ತರಹದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ಒಳ್ಳೇ ಔಷಧಗಳಿಂದ ತಯಾರಿಸಲ್ಪಟ್ಟು ತೆಗೆದುಕೊಳ್ಳುವವರಿಗೆ ಏನೊಂದೂ ನೋವನ್ನು ಕೊಡದೆ ತಂಪಾಗಿ ಮಾಡುತ್ತದೆ. ಬಾಟ್ಲಿ ೧ಕ್ಕೆ ರೂ. ೧—೮—೦.

ವಿಳಾಸ:— ಆರ್. ಡಿ. ಕಟ್ಲೆ ಮತ್ತು ಕಂಪೆನಿ,
ನಂಬ್ರ ಡಿ. ಫ್ರೆಯರ್ ರೋಡ್,
ರೈಟ್ ಎಂಡ್ ಕೋ ಹತ್ತರ, ಫೋರ್ಟ್, ಮುಂಬಯಿ.

R. D. Kately & Co.
No. D. Frere Road,
Near Wright & Co. Fort Bombay.

ಎಲ್ಲಾ ತರದ ಸ್ಯಾಕಲುಗಳ ದುರುಸ್ತಿಗಳನ್ನೂ, ಸೈಕಲುಗಳ ಉಪಕರಣಗಳನ್ನೂ ಸುಲಭಕ್ರಯದಲ್ಲಿ ಮನಸ್ಸಿಗೆ ತೃಪ್ತಿಕರವಾಗಿ ಒದಗಿಸಿಕೊಡುವ

ಮಂಗಳೂರು ಸೈಕಲ್ ಸ್ಟೋರ್ಸ್

(1917ನೇ ಇಸವಿಯಲ್ಲಿ ಮಂಗಳೂರಲ್ಲಿ ನಡೆದ ವಸ್ತುಪ್ರದರ್ಶನದಲ್ಲಿ ಬಹುಮಾನಪದಕವನ್ನು ಪಡೆದಿದೆ.)

ಇವರಿಂದ

ಬರೇ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ

ದಂತಪ್ರೀನ

ಈ ದಂತಾಮೃತವು ಎಲ್ಲಾ ತರಹ ಹಲ್ಲುನೋವುಗಳಿಗೂ ಒಸಡಿಗೂ ಕೈಕಂಡ ದಿವ್ಯ ಔಷಧ.

ಹಲ್ಲುನೋವು ಶುರುವಾದ ಕೂಡಲೇ 2 ಯಾ 3 ತಟಕುಗಳನ್ನು ಹಲ್ಲುಗಳಿಗೆ ಹಾಕಿದ್ದಲ್ಲಿ ಗುಣಕರ. ದೀರ್ಘಕಾಲದ ನೋವುಗಳಿಗೆ ಈ ಔಷಧವನ್ನು ಒಂದು ವಾರದ ವರೆಗೆ ಉಪಯೋಗಿಸಿದ್ದಲ್ಲಿ ದಂತವೈದ್ಯರ ಚಿಕಿತ್ಸೆ ಆಗತ್ಯವಿಲ್ಲ. ಒಮ್ಮೆ 1 ಶೀಸೆಯನ್ನು ತರಿಸಿ ಉಪಯೋಗಿಸಿದ್ದಲ್ಲಿ ಖಾತ್ರಿಯಾಗುವದು.

ಶೀಸೆ ೧ರ ಕ್ರಯ ರೂ. 1—0—0. ವೀ. ಪಿ. ಚಾರ್ಜು ಪ್ರತ್ಯೇಕ. ಒಮ್ಮೆ ೧೨ ಶೀಸೆ ತರಿಸುವವರಿಗೆ ವಿ. ಪಿ. ಚಾರ್ಜು ಇಲ್ಲದೆ ಕಳುಹಿಸಲಾದೀತು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ:— ಮಂಗಳೂರು ಸೈಕಲ್ ಸ್ಟೋರ್ಸ್,
ಮಂಗಳೂರು, ದ. ಕನ್ನಡ.

ವಿಶೇಷ ಸೂಚನೆ:— ಈ ಔಷಧಿಯನ್ನು ಪ್ರಚುರಪಡಿಸುವ ಬಗ್ಗೆ ಆಗಸ್ಟು ಅಂತ್ಯದ ವರೆಗೆ ಪ್ರತಿಯೊಬ್ಬರಿಗೆ ಶೇಕಡಾ 100 [illegible]

ಕ್ರಮವನ್ನು ಕೈಕೊಳ್ಳಬೇಕಾಗಿದೆ ಎಂದು ಹಿಂದುಸ್ಥಾನ ಸರಕಾರವು ಸೂಚಿಸಿದೆ. ಜನರ ಪ್ರತಿನಿಧಿಗಳ ಪ್ರವೇಶವು ಮ್ಯುನಿಸಿಪಾಲಿಟಿಗಳ ಮತ್ತು ಲೋಕಲ್ ಬೋರ್ಡು ಈ ಎರಡೂ ಸಂಸ್ಥೆಗಳಲ್ಲಿ ಈಗ ಸಾಧಾರಣವಾಗಿ ನೇಕಡಾ ೬ ರಂತೆ ಇದೆ ವಿಲಾಯತಿಯಲ್ಲಿ ೧೬ ರಷ್ಟು ಇದೆ ಆದರೆ ಈ ವಿಲಾಯತಿ ಕ್ರಮವನ್ನು ಇಲ್ಲಿ ಥಟ್ಟನೆ ಉಪಕ್ರಮಿಸುವದು ಅಸಾಧ್ಯ. ಆದರೂ ಪ್ರತಿನಿಧಿಗಳನ್ನು ಆರಿಸಿಕೊಡುವ ಪಾತ್ರತೆಯನ್ನು ಆದಷ್ಟು ಹೆಚ್ಚಿಸುವ ಆಲೋಚನೆಯು ಸರಕಾರವು ಮಾಡೀತು

೩ ಮುನ್ಸಿಪಾಲಿಟಿಯ ಅಧ್ಯಕ್ಷನ ನೇಮಕದ ವಿಷಯದಲ್ಲಿ ಅಧಿಕಾರ ವಿಭಜನ ಕಮಿಷನಿನ ಅಭಿಪ್ರಾಯವನ್ನು ಅನುವಾದಿಸುವಾಗ ಈ ಸರಕಾರಿ ಠರಾವು ಹೇಳುವದೇನೆಂದರೆ —ಬಿನ್‌ಸರಕಾರಿ ಗೃಹಸ್ಥರೆ ಮುನ್ಸಿಪಾಲಿಟಿಯ ಅಧ್ಯಕ್ಷಸ್ಥಾನದಲ್ಲಿ ಚುನಾಯಿಸಲ್ಪಡಬೇಕು, ಸರಕಾರಿ ಅಧಿಕಾರಿಗಳನ್ನು ಈ ಸ್ಥಾನದಲ್ಲಿ ನಿಲ್ಲಲು ಬಿಡಬಾರದು ಎಂದರೆ ಅವರು ನಿಂತುಕೊಳ್ಳಕೂಡದು ಒಂದುವೇಳೆ ವಿವಕ್ಷಿತ ಮುನ್ಸಿಪಾಲಿಟಿಗೆ ಸರಕಾರಿ ಅಧಿಕಾರಿಗಳೆ ಅಧ್ಯಕ್ಷಸ್ಥಾನದಲ್ಲಿ ಬೇಕೆಂದಿದ್ದರೆ ಆ ಸಂದರ್ಭದಲ್ಲಿ ಒಬ್ಬ ಅಧಿಕಾರಿಯನ್ನು ಆರಿಸಬಹುದು ಪರಂತು ಈ ಕ್ರಮವು ಸರಕಾರಕ್ಕೆ ಪ್ರಕೃತ ಅಷ್ಟೊಂದು ಪ್ರಶಸ್ತವಾಗಿ ತೋರುವದಿಲ್ಲ ಈಗ ಹಿಂದೂಸ್ಥಾನದೊಳಗಿನ ಮುನ್ಸಿಪಾಲಿಟಿಯ ಅಧ್ಯಕ್ಷರಲ್ಲಿ ಮೂರು ಸಮಪ್ರಮಾಣದ ವರ್ಗಗಳಿವೆ ಸರಕಾರಿ ಅಧಿಕಾರಿಗಳು ಬಿನ್‌ಸರಕಾರಿ ಗೃಹಸ್ಥರು, ಆದರೆ ಸರಕಾರನಿಯುಕ್ತರು ಹಾಗು ಲೋಕನಿಯುಕ್ತರು ಈ ಮೂರು ವರ್ಗಗಳಲ್ಲಿ ಈಚೀಚಗೆ ಅನೇಕ ಕಡೆಗಳಲ್ಲಿ ಲೋಕನಿಯುಕ್ತ ಅಧ್ಯಕ್ಷರ ಕೇಳಿಕೆಯೆ ಹೆಚ್ಚಾಗಿ ಬರುವದರಿಂದ ಅಂಥ ಅಧ್ಯಕ್ಷರ ಸಂಖ್ಯೆಯು ಅಧಿಕವಾಗುತ್ತ ನಡೆಯುವದು ಸ್ವಾಹಜಿಕವಷ್ಟೆ ಬೇರೆ ಬೇರೆ ಪ್ರಾಂತಗಳಲ್ಲಿ ಮುನ್ಸಿಪಾಲಿಟಿಯ ಅಧ್ಯಕ್ಷರು ಸರಕಾರಿ ಅಧಿಕಾರಿಗಳು ಅಥವಾ ಸರಕಾರ ನಿಯುಕ್ತರಾದರೂ ವತ್ತ ಇದೇ ಕ್ರಮವು ಇನ್ನೂ ಕೆಲವು ಮುನ್ಸಿಪಾಲಿಟಿಗಳಿಗೆ ಅಪೇಕ್ಷಿತವಾಗಿದ್ದರೂ ಆದಷ್ಟರಮಟ್ಟಿಗೆ ಈ ಪದ್ಧತಿಯನ್ನು ತೆಗೆದ ಹಾಕಿ ಲೋಕಮತದ ಚುನಾವಣೆಯ ತತ್ವವನ್ನೆ ಸರ್ವತ್ರ ದೃಢಪಡಿಸುವ ಆಲೋಚನೆಯು ಹಿಂದೂಸ್ಥಾನ ಸರಕಾರದಲ್ಲಿ ಉಂಟಾಗಿದೆ ಜಿಲ್ಲಾ ಮತ್ತು ತಾಲೂಕ ಬೋರ್ಡುಗಳಲ್ಲಿ ಸಹ ಈ ಚುನಾವಣೆಯ ಕ್ರಮವನ್ನೆ ಆದರಿಸಬೇಕೆಂದು ಸರಕಾರವು ಅಭಿಪ್ರಾಯಪಡುವದು

೪ ತೆರಿಗೆಯ ನ್ಯೂನಾಧಿಕ್ಯಗಳ ವಿಷಯವಾಗಿ ಅ ವಿ ಕಮಿಷನು ಶಿಫಾರಸು ಮಾಡುವಂತೆ ಲೋಕಲಬೋರ್ಡುಗಳಿಗೆ ಸ್ವಾತಂತ್ರ್ಯವಿರುವದು ಯುಕ್ತವು ಪರಂತು ಮುನ್ಸಿಪಾಲಿಟಿಗಳ ವಿಷಯವು ಸ್ವಲ್ಪ ಭಿನ್ನವಾಗಿರುವದರಿಂದ ಆ ಕ್ರಮವನ್ನೆ ಇವುಗಳಿಗೆ ಲಗಾವುಮಾಡುವದು ಸರಿಯಲ್ಲವೆಂದು ಸರಕಾರಿ ಠರಾವಿನ ಆಶಯವಿದೆ ತೆರಿಗೆಯ ವಿಷಯವಾಗಿ ಇಂತಿಷ್ಟೆಂದ ಕಾಯಿದೆಯ ಮೂಲಕವಾಗಿ ನಿಶ್ಚಯವಿಲ್ಲದ ಕಡೆಯಲ್ಲಿ ಅದರಲ್ಲಿ ಬದಲಾವಣೆಯಾಗುವ ಆವಶ್ಯಕತೆ ಇದ್ದಲ್ಲಿ ಅಧಿಕಾರಿಯ ಸಮ್ಮತಿಯು ಅವಶ್ಯವಾಗಿದೆ ಆದರೆ ಈ ರೀತಿಯಿಂದ ಇಷ್ಟೆಂದು ನಿಶ್ಚಯಿಸದ ಕಡೆಯಲ್ಲಿ ಅಧಿಕಾರಿಗಳ ಸಮ್ಮತಿಯು ಹಾದಿಯನ್ನು ನಿರೀಕ್ಷಿಸದೆ ಲೋಕಲ್‌ಬೋರ್ಡುಗಳು ತೆರಿಗೆಯ ಸಂಬಂಧದಲ್ಲಿ ಸ್ವತಂತ್ರವಾಗಿರುವವು ಮುನ್ಸಿಪಾಲಿಟಿಗಳ ಜಮಾ ಖರ್ಚಿನ ವಿಷಯದಲ್ಲಿ ಅಧಿಕಾರವಿಭಜನ ಕಮಿಷನು ತನ್ನ ಶಿಫಾರಸಿನಲ್ಲಿ ಸೂಚಿಸಿದ್ದಂತೆ ಅವುಗಳಿಗೆ ಸ್ವಾತಂತ್ರ್ಯವಿರುವದು ಸರಕಾರಕಕ್ಕು ಇಷ್ಟವಾಗಿ ತೋರುತ್ತದೆ ಹಣದ ಹಾಗು ಬೇರೆ ಎಲ್ಲ ವಿಷಯಗಳಲ್ಲಿ ಅ ವಿ ಕಮಿಷನಿನ ಶಿಫಾರಸುಗಳನ್ನು ಹೆಚ್ಚಾಗಿ ಸರಕಾರಿ ಠರಾವು ಮಂಜೂರಮಾಡಿದೆಂದು ಒಂದೆ ಮಾತಿನಿಂದ ಹೇಳಿದರೆ ಈಗ ಹೊರಗೆಬಿದ್ದ ಠರಾವಿನ ಸಾಮಾನ್ಯ ಸ್ವರೂಪವು ತಿಳಿದುಬರುವಂತಿದೆ ಎಂಬುದಕ್ಕೆ ಅಡ್ಡಿ ಇಲ್ಲ ಆದರೂ ಬೇರೆ ಎಷ್ಟೋ ವಿಷಯಗಳನ್ನು ಅಧಿಕಾರ ವಿಭಜನದ ಕಮಿಷನು ಉಪಯುಕ್ತತೆಯ ಮತ್ತು ದೇಶಹಿತದ ದೃಷ್ಟಿಯಿಂದ ಏನು ಸೂಚಿಸಿರುವದೊ ಅವುಗಳನ್ನು ಈ ಠರಾವು ಬಿಟ್ಟು ಬಿಟ್ಟದೆಂದು ವಿಧಿಸಿದರೆ ಅದು ಅಪ್ರಾಮಾಣಿಕವಾಗಲಾರದು ಇರಲಿ ಗ್ರಾಮಪಂಚಾಯತಿಯ ವಿಷಯವಾಗಿ ಅ. ವಿ ಕಮಿಷನಿನ ಉದ್ಧೃತಪಡಿಸಿದ ಅಭಿಪ್ರಾಯವನ್ನು ವಾಚಕರ ಮುಂದೆ ಸಂಕ್ಷಿಪ್ತವಾಗಿ ಇಡುತ್ತೇವೆ ಪಂಚಾಯತಿ ಸಂಸ್ಥೆಗಳಲ್ಲಿ ಬೇರೆ ಬೇರೆ ಪ್ರಾಂತಗಳ ಮಟ್ಟಿಗೆ ಮಾತ್ರವಲ್ಲ, ಒಂದೆ ಪ್ರಾಂತದೊಳಗಿನ ಪಂಚಾಯತಿ ಸಂಸ್ಥೆಗಳಲ್ಲಿ ಏಕರೂಪತ್ವವು ಇಲ್ಲ, ಅವುಗಳಲ್ಲಿ ತುಂಬಾ ಭೇದವಿದೆ. ಮತ್ತು ಹಾಗಿರುವದು ಕೂಡ ಸಹಜವಾಗಿದೆ ಕೆಲವು ಊರುಗಳ ಸಮುದಾಯಕ್ಕೆ ಒಂದು ಪಂಚಾಯತಿಯು ಇರಬೇಕು; ಎಲ್ಲ ಪಂಚಾಯತಿಗಳ ಕಾಯಿದೆಕಾನೂನಿನ ಅಧಿಕಾರ ಕಾರ್ಯಕ್ರಮದ ಪದ್ಧತಿಯು ಒಂದೆ ಬಗೆಯಾಗಿರಬೇಕೆಂದಿಲ್ಲ, ನ್ಯಾಯ ಹಾಗು ಮುಲಕಿ ಖಾತೆಗಳಲ್ಲಿ ಅವವುಗಳಿಗೆ ಅನುರೂಪವಾಗುವಂತೆ ಬೇಕಾದ ಕಾರ್ಯವನ್ನಿಟ್ಟುಕೊಳ್ಳ ಬಹುದು, ಹಳ್ಳಿಗಳಲ್ಲಿರುವ ಆರೋಗ್ಯ, ಶಿಕ್ಷಣ ಮುಂತಾದ ಖಾತೆಗಳು ಈ ಪಂಚಾಯತಿ ಸಂಸ್ಥೆಗಳಲ್ಲೆ ಅಂತರ್ಭವಿಸುವದು ಯೋಗ್ಯವು, ಈ ರೀತಿಯಿಂದ ಕೊಟ್ಟಿರುವ ಕೆಲವು ಸೂಚನೆಗಳನ್ನು ಈ ಸರಕಾರಿ ಠರಾವು ಅಂಗೀಕರಿಸಿ ಪಂಚಾಯತಿ ಸಂಸ್ಥೆಗಳಿಗೆ, ಆವಶ್ಯವಿದ್ದರೆ ಸ್ವಲ್ಪಮಟ್ಟಿಗೆ ತೆರಿಗೆಯನ್ನು ಕೂಡ್ರಿಸುವ ಅಧಿಕಾರವನ್ನು ಕೊಡಬಹುದೆಂದು ಹೇಳುತ್ತದೆ.

೫. ಸ್ಥಾನಿಕಸ್ವರಾಜ್ಯದ ಕುರಿತು ಹೊರಬಿದ್ದ ಸರಕಾರಿ ಠರಾವಿನ ಸ್ವರೂಪವು ಮೇಲಿನಂತಿದೆ. ಅದರ ಸಂಪೂರ್ಣ ಕಲ್ಪನೆಯು ಬರಬೇಕಾದರೆ ಇನ್ನೂ ಎಷ್ಟೋ ಸಂಗತಿಗಳನ್ನು ಹೇಳಬಹುದು. ಆದರೆ ಅವುಗಳನ್ನು ಒಂದೆ ಸುತ್ತಿಗೆ ವಾಚಕರಿಗೆ ಅರ್ಪಿಸುವದು ಬೇಸರದ ಮಾತು ಅಲ್ಲದೆ, ಮೇಲೆ ಹೇಳಿದಂತೆ ಜಾಗೆಯ ಅಭಾವವು ಆದರೂ ಮುಂದೆ ಒಂದು ವೇಳೆ, ಉಪಯುಕ್ತ ಮತ್ತು ಜನಹಿತಕ್ಕೆ ಸಾಧಕವಾಗಬಹುದಾದ ಪ್ರಸ್ತಾವಗಳನ್ನು ಈ ಠರಾವಿನಿಂದ ಎತ್ತಿ ವಿವರಿಸಬಹುದು. ತಥಾಪಿ ಪ್ರಕೃತ ಈ ಸ್ಫುಟವಿಚಾರವನ್ನು ಮುಗಿಸಬೇಕಾದರೆ ಒಂದೆರಡು ಮಾತುಗಳನ್ನಾದರೂ ಹೇಳದಿದ್ದರೆ ಪತ್ರಕಾರರ ಕರ್ತವ್ಯವನ್ನು ಮಾಡಿದಂತಾಗದು ಕೆಲವು ವರ್ಷಗಳ ಹಿಂದೆ ಎಂದರೆ ಸನ್ ೧೯೦೭ ನೆ ವರ್ಷಗಳಲ್ಲಿ ಕುಳಿತ ಅಧಿಕಾರ ವಿಭಜನದ ಕಮಿಷನು ಸಾಮಾನ್ಯವಾಗಿ ಶಿಫಾರಸು ಮಾಡಿದ ಕೆಲವು ಮಾತುಗಳನ್ನೆ ತೆಕ್ಕೊಂಡು ಸ್ವರಾಜ್ಯದ ಈ ಮಹಾ ಪರ್ವಕಾಲದಲ್ಲಿ ಸರಕಾರವು ಈ ಸ್ಥಾನಿಕಸ್ವರಾಜ್ಯದಂಥ ಅಲ್ಪ ಸುಧಾರಣೆಗಳ ತಿಲದಾನವನ್ನು ಮುಂದೆ ಮಾಡಿದೆ ಕಮಿಷನಿನ ಸಂಪೂರ್ಣ ಶಿಫಾರಸುಗಳನ್ನಾದರೂ ಅಂಗೀಕರಿಸಿದಾದರೆ ಅದಾದರೂ ಒಂದು ಸಮಾಧಾನಕ್ಕೆ ಆಸ್ಪದವಾಗುತ್ತಿತ್ತು ಹಾಗೂ ಇಲ್ಲ ಜನತೆಯು ಹಿಂದಿ ಸ್ವರಾಜ್ಯದಂಥ ಸ್ವಾವಲಂಬನದ ಸಾಧನವನ್ನೇ ದಯಪಾಲಿಸಿರಿ ಎಂದು ಇಡಿ ದೇಶವು ಏಕಮುಖದಿಂದ ಕೇಳುವಾಗ ಸರಕಾರವು ವಿಶೇಷ ಬೆಲೆ ಬಾಳದ ಹಾಗು ಮಹತ್ವವಿಲ್ಲದ ಅಲ್ಪ ಸುಧಾರಣೆಗಳ ಹರಿಗಡ್ಡೆಯನ್ನು ಇಲ್ಲಿಯವರ ಕೈ ಮೇಲೆ ಹಾಕಿ ನಮ್ಮಿಂದ ಮುಖ್ಯಧ್ಯೇಯವನ್ನು ಕಣ್ಮರೆಮಾಡಲು ಯತ್ನಿಸುತ್ತದೆಂಬ ಅಪವಾದಕ್ಕೆ ಗುರಿಯಾಗಬಹುದು ಆದರೆ ಒಂದನ್ನು ನೋಡಿ ಇನ್ನೊಂದನ್ನು ಮರೆತುಬಿಡುವ ಹಿಂದೂಸ್ಥಾನದ ಬಾಲ್ಯಗುಣದ ದಿವಸಗಳು ಈಗ ಹೋಗಿವೆ ಎಂದು ಹೇಳಲು ಸಂಕೋಚ ತೋರುವದಿಲ್ಲ ಒಂದು ವೇಳೆ ಈ ಠರಾವಿನೊಳಗಿನ ಬೇರೆ ಆಕ್ಷೇಪಣೀಯ ಭಾಗಗಳನ್ನು ಸಮಯಾನುಸಾರ ಚರ್ಚಿಸೆ ಬರುವದರಿಂದ ಈಗ ಇಲ್ಲಿಗೆನೆ ಇದನ್ನು ಬಿಟ್ಟುಬಿಡುತ್ತೇವೆ

೧ ಮದ್ರಾಸ ಲೀಗಿನ ಕಡೆಯಿಂದ ಇಂಗ್ಲಂಡಿಗೆ ಹೋಗಲು ಹೊರಟ ಜಿಬ್ರಾಲ್ಟರಿನ ವರೆಗೆ ತಲಪಿದ ಹೋಮ್‌ರೂಲಿನ ಪ್ರತಿನಿಧಿಮಂಡಳವನ್ನು ಅಲ್ಲಿಂದ ಹಿಂದೆ ಕರೆಸಿಕೊಂಡ ಸಂಗತಿಯು ನಮ್ಮ ವಾಚಕರಿಗೆ ಗೊತ್ತೆ ಇದೆ ಆ ಪ್ರತಿನಿಧಿಗಳು ಜಿಬ್ರಾಲ್ಟರಿನಿಂದ ಹಿಂತಿರುಗಿ ಈಗ ಮದ್ರಾಸಿಗೆ ಬಂದು ಸೇರಿದ್ದಾರೆ ಈ ಪ್ರತಿನಿಧಿ ಬಂಧುಗಳನ್ನು ಸನ್ಮಾನಿಸಲು ಹಾಗೆ ಅವರ ಪಾಸ್‌ಪೋರ್ಟನ್ನು ರದ್ದುಪಡಿಸಿದ ಸರಕಾರದ ಕೃತ್ಯವನ್ನು ನಿಷೇಧಿಸಲು ಕಳೆದ ವಾರ ಮದ್ರಾಸಿನಲ್ಲಿ ರಾ ಬ ನಾಮದಾರ ಶಂಕರನ್ ಅಧ್ಯಕ್ಷತೆಯಿಂದ ಒಂದು ಮಹಾ ಸಭೆಯು ನೆರೆತ ಸಭೆಯೊಳಗಿನ ಅಧ್ಯಕ್ಷರ ಅಥವಾ ಬೇರೆ ವಕ್ತ್ಯಗಳ ಭಾಷಣದ ಮೇಲಿಂದ ಸರಕಾರವು ಹೋಮ್ ರೂಲಿನ ಪಾಸ್‌ಪೋರ್ಟನ್ನು ರದ್ದುಪಡಿಸಿದ್ದು ಹೆಚ್ಚು ತಪ್ಪೆಂದು ಕಂಡುಬರುತ್ತದೆ ಮುಖ್ಯ ವಕ್ತೃಗಳಾಗಲಿ ಉಪವಕ್ತೃಗಳಾಗಲಿ ಈ ಸರಕಾರಿ ಕೃತ್ಯವನ್ನು ನಿಷೇಧಿಸಿದರು ಮಾತ್ರವಲ್ಲ ಡಾ ಟಿ ಎಮ್ ನಾಯರರನ್ನು ಮಾತ್ರ ಇಂಗ್ಲಂಡಿಗೆ ಹೋಗಲು ಅಪ್ಪಣೆ ಕೊಟ್ಟು ಸರಕಾರಿ ಅಧಿಕಾರಿಗಳು ತಮ್ಮ ಸಂಪೂರ್ಣ ಪಕ್ಷಪಾತವನ್ನು ವ್ಯಕ್ತಗೊಳಿಸಿದಂತಾಗಿದೆ ಎಂದು ಹೇಳಿದರು ಅಧಿಕಾರಿ ವರ್ಗದ ಒಂದೆ ನೋಕರಶಾಹಿಯು ತಲೆಯ ಮೇಲೆ ಒಂದಿರುವ ಈ ಪಕ್ಷಪಾತ ದೋಷವನ್ನು ಪರಿಹರಿಸಿಕೊಳ್ಳಲಿಕ್ಕೆ ಆ ನೋಕರಶಾಹಿಗೆ ಈಗ ಎರಡೆ ಸರಳವಾದ ಮಾರ್ಗಗಳಿರುವವು ಹೋಮ್ ರೂಲ್ ಡೆಪ್ಯುಟೇಷನಿಗೆ ಪುನಃ ವಿಲಾಯತಿಗೆ ಹೋಗಲು ಅಪ್ಪಣೆಯನ್ನು ಕೊಡಬೇಕು, ಅಥವಾ ಡಾ ನಾಯರರನ್ನು ಹಿಂದಕ್ಕೆ ಕರೆಯಿಸಿಕೊಳ್ಳಬೇಕು ಈ ಎರಡು ಮಾರ್ಗಗಳಲ್ಲಿ ಸರಕಾರವು ಯಾವದನ್ನು ಅಂಗೀಕರಿಸುವದೆ ಇನ್ನು ನಿರೀಕ್ಷಿಸುವದರಲ್ಲಿ ಅನೇಕರಿರುವರು ಪರಂತು ನಮ್ಮ ಅಭಿಪ್ರಾಯದಂತೆ ಅಧಿಕಾರಿ ವರ್ಗಕ್ಕೆ ಮೇಲೆ ತೋರಿಸಿದ ಮಾರ್ಗಗಳ ಸದಾಲೋಚನೆಯು ಹುಟ್ಟುವದು ಅಸಾಧ್ಯವೆಂದ ತೋರುತ್ತದೆ

೭ ಹಿಂದಿ ಸ್ವರಾಜ್ಯದ ಅವಸ್ಥೆಯ ಬೇಕೆನಂತೆ ಆಗುವಾಗ ಐರ್ಲಂಡಿನಲ್ಲಿ ಅದರ ಹೋಮ್ ರೂಲಿನ ಅವಸ್ಥೆಯು ಹ್ಯಾಗಿದೆ ಎಂಬುದನ್ನು ತಿಳಿದುಕೊಳ್ಳಲು ವಾಚಕರಿಗೆ ಜಿಜ್ಞಾಸೆಯು ಹುಟ್ಟುವದು ಸಹಜವೆ ಆದರೆ ಐರ್ಲಂಡಿನಲ್ಲಿ ಸಿನ್‌ಫೆನರ್ಸರೆಂಬ ದಂಗೆಖೋರರ ಉಪಟಳವು ಹೆಚ್ಚಾಗಹತ್ತಿದೆಂದು ರೋಯ್ಟರನ ತಂತಿಬಾತಮಿಗಳಿಂದ ತಿಳಿದುಬರುತ್ತದೆ ಐರ್ಲಂಡಿಗೆ ಹೋಮ್ ರೂಲು ಸಿಕ್ಕಿದರೂ ಕೂಡ ಸೈನ್ಯದ ಒತ್ತಾಯದ ಪದ್ಧತಿಯನ್ನು ಜಾರಿಯಲ್ಲಿ ತರಕೂಡದೆಂಬ ಮತವು ಅಲ್ಲಿ ಪ್ರಬಲವಾಗುತ್ತ ಹೋಗಿದೆಂದು ಕಂಡುಬರುತ್ತದೆ. ಆದರೆ ಮುಖ್ಯಮಂತ್ರಿಗಳಾದ ಮಿ ಲೊಯ್ಡ ಜೋರ್ಜರು ತಮ್ಮ ಮುತ್ಸದಿತನ ಹಾಗು ವಾಗ್‌ಚಾತುರ್ಯ ಇವುಗಳ ಬಲದಿಂದ ಐರ್ಲಂಡಿನೊಳಗಿನ ಮತಭೇದಗಳನ್ನು ಮುರಿದು ಸ್ವರಾಜ್ಯದಾನದಿಂದ ಐಕ್ಯವನ್ನು ಸಾಧಿಸಲು ಹಗಲೂ ಇರುಳೂ ಯತ್ನಿಸುತ್ತಿದ್ದಾರೆ. ಎಡಿನಬರೊ ಪಟ್ಟಣದಲ್ಲಿ ಈಚೆಗೆ ಆದ ಒಂದು ಭಾಷಣದಲ್ಲಿ ಮಿ ಲೊಯ್ಡ ಜೋರ್ಜರು ಹೇಳುತ್ತಾರೆ- ಯುದ್ಧದಲ್ಲಿ ಐರಿಶ ಬಂಟರು ಬಹು ಶೌರ್ಯದಿಂದ ಹೋರಾಡಿದ್ದಾರೆ ಇದು ಆ ದೇಶಕ್ಕೆ ಭೂಷಣಾಸ್ಪದವಾದ ಮಾತೆ ಸರಿ; ಆದರೆ ಐರ್ಲಂಡಿನೊಳಗಿನ ಬಹುಮತವು ಪ್ರಕೃತ ಯುದ್ಧಕ್ಕೆ ಸಾಹಾಯ್ಯ ಕೊಡುವದರಲ್ಲಿ ಬಹುದೂರವೆ ನಿಂತುಕೊಳ್ಳುತ್ತದೆ ಈಗ ಇಂಗ್ಲಂಡ ದೇಶವು ಈ ಮುಂಚಿನ ಕತ್ತಲೆಯ ಸಮಯದಲ್ಲಿ ಐರ್ಲಂಡಿಗೆ ಅನೇಕ ಸಂಗತಿಗಳಲ್ಲಿ ಅನ್ಯಾಯ ಮಾಡಿದ್ದಿರಬಹುದು ಎಂದು ಈಗ ಹೇಳುತ್ತ ಕೂಡ್ರುವದು ಯುಕ್ತವಲ್ಲ ಇದು ಬರಿ ಇಂಗ್ಲಂಡಿಗಾಗಿ ಇದ್ದ ಯುದ್ಧವಲ್ಲ. ಈ ಪ್ರಕಾರ ಮಿ. ಲೊಯ್ಡ ಜೋರ್ಜ ಮಂತ್ರಿಗಳು ಅಲ್ಲಲ್ಲಿ ಭಾಷಣಗಳನ್ನು ಮಾಡುತ್ತಿದ್ದಾರೆ. ಹ್ಯಾಗೂ ಇರಲಿ ಹೋಮ್‌ರೂಲನ್ನು ಹೊಂದುವ ವಿಷಯದಲ್ಲಿ ಐರ್ಲಂಡಿಗೆ ಸಹ ಅನೇಕ ವಿಘ್ನಗಳೂ, ಆಪತ್ತುಗಳೂ ಬರುತ್ತಿವೆ. ಇದು ಬಹು ಶೋಚನೀಯವು ಇರಲಿ, ಐರಿಶ್ ಹೋಮ್‌ರೂಲಿನ ಪೂರ್ವಸ್ಥಿತಿಯನ್ನು ಹಾಗು ಈಗಿನ ಹಳವಳದ ಸ್ವರೂಪವನ್ನು ಯುದ್ಧವಿಚಾರದ ನಮ್ಮ ಬೇರೆ ಕಲಮುಗಳಲ್ಲಿ ಪ್ರಸಂಗವಶಾತ್ ತೋರಿಸುತ್ತಿದ್ದೇವೆ ಹಾಗು ಸಂದರ್ಭಾನುಸಾರ ಮುಂದೆಯೂ ತೋರಿಸುವೆವು ಆದ್ದರಿಂದ ಪ್ರಕೃತ ಈ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡುವದು ಒಳ್ಳೇದು.

ಸ್ಥಳೀಕ—ಮಂಗಳೂರು.

ಈ ಜಿಲ್ಲೆಯ ಸರಕಾರಿ ನೌಕರರ ಪರಸ್ಪರ ಸಹಾಯಕ ಸಂಘವು ರಿಜಿಸ್ಟ್ರಿ ಆಗಿಹೋಗಿ ಇದರ ಪ್ರಥಮ ಸಭೆಯು ನಾಳೆ ದಿನ ಕೂಡುವದೆಂಬುದಾಗಿ ತಿಳಿಯುತ್ತೇವೆ

ಕಳೆದ ಸರ್ತಿ ಕೂಡಿದ ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ಬೋರ್ಡಿನ ಕೈಕೆಳಗೆ ಕೆಲಸ ಮಾಡುವ ಸಬ್ ಅಸಿಸ್ಟೆಂಟ್ ಸರ್ಜನರಿಗೆ ಸಂಬಳದ ದರವನ್ನು ಸರಕಾರದ ಕೆಲಸದಲ್ಲಿರುವಂಥವರಿಗೆ ಇದ್ದ ದರದಲ್ಲಿಯೆ ಹೆಚ್ಚಿಸಬೇಕೆಂಬುವ ನಿರ್ಣಯವಾಗಿದೆ. ಪುಲ್ಕಿ ಸಮೀಪ ಡಿಸ್ಟ್ರಿಕ್ಟ್ ಬೋರ್ಡು ಮಾರ್ಗದಲ್ಲಿರುವ ಅನೇಕ ಅಪಾಯಕರ ಡೊಂಕುಗಳನ್ನು ತೆಗದು ಮಾರ್ಗವನ್ನು ಸರಿಗೊಳಿಸಲು ಬೋರ್ಡಿನವರು ಉದ್ಯುಕ್ತರಾಗಿರುವರು

ಮ ರಾ। ರಾ। ಬಿ ಮಂಜುನಾಥ ಬಾಳಿಗರವರು ಒಂದು ತಿಂಗಳ ರಜೆ ಪಡಕೊಂಡಿರುವದರಿಂದ ಮ. ವೆ ರಿಯನ್ ಪ್ಯಾಸರವರಿಗೆ ಮೂರನೇ ತರಗತಿಗೂ ಮ. ರಾ ರಾ। ಎಚ್ ಶಂಕರರಾಯರಿಗೆ ನಾಲ್ಕನೇ ಗ್ರೇಡಿಗೂ ಆಕ್ಟಿಂಗ್ ಇಂಗ್ಲಿಷ್ ಹೆಡ್‌ಕ್ಲಾರ್ಕರಾಗಿರುವ ಮ। ರಾ। ರಾ। ಬಿ ಕೃಷ್ಣಾಚಾರಿಯವರಿಗೆ ಆಕ್ಟಿಂಗ್ ೫ನೇ ಗ್ರೇಡು ತಹಸೀಲದಾರ ಕೆಲಸಕ್ಕೂ ನೇಮಕವಾಗಿರುವದು ಕೃಷ್ಣಾಚಾರಿಯವರು ಕಾಸರಗೋಡ. ತಹಸೀಲ್ದಾರರಾಗಿ ವರ್ಗಾಯಿಸಲ್ಪಟ್ಟಿರುವರು

ಕೆನರಾ ಹ್ಯಾಸ್ಕೂಲಿನ ಟ ಮನೇಂದ್ರ ಸಭಾಸದನದಲ್ಲಿ ರಾಷ್ಟ್ರೀಯ ಶಿಕ್ಷಣ ಪ್ರೋತ್ಸಾಹಕರ ಮತ್ತು ಸಹಾಯಕರ ಸಭೆಯು ಈ ತಿಂಗಳ ೩ ೩೦ನೇ ಸಾಯಂಕಾಲ ಕೂಡಿತ್ತು ಮ। ರಾ। ರಾ। ಹೈಕೋರ್ಟ ವಕೀಲ ಅನ್ಮಂಜ ಶ್ರೀನಿವಾಸ ಪೈಗಳವರು ಈ ಸಭೆಯ ಅಧ್ಯಕ್ಷರಾಗಿದ್ದರು. ಈ ಸಂಸ್ಥಾನಕ್ಕಾಗಿ ಸ್ಥಾಪಿಸಲ್ಪಟ್ಟಿರುವ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯು ಅಧೀನತೆಗೆ ಒಳಪಡದ ಭಾರತ ಶಿಕ್ಷಣಸಭಾ ಎಂಬ ಒಂದು ಹೊಸ ಸಂಘವನ್ನು ಏರ್ಪಡಿಸಬೇಕೆಂತಲೂ ಇಲ್ಲಿ ಈ ಸಂಘದ ಮೂಲಕ ರಾಷ್ಟ್ರೀಯ ಶಿಕ್ಷಣದ ಏರ್ಪಾಡುಗಳು ನಡೆಯಬೇಕೆಂತಲೂ ಈ ಸಭೆಯಲ್ಲಿ ನಿರ್ಣಯಿಸೋಣಾಗಿದೆ ಆದರೆ ಈ ಹೊಸ ಸಂಘದ ಶಾಲೆಗಳಲ್ಲಿ ಕೊಡೋಣಾಗುವ ಶಿಕ್ಷಣವು ರಾಷ್ಟ್ರೀಯ ಶಿಕ್ಷಣಮಂಡಲದವರು ನಿಶ್ಚಯಿಸಿರುವ ವಿಧಾನಗಳಲ್ಲಿಯೇ ಕೊಡೋಣಾಗುವದು. ಭಾರತ ಶಿಕ್ಷಣ ಸಭೆಯ ನಿಬಂಧನ ಇತ್ಯಾದಿಗಳು ಬೇಗನೆ ರಿಜಿಸ್ಟ್ರಿ ಮಾಡೋಣಾಗುವವು ತನ್ನದ್ದು ಬಾಲಿಕಾ ಶಿಕ್ಷಣ ಶಾಲೆಯನ್ನು ಕೂಡಲೆ ತೆರೆಯಲಿಕ್ಕೆ ೯ ಜನರ ಒಂದು ಬೋರ್ಡು ಏರ್ಪಡಿಸಲ್ಪಟ್ಟಿರುತ್ತದೆ. ವ್ಯಾಪಾರ ಶಿಕ್ಷಣಶಾಲೆಯ ಪ್ರಸ್ತಾಪವನ್ನು ಮಾಡಲು ಕೆನರಾ ಹೈಸ್ಕೂಲಿನಲ್ಲಿ ಕೂಡಿದ ಈ ಸಭೆಯಲ್ಲಿ ಸಮಯವಿರಲಿಲ್ಲ.

ರಾಷ್ಟ್ರೀಯ ವ್ಯಾಪಾರ ಶಿಕ್ಷಣಶಾಲೆಗೆ ಮತ್ತು ಬಾಲಿಕಾ ಪಾಠಶಾಲೆಗೆ ವಸೂಲಾದ ವಿವಜುಗಳ ವಿವರ —ಮೆ। ರಾ। ರಾ। ಎಮ್. ಮ ಕಂದರಾಯರ ಪ್ರಥಮ ಕಂತು ರೂ ೫೦, ಮಿಸೆಸ್. ತಲಚೇರಿ ಬವಾನಿರಾಯರು ಪ್ರಥಮ ಕಂತು ರೂ, ೨೦೦, ರಾ। ಉಳ್ಳಾಲ ಸುಂದರ ರಾವ್ ರೂ ೫ ರಾ ಆರ್ ಎಮ್ ರೊಯ ರೂ. ೨೫, ಮಿಸೆಸ್ ಸಾಲೇತಸ್ತುರು ಅಪ್ಪತರಾಯರು ರೂ ೧೦೦, ಬಿಟ್ಟ ಸ್ನೇಹಿತರು ರೂ ೫ ಸಹಾನ ಭೂತಿಯುಳ್ಳವರು ರೂ ೫, ರಾ। ಉಳ್ಳಾಲ ರಾಮರಾಯರು ರೂ ೨೦ ಮಿಸೆಸ್ ಕತ್ರಿ ಸೀತಾಬಾಯಿ ರೂ ೪, ರಾ। ನಾನಜಿ ಪುರುಷೋತ್ತಮ ಸೇಟ್ರು ರೂ ೫೦, ರಾ। ಜೆ. ವಾಯುದಾರವರು ರೂ ೨೫ ರಾ। ತೊಂಬತ್ತ ಕೇಶವರಾಯರು ರೂ ೨೦, ಶ್ರೀಮತಿ ತಾರಾಬಾಯಿ ಬಿಜೂರು ರೂ ೨೦, ಮಿಸ್. ವಿದ್ಯಾ ರೂ. ೧೦ ರಾ। ಬೆನೆಗಲ್ ಶಿವಶಂಕರರಾವ್ ರೂ. ೨೫। ರಾ। ಎಮ್. ಶಂಕರನಾರಾಯಣ ರಾವ್ ರೂ ೫, ರಾ। ಗಂಗೊಳ್ಳಿ ಕೃಷ್ಣರಾವ್ ರೂ. ೧೦೦, ಮೆಸರ್ಸ್ ಮಿಜಾರ್‌ಕಾರ್ ಬ್ರದರ್ಸ್ ರೂ ೨೫, ಡಾಕ್ಟರ್ ಗುಲವಾಡಿ ರಾಮರಾವ್ ರೂ ೫೦, ಅರುಂಡೇಲರವರು ಬಾದ ಸಮೆಯದಲ್ಲಿ ದಾನವಾಗಿ ಕೊಡಲ್ಪಟ್ಟ ಚಿನ್ನಾಭರಣ ಇತ್ಯಾದಿಗಳು, ರಾ। ಎಮ್. ಎಸ್ ಏಕಂಎರ್ಲ್ರಾವ್‌ರವರ ವಶದಲ್ಲಿವೆ. ವ್ಯಾಪಾರ ಶಿಕ್ಷಣ ಶಾಲೆಗೆ— ಮ। ರಾ। ನಾನಜಿ ಪುರಷೋತ್ತಮ ಸೆಟ್ರು ರೂ. ೫೦, ರಾ। ಜೆ. ವಾಯುದಾ ರೂ ೨೫, ಧರ್ಮಪ್ರಕಾಶ ಪ್ರೆಸ್ ರೂ. ೨೫ ಮಿಜಾರ್‌ಕಾರ್ ಬ್ರದರ್ಸ್ ರೂ ೨೫.

NOTICE.

Wanted a qualified Midwife for this Municipality on a starting salary of Rs. 20 p. m. Candidates for the same should apply to the undersigned by the 30th June 1918 with testimonials.

Honavar, 27th May, 1918.

R. RAMA RAU.
Vice President
Municipality Honavar, N. Kanara

ಯುದ್ಧಫಂಡಿಗೆ ಸಹಾಯ

ಸಿಆಮ್ನುನದ ರಾಜರು ರೂ [illegible] ರೂ ೧೧,೦೦೦

ಸಿವಮ್ನನದ ರಾಜಾಜಮನ್ಸಿಂಗರು (ರಾಜಪ್ರಿನ್ಸ) ,, ೧೦೦೦

ಮುಂಬಯಿ—ಮುಂಬಯಿಯ ಸುಪ್ರಖ್ಯಾತ ವರ್ತಕರಾದ ಆರ್. ಡಿ ಟಾಟಾ ಇವರಿಗೆ ಜಪಾನ ಸರಕಾರದವರು ಟಾಟಾ ಕಂಪೆನಿಯವರಿಗೂ ಜಪಾನ ರಾಜ್ಯಕ್ಕೂ ಬಹಳಕಾಲದ ಮೊದಲಿನಿಂದು ನಡೆಯುತ್ತಿದ್ದ ವ್ಯಾಪಾರ ವಹಿವಾಟಿನ ನಿಮಿತ್ತವಾಗಿ IIIನೆ ಕ್ಲಾಸ್ ಓರ್ಡರ್ ಒಫ್ ಮೆರಿಟ್ ಎಂಬ ಬಹುಮಾನವನ್ನು ಕೊಟ್ಟಿರುವರು

ಡಾ। ನಾಯರರು ಆರೋಗ್ಯ ದುರುಸ್ತಿಗಾಗಿ ವಿಲಾಯಿತಿಗೆ ಹೊರಟುಹೋಗಿರುವರು

ಮದ್ರಾಸು—ಹೋಮ್‌ರೂಲ್-ಲೀಗಿನ ಪ್ರತಿನಿಧಿಗಳಾಗಿ ವಿಲಾಯಿತಿಗೆ ಹೊರಟು ಹೋಗಿ ಜಿಬ್ರಾಲ್ಟರದಲ್ಲಿ ತಡೆಹಾಕಲ್ಪಟ್ಟ ಒನರೆಬಲ್ ಬಿ ವಿ ನರಸಿಂಹ ಅಯ್ಯರೂ, ಮ। ರಾ। ಮಂಜೇರಿ ರಾಮಯ್ಯರೂ ಬಿ। ಜೋರ್ಜ ಜೋಸೇಫರೂ ೩ನೆ ತಾರೀಕಿಗೆ ಮದ್ರಾಸಿಗೆ ಬಂದು ತಲ್ಪಿದರು ಇವರಿಗೆ ಜಿಬ್ರಾಲ್ಟರದಲ್ಲಿ ಬಹಳ ಅಡಚಣೆಯುಂಟಾಯಿತಂತೆ.

ರಂಗೂನು—'ಸಿಟಿ ಒಫ್ ಮದ್ರಿದ್' ಎಂಬ ಹಡಗಿನ ಮೇಲೆ ಭಯಂಕರವಾದ ಬೆಂಕಿ ಎದ್ದಿತು ಈ ಹಡಗು ಅಮೇರಿಕದ ನ್ಯೂಯೊರ್ಕ ಪಟ್ಟಣದಿಂದ ಆಫ್ರಿಕ್, ಮದ್ರಾಸು, ರಂಗೂನು, ಕಲ್ಕತ್ತಾ ಮುಂತಾದ ಊರುಗಳಿಗೆ ಕೊಂಡು ಹೋಗುವ ಸರಕು ತುಂಬಿಸಿದ್ದಾಗಿತ್ತು ಬೆಂಕಿಯನ್ನು ಹೇಗೂ ಬಹಳ ಪ್ರಯಾಸದಿಂದ ಆರಿಸಿದರು

ಸಿಮ್ಲಾ—ಸ್ಥಳೀಯ ರಾಜ್ಯಭಾರ ಕ್ರಮದಲ್ಲಿ ಯಾವರೀತಿಯಲ್ಲಿ ಬದಲಾವಣೆಗಳನ್ನು ಜಾರಿಗೆ ತರಬಹುದೆಂಧು ಸೂಚಿಸಿ ಇಂಡಿಯಾ ಗವರ್ನಮೆಂಟಿನವರು ಒಂದು ರೆಜಾವು ಪತ್ರವನ್ನು ಎಲ್ಲಾ ಸ್ಥಾನಿಕ ಸರಕಾರದವರಿಗೂ ಕಳುಹಿಸಿರುವರು ಅದರ ಮೇರೆಗೆ ಈಗ ಚು ನಾವಣ ಮೆಂಬರುಗಳ ಸಂಖ್ಯೆ ಹೇಗೆ ಹೆಚ್ಚಿಸಬಹುದೆಂದೂ ಚುನಾವಣೆಯ ಓಟುದಾರ ಸಂಖ್ಯೆ ಹೇಗೆ ವೃದ್ಧಿಪಡಿಸಬಹುದೆಂದೂ ಸೂಚಿಸಿ ಅನಿವಾರ್ಯಕ ಸಂದರ್ಭಗಳಲ್ಲಿ ವಿನಾ ಬಿನ್‌ಸರಕಾರಿ ಮೆಂಬರರನ್ನೆ ಪ್ರೆಸಿಡೆಂಟರಾಗಿ ನೇಮಿಸಲು ಸೂಚಿಸಿರುವರು

ಸರಕಾರದವರು ನಿಯಮಿಸಿದ ಮಿತಿಯ ವರೆಗಿನ ತೆಂಡಾಯವನ್ನು ವಸೂಲು ಮಾಡುವುದು, ವರಮಾನದ ಅಂದಾಜ ಪಟ್ಟಿ ತಯಾರಿಸುವುದು, ಕೆಲವು ನಿರ್ದಿಷ್ಟ ಹುದ್ದೆಗಳಲ್ಲಿ ವಿನಾ ಇತರ ಇಸಮ್‌ಗಳಲ್ಲಿ ನೇಮ ಖಾತೆ ಮಾಡುವುದ ಮುಂತಾದ್ದರಲ್ಲಿ ಪೂರ್ಣ ಸ್ವತಂತ್ರ ಕೊಡಬೇಕೆಂದ ಸರಕಾರದವರು ಸೂಚಿಸಿರುವರು ಈ ವಿಷಯವನ್ನು ಇನ್ನೊಮ್ಮೆ ಚರ್ಚಿಸುವೆವು

ರಾಜರ ಜನ್ಮದಿನ—ಇದು ಎಲ್ಲಾ ಕಡೆಗಳಲ್ಲಿ ಜೂನ ೩ನೇ ತಾರೀಕಿಗೆ ಆಚರಿಸಲ್ಪಡುವುದು

ಹಿಂದೂ ಯೂನಿವರ್ಸಿಟಿ, ಬನಾರಸ್—ಪಾಟಿಯಾಲ ಮಹಾರಾಜರು ಇದರ ಫಂಡಿಗೆ ೫ ಲಕ್ಷ ರೂಪಾಯಿ ಕೊಟ್ಟದ್ದಲ್ಲದೆ ಇಲೆಕ್ಟ್ರಿಕಲ್ ಮತ್ತು ಮೆಕೆನಿಕಲ್ ಎಂಜನಿಯರಿಂಗ್ ಕಲಿಸುವ ಬಗೆ ವರ್ಷಂಪ್ರತಿ ರೂ ೨೪,೦೦೦ ಕೊಡುವುದಾಗಿ ವಾಗ್ದಾನ ಮಾಡಿರುವರು

ಕರಾಚಿ—ಇಲ್ಲಿಯ ಹೆಸರುಗೊಂಡ ಒಂದು ವರ್ತಕ ಸಂಘಕ್ಕೆ ದಕ್ಷಿಣ ಹಿಂದೂಸ್ಥಾನದಲ್ಲಿ ಪೊರ್ಟಲೆಂಡ್ ಸಿಮೆಂಟಿನ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ೩೦ ಲಕ್ಷ ರೂಪಾಯಿವರೆಗೆ ಸಂಗ್ರಹಿಸಲು ಇಂಡಿಯಾ ಗವರ್ನಮೆಂಟಿನವರ ಹುಕುಂ ಸಿಕ್ಕಿದೆ ಎಂತಲೂ ಇದಕ್ಕೆ ಬೇಕಾದ ಯಂತ್ರಸಾಮಾನು ಅಮೆರಿಕದಿಂದ ಬರುವುದೆಂತಲೂ ಕರಾಚಿಯ ಡೈಲಿಗಜೆಟ ಎಂಬ ಪತ್ರಿಕೆಯಿಂದ ತಿಳಿದು ಬರುತ್ತದೆ

(ಸಿಂಧ್) ಹೈದರಾಬಾದದಲ್ಲಿರುವ ಹಿಂದೂ ಎಂಬ ಹೆಸರಿನ ದೇಶಭಾಷೆಯ ದೈನಿಕ ಪತ್ರಿಕೆಯ ಪತ್ರಕರ್ತರೂ ಮುದ್ರಣಕರ್ತರೂ ೨೦೦೦ ರೂಪಾಯಿ ನಗದು ಜಾಮೀನು ಕೊಡಬೇಕಾಗಿ ಅಲ್ಲಿಯ ಮೆಜಿಸ್ಟ್ರೇಟರ ಹುಕುಂ ಆಗಿದೆಯಂತೆ

ಮುಂಬಯಿ—ಅಖಿಲ್ಯವಾದಾಬಾದದ ಗಿರಣಿಮ್ಯಾಲಿಕರ ಕೂಡಿ ಯುದ್ಧಸಾಲಕ್ಕೆ ಸುಮಾರು ೩೦ ಲಕ್ಷ ರೂಪಾಯಿ ವಂತಿಗೆ ಮಾಡಿದರಂತೆ ಇವರಲ್ಲಿ ಗಿರಣಿಮ್ಯಾಲಿಕರ ಸಂಘದ ಪ್ರೆಸಿಡೆಂಟರಾದ ಮ। ರಾ। ರಾ। ಅಂಬಾಲಾಲ ಸಾರಾಬಾಯಿ ಎಂಬವರೇ ೫। ಲಕ್ಷ ಹಣ ಕೊಟ್ಟಿರುವರಂತೆ

ದಕ್ಷಿಣಕನ್ನಡ

ಕುಂಬಳೆ:—ಇಲ್ಲಿಗೆ ಸಮೀಪದಲ್ಲಿರುವ ನಾರಾಯಣ ಮಂಗಲ ಸಂಸ್ಕೃತ ಪಾಠಶಾಲೆಯನ್ನು ಬ್ರಹ್ಮಶ್ರೀ ಓಡ್ಲಮನೆ ಅನಂತರಾಮಶಾಸ್ತ್ರಿಗಳವರು ೩೦ ಏ. ೧೯೧೮ ಮಂಗಳವಾರ ಸಂದರ್ಶಿಸಿ ಆ ಶಾಲೆಯ ಏರ್ಪಾಡುಗಳನ್ನು ನೋಡಿ ತುಂಬಾ ಸಂತುಷ್ಟರಾದರು ಮೊದಲು ಈ ಶಾಲೆಯು ಕೇವಲ ಅಂತಿಮಾವಸ್ಥೆಯಲ್ಲಿತ್ತು ಇದನ್ನು ಮ। ರಾ। ಕಟ್ಟಂಪಾಡಿ ಸುಬ್ರಾಯ ಭಟ್ಟರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಈಗ ಬಹಳ ಒಳ್ಳೆಯ ಸ್ಥಿತಿಗೆ ತಂದಿರುವರು ಪ್ರಕೃತ ಇದರಲ್ಲಿ ೫ ಉಪಾಧ್ಯಾಯರೂ ೫೯ ವಿದ್ಯಾರ್ಥಿಗಳೂ ಇರುವರು ಇಲ್ಲಿ ಸಂಸ್ಕೃತ ಮಾತ್ರವೆ ಅಲ್ಲ ಇಂಗ್ಲಿಷ್, ಕನ್ನಡ, ಭೂಗೋಳ ಹಿಂದೂ ದೇಶದ ಚರಿತ್ರೆ, ಲೆಖ್ಖ ಮೊದಲಾದ ಉಪಯುಕ್ತ ವಿಷಯಗಳನ್ನೂ ಕಲಿಸುವರು ಶಾಸ್ತ್ರಿಗಳವರು ಉಪಾಧ್ಯಾಯರ ಉತ್ಸಾಹವನ್ನೂ, ವಿದ್ಯಾರ್ಥಿಗಳ ವಿದ್ಯಾಪ್ರೀತಿಯನ್ನೂ ಚಾತುರ್ಯವನ್ನೂ ಬಹಳವಾಗಿ ಮೆಚ್ಚಿ ಮ। ರಾ। ಸುಬ್ರಾಯ ಭಟ್ಟರನ್ನೂ ಅವರ ಉಪಾಧ್ಯಾಯ ವರ್ಗದವರನ್ನೂ ಶ್ಲಾಘಿಸಿದರು. ಎಲ್ಲಾ ಸಂಸ್ಕೃತ ಪಾಠಶಾಲೆಗಳೂ ಇದೇ ರೀತಿಯಲ್ಲಿ ಶ್ರಮಿಸುತ್ತಿದ್ದರೆ 'ಸತ್ತ ಭಾಷೆ'ಯಾದ ಸಂಸ್ಕೃತವು ತಿರಿಗಿ ಹುಟ್ಟಿ ಹಿಂದಿನ ಮಹತ್ವವನ್ನು ಬೇಗನೆ ಹೊಂದದಿರದು

ನಾ ಭ.

ಮುಲ್ಕಿ:—ಇಲ್ಲಿ ನೇಷನಲ್ ಎಡ್ಯುಕೇಷನ್ ಸಮ್ಮಂಧವಾಗಿ ರೂಪಾಯಿ ೧೦೦ಕ್ಕೆ ಮಿಕ್ಕಿದ ಮೊಬಲಗು ವಸೂಲಾಗಿ ಕಳುಹಿಸಲ್ಪಟ್ಟಿರುವುದು ಈ ಸಮ್ಮಂಧವಾಗಿ ಮಂಗಳೂರಿಂದ ರಾ. ಪಂಜೆಯಾರವರು ಇಲ್ಲಿಗೆ ದಯಮಾಡಿದ್ದರು ಹಣ ಕೂಡಿಸುವದರಲ್ಲಿ ಇಲ್ಲಿಯ ತರುಣ ಸ್ವರಾಜ್ಯವಾದಿಗಳ ಶ್ರಮವೇ ವಿಶೇಷವಾಗಿತ್ತು

ಒಂದೆರಡು ತಿಂಗಳ ಮುಂಚೆ ರಾ। ನಾರಾಯಣಸ್ವಾಮಿ ಐಯ್ಯರೆಂಬವರು ಇಲ್ಲಿಗೆ ಬಂದು ತಿಸಪೆನ್ನಿ ಕರ್ಮ ಮೊದಲಾದ ಹಲವು ವಿಷಯಗಳಲ್ಲಿ ಥಿಯೊಸಫಿ ಉಪನ್ಯಾಸಗಳನ್ನು ಕೊಟ್ಟು ಇಲ್ಲಿಯು ಒಂದು ಥಿಯೊಸಫಿಕಲ್ ಸೊಸೈಟಿಯ ಶಾಖೆಯನ್ನು ಸ್ಥಾಪಿಸಿರುವರು ನಮ್ಮ ಊರಲ್ಲಿ ಉತ್ಸಾಹ, ಉದ್ಯೋಗ ಶೀಲತೆಗಳು ವಿರಳವಾದರೂ ಸಭಾಸಂಸ್ಥೆಗಳು ಧಾರಾಳವಾಗಿರುವವು

ಇಲ್ಲಿಯ ಡಿಪುಟಿ ತಹಸಿಲ್ದಾರ ಮ। ರಾ। ಶ್ರೀ। ಬಿ. ಮಾಧವ ಪ್ರಭುಗಳಿಗೆ ಇತ್ತೀಚೆಗೆ ವರ್ಗವಾದ ಸಮ್ಮಂಧ ಇಲ್ಲಿಯ ಯೂನಿಯನ್ ಕ್ಲಬ್ಬಿನವರು ಕಳೆದ ಗುರುವಾರ ಅವರಿಗೆ ಒಂದು ಉಪಹಾರ ಸತ್ಕಾರವು ಕೊಡಲ್ಪಟ್ಟಿತು. ರಾ। ಮುಕುಂದ ರಾಯರು ಪ್ರಭುಗಳ ಗುಣ ಕಥನವನ್ನು ಮಾಡಿ ಪ್ರಭುಗಳಿಗೆ ಶ್ರೇಯೋಭಿವೃದ್ಧಿಯನ್ನು [illegible]

ಕಾಲ ಮಾತ್ರವಾಗಿದ್ದು ಇಲ್ಲಿಯ ಪರಸ್ಪರ ಸಹಾಯಕ ಸಂಘ, ಯೂನಿಯನ್ ಕ್ಲಬ್ ಮೊದಲಾದ ಸಂಸ್ಥೆಗಳ ಸೆಕ್ರೆಟರಿಗಳಾಗಿ ಪ್ರಕೃತ ಉಪಸಂಗೋಪಿ ಬಿಗಾರಿಯಸಲ್ಪಟ್ಟ ರಾ। ಪಿ ಸೋನ್ಸರವರ ವಿಷಯವಾಗಿಯೂ ಮಾತಾಡಿದರು ತನ್ನ ಉಪಾಧ್ಯಾಯ ವೃತ್ತಿಯನ್ನು ಸರಿಯಾಗಿ ನಡೆಸಿ, ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಉತ್ಸಾಹ ಪೂರ್ವಕ ಕೆಲಸಮಾಡುವ ಸೋನ್ಸರವರ ಉದ್ಯೋಗ ತತ್ಪರತೆಯೂ, ಶತ್ರುಮಿತ್ರಸಮುದಾಯವನ್ನು ಸಂತೋಷಗೊಳಿಸುವ ದಾಕ್ಷಿಣ್ಯವೂ, ಸೌಜನ್ಯವೂ ಪ್ರಶಂಸನೀಯವಾಗಿರುವವು

ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಬಂದ ಪರಸ್ಥಳದ ಯಾತ್ರಸ್ಥರೊಬ್ಬರು ಶ್ರೀ ದೇವರಿಗೆ ಹಾಕಬೇಕೆಂದು ತಂದ ಕಾಣಿಕೆಯನ್ನು ತಾನು ದೇವಳ ಅಧಿಕಾರಿ ಎಂದು ಹೇಳಿ ಯಾರೊ ಒಬ್ಬರು ಎತ್ತಿ ಹಾಕಿರುವರೆಂದು ಊರಲ್ಲೊಂದು ವರ್ತಮಾನ ಹಬ್ಬಿರುವುದು ಈ ದೇವಸ್ಥಾನದಲ್ಲಿ ಆಡಳಿತ ನೋಡುವವರ ಗೌರವಾರ್ಥವಾಗಿ (ಸಂಬಳವಿಲ್ಲದೆ) ಕೆಲಸಮಾಡುವರಾಗಿದ್ದು ಅವರ ಸ್ವಉದ್ಯೋಗದ ಸಮ್ಮಂಧ ಇಡೀ ದಿವಸ ದೇವಸ್ಥಾನದಲ್ಲಿ ಹಾಜರಿರಲು ಅವರಿಗೆ ಸಾಧ್ಯವಿಲ್ಲ ಹೀಗೆ ಅವರ ಗೈರ ಹಾಜರಿ ಕಾಲದಲ್ಲಿ ದೇವಸ್ಥಾನದ ಶ್ಯಾನಭಾಗ, ಪಾರುಪತ್ಯ ಮೊದಲಾದ ನೌಕರರೇ ಹೆಚ್ಚಾಗಿ ದೇವಸ್ಥಾನದಲ್ಲಿ ಇರುವುದಾಗಿರುತ್ತದೆ ವಿನಹ ದೇವಸ್ಥಾನದಲ್ಲಿ ಈಗ ದುಷ್ಟವ್ಯವಹಾರಗಳು ಹೆಚ್ಚಾಗಿರುವುದರಿಂದ ಪರರಿಗೆ ಅನುಭವ ಕೊಡುವ ಬಗ್ಗೆ ವಗೈರೆ ದೇವಳ ಶ್ಯಾನಭೋಗರು ಆಗ್ಯಾಗ್ಯೆ ಗೈರಹಾಜರಾಗುವುದೂ ಉಂಟು ಇಂಥಾ ಸಂದರ್ಭಗಳಲ್ಲಿ ಮೇಲೆ ಬರೆದ ಸಂಗತಿ ನಡೆದರೆ ಅದು ಆಶ್ಚರ್ಯವೆಂದು ಹೇಳಲಾಗದು ಅದಲ್ಲದೆ ಇತ್ತಲಾಗೆ ೨ ೩ ಶ್ಯಾನಭಾಗರು ನೇಮಕವಾದ ಕೆಲವು ಕಾಲದಲ್ಲಿಯೇ ಕೆಲಸದಿಂದ ನಿವೃತ್ತರಾಗಿ ಸ್ಥಾನವನ್ನು ತೆರೆದದರಿಂದ ದೇವಸ್ಥಾನದ ನೌಕರರು ಯಾವಾಗಲೂ ನಂಬಿಗಸ್ಥರೇ ಸಿಕ್ಕುತ್ತಾರೆಂದು ಹೇಳಲು ಸಾಧ್ಯವಿಲ್ಲ ಆದುದರಿಂದ ಮೇಲೆ ಬರೆದಂತೆ ದೇವರ ಕಾಣಿಕೆ ಹಣವು ವಂಚನೆ ಆಗದಂತೆ ದೇವರಿಗೆ ಕಾಣಿಕೆ ಬರುವ ಯಾವತ್ತೂ ಹಣ ಸೊತ್ತು ಮೊದಲಾದವುಗಳ ಭಂಡಾರಕ್ಕೆ ಜಮೆ ಮಾಡುವ ಬಗ್ಗೆ ಪ್ರತ್ಯೇಕವಾಗಿ ರಸೀದಿ ಕೊಡುವ ಕ್ರಮವನ್ನು ಜಾರಿಗೆ ತಂದರೆ ಕಾಣಿಕೆ ಹಣ ವಂಚನೆ ಆಗಲು ಆಸ್ಪದ ಸಿಕ್ಕುವುದಿಲ್ಲ ಹ್ಯಾಗೆಂದರೆ ಯಾತ್ರಸ್ಥರಿಗೆ ತಮ್ಮ ಕಾಣಿಕೆ ಹಣವು ಭಂಡಾರಕ್ಕೆ ಸೇರಿತೆ ಎಂಬ ನಿಶ್ಚಯವಾಗಬೇಕೆಂಬ ಭಾವನೆಯುಂಟು ಆದುದರಿಂದ ರಸೀದಿ ಕ್ರಮವು ಜಾರಿಯಲ್ಲಿದ್ದರೆ ಅವರ ರಸೀದಿ ಪಡೆಯದೆ ಕಾಣಿಕೆ ಹಣವನ್ನು ಕೊಡಲಿಕ್ಕಿಲ್ಲ ಈ ನಮ್ಮ ಸೂಚನೆಯು ನವೀನವಾದುದಲ್ಲ ಕೆಲವು ವರ್ಷಗಳ ಮುಂಚೆ ಮೊಕ್ತೇಸರರಲ್ಲಿಯೇ ಈ ಆಲೋಚನೆ ಹುಟ್ಟಿ ರಸೀದಿ ಬುಕ್ಕುಗಳನ್ನು ತಾವಿರುವ ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ ಯಾವ ಆಲೋಚನೆಯಿಂದಲೋ ಅದನ್ನು ಜಾರಿಗೆ ತಾರದೆ ಬಿಟ್ಟುಬಿಟ್ಟರು ಆದುದರಿಂದ ಶ್ರೀ ದೇವಳ ಅಧಿಕಾರಿಗಳು ಇನ್ನಾದರೂ ರಸೀದಿ ಕೊಡುವ ಕ್ರಮವನ್ನು ಜಾರಿಗೆ ತರಬೇಕೆಂದ ಸಂಬುತ್ತೇನೆ ಈ ಸಂಗತಿಯನ್ನು ಈ ಪೇಟೆಯ ಧನಿಕರ ಪ್ರತಿನಿಧಿಗಳಾದ ಫಾಕ್ಟರಿಗಳು ಆಡಳಿತ ಸಮ್ಮುಖದಲ್ಲಿ ಅವರ ಈ ಸೂಚನೆಯನ್ನು ಅನುಮೋದಿಸಿ ಪ್ರಶ್ನಿಸಿರುತ್ತಾರೆ ಮೇಲಿನ ರಸೀದಿ ಕ್ರಮವು ಜಾರಿಗೆ ತಾರದಿದ್ದರೆ ದೇವಳ ಅಧಿಕಾರಿಗಳು ಅನುಮಾನಕ್ಕೆ ಗುರಿಯಾದವರು

ಮೈಸೂರು ಸಂಸ್ಥಾನದಲ್ಲಿ ಸಹಕಾರ

ಮೈಸೂರು ಸಂಸ್ಥಾನದಲ್ಲಿ ೧೯೧೭ನೆ ಒಕ್ಟೋಬರ್ ಆಖೈರಿಗೆ ಅಂತ್ಯವಾಗುವ ಒಂದು ವರ್ಷದಲ್ಲಿ ಸಹಕಾರ ಸಂಘಗಳ ಅಭಿವೃದ್ಧಿಯನ್ನು ಮೈಸೂರು ಸರಕಾರದವರು ವಿವರಿಸುವಾಗ ಆ ವರ್ಷದಲ್ಲಿ ೧೮೮ ಹೊಸ ಸಂಘಗಳು ಹುಟ್ಟಿದವು ಎಂತಲೂ ೧೪ ಸಂಘಗಳನ್ನು ನಿಲ್ಲಿಸಬೇಕಾಯಿತೆಂತಲೂ [illegible] ಸಂಘಗಳು ಇದ್ದುವೆಂತಲೂ ಹೇಳುತ್ತಾರೆ ಇವುಗಳಲ್ಲಿ [illegible] ಕೈಗಾರಿಕೆ ಮತ್ತು ಬಕ್ಕೃಷಿ [illegible] ಸಂಘಗಳು [illegible] ಸಂಘಗಳು ಒಂದು ಹಿಂದಣ ಜಾತಿಯವರ ಉದ್ಧರಣೆಯ ಸಂಘ [illegible] ಸಂಘ [illegible] ಎಂಬ [illegible] ಕೈಗಾರಿಕೆಯ ಸಂಘಗಳು ಇನ್ನಷ್ಟು ನಡೆಯುತ್ತವೆ ಈ [illegible] ಸಂಘಗಳಲ್ಲದೆ ಇತರ ಸಂಘಗಳಲ್ಲಿ ಅಷ್ಟು ಅಭಿವೃದ್ಧಿ ಕಾಣಲಿಲ್ಲವೆಂತ ಮೈಸೂರು ಸರಕಾರದವರು ಅಭಿಪ್ರಾಯ ಪಡುತ್ತಾರೆ [illegible] ಸಂಘಗಳು ಇನ್ನೂ ಹಳ್ಳಿಗಳಲ್ಲಿ ಪ್ರಚಾರಕ್ಕೆ ಬಾರಲಿಲ್ಲವೆಂದು ಮೈಸೂರು ಸರಕಾರದವರ ವ್ಯಸನಪಡುತ್ತಾರೆ ಹಳ್ಳಿ ಕೈಗಾರಿಕೆಗಳು ಸ್ಥಾಪಿತವಾದಂತೆ ಈ ಸಹಕಾರ ಸಂಘಗಳ ಆಶ್ರಯ ದೊರೆಯಬೇಕೆಂದು ಅವರ ಸೂಚನೆ

ಉತ್ಪನ್ನವಿಲ್ಲದ ಖರ್ಚು ಮಾಡುವ ಕೆಲಸಗಳಿಗೋಸ್ಕರ ಪಡೆಯುವ ಸಾಲವೇ ಹೆಚ್ಚಾಗುತ್ತದೆ ಎಂದೂ ಇದನ್ನು ತಗ್ಗಿಸಬೇಕೆಂದೂ ಸರಕಾರದ ಇನ್ನೊಂದು ಸೂಚನೆ ಪ್ರಜಾಜನಗಳಲ್ಲಿ ಸಂಪತ್ತು ವರ್ಧಿಸುವ ರೀತಿಯ ಕೆಲಸಗಳಿಗೆನೆ ಈ ಸಂಘಗಳಿಂದ ಸಹಾಯ ವಾಗಬೇಕು ಉತ್ಪನ್ನವಿಲ್ಲದ ಕೆಲಸಗಳಿಗೆ ದ್ರವ್ಯಸಹಾಯ ಸಿಕ್ಕಬಾರದು ಎಂದು ಪಟ್ಟು ಹಿಡಿಯುವುದ ಸಾಧ್ಯವಲ್ಲ ಊಟ ಉಡುಗೆಗೆ ಆಹಾರ ಸಾಮಗ್ರಿ, ಉಡಿಗೆ ತೊಡಿಗೆ, ಗೃಹಕೃತ್ಯದ ಸಾಮಾನುಗಳು ಇವುಗಳ ಬೆಲೆಯು ವಿಪರೀತ ಸ್ಥಿತಿಯಂದ ಏರಿಕೊಂಡಿವೆ ಕೆಲವು ಸಂದರ್ಭಗಳಲ್ಲಿ ಸೇಕಡಾ ೨೦೦ ಯಾ ೩೦೦ ಪಾಲ ಬೆಲೆ ಏರಿದಾಗ, ಆದಾಯವು ಮೊದಲಿಗಿಂತ ವಿಶೇಷ ಏರದೇ ಇರುವಾಗ ಮನೆ ಖರ್ಚು ಶುಭಾಶುಭಕಾರ್ಯಗಳ ಖರ್ಚು ತಗ್ಗಿಸಲಿಕ್ಕೆ ಸಮಾಜದ ಬಹುಮತವು ಇನ್ನೂ ಕಣ್ಣೆತ್ತದಿರುವಾಗ ಈ ಉತ್ಪನ್ನವಿಲ್ಲದ ಕಾರ್ಯಗಳ ಬಗ್ಗೆ ಸಾಲವು ಹೆಚ್ಚಾಗಿ ಕೊಡಬಾರದು ಎಂದು ಸಂಘಗಳು ಮನಸ್ಸು ಮಾಡಿದರೆ ಅದು ನಡಿಯಲಾರದು ಒಂದು ವೇಳೆ ನಡೆದರೂ ಆ ಮೆಂಬರುಗಳಿಗೆ ಬೇರೆ ಕಡೆಯಿಂದ ಹೆಚ್ಚು ಬಡ್ಡಿಯಲ್ಲಿ ಸಿಕ್ಕುವ ಹಣಕ್ಕೆ ಅಂಗಲಾಚುವಂತೆ ಮಾಡಿ ಅವರನ್ನು ಸಾರ್ವದಾ ಋಣಜಾಲದಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿದ್ದೊಂದೆ ಪ್ರಯೋಜನವಲ್ಲದೆ ಸಹಕಾರ ಸಂಘಗಳ ಉದ್ದೇಶವೇ ಬಹುಪಕ್ಷಕ್ಕೆ ಭಂಗವಾದೀತು ಸಂಚಾಲಕರು ಹೆಚ್ಚಿನ ವಿಚಾರ ನಡಿಸಿ ಮೆಂಬರುಗಳು ಅನಾವ್ಯಯ ಮಾಡದಂತೆ ನೋಡಿಕೊಳ್ಳುವುದು ಅತಿ ಅಗತ್ಯವೆಂದು ಒಪ್ಪಿದರೂ ಅನೇಕ ಸಂಗತಿಗಳಲ್ಲಿ ಸಮಾಜದ ಕಟ್ಟಳೆಗಳು ಈ ದುಂದುಗಾರಿಕೆಗೆ ಮಾಡುವವನ ಕಣ್ಣು ಬುದ್ಧಿಗಳನ್ನು ಅನಿವಾರ್ಯ ಕಾರಣಗಳಿಂದ ಕಟ್ಟಿಬಿಡುತ್ತವೆ ಇದಕ್ಕೆ ಸಮಾಜವೇ ಕಾರಣ ಆದ್ದರಿಂದ ಇಡೀ ಸಮಾಜವೇ ಈ ಕಷ್ಟಕಾಲದಲ್ಲಿ ಕಣ್ಣು ತೆರೆಯಬೇಕು, ಮತ್ತು ಅನಾವಶ್ಯಕ ಖರ್ಚಿನ ಪರಂಪರೆಯನ್ನು ತೆಗೆದು ಹಾಕಿ ತಮ್ಮ ಉದ್ಧಾರಣೆಯ ಕೆಲಸವನ್ನು ಬಹು ಜಾಗ್ರತೆಯಾಗಿ ನೆರವೇರಿಸಬೇಕು.

ಇನ್ನೊಂದು ವಿಚಾರವಿದೆ, ಸಹಕಾರ ಸಂಘಗಳು ಏರ್ಪಟ್ಟನಂತರ ಜನರಲ್ಲಿ ಋಣಬಾಧೆ ಎಷ್ಟರ ಮಟ್ಟಿಗೆ ತಗ್ಗಿದೆ ಎಂದು ನೋಡಲಿಕ್ಕಾಗಿ ೩೦ ತಾಲೂಕುಗಳಲ್ಲಿ ೪೮ ಸಂಘಗಳ ಮೆಂಬರರ ಸ್ಥಿತಿಗತಿಯನ್ನು ವಿಚಾರ ಮಾಡುತ್ತಿದ್ದಾಗ ಮೊದಲು ೫॥ ಲಕ್ಷ ರೂಪಾಯಿ ಸಾಲವಿದ್ದುದು ಈಗಲೂ ಅಷ್ಟೆ ಇದೆ ಎಂದು ಪರಿಶೋಧಕರು ಹೇಳುತ್ತಾರೆ. ಇದಕ್ಕೆ ಕಾರಣವಿದೆ. ಜನರಲ್ಲಿ ಸಹಕಾರ ತತ್ವಗಳು ಇನ್ನೂ ನೆಲೆನಿಲ್ಲದೆ ಈ ಸಂಘಗಳೆಂದರೆ ಕಡಿಮೆ ಬಡ್ಡಿಯಲ್ಲಿ ಸಾಲಕೊಡುವ ಬೇಂಕುಗಳೆಂದು [illegible] ಹಳೆ ರೀತಿಯಿಂದ [illegible] ಮೊಬಲಗು [illegible] ಮೈಸೂರು ಸರಕಾರದವರು [illegible]

ಸಂಪತ್ತು ಹೆಚ್ಚುವಂತೆ ನೂತನ ಕೈಗಾರಿಕೆಗಳು ಹಳ್ಳಿಗಳಲ್ಲಿ ಹೆಚ್ಚಾಗಬೇಕು. ಇವೆರಡಕ್ಕೂ ಸರಕಾರದ ಪ್ರೋತ್ಸಾಹವೇ ಅತ್ಯಗತ್ಯವಾಗಿದೆ

ಸಾಲಿಗರ ಸಂಖ್ಯೆ ಹೆಚ್ಚುತ್ತಿರುವಷ್ಟಕ್ಕೆ ಅಲ್ಲಿ ಈ ಸಹಕಾರ ತತ್ವಗಳನ್ನು ಬೋಧಿಸುವ ಏರ್ಪಾಡು ಇರಬೇಕು ಇದಲ್ಲದೆ ಶಾಲೆಗೆ ಹೋಗುವ ಪ್ರಾಯ ದಾಟಿದವರಿಗೆ ಉಪನ್ಯಾಸ, ಭಾಷಣ, ಪುಸ್ತಕ ಭಂಡಾರ ಇವುಗಳ ಮೂಲಕವೂ ವಿದ್ಯಾಹೀನರಿಗೆ ನೈಟ್‌ಸ್ಕೂಲ್, ಮುಂತಾದ ಸಂಸ್ಥೆಗಳ ಮೂಲಕವೂ ತಿಳುವಳಿಕೆ ಹೆಚ್ಚುವಂತೆ ಮಾಡಬೇಕಾದುದು ಅಗತ್ಯ.

ಇದಲ್ಲದೆ ಕೈಗಾರಿಕೆ ಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸಿ ಅವುಗಳ ಮೂಲಕ ಜನರಲ್ಲಿ ನೂತನ ಹಳ್ಳಿ ಕೈಗಾರಿಕೆಗಳ ಅಭ್ಯಾಸವನ್ನುಂಟುಮಾಡಬೇಕು ಈ ಕೈಗಾರಿಕೆಗೆ ಬೇಕಾದ ಅವಶ್ಯ ಪದಾರ್ಥಗಳು ಹೇಗೆ ಸಿಕ್ಕುತ್ತವೆ, ಎಲ್ಲಿ ಸಿಕ್ಕುತ್ತವೆ, ಅವುಗಳ ಸ್ಥಿತಿಯನ್ನು ಹೇಗೆ ವರ್ಧಿಸಬಹುದು, ಅವುಗಳಿಂದ ತಯಾರಾದ ವಸ್ತುಗಳಿಗೆ ಎಲ್ಲಿ ಬೆಲೆ ಮತ್ತು ಗಿರಾಕಿ ಇದೆ ಇದನ್ನೆಲ್ಲ ಹಳ್ಳಿ ರೈತನು ತಿಳಿಯಲಾರನು ಸಾಮಾನ್ಯ ವರ್ತಮಾನ ಪತ್ರಿಕೆಗಳಲ್ಲಿ ಇಂಥ ವಿಷಯಗಳೂ ಹೆಚ್ಚಾಗಿ ಪ್ರಕಟವಾಗುವುದಿಲ್ಲ ಈ ಸಂಬಂಧವಾದ ಸಣ್ಣ ಪುಸ್ತಕಗಳನ್ನು ಸರಕಾರದವರೇ ದೇಶ ಭಾಷೆಯಲ್ಲಿ ಅಚ್ಚು ಹಾಕಿಸಿ ಧರ್ಮಾರ್ಥವಾಗಿ ಹಂಚುವ ಏರ್ಪಾಡು ವಿಶೇಷ ರೀತಿಯಿಂದ ಮಾಡಬೇಕು ಈ ವಿಷಯಗಳ ಕಡೆಗೆ ಮೈಸೂರಿನ ಎಕೊನೊಮಿಕ್ ಕಾನ್‌ಫರೆನ್ಸಿನವರು ಉಚಿತಗಮನವನ್ನು ಕೊಡುತ್ತಲಿದ್ದುದು ಫಲಕಾರಿಯಾಗದೆ ಇರದು

ಪತ್ರವ್ಯವಹಾರ.

ಅಯ್ಯಾ,

ಶ್ರೀಸ್ವಾಮಿ ದಯಾನಂದ ಸರಸ್ವತಿಯವರಿಂದ ಸ್ಥಾಪಿಸಲ್ಪಟ್ಟ ಆರ್ಯಸಮಾಜವೆಂಬ ವೈದಿಕ ಮತದವರ ಸಂಘದ ಪರಿಚಯವು ತಮ್ಮ ವಾಚಕ ಮಹಾಶಯರಲ್ಲಿ ಅನೇಕರಿಗೆ ಇರಬಹುದು ವೈದಿಕಮತಾವಲಂಬಿಗಳಾದ ಅಸ್ಮದಾದಿಗಳ ಆಚರಿಸತಕ್ಕ ಷೋಡಶ ಸಂಸ್ಕಾರಗಳನ್ನು ಈಗ ನಾವು ಆಚರಿಸುವದರಲ್ಲಿರುವ ಪೌರಾಣಿಕ ಪದ್ಧತಿಗಳಿಂದ ವಿರಹಿತವಾಗಿ ವೇದದಲ್ಲಿ ವಿಧಿಸಿದಂತೆನೇ ನಡಿಸುವರೆ ಶ್ರೀ ದಯಾನಂದ ಸರಸ್ವತಿ ಸ್ವಾಮಿಯವರು 'ಸಂಸ್ಕಾರವಿಧಿ' ಎಂಬ ಪುಸ್ತಕವನ್ನು ವಿರಚಿಸಿರುತ್ತಾರೆ ಈ ವಿಷಯಗಳನ್ನು ತಿಳಿದವರಾದ ಆರ್ಯಸಮಾಜಭಿಮಾನಿಯಾದ ಮ। ರಾ। ಹಾಲಾಡಿ ಸೀನಪ್ಪ ನಾಯಕರಲ್ಲಿ ಅವರ ತಮ್ಮ ಕೃಷ್ಣಯ್ಯ ನಾಯಕರ ಪ್ರಥಮ ಪುತ್ರನಾದ ಧರ್ಮದೇವ ಎಂಬವನಿಗೆ ಮೇ ೫ ನೆ ಅಲ್ಲಿ ಮೇಲಿನ ಸಮೂದಿಸಿದ ಸಂಸ್ಕಾರವಿಧಿಗನುಸಾರವಾಗಿ ಬ್ರಹ್ಮೋಪದೇಶವು ಮಾಡಿಸೋಣಾಯಿತು ಇದು ವೈದಿಕ ಮತಹಿತೈಷಿಗಳಾದ ವೇದಮೂರ್ತಿಗಳು ಭಟ್ಟ ಪುರುಷೋತ್ತಮ ಶಾಸ್ತ್ರಿಗಳು, ಬಿರ್ತಿ ರಾಮಚಂದ್ರ ಶಾಸ್ತ್ರಿಗಳು, ಗುಂಡ್ಮಿ ಅನಂತ ಶಾಸ್ತ್ರಿಗಳ ಹೆಮ್ಮಂದ ಸುಬ್ರಾಯ ಅಡಿಗಳು, ಹಿಲಿಯಾಣ ಪರಮೇಶ್ವರ ಮಯ್ಯರು ಇವರುಗಳ ಪುರೋಹಿತ್ಯದಿಂದ ನಡೆಯಿತು ಈ ಸಂಸ್ಕಾರದ ಅಂತ್ಯದಲ್ಲಿ ಬಂಧು ಬಾಂಧವರು ಪೂರ್ವಪದ್ಧತಿ ಪ್ರಕಾರ ಮಾಡಿದ ಉಡುಗರೆ ಹಣವನ್ನು ಬೆಂಗಾಳ ಪ್ರಾಂತ್ಯದ ದೇನಲಾಪಿ ಎಂಬ ಸ್ಥಳದಲ್ಲಿರುವ ಗುರುಕುಲಾ ಪಾಠಶಾಲೆಗೆ ಕಳುಹಿಸೋಣಾಯಿತು ಇದಲ್ಲದೆ ನೆರೆ ಗ್ರಾಮದ ಮ। ರಾ। ಬೇಳಕೆ ಪದ್ಮನಾಭ ಗೋರೆರವರಲ್ಲಿ ಕೂಡಾ ಇನ್ನೊಂದು ಉಪನಯನ ಸಂಸ್ಕಾರವು ಪೂರ್ವೋಕ್ತ ಸಂಸ್ಕಾರವಿಧಿ ಪ್ರಕಾರವೇ ನಡೆದಿರುವದು ಈ ಸಂಗತಿಯನ್ನು ಶಾಸ್ತ್ರಾನುಸಾರವಾಗಿ ಸಾಮಾಜಿಕ ಸಂಧಾರಣೆಯಲ್ಲಿ ಅಪೇಕ್ಷೆಯುಳ್ಳವರನೇಕರು ತಿಳಿದು ಸಂತೋಷಪಡುವರೆಂದು ತಮ್ಮ ಪತ್ರಿಕೆಯಲ್ಲಿ ಕಿಂಚಿತ್ ಸ್ಥಳವನ್ನು ಕೊಡಬೇಕೆಂದು ಪ್ರಾರ್ಥಿಸಿದ್ದಾಗಿರುತ್ತದೆ.

ಶ್ರೀ ಜ್ಞಾನೋದಯ ಸಮಾಜ, ಮಂಗಳೂರು

ಈ ಸಮಾಜದ ಬಗ್ಗೆ ಏರ್ಪಡಿಸುತ್ತಿರುವ ಸಾರ್ವಜನಿಕ ಸಭಾಮಂದಿರದ ಕಾರ್ಯವು ತೀವ್ರವಾಗಿ ಮುಂದುವರಿಯುತ್ತಿರುವುದು ಸ್ವಜಾತಿ ಬಂಧುಗಳೂ ಇತರ ಉದಾರ ಹೃದಯರೂ ತಮ್ಮ ದಾನವನ್ನು ಆದಷ್ಟು ತ್ವರೆ ಕಳುಹಿಸುತ್ತಿದ್ದರೆ ಬಹಳ ಉಪಕಾರವಾಗಿ ತೋರುತ್ತದೆ

ದನಸಹಾಯ ಮಾಡಿದ ಪುಣ್ಯಾತ್ಮರ ಹೆಸರು

ಹೆಸರು ಪ್ರಕಟಿಸಬಾರದೆಂದು ಹೇಳಿದ ಕೆಲವು ಮಂದಿ ಉದಾರಿಗಳು ಕಳುಹಿಸಿದ ದಾನ ರೂಪಾಯಿ ೩೫—೨—೮ ರಾ ಸೋಮಯ್ಯ ಸುವರ್ಣಯರು (ಅಷ್ಟೆರ ಕಂತು) ರೂ ೧೫ ರಾ ಕಗ್ಗೆರೆದ ಯಾನೆ ಶಾಂತಪ್ಪ ಕರ್ಕೇರರು, ಬೆಂಗರೆ, (ಪ್ರಥಮ ಕಂತು) ರೂ ೧೦ ರಾ ದೇವಪ್ಪ ಪುತ್ರನ್ನಾಯರು, ಬೆಂಗರೆ, ರೂ ೧೦ ರಾ ನಿರಿಶ್ಯಾಲ್ಯ ಅಂತಪ್ಪ ಸಾಲ್ಯಾನರು ರೂ ೧೦ ರಾ ಪೊಯಿಗೆ ಗೋವಿಂದ ತಿಂಗಳಾಯರು (ಅಷ್ಟೆರು ಕಂತು) ರೂ ೧೦ ಶ್ರೀಮತಿ ಪೊಯಿಗೆ ದೇಯಿ ಸುವರ್ಣೆಯರು ರೂ ೫—೫—೫ ರಾ ಅತ್ತಾವರ ಬಾಲಕೃಷ್ಣ ಶೆಟ್ಟರವರು ರೂ. ೫ ರಾ ಕೈಮುಂಜಾಲ್ ಚನ್ನಪ್ಪನವರು ರೂ ೫ ರಾ ಪೊಯಿಗೆ ತನಿಯ ಸುವರ್ಣಯರು ರೂ ೫ ರಾ ನಿರಿಶ್ಯಾಲ್ಯ ಸೋಮಯ್ಯ ಕರ್ಕೇರರು ರೂ ೫ ರಾ ಬೋಳೂರು ಕ್ಯಾಂಪ ಕರ್ಕೇರರು ರೂ ೫, ಶ್ರೀಮತಿ ಬೋಳೂರು ಕೇಶಮ್ಮ ಅಮಣ್ಣಾಳ್ ರೂ ೫ ಜುಮ್ಲಾ ರೂಪಾಯಿ ೧೨೫—೫—೫ ಈ ಮೊದಲು ಪ್ರಕಟಿಸಿದ್ದು ರೂಪಾಯಿ ೭೮೭—೮—೧೧ ಜುಮ್ಲಾ ರೂಪಾಯಿ ೯೧೨—೧೪—೪

(ಸಶೇಷ.)

ಮಂಗಳೂರು, ತಾ 16—5—18

B M. Thingslay.

ಕಾರ್ಯದರ್ಶಿ.

In the Court of the District Munsif,

COONDAPOOR.

O S 723/17.

Between, —

Abbubakkar Saheb, son of Dodda Moidin Saheb . . *Plaintiff.*

AND

Nagappa Joisha, son of Puttanna Joisha . . *Defendant.*

Notice is hereby given that the above mentioned suit is posted for 11—6—18. If the defendant wish to contest the suit, he may file his written statement on or before the said date.

COONDAPOOR, Dated [illegible]—1918.

P. MAHABALA RAU, Pleader for Plaintiff.

ಯುರೋಪದ ಮಹಾ ಯುದ್ಧ.

ಹಡಗುಗಳ ಹಾವಳಿ.—ಜಿಬ್ರಾಲ್ಟರ್ ಜಲಸಂಧಿಯ ಸಮೀಪದಲ್ಲಿ ಕಾವಲು ಮಾಡುತ್ತಿದ್ದ ಒಂದು ಫ್ರೆಂಚ ವಿಮಾನವು ಜರ್ಮನ ಜಲಾಂತರ್ಗಾಮಿಯೊಂದನ್ನು ಸಿಡಿಮದ್ದಿನಿಂದ ಘಾತಪಡಿಸಿದ್ದರಿಂದ ಅದು ಬೇಗನೆ ಸ್ಪೇನ್‌ದೇಶದ ಒಂದು ಬಂದರನ್ನು ಸೇರಿ ಅಲ್ಲಿ ನಿರ್ಬಂಧಿಸಲ್ಪಟ್ಟಿತು.

ಸ್ವೀಡನದಿಂದ ಹಾಲೆಂಡಿಗೆ ಹೋಗುವ ಒಂದು ಡಚ್ ಹಡಗನ್ನು ಜರ್ಮನರು ಹಿಡಿದು ನಿಲ್ಲಿಸಿರುವರು.

ಬೆಲ್ಜಿಯನ್ ಜನರಿಗೆ ಆಹಾರವನ್ನು ಸಾಗಿಸುತ್ತಿದ್ದ "ಕೋಲ್" ಎಂಬ ಹಡಗಿನಲ್ಲಿ ೪೦೦೦ ಟನ್ ಬಾರ್ಲಿ ಇತ್ತು. ಆ ಹಡಗನ್ನು ನಾರ್ಥ್‌ಸೀ ಸಮುದ್ರದಲ್ಲಿ ಶತ್ರುಗಳು ಮುಳುಗಿಸಿದರು.

ಸ್ಪೇನ್‌ದೇಶದ "ವಿಲ್ಲಾಡಿಮೊಲ್ಲಾ" ಎಂಬ ಹಡಗನ್ನು ಶತ್ರುಗಳು ಮುಳುಗಿಸಿದರು.

ಮೇ ೩ನೆ ತಾರೀಕಿಗೆ ಮುಳುಗಿಸಿದ ಸರಂಜಾಮು ಹಡಗದಮೇಲಿದ್ದವರನ್ನು ಜಪಾನದ ವಿನಾಶಕ ನಾವೆಗಳು ಸಂರಕ್ಷಿಸಿದವು.

ವಿಮಾನಗಳ ಹಾವಳಿ.—ಮೇ ೧೯ನೇ ತಾರೀಕಿನ ರಾತ್ರಿ ೧೧ ಗಂಟೆಗೆ ಶತ್ರುಗಳ ವಿಮಾನಗಳು ಕೆಂಟ ಮತ್ತು ಎಸ್ಸೆಕ್ಸ್ ತೀರವಳಿಯನ್ನು ದಾಟಿ ಲಂಡನ್ ಕಡೆಗೆ ಬಂದವು. ಸುಮಾರು ೨೦ ೩೦ ವಿಮಾನಗಳು ಬಂದಿದ್ದವಂತೆ. ಅವುಗಳಲ್ಲಿ ೭ ವಿಮಾನಗಳು ಬ್ರಿಟಿಶ ವಿಮಾನಭೇದಕ ಫಿರಂಗಿಗಳಿಗೂ ವಿಮಾನಗಳಿಗೂ ಬಲಿಬಿದ್ದವು. ೪೪ ಮಂದಿ ಬ್ರಿಟಿಶರು ಮಡಿದರು. ೧೭೯ ಮಂದಿಗೆ ಗಾಯವಾಯಿತು. ಕೆಲವು ಮನೆಗಳೂ ಇತರ ಕಟ್ಟೋಣಗಳೂ ಕುಸಿದು ಬಿದ್ದವು.

ಪೆರಿಸ್‌ಪಟ್ಟಣದ ಮೇಲೆಯೂ ೨೨ನೇ ತಾರೀಕಿಗೆ ಶತ್ರುವಿಮಾನಗಳು ಸಿಡಿಮದ್ದನ್ನು ಚೆಲ್ಲಿ ಹಿಂದೆ ಹೊರಟುಹೋದವು. ಹಾವಳಿ ಎಷ್ಟಾಯಿತೆಂದ ತಿಳಿಯಲಿಲ್ಲ.

ಇದಕ್ಕೆ ಪ್ರತಿಯಾಗಿ ಬ್ರಿಟಿಶ ಮತ್ತು ಫ್ರೆಂಚ ವಿಮಾನಗಳು ಶತ್ರುಗಳ ಮುಖ್ಯ ಸ್ಥಳಗಳನ್ನು, ವಿಮಾನಗಳ ಕಾರ್ಖಾನೆಗಳ ಮೇಲೆ ಯಥೇಚ್ಛವಾಗಿ ಸಿಡಿಮದ್ದು ಚೆಲ್ಲಿ ಬೆಂಕಿ ಎಬ್ಬಿಸಿದವು. ಕೋಲೋನ್ ಪಟ್ಟಣದ ಮೇಲೆ ಸಿಡಿಮದ್ದು ಚೆಲ್ಲಿದಾಗ ೪೭ ಮಂದಿಗೆ ಗಾಯತಗಲಿತು. ೨೫ ಮಂದಿ ಸತ್ತುಹೋದರು. ಇದಲ್ಲದೆ ಹಲವು ಜರ್ಮನ ಕಟ್ಟೋಣಗಳು ಮುರಿದುಬಿದ್ದವು.

ಇಟಲಿ ಯುದ್ಧರಂಗ.—ಮಾಂಟಿಲ್ಲೋ ದಿನ್ನೆಯ ಬಳಿಯಲ್ಲಿಯ ೩ ಎತ್ತರ ಸ್ಥಳಗಳಲ್ಲಿಯೂ ಶತ್ರುಗಳು ಮುಂದೊತ್ತಲು ಯತ್ನಿಸಿದುದು ಸಫಲವಾಗಲಿಲ್ಲ. ಕೆಪೊಸಿಲ್ ಎಂಬಲ್ಲಿ ಹಿಡಿದ ಸುರಂಗವನ್ನು (ಟ್ರೆಂಚ)ಶತ್ರುಗಳು ಬಿಟ್ಟುಕೊಡಬೇಕಾಯಿತು. ಇದಲ್ಲದೆ ಸೆಸ್ಸೊರೆಸ್ಸೊ ಎಂಬಲ್ಲಿಯೂ ಶತ್ರುಗಳ ಪೆಟ್ಟು ತಿಂದರು. ಡಿವಾಲ್‌ಬೆಲ್ಲಾ ಎಂಬಲ್ಲಿಗೆ ಈಶಾನ್ಯಕ್ಕೆ ಮಿತ್ರಮಂಡಲಿಯ ಸೈನ್ಯವು ಸ್ವಲ್ಪ ಮುಂದೊತ್ತಿ ಸ್ಮೊಕಾಡೋರ್ ಎಂಬ ಊರನ್ನು ಹಿಡಿಯಿತು. ಈ ದಿವಸದಲ್ಲಿ ಇಟಲಿಯವರು ಶತ್ರುಗಳ ಹಲವು ವಿಮಾನಗಳನ್ನು ಮುರಿದುಬಿಟ್ಟರು.

ಮೆಸೊಪೊಟೆಮಿಯಾ ಯುದ್ಧರಂಗ:—ತುರ್ಕರು ಜಾಬನದಿಯ ವರೆಗೆ ಓಡಿಸಲ್ಪಟ್ಟ ಹಿಂದೆಸರಿದ ಮೇಲೆ ಚಟುವಟಿಕೆಯು ಅವರ ಕಡೆಯಿಂದ ಕಂಡುಬರುವುದಿಲ್ಲ. ಕಿಫ್ರಿ ಕದಲ್ಲಿ ಹಿಡಿದ ಯುದ್ಧಸರಂಜಾಮನ್ನು ಬ್ರಿಟಿಶರು ನಿರಾತಂಕವಾಗಿ ತಮ್ಮ ಪಾಳ್ಯಕ್ಕೆ ತರುತ್ತಿದ್ದಾರೆ. ಟಿಗ್ರಿಸ್‌ನದಿಯ ದಡದಮೇಲಿರುವ ಫಾತಾ ಎಂಬ ಊರನ್ನು ಬ್ರಿಟಿಶರು ಹಿಡಿದರು.

ಬಾಲ್ಕನ್ ಯುದ್ಧರಂಗ.—ಆಲ್ಬೇನಿಯದಲ್ಲಿ ಫ್ರೆಂಚ ಮತ್ತು ಇಟಲಿಯ ಸೈನ್ಯವು ೩ ದಿನಗಳಲ್ಲಿ ೧೧ ಮೈಲು ವರೆಗೆ ಮುಂದಾಗಿ ಎಲ್ಬೆಸನದಿಂದ ಕುಂಟ್ಸೆಕ್ಕೆ ಹೋಗುವ ದಾರಿಯನ್ನು ಸ್ವಾಧೀನಪಡಿಸಿದರು.

ಇಟಲಿ ಯುದ್ಧರಂಗ.—ಬ್ರಿಟಿಶ ವಿಮಾನಗಳು ಮೇ ೨೦ನೇ ತಾರೀಕಿಗೆ ಆಸ್ಟ್ರಿಯಾ ತೀರವಳಿಯ ಕೆಟಾರೊ ಎಂಬಲ್ಲಿ ಜಲಾಂತರ್ಗಾಮಿಗಳು ತಂಗುವ ಸ್ಥಳದ ಮೇಲೆ ಸಿಡಿಮದ್ದನ್ನು ಚೆಲ್ಲಿ ಬೆಂಕಿ ಎಬ್ಬಿಸಿದವು.

ಮೇ ೨೬ನೇ ತಾರೀಕಿಗೆ ಮೊಲ್ಡೆವಿಯಾ ಎಂಬ ಕ್ರೂಜರ್ ಯುದ್ಧನಾವೆಯು ಟೋರ್ಪೆಡೋ ತಗಲಿ ಮುಳುಗಿತು. ಅಮೇರಿಕದಿಂದ ಬಂದ ೫೬ ಮಂದಿ ಸೈನಿಕರು ಮಾತ್ರ ಸಿಕ್ಕಲಿಲ್ಲ. ಬೇರೇನೂ ನಷ್ಟವಾಗಲಿಲ್ಲ. ಮೇ ೧೧ನೇ ತಾರೀಕಿಗೆ ಒಂದು ಬ್ರಿಟಿಶ ಜಲಾಂತರ್ಗಾಮಿಯು ಜರ್ಮನ ದೊಡ್ಡ ಜಲಾಂತರ್ಗಾಮಿಯನ್ನು ಟೋರ್ಪೆಡೋ ಮೂಲಕ ಮುಳುಗಿಸಿಬಿಟ್ಟಿತಂತೆ.

ಪಶ್ಚಿಮ ಯುದ್ಧರಂಗ.—ಜರ್ಮನರು ಸುಮಾರು ೧½ ತಿಂಗಳ ಹಿಂದೆ ಈ ರಣರಂಗದಲ್ಲಿ ಪ್ರಳಯಕಾಲದ ಅಲೆಗಳಂತಿರುವ ಸೈನ್ಯಪ್ರವಾಹವನ್ನು ಬಿಟ್ಟಿದ್ದು ಮತ್ತು ಬ್ರಿಟಿಶ ಮತ್ತು ಫ್ರೆಂಚ ಸೈನ್ಯಗಳ ಮೇಲೆ ಬಡಿದು ಅಪ್ಪಳಿಸಲಿಕ್ಕೆ ಉದ್ಯುಕ್ತರಾದಾಗ ಅವರಿಗೆ ಅವರ ಇಷ್ಟಾರ್ಥವು ಬೇಗನೇ ಪೂರ್ಣವಾಗುವದು ಎಂಬ ಸಂಪೂರ್ಣ ಭರವಸೆ ಇತ್ತು. ರುಶ್ಯದಿಂದ ಅಲ್ಪ ಸ್ವಲ್ಪ ಸೈನ್ಯವನ್ನು ಮಾತ್ರ ಹಿಂದೆ ಉಳಿಸಿ ಬೆಟ್ಟಿನ ಸೈನ್ಯಭಾಗವನ್ನು ಅವರು ಪಶ್ಚಿಮ ಯುದ್ಧರಂಗದಲ್ಲಿ ತಂದು ಇಳಿಸಿದರು. ಅಮೇರಿಕದಿಂದ ಬಂದ ಸೈನ್ಯವು ಈ ಸೈನ್ಯದ ಎರಡನೆ ಅಂಶ ಸಹಾ ಆಗಲಿಲ್ಲವೆಂದು ಬ್ರಿಟಿಶ ಮುಖ್ಯ ಮಂತ್ರಿಗಳಾದ ಮಿ। ಲಾಯಿಡ್ ಜಾರ್ಜರು ಹೇಳುತ್ತಾರೆ. ಹೀಗೆ ಅಮೇರಿಕದ ದೊಡ್ಡ ಸೈನ್ಯವು ಬರಲಿಕ್ಕೆ ಇನ್ನೂ ೫ ೬ ತಿಂಗಳ ಕಾಲ ಹಿಡಿದೀತು ಎಂಬ ತಿಳುವಳಿಕೆಯಿಂದ ಜರ್ಮನರು ಎರಡು ಉದ್ದೇಶಗಳನ್ನು ಕೈಕೊಂಡರು. ಫ್ರೆಂಚರೂ ಬ್ರಿಟಿಶರೂ ಒಬ್ಬರಿಗೊಬ್ಬರು ಸಹಾಯಕ್ಕೆ ಸೇರದ ಹಾಗೆ ಅವರ ಪಾಳ್ಯಗಳ ರೈಲರಸ್ತೆಗಳು ಬಂದು ಕೂಡುವ ಎಮಿಯನ್ಸ್ ಪಟ್ಟಣವನ್ನು ಹಿಡಿಯುವದು; ಅನಂತರ ಒಂಟಿಯಾದ ಬ್ರಿಟಿಶರ ಸೈನ್ಯಪ್ರವಾಹವನ್ನು ಮಧ್ಯಭಾಗದಲ್ಲಿಯೇ ಭೇದಿಸಿ ಅದರ ಒಂದೊಂದು ತುಂಡನ್ನು ಮುತ್ತಿ ಜಜ್ಜಿಬಿಡುವುದು. ಎಮಿಯನ್ಸಿಗೆ ಬರಲಿಕ್ಕೆ ಸಾಧ್ಯವಾಗದೆ ಇನ್ನೂ ೧೨ ಮೈಲು ದೂರದಲ್ಲಿರುವುದರಿಂದ ಈ ಉದ್ದೇಶವು ನೆರವೇರಲಿಲ್ಲ. ಇದಲ್ಲದೆ ಬ್ರಿಟಿಶ ಪ್ರವಾಹವನ್ನು ಭೇದಿಸಲಿಕ್ಕಾಗಿ ಆರ್‌ಮೆಂಟಿಯರ್ಸ್ ಆದಕ್ಕಿಂತಲೂ ಉತ್ತರದಲ್ಲಿ ಫ್ರೆಂಚ ತೀರದ ಮುಖ್ಯ ಬಂದರುಗಳ ಕಡೆಗೆ ಹೋಗಲಿಕ್ಕೆ ಕೆಲ್ಲಾರ್ ಹಿಡಿಯುವ ಪ್ರಯತ್ನವೂ ಕೈಸಾಗಲಿಲ್ಲ. ಬ್ರಿಟಿಶರನ್ನು ಅಮುಕುತ್ತಿರುವಾಗಲೂ ಬೆಲ್ಜಿಯನರನ್ನು ಬಡಿಯುತ್ತಿರುವಾಗಲೂ ಸರ್ವ ಸೇನಾಧಿಪತಿಯಾದ ಜನರಲ್ ಫೋಶ್ ಜಾಗರೂಕರಾಗಿದ್ದು ಸಹಾಯ ಸೈನ್ಯವನ್ನು ಕಳುಹಿಸಿದ್ದರಿಂದ ಬ್ರಿಟಿಶ ಮತ್ತು ಮಿತ್ರರ ಸೈನ್ಯಗಳು ಮುರಿದುಹೋಗಲಿಲ್ಲ; ಹಿಂದಕ್ಕೆ ಸರಿಯಬೇಕಾಯಿತು. ಈಚೆಗೆ ಅಮೇರಿಕದಿಂದ ಬಂದಿದ್ದ ಸೈನ್ಯವು ಫ್ರೆಂಚ ತೀರವಳಿಯ ಗಡಿಯನ್ನು ಕಾಯುತ್ತಿದೆ. ಹೀಗಾಗಿ ಜರ್ಮನ ಸೈನ್ಯದ ತೆರೆಗಳು ಈ ಬಂಡೆಗಳ ಮೇಲೆ ಬಿದ್ದು ಹತಾಶವಾಗಿ ತಮ್ಮ ಸೈನ್ಯದ ಅಂಶವನ್ನು ಯುದ್ಧಲಕ್ಷ್ಮಿಗೆ ಬಲಿಕೊಟ್ಟದ್ದಲ್ಲದೆ—ಮಿತ್ರಮಂಡಲಿಯ ಸೈನ್ಯದಲ್ಲಿಯೂ ಬಹಳ ಘಾತಪಡಿಸಿದ್ದರಿಂದ ಫಲಿಸಿತು. ಆದರೆ ಇನ್ನೊಂದು ದೊಡ್ಡ ದಾಳಿಯು ಬರುವುದರಲ್ಲಿದೆ. ಆದರ ಹಾವಳಿಯು ಯಾವಾಗ ತೊಡಗೀತು, ಅದರ ಪರಿಣಾಮ ಏನಾದೀತು ಎಂದು ಇನ್ನೂ ಸರಿಯಾಗಿ ಹೇಳುವ ಹಾಗಿಲ್ಲ ಎನ್ನುತ್ತಿದ್ದಾರೆ. ಈ ಮಧ್ಯದಲ್ಲಿ ವಿಮಾನಗಳಿಂದ [illegible] ಸೈನ್ಯ ಸರಂಜಾಮನ್ನು [illegible] ವನ್ನು ಹಿಡಿದು [illegible] ಅಮೇರಿಕ [illegible]

ಬಹುದು. ಅಂತೂ ಅಮೇರಿಕದ ಸಂಪೂರ್ಣ ಸಹಾಯ ಸೈನ್ಯವು ಫ್ರಾನ್ಸಿನಲ್ಲಿ ಬಂದಿಳಿಯುವ ವರೆಗೆ ಕಾಲವು ಬಹಳ ಕಳವಳಕ್ಕೆ ಆಸ್ಪದಕೊಡುವುದಾದರೂ ಮಿತ್ರಮಂಡಲಿಯ ಸೈನಿಕರಾಗಲಿ ನಾಯಕರಾಗಲಿ ಧೈರ್ಯಗುಂದಲಿಲ್ಲ; ಬೇಕು ಬೇಕಾದ ಪ್ರಯತ್ನವನ್ನು ಮಾಡುತ್ತಲೆ ಇದ್ದಾರೆ.

ವಿದೇಶ ವೃತ್ತಾಂತ.

ರುಶ್ಯ.—ಎಸ್ಥೋನಿಯದ ವೆಸೆನ್‌ಬರ್ಗ ಎಂಬಲ್ಲಿಯೂ ಫ್ಲೆನ್‌ಸ್ಬರ್ಗದಲ್ಲಿಯೂ ಜರ್ಮನ ಸೈನಿಕರು ದಂಗೆ ಎದ್ದರು. ಆಗ ಜರ್ಮನ ಸರ್ವಸೇನಾಧಿಪತಿಯ ಹುಕುಂ ಮೇರೆಗೆ ಇವರಲ್ಲಿ ೩೦೦ ಮಂದಿಯನ್ನು ಸೆರೆಹಿಡಿದು ಆ ಪೈಕಿ ೧೦ ಮಂದಿಯನ್ನು ಕಪಿದಲೇ ಗುಂಡಿನ ಬಾಯಿಗೆ ತುತ್ತನ್ನಾಗಿ ಮಾಡಬೇಕಾಯಿತು.

ಕೊಸ್ಯಾಕ ಸೈನ್ಯದ ನಾಯಕನಾಗಿ ಸೈಬೀರಿಯದಲ್ಲಿ ಬೊಲ್ಶೆವಿಕ ಅಧಿಕಾರವನ್ನು ಉಲ್ಲಂಘಿಸುತ್ತಿದ್ದ ಕರ್ನಲ್ ಸೆಮೆನೊಫನು ಮಂಚೂರಿಯ ಸ್ಟೇಶನನ್ನು ಬೈಕಲ್ ಸರೋವರದ ಸಮೀಪದಲ್ಲಿರುವ ಚಿಟಾ ಎಂಬ ಊರನ್ನೂ ಹಿಡಿದು ಅಲ್ಲಿ ಬೊಲಶೆವಿಕ ಕಮಿಟಿಯವರನ್ನು ಸೆರೆಯಾಗಿ ಮಾಡಿರುವನಂತೆ.

ಪೆಟ್ರೋಗ್ರೇಡದಲ್ಲಿ ಭಯಂಕರವಾದ ಕ್ಷಾಮವು ತಲೆದೋರಿದೆಯಂತೆ.

ರುಶ್ಯದ ದಕ್ಷಿಣ ಪ್ರದೇಶವನ್ನು ಜರ್ಮನರು ಬಲಕ್ಕೆಯಿಸಿಕೊಳ್ಳುತ್ತಲೆ ಇದ್ದುದರಿಂದ ರಶ್ಯದ ಸೈನ್ಯವು ಕೂರ್ಕ ಎಂಬ ಸ್ಥಳವನ್ನು ಅವರಿಗೆ ಬಿಟ್ಟುಕೊಡಬೇಕಾಯಿತು.

ಉಕ್ರೈನಕ್ಕೆ ಸ್ವಾತಂತ್ರ್ಯವು ಸಿಕ್ಕಿದ ವಿಷಯದಲ್ಲಿ ಅವರು ಸ್ವಸ್ಥಚಿತ್ತರಾಗಿರಲು ಸಾಧ್ಯವಿಲ್ಲ. ಅಲ್ಲಿಯ ಮುಖ್ಯ ಪಟ್ಟಣವಾದ ಕೀಫ್ ಎಂಬಲ್ಲಿದ್ದ ೩೭,೦೦೦ ಸೈನಿಕರ ಕೂಟವೊಂದನ್ನು ಜರ್ಮನರು ನಿಲ್ಲಿಸಿಬಿಟ್ಟರು. ಆದರೆ ಉಕ್ರೈನಕ್ಕೆ ಡಿಕ್ಟೇಟರನಾಗಿ (ನಿರಂಕುಶ ಸರ್ವಾಧಿಕಾರಿಯಾಗಿ) ನೇಮಕಹೊಂದಿದ್ದ ಸ್ಕೊರಪ ದಸ್ಕೀಯು ತೀರಾ ಸ್ವತಂತ್ರಾಧಿಕಾರವನ್ನು ನಡೆಸಲಾರಂಭಿಸಿ ಸೈನ್ಯವನ್ನು ಜತೆಗೂಡಿಸಿ ಉಕ್ರೈನದ ಪಾರ್ಲಮೆಂಟನ್ನು ಬರಖಾಸ್ತುಗೊಳಿಸಿದ್ದರಿಂದ ಜನರು ಚಳವಳ ಮಾಡತೊಡಗಿ ಅಲ್ಲಿಂದ ಪೋಲಿಶ್ ಸೈನಿಕರ ಸಹಾಯದಿಂದ ಡಿಕ್ಟೇಟರನ ಸೈನ್ಯವನ್ನೂ ಕೆಲವು ಜರ್ಮನ ಸೈನ್ಯವನ್ನೂ ಹೊಡೆದುಬಿಟ್ಟರಂತೆ. ಇದಲ್ಲದೆ ಸ್ಕೊರಪಾದಸ್ಕೀಯ ಮನೆಯ ಮೇಲೆ ಮುತ್ತಿಗೆ ಹಾಕಿ ಅವನಿಗೆ ಗಾಯ ಪಡಿಸಿದರಂತೆ.

ಈ ಮೊದಲ ಹೊಸ ಕೇಂದ್ರದ ಜನರಲ್ ಕೊರ್ನಿಲೋಫ್ ಮತ್ತು ಆಲೆಕ್ಸಿಫರನ್ನು ಬೊಲಶೆವಿಕ ಪಕ್ಷದವರು ಫೆಬ್ರುವರಿ ೨೭ನೇ ತಾರೀಕಿಗೆ ಹೊಡೆದು ಕೊಂದುಬಿಟ್ಟರೆಂತಲೂ ಕೇಳುತ್ತದೆ. ಇದು ನಿಜವೆ ಎಂಬುದು ಗೊತ್ತಾಗಿರುವದಿಲ್ಲ.

ಫಿನ್ಲೆಂಡವನ್ನು ಇನ್ನೂ ಜರ್ಮನರ ಬಿಟ್ಟು ಹೋಗಿಲ್ಲ. ಫಿನ್ಲೆಂಡ ಕೊಲ್ಲಿಯ ದಕ್ಷಿಣದಲ್ಲಿರುವ ಬೋಕರ ಎಂಬ ಊರನ್ನು ಅವರು ಹಿಡಿದರು. ಫಿನ್ಲೆಂಡದ ಪಾರ್ಲಮೆಂಟ ಟದರರ ಸಿಂಹಫವುಡ ಎಂಬ ಮುಖ್ಯ ಮಂತ್ರಿಯನ್ನು ಹಂಗಾಮಿಯಾಗಿ ಡಿಕ್ಟೇಟರ ಅಥವಾ ನಿರಂಕುಶ ಸರ್ವಾಧಿಕಾರಿಯಾಗಿ ನೇಮಿಸಿದರು. ಇವನ ಹೇಳಿಕೆ ಮೇರೆಗೆ ಫಿನ್ಲೆಂಡಕ್ಕೆ ಸಾಂಕುಶ ಪ್ರಭುತ್ವಕ್ಕೆ ಒಳಗಾಗಿರುವ ರಾಜನನ್ನು ಪಟ್ಟಕ್ಕೇರಿಸಿದರೆ ದೇಶದ ಶಾಂತತೆಗೆ ಸುಲಭ ಉಪಾಯವೆಂದು ತಿಳಿಯಬರುತ್ತದೆ.

ಮಾಸ್ಕೋನಿಂದ ಕೈವಿನ ರಾಜ್ಯದ ಹಣವನ್ನು ದುರ್ವ್ಯಯ ಮಾಡಿದ್ದ ಹಿಂದಿನ ಬೆಂಬಲಿಗರನ್ನು ಚುನಾವಣೆ ಮತ್ತು ಕಮಿಟಿ ಬವಲಾವಣೆ ಮಾಡಿದ ತಪ್ಪುಗಳ ಮೇಲೆ ಮರಣಶಿಕ್ಷೆ ವಿಧಿಸಲ್ಪಡುವದಕ್ಕಾಗಿ ಬೊಲೊಲಸ್ಕಿಯಿಂದ ಆವನನ್ನು ಕರೆದು ತರಲು ಮಹಾ ಸೈನ್ಯ ಹೋಗಿರುವುದರ. ಬೊಲಶೆವಿಕರು ಕ್ಯಾಲಿಂಕೊ ಎಂಬವನ ಪ್ರೋತ್ಸಾಹದಿಂದ ಈ ಕಾರ್ಯವನ್ನು ಮಾಡಲು ಯತ್ನಿಸಿದರು.

ಮಾಸ್ಕೋ ಪಟ್ಟಣದಲ್ಲಿ ಅರಾಜಕತ್ವವಾದಿಗಳ ತಂಡವನ್ನು ಚದರಿಸಿ ೫೦೦ ಮಂದಿಯನ್ನು ನಿರ್ಬಂಧಿಸಿ ಅವರ ಹಟ್ಟಿಗಳನ್ನು ಸ್ವಾಧೀನಪಡಿಸಿದರಂತೆ.

ಬ್ರೆಸ್ಟ್‌ಲಿಟೋವಸ್ಕ ಒಪ್ಪಂದದ ಶರ್ತಗಳನ್ನು ಜರ್ಮನ ಸೈನ್ಯವು ಉಲ್ಲಂಘಿಸಿ ಉದ್ಧಟತನವನ್ನು ತೋರಿಸುವುದರಿಂದ ಅಗತ್ಯವಿರುವ ಸೈನ್ಯವನ್ನು ಪುನಃ ಜತೆಗೊಳಿಸಲಿಕ್ಕೆ ಕೈಹಾಕಬೇಕಾಗುವುದು ಎಂದು ರುಶ್ಯಸರಕಾರವು ಜರ್ಮನಿಗೆ ತಿಳಿಸಿದೆ.

ರುಶ್ಯ ತುರ್ಕಸ್ತಾನವು ಪ್ರಜಾಪ್ರಭುತ್ವವನ್ನು ಅನುಸರಿಸಿದ್ದಾಗಿ ಬೊಲಶೆವಿಕರು ಪ್ರಕಟಿಸಿರುವರು.

ಈ ವರ್ತಮಾನಗಳೊಂದಿಗೆ ಇನ್ನೊಂದು ವರ್ತಮಾನವು ಜರ್ಮನ್ ಪತ್ರದಲ್ಲಿ ಪ್ರಕಟವಾಗಿರುವುದನ್ನು ಹಾಲೆಂಡದ ಪತ್ರಿಕೆಗಳು ಎತ್ತಿ ಬರೆದಿರುವವು. ಇದರ ಮೇರೆಗೆ ಈಗ ಜರ್ಮನರು ೬ ಅರಸುತನಗಳಿಗೆ ಅರಸರನ್ನು ಹುಡುಕುತ್ತಲಿರುವುದಾಗಿಯೂ ಜರ್ಮನ್ ಚಕ್ರಾಧಿಪತ್ಯದೊಳಗೆ ಇರುವ ಅರಸರ ಮತ್ತು ಇತರರ ಕಡೆಯಿಂದ ಈ ಅರಸುತನಗಳಿಗೆ ತಮ್ಮ ಯೋಗ್ಯತೆಯನ್ನು ತೋರಿಸುವುದಕ್ಕೆ ಏಜಂಟರು ಓಡ್ಯಾಡುತ್ತಲೆ ಇರುವರೆಂದೂ ಜರ್ಮನಿಯಲ್ಲಿ ಸೇರಿದ ರಾಜರ ಕಡೆಯವರನ್ನು ಈ ಅರಸುತನಗಳಿಗೆ ನೇಮಿಸುವುದಕ್ಕೆ ಬದಲಾಗಿ ಕೈಸರನ ರಾಜಪುತ್ರರನ್ನು ನೇಮಿಸುವುದು ಲೇಸೆಂದೂ ಇಲ್ಲವಾದರೆ ಜರ್ಮನ್ ಸಾಮ್ರಾಜ್ಯದೊಳಗಿನ ಅಂತಃಕಲಹಗಳಿಗೆ ಎಡೆಸಿಗುವದೆಂದೂ ಆ ಪತ್ರದಿಂದ ಕಾಣುತ್ತದೆ. ಈಗ ಸ್ವತಂತ್ರಾಧಿಕಾರವನ್ನು ಸ್ಥಾಪಿಸಿದ ಬೊಲಶೆವಿಕರ ರುಶ್ಯ, ಫಿನ್ಲೆಂಡ, ಪೋಲೆಂಡು, ಉಕ್ರೈನ್, ರಶ್ಯನ್, ತುರ್ಕಸ್ಥಾನ ಮುಂತಾದ ಪಲವು ಸಂಸ್ಥಾನಗಳಲ್ಲಿ ಇನ್ನೂ ಶಾಂತಿಯು ಬರಲಿಲ್ಲವಾದ್ದರಿಂದ ಅವುಗಳನ್ನು ಪುನಃ ಅರಸುತನಗಳನ್ನಾಗಿಯೇ ಮಾಡುವುದು ಯೋಗ್ಯವೆಂದು ಆ ಜನರಿಂದಲೇ ಹೇಳಿಸಿ ಅನಂತರ ಅಲ್ಲಿ ಜರ್ಮನ್ ರಾಜಕುಮಾರರಿಗೂ ಸಾಮಂತ ರಾಜಪುತ್ರರಿಗೂ ಪಟ್ಟಕಟ್ಟಿ ಆ ಪ್ರದೇಶಗಳನ್ನೆಲ್ಲಾ ಜರ್ಮನಿಯು ನುಂಗಿಬಿಡಬೇಕೆಂಬ ಕುಯುಕ್ತಿಯ ಉಪಾಯಗಳನ್ನು ನಡಿಸುತ್ತದೆಂಬಂತೆ ಕಾಣುತ್ತದೆ.

ಪೋಲೆಂಡದ ವಿಷಯವಾಗಿ ಆಸ್ಟ್ರಿಯವೂ ಜರ್ಮನಿಯೂ ತಮ್ಮ ಹಕ್ಕನ್ನು ಸ್ಥಾಪಿಸಬೇಕೆಂದಿರುವಾಗ ಆ ಪೋಲೆಂಡದವರು ಜರ್ಮನಿಗೆ ಯುದ್ಧದ ಮೊದಲೇ ಸೇರಿದ್ದ ಪೋಲೆಂಡದ ಅಂಶವನ್ನು ಈಗಿನ ಪೋಲೆಂಡಕ್ಕೆ ಸೇರಿಸಿ ಪೋಲ್ ಜನಾಂಗದ ಒಂದು ಸಂಸ್ಥಾನ ಅಥವಾ ರಾಜ್ಯವನ್ನು ನಿರ್ಮಿಸಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಈ ವಿಷಯದಲ್ಲಿ ಚರ್ಚಿಸಲಿಕ್ಕೆ ಹೋದ ಆಸ್ಟ್ರಿಯದ ಚಕ್ರವರ್ತಿ ಕಾರ್ಲನೂ ಜರ್ಮನ ಸರಕಾರವೂ ಈಚೆಗೆ ಒಪ್ಪಂದ ಮಾಡಿದರೆಂದು ತಿಳಿಯಬರುತ್ತದೆ. ಆದರೆ ಶರ್ತಗಳು ಇನ್ನೂ ಪ್ರಕಟವಾಗಲಿಲ್ಲ.

ರುಶ್ಯದೊಡನೆ ಒಪ್ಪಂದ ಮಾಡಿದರೂ ಜರ್ಮನರು ಕಪ್ಪುಸಮುದ್ರದಲ್ಲಿ ಹಡಗುಗಳನ್ನೂ ನಾಶಮಾಡುವುದು ಅಥವಾ ಹಿಡಿಯುವುದು ನಿಲ್ಲಿಸಲಿಲ್ಲ. ರುಶ್ಯದ ಉತ್ತರದಲ್ಲಿ ವ್ಹೈಟ್‌ಸೀ ಸಮುದ್ರದ ದೊಡ್ಡ ಬಂದರಾದ ಆರ್ಕೆಂಜಲ್‌ದಲ್ಲಿ ದೊಡ್ಡ ಬೆಂಕಿ ಎದ್ದು ಬಹಳ ನಷ್ಟ ಪಡಿಸಿತಂತೆ. ಇದರಿಂದ ಜರ್ಮನ ಅಧಿಕಾರಕ್ಕೆ ಒಳಪಟ್ಟಿದ್ದ ರುಶ್ಯನ್ ಹಡಗಗಳನ್ನು ನಾಶಪಡಿಸುವುದಕ್ಕೂ [illegible] ಬಾಲ್ಟಿಕ್, ಕಪ್ಪುಸಮುದ್ರ, [illegible] ಎಲ್ಲಾ ಬಂದರುಗಳ [illegible] ಜರ್ಮನ [illegible]

ಕದನ ಶರ್ತಗಳನ್ನು ಇವರು ಒಪ್ಪದ್ದರಿಂದ ತುರ್ಕರು ವಾನ್ ಎಂಬ ಊರನ್ನು ಹಿಡಿದು ಅಲ್ಲಿಯ ಆರ್ಮೇನಿಯರನ್ನು ಅನೇಕರನ್ನು ಕೊಂದುಬಿಟ್ಟರು. ಇದಲ್ಲದೆ ತುರ್ಕಿಯ ಸೈನ್ಯವೂ ಕುರ್ದ ಸೈನ್ಯವೂ ಪರ್ಶಿಯದ ಗಡಿಯನ್ನು ದಾಟಿ ಉರುಮಿಯಾ ಸರೋವರದ ದಕ್ಷಿಣದಲ್ಲಿ ಸಬುಜ್‌ಬುಲಾಕ್ ಮತ್ತು ಉಷ್ಣು ಎಂಬ ಊರುಗಳನ್ನು ಹಿಡಿದಿರುವರೆಂದು ತಿಳಿದುಬರುತ್ತದೆ. ಮೆಸೊಪೊಟೆಮಿಯಾ ಯುದ್ಧರಂಗಕ್ಕೂ ಈ ಸೈನ್ಯವು ಪರ್ಶಿಯಾವನ್ನೂ ಒಳಮುಗ್ಗಿದ ಸ್ಥಳಕ್ಕೂ ಬಹಳ ದೂರದಿರುವುದರಿಂದ ಇವರ ದಾರಿಯನ್ನು ಅಡ್ಡಗಟ್ಟಲು ಮೆಸೊಪೊಟೆಮಿಯಾದ ಸೈನ್ಯಕ್ಕೆ ಸಾಧ್ಯವಾದೀತೆ ಎಂದು ಇನ್ನೂ ಗೊತ್ತಾಗಲಿಲ್ಲ.

ಐಯರ್ಲೆಂಡ್.—ಐಯರ್ಲೆಂಡಿನಲ್ಲಿ ಜರ್ಮನ ಒಳಸಂಚಿನಿಂದ ಸಿನ್‌ಫೆನ್ ಎಂಬ ಹೆಸರಿನ ತಂಡದವರು ದಂಗೆ ಎದ್ದು ಬ್ರಿಟಿಶ ಅಧಿಕಾರವನ್ನು ಕಿತ್ತುಹಾಕಿ ಸ್ವಾತಂತ್ರ್ಯವನ್ನು ಸ್ಥಾಪಿಸುವ ತವಕದಲ್ಲಿದ್ದಾರೆಂಬುದಕ್ಕೆ ಪುರಾವಾತು ಸಿಕ್ಕಿರುವುದರಿಂದ ಈ ದುರಾಲೋಚನೆಯನ್ನು ಮುಂದುವರಿಸಲಿಕ್ಕೆ ರಾಜಭಕ್ತಿಯುಳ್ಳ ಎಲ್ಲಾ ಜನರು ಸಹಾಯಮಾಡುವುದಲ್ಲದೆ ಇಂಥ ದುರುಳರಿಗೆ ಏನೊಂದು ಬಗೆಯ ಪ್ರೋತ್ಸಾಹ ಕೊಡಕೂಡದಾಗಿ ಐಯರ್ಲೆಂಡಿನ ಲಾರ್ಡ ಲೆಫ್ಟಿನೆಂಟರಾದ (ವೈಸರಾಯ) ಲಾರ್ಡ ಫ್ರೆಂಚರು ಪ್ರಕಟನೆ ಕೊಟ್ಟಿರುವರು. ಇದಲ್ಲದೆ ಸ್ವಾತಂತ್ರ್ಯಸ್ಥಾಪನೆಯ ತಂಡದ ಅಧ್ಯಕ್ಷ ಮುಂತಾದ ಪ್ರಮುಖರನ್ನು ಸುಮಾರು ೧೨೦ ಮಂದಿಯನ್ನು ನಿರ್ಬಂಧಿಸಿರುವರು. ಈ ತಂಡದವರಿಗೆ ಅಮೇರಿಕದಲ್ಲಿ ಯುನೈಟೆಡ ಸ್ಟೇಟ್ಸಿನಲ್ಲಿರುವ ಐರಿಶ ಜನಾಂಗದ ಪೈಕಿ ಕೆಲವರು ದ್ರವ್ಯಸಹಾಯವನ್ನು ಮೊದಲಿಂದಲೂ ಮಾಡುತ್ತಿದ್ದರಂತೆ. ಜರ್ಮನ ಒಂದು ಜಲಾಂತರ್ಗಾಮಿಯಿಂದ ಐರಿಶ ಕರಾವಳಿಗೆ ಇಳಿದು ಬಂದ ಒಬ್ಬ ವ್ಯಕ್ತಿಯ ಬಳಿಯಲ್ಲಿ ಕೆಲವು ರೆಕಾರ್ಡು ಸಿಕ್ಕಿದ್ದರಿಂದ ಈ ದಂಗೆಯ ಸಮಾಚಾರವು ಸರಕಾರಕ್ಕೆ ತಿಳಿಯಿತಂತೆ. ಸೆರೆ ಹಿಡಿದವರಲ್ಲಿ ಅನೇಕ ಮಂದಿಯನ್ನು ಇಂಗ್ಲೆಂಡಿಗೆ ಕೂಡಲೆ ಹಡಗುಗಳಲ್ಲಿ ಸಾಗಿಸಿ, ಅಲ್ಲಿ ಪ್ರತಿಬಂಧಕದಲ್ಲಿಡುವದಲ್ಲದೆ ನ್ಯಾಯವಾದ ಕೋರ್ಟ ಮೂಲಕ ಅವರ ಮೇಲೆ ವಿಚಾರಣೆ ನಡಿಸುವ ಅಭಿಪ್ರಾಯವು ಸರಕಾರಕ್ಕೆ ಇಲ್ಲವಂತೆ.

ಸ್ಪಷ್ಟವಿಂದ ರುಜು ವಾತುಗಳು ಸಿಕ್ಕಿರುವುದನ್ನು ಸಂಗ್ರಹಿಸಿ ಐಯರ್ಲೆಂಡದ ಸೆಕ್ರೆಟರಿಗಳಿಂದ ಮಿ। ಶಾರ್ಟರು ಇಂಗ್ಲೆಂಡಿಗೆ ಬಂದು ಅಲ್ಲಿಯ ಮಂತ್ರಿಕೂಟದೊಡನೆ ಆಲೋಚನೆ ನಡಿಸುತ್ತಿರುವರು.

ಐಯರ್ಲೆಂಡಕ್ಕೆ ಹೋಮ್‌ರೂಲ್ ಸಿಕ್ಕಬೇಕೆಂದು ಯತ್ನಿಸುವ ನೇಶನಲಿಸ್ಟ್ ತಂಡದವರು ಈ ಸಿನ್‌ಫೆನ್ ತಂಡದವರಿಗೆ ಸಹಕಾರಿಯಾಗಿರದಿದ್ದರೂ ಅವರಿಗೆ ಬಹಿರಂಗವಾದ ಕೋರ್ಟ ವಿಚಾರಣೆ ನಡಿಸದಿದ್ದರೆ ಸರಕಾರದ ಕೃತ್ಯಗಳಲ್ಲಿ ವಂಚನೆಯಿದೆ ಎಂಬುದಾಗಿ ಲೋಕವು—ಮುಖ್ಯವಾಗಿ ಅಮೇರಿಕದ ಜನರು ತಿಳಿಯಬಹುದು ಎಂದು ಸ್ಪಷ್ಟವಾಗಿ ಹೇಳಿರುವರು.

ಈ ಸಿನ್‌ಫೆನ್ ಕೈದಿಗಳಿಗೆ ೨ ಪಕ್ಷದ ಬಹಿರಂಗವಾಗಿ ವಿಚಾರಣೆ ನಡಿಸುವದೆಂದು ತಿಳಿಸಲಾಗಿ ಆ ಕೈದಿಗಳು ತಮಗೆ ಅಂಥ ವಿಚಾರಣೆಯೇ ಆಗತಕ್ಕದ್ದಿಲ್ಲ, ಸರಕಾರದವರು ಬೇಕಾದ್ದು ಮಾಡಲಿ ಎಂದು ನಿರಾಕರಿಸಿದರಂತೆ.

ಸ್ವಿಟ್ಜರ್‌ಲಂಡ್.—ಜೂರಿಚ್ ಪಟ್ಟಣದ ಬಳಿಯಲ್ಲಿ ಲಿಮ್ಮಾತ ನದಿಯಲ್ಲಿ ೩೦ ಸಿಡಿಮದ್ದಿನ ಗುಂಡುಗಳು ಸಿಕ್ಕಿದವಂತೆ. ಇವನ್ನು ಜರ್ಮನಿಯಲ್ಲಿ ತಯಾರಿಸಿ ಇಟಲಿಯ ಅರಾಜಕತ್ವವಾದಿಗಳ ಕೈಸೇರುವಂತೆ ಮಾಡಿ ಇಲ್ಲಿಯ ಕೋವಿಮದ್ದಿನ ಕಾರ್ಖಾನೆಗಳನ್ನು ಅವುಗಳ ಮೂಲಕ ಸಿಡಿಸಿಬಿಡಲು ಏರ್ಪಾಡು ಆಗಿತ್ತಂತೆ. ಇದಕ್ಕೋಸ್ಕರ ಜೂರಿಚ್ ಲೂಸರ್ನ ಲೊಸನ್ನ ಎಂಬಲ್ಲಿ ಹಲವರು ಪ್ರತಿಬಂಧಿಸಲ್ಪಟ್ಟಿರುವರು.

ಹಾಲೆಂಡ.—ಹಾಲೆಂಡದ ಬಂದರುಗಳಿಂದ ಡಚ್ಚ ಹಡಗುಗಳು ಹೊರಗೆ ಹೋಗಕೂಡದೆಂದು ಡಚ್ಚ ಸರಕಾರದವರು ಕಟ್ಟುಮಾಡಿರುವರಂತೆ. ಇದಕ್ಕೆ ಕಾರಣಗಳು ತಿಳಿಯಬರುವದಿಲ್ಲ. ಆದರೆ ಜರ್ಮನರ ಒತ್ತಾಯದಿಂದ ಹೀಗೆ ಮಾಡಿರಬಹುದೆಂದು ಊಹಿಸಿ ಕಟ್ಟುತ್ತಾರೆ.

ತುರ್ಕಿ.—ಆಸ್ಟ್ರಿಯದ ಚಕ್ರವರ್ತಿಯಾದ ಕಾರ್ಲನು ತುರ್ಕಿಯ ಸುಲ್ತಾನರ ಭೇಟಿಗೆ ತನ್ನ ಚಕ್ರವರ್ತಿನಿಯ ಸಮೇತ ಹೋದಾಗ ೧೯ನೆ ತಾರೀಕಿಗೆ ಅವರಿಬ್ಬರಿಗೂ ಕೊನಸ್ಟಂಟಿನೋಪಲದಲ್ಲಿ ವಿಶೇಷ ರೀತಿಯಾಗಿ ಸ್ವಾಗತಮಾಡಿದರು.

ಪಶ್ಚಿಮಸ್ಥಾನದಲ್ಲಿ ಎಮ್ಮನ್ ಎಂಬಲ್ಲಿ ಪ್ರಜೆಗಳು ದಂಗೆ ಎದ್ದ ಕಾರಣ ಅವರನ್ನು ಅಡಗಿಸಲಿಕ್ಕೆ ಹೋದ ತುರ್ಕ ಸೈನ್ಯದ ೨೦೦೦ ಸಿಪಾಯರು ಪಾಳ್ಯದಿಂದ ತಪ್ಪಿಸಿಕೊಂಡು ಹೋದರು. ಇಲ್ಲಿಯ ಚಳವಳವನ್ನು ನಿಲ್ಲಿಸುವುದಕ್ಕೆ ಜನೀನದ ಇಸ್ಮಾದ ಪಾಶಾ ಎಂಬವನನ್ನು ತುರ್ಕಿಯ ಸರಕಾರದವರು ಕಳುಹಿಸಿರುವರು.

ಸ್ಪೈನ್.—ಇಲ್ಲಿ ಬೆಳ್ಳಿಯ ನಾಣ್ಯಗಳನ್ನು ಅದನ್ನು ಕರಿಮುರಿಯಾಗ ಉಪಯೋಗಿಸಿ ಚಿನ್ನದ ನಾಣ್ಯಗಳನ್ನೆ ಉಪಯೋಗಿಸಬೇಕಾಗಿ ಅಲ್ಲಿಯ ಸರಕಾರದವರು ಹುಕುಂ ಮಾಡಿರುವರಂತೆ.

ಆಸ್ಟ್ರಿಯ.—ಮಿತ್ರಮಂಡಲಿಯ ಪ್ರೇಮಸ್ಥನನ್ನು ಕೋರಿ ಪ್ರೇಗ್ ಪಟ್ಟಣದಲ್ಲಿ ಜೆಕ್, ಸ್ಲಾವ್, ಜುಗೊಸ್ಲಾವ ಮುಂತಾದವರು ಪೋಲ್ ಮತ್ತು ಇಟಲಿಯ ಪಕ್ಷಪಾತವುಳ್ಳವರೂ ದೊಡ್ಡ ಮೆರವಣಿಗೆ ಮಾಡುವಾಗ ೩೦ ಮಂದಿಯನ್ನು ಸರಕಾರದವರು ಸೆರೆಹಿಡಿದರು.

ರೋಮ್.—ಇಟಲಿಯವರು ಮಿತ್ರಮಂಡಲಿಯ ಪಕ್ಷವಾಗಿ ಯುದ್ಧ ಆರಂಭಿಸಿದ ದಿನದ ವರ್ಧಂತಿಯ ದಿನ ಬ್ರಿಟಿಶರವಾಗಿ ಉತ್ಸವದಲ್ಲಿ ಸಹಭಾಗಿಯಾಗುವ ಉದ್ದೇಶದಿಂದ ಪ್ರಿನ್ಸ್ ಒಫ್ ವೇಲ್ಸರನ್ನು ರೋಮ್ ಪಟ್ಟಣಕ್ಕೆ ಕಳುಹಿಸಿದಾಗ ಅವರನ್ನು ಬಹಳ ವಿಶೇಷ ರೀತಿಯಿಂದ ಅಲ್ಲಿ ಸ್ವಾಗತ ಮಾಡಿದರು.

ಹಾಲೆಂಡ.—ಜರ್ಮನ ಸರಕಾರದ ಒತ್ತಾಯಕ್ಕೆ ಅಧೀನರಾಗಿ ಹಾಲೆಂಡ ಸರಕಾರವು ಲಿಂಬರ್ಗ ರೈಲ್ವೆಯ ಮೇಲೆ ಜರ್ಮನ ಯುದ್ಧಸಾಮಾನು ಸಾಗಿಸಿ ಒಯ್ಯುದಕ್ಕೆ ಒಪ್ಪಿಗೆಕೊಟ್ಟಿತು.

ಒಳದೇಶ ವೃತ್ತಾಂತ.

ಪೋರ್ಟ ಸೆಂಟಜೋರ್ಜ ಗಜೆಟಿನ ಉತಾರವು—

ಮ್ಹ। ರಾ। ರಾ। ಕೆ. ಶಂಕರ ಮೆನನ್ ಅವರಿಗೆ [illegible] ಜಿಲ್ಲೆಯ ಅಸಿಸ್ಟಂಟ ಇನ್‌ಸ್ಪೆಕ್ಟರಾಗಿ [illegible] ನಿಂದ ಕಾಯಂ—ಪ್ರೊಬೆಶನರ್ [illegible] ದಾರಿಯನ್ನು ಪರಮೇಶ್ವರ—[illegible] ಇನ್‌ಸ್ಪೆಕ್ಟರ್ [illegible] ಮುಂಚಿನಂತೆ [illegible] ಅಸಿಸ್ಟಂಟ ಇನ್‌ಸ್ಪೆಕ್ಟರಾಗಿ— [illegible] ಅಸಿಸ್ಟಂಟ ಸರ್ಜನರಾಗಿ— [illegible]

ಅನುಕ್ರಮಣಿಕೆ.

ಅಗ್ರಲೇಖ:— ಪಾನು
ಜೀನಸುಧಾರಣೆ ೪

ಸ್ಫುಟವಿಚಾರಗಳು:—
೧-೨-೩-೪-೫—ಹಿಂದುಸ್ಥಾನದ ಸರಕಾರ ಕಡೆಯಿಂದ ಸ್ಥಾನಿಕ ಸ್ವರಾಜ್ಯದ ಠರಾವು . . . . . . ,,
೬. ಹಿಂದಕ್ಕೆ ಬಂದ ಹೋಮ್‌ರೂಲಿನ ಪ್ರತಿನಿಧಿಮಂಡಲಕ್ಕೆ ಮದ್ರಾಸಿನಲ್ಲಿ ಸ್ವಾಗತ . . . . . . ,,
೭. ಐರ್ಲೆಂಡಿನಲ್ಲಿ ಹೋಮ್‌ರೂಲಿನ ಆವಶ್ಯ . . . . . . ,,
ಸ್ಥಳಿಕ—ಮಂಗಳೂರು . . . . . . ,,

ವರ್ತಮಾನ ಸಂಗ್ರಹಗಳು:—
೧. ಯುರೋಪದ ಮಹಾಯುದ್ಧ ೩
೨. ವಿದೇಶ ವೃತ್ತಾಂತ . . . . . . ,,
೩. ಒಳದೇಶ ವೃತ್ತಾಂತ ೩-೬
೪. ದಕ್ಷಿಣ ಕನ್ನಡ, ಕುಂಬಳೆ, ಮೂಲ್ಕಿ . . . . . . ,,
೫. ಮೈಸೂರು ಸಂಸ್ಥಾನದಲ್ಲಿ ಸಹಕಾರ . . . . . . ,,
೬. ಜ್ಞಾನೋದಯ ಸಮಾಜ . . . . . . ,,
೭. ಪತ್ರವ್ಯವಹಾರ—ಉಪನಯನ ಸಂಸ್ಕಾರ . . . . . . ,,

ಸ್ವದೇಶಾಭಿಮಾನಿ.

ಶಕ ೧೮೪೦ ವೈಶಾಖ ಬ. ೬ ಶುಕ್ರವಾರ.

ಜೀನಸುಗಳ ಧಾರಣೆ.

ಆಗಿಂದಾಗ್ಯೆ ಧಾರಣೆ ಇತ್ಯಾದಿಗಳ ಸಂಖ್ಯೆಗಳನ್ನು ದಾಖಲುಮಾಡಿಕೊಳ್ಳುವ ಒಂದು ಇಲಾಖೆ ಇರುವದು. ಈ ಇಲಾಖೆಯು ಡೈರೆಕ್ಟರರು ಯುದ್ಧಕಾಲದಲ್ಲಿ ಜೀನಸುಗಳ ಧಾರಣೆಗಳ ಒಂದು ಪುಸ್ತಕವನ್ನು ಸಂಗ್ರಹಿಸಿ ಪ್ರಕಟಿಸಿರುವರು. ಕಲ್ಕತ್ತಾ, ಮುಂಬಯಿ, ಮದ್ರಾಸು, ಕರಾಚಿ ಇಂಥ ಪ್ರಧಾನ ಪಟ್ಟಣಗಳಲ್ಲಿ ಯುದ್ಧದ ಮೊದಲು ಚಾಲ್ತಿಯಲ್ಲಿದ್ದ ದರಗಳು, ಯುದ್ಧವು ಪ್ರಾರಂಭವಾದನಂತರ ಮುಖ್ಯವಾದ ಜೀನಸುಗಳ ದರವು ಹೇಗೇಗೆ ತಗ್ಗಿದೆ ಅಥವಾ ಏರಿದೆ ಎಂಬುದು ಈ ಪುಸ್ತಕದಲ್ಲಿ ಸೂಚಿಸಲ್ಪಟ್ಟಿರುವದು. ಧಾರಣೆಯು ಜೀನಸುಗಳ ಉತ್ಪತ್ತಿಯೊಂದನ್ನೇ ಹೊಂದಿಕೊಂಡಿರದು. ವಿದ್ಯೋಜಿತ ಸರಕಾರ, ನಾಣ್ಯಗಳ ಚಲಾವಣೆ ಮತ್ತು [illegible] ಇವುಗಳನ್ನು ಅವಲಂಬಿಸಿರುವದು. ಆದರೆ ಹೀಗೆ ಪ್ರಕಟಿಸಲ್ಪಟ್ಟ ವಿವರಗಳು ಈ ಚಲಾವಣೆಯ ಮಾತೇ ಇರದು. ಯುದ್ಧ ಕಾರಣದಿಂದ ವಿಶ್ವೋಟದ ಸಾಗಣೆಗಳಲ್ಲಿಯೂ ಜೀನಸುಗಳ ಉತ್ಪತ್ತಿಯಲ್ಲಿಯೂ ಉಂಟಾದ ಅವ್ಯವಸ್ಥೆಯಿಂದ ಧಾರಣೆ ವಾಸಿಗಳು ಒದಲಾಗುತ್ತ ಹೋಗುತ್ತವೆ. ಈ ಪುಸ್ತಕದಲ್ಲಿರುವ ಅಂಕೆಗಳನ್ನು ನೋಡಿಕೊಂಡು ಹೇಳಬಹುದಲ್ಲದೆ ಇಲ್ಲಿಯ ಚಲಾವಣೆಯ ವಿಧಾನಗಳಿಂದ ಧಾರಣೆಗಳು ಏರಲು ಎಷ್ಟು ಆಸ್ಪದ ದೊರಕಿದೆ ಎಂಬುದನ್ನು ಶೋಧಿಸಲು ಈ ಪುಸ್ತಕದಿಂದ ಸಾಧ್ಯವಲ್ಲ. ಯುದ್ಧದ ಮೊದಲು ಅಂದರೆ ೧೯೧೪ನೇ ಜುಲಾಯಿ ತಿಂಗಳಲ್ಲಿ ಕಲ್ಕತ್ತಾ, ಮುಂಬಯಿ, ಮದ್ರಾಸು ಈ ಪಟ್ಟಣಗಳಲ್ಲಿ ಚಾಲ್ತಿಯಲ್ಲಿದ್ದ ದರಗಳನ್ನು ಕಳೆದ ದಶಂಬರ ತಿಂಗಳ ದರಗಳೊಂದಿಗೆ ಸರಿಹೋಲಿಸಿದ್ದಕ್ಕೆ ಕಲ್ಕತ್ತಾದಲ್ಲಿ ವಿದೇಶಗಳಿಂದ ರಫ್ತಾಗುವ ಜೀನಸುಗಳ ಧಾರಣೆಯು—ಲೋಹಗಳು ಸೇಕಡಾ ೧೮೮, ವಸ್ತ್ರ ಸೇಕಡಾ ೧೬೩, ಹತ್ತಿ ಸೇಕಡಾ ೧೪೯, ಸಕ್ಕರೆ ೮೮, ಕೆರೆಸಿನ್ ಎಣ್ಣೆ ೫೬, ತುಪ್ಪ ಸೇಕಡಾ ೩೨೧ ಪ್ರಕಾರ ಏರಿರುವದು. ಇದೇ ಕಾಲದಲ್ಲಿ ಕಲ್ಕತ್ತಾದಲ್ಲಿ ದವಸುಧಾನ್ಯಗಳ ಕ್ರಯವು ಸೇಕಡಾ ೧೨ರಂತೆ ತಗ್ಗಿತ್ತು. ಮುಂಬಯಿಯಲ್ಲಿಯಾದರೋ ದವಸುಧಾನ್ಯಗಳ ಧಾರಣೆಯು ಹೀಗಿದ್ದಿಲ್ಲ. ಇದು ಸೇಕಡಾ ೨೧ರಂತೆ ಏರಿತು. ತುಪ್ಪದ ಕ್ರಯವೂ ಸೇಕಡಾ ೩೮ರಂತೆ ಹೆಚ್ಚಿದೆ. ಲೋಹಗಳು ಸೇಕಡಾ ೩೯೩; ವಸ್ತ್ರ ೧೪೦; ಹತ್ತಿ ೧೪೫; ಸಕ್ಕರೆ ೭೦ ಕೆರೆಸಿನ ಎಣ್ಣೆ ಸೇಕಡಾ ೫೫ರಂತೆ—ಈ ರೀತಿ ಮುಂಬಯಿ ಧಾರಣೆಗಳಿದ್ದವು. ಮದ್ರಾಸಿನಲ್ಲಿ ದವಸುಧಾನ್ಯಗಳ ದರವು ಸೇಕಡಾ ೫ರಂತೆ ತಗ್ಗಿತ್ತಲ್ಲದೆ ನೆಲಕಡ್ಲೆ, ತೆಂಗಿನಎಣ್ಣೆ ಇವುಗಳ ಕ್ರಯವು ಸೇಕಡಾ ೩೯ ಮತ್ತು ೧೧ರಂತೆ ಕಡಿಮೆಯಾಗಿತ್ತು. ಲೋಹಗಳು ಸೇಕಡಾ ೪೭೮, ವಸ್ತ್ರ ೧೬೪, ಹತ್ತಿ ೧೧೩, ಕೆರಸಿನ ಎಣ್ಣೆ ೪೭—ಇವು ಮದ್ರಾಸಿನಲ್ಲಿ ಏರಿದ ಧಾರಣೆಯ ಸರಾಸರಿಗಳು. ರಂಗೂನಿನಲ್ಲಿ ಧಾನ್ಯಗಳ ಕ್ರಯವು ಸೇಕಡಾ ೧೦ರಂತೆ ಏರಿರುವದು. ಯುದ್ಧದಿಂದ ಉಪಸ್ಥಿತವಾದ ಈ ಧಾರಣೆವಾಸಿಗಳನ್ನು ಈ ದಿನ ಪ್ರಸ್ತಾಪಿಸಲು ಕಾರಣವೇನೆಂದರೆ, ಜೀನಸುಧಾರಣೆಗಳ ಪ್ರಶ್ನವು ಬಹಳ ವಿಶೇಷವಾಗಿ ಈ ಜಿಲ್ಲೆಯ ಜನರ ಮುಂದೆ ಪ್ರಕೃತ ಬಂದಿರುವದು. ಮತ್ತು ಹೀಗೆ ವಿಪರೀತವಾಗಿ ಏರಿರುವ ದರಗಳಿಂದ ತಮಗೆ ನಿವಾರಣೆ ಏನೆಂದು ಕೇಳುತ್ತಿದ್ದಾರೆ. ಅಕ್ಕಿಯ ಹೊರತು ಗೋಧಿ, ಕಡಲೆ ಇತ್ಯಾದಿ ಧಾನ್ಯಗಳು ಇಲ್ಲಿಗೆ ಮುಂಬಯಿಯಿಂದ ಬರುವಂಥವುಗಳು. ಮದ್ರಾಸು ಸಂಸ್ಥಾನಕ್ಕೆ ನಾವು ಸೇರಿದವರಾದರೂ ನಮ್ಮ ವ್ಯಾಪಾರ ವ್ಯವಹಾರಗಳು ಬಹಳಮಟ್ಟಿಗೆ ಮುಂಬಯಿಯ ಕೂಡ ಆಗುವವು. ಆದ್ದರಿಂದ ಮದ್ರಾಸಿನಲ್ಲಿ ಸೂಚಿತವಾದ ದವಸುಧಾನ್ಯಗಳ ಕಡಿಮೆ ದರದ ಪ್ರಯೋಜನವು ನಮಗೆ ಇರದು. ಹಿಂದೂಸ್ಥಾನದಲ್ಲಿ ಧಾನ್ಯಗಳ ಕ್ರಯವು ಅತ್ಯಧಿಕವಾಗಿ ಏರಿದ ಮುಂಬಯಿಯಿಂದಲೆ ನಾವು ನಮ್ಮ ಆಹಾರಸಾಮಗ್ರಿಗಳನ್ನು ತರಿಸಬೇಕಾಗಿರುವದರಿಂದ ದವಸುಗಳ ಕ್ರಯವು ಇಲ್ಲಿ ಮದ್ರಾಸು ಸಂಸ್ಥಾನದ ಇತರ ಪ್ರಾಂತ್ಯಗಳಿಗಿಂತ ಹೆಚ್ಚಾಗಿರಲು ಕಾರಣವಿರುವದು. ಹಿಂದೂಸ್ಥಾನದ ಇತರ ಪ್ರಾಂತ್ಯಗಳ ನಿವಾಸಿಕರಂತೆ ಇಲ್ಲಿಯ ಜನರಿಗೆ ರಾಗಿ ಜೋಳ ಮುಂತಾದವುಗಳನ್ನು ಅಕ್ಕಿಯ ಬದಲಾಗಿ ಉಪಯೋಗಿಸುವ ಅಭ್ಯಾಸವು ಇಲ್ಲದೆ ಇರುವದರಿಂದ ಇಲ್ಲಿಯವರ ಸಂಕಷ್ಟವು ಇನ್ನಷ್ಟು ಅಧಿಕವಾಗಿದೆ. ಅಕ್ಕಿಯು ಈ ಜಿಲ್ಲೆಯಲ್ಲಿಯೇ ವಿಶೇಷವಾಗಿ ಉತ್ಪನ್ನವಾಗುತ್ತಿರುವದಾದರೂ ಇದರ ಕ್ರಯವು ಯುದ್ಧದ ಮೊದಲಿನಿಂದಲೆ ಕ್ರಮವಾಗಿ ಏರುತ್ತ ಬಂದು ಈಗ ಅದು ಮುಡಿಗೆ ಸಾಧಾರಣವಾಗಿ ರೂ. ೭ಕ್ಕೆ ಬಂದು ನಿಂತಿದೆ. ಯುದ್ಧದ ಮೊದಲೂ ಯುದ್ಧದ ನಂತರ ಮೂರು ನಾಲ್ಕು ವರುಷಗಳಲ್ಲಿಯೂ ಮಂಗಳೂರಲ್ಲಿ ಚಾಲ್ತಿಯಲ್ಲಿರುವ ಅಕ್ಕಿ ದರಗಳನ್ನು ನೋಡಿದರೆ ವರುಷಕ್ಕಿಂತ ವರುಷ ಮುಡಿಯ ಧಾರಣೆಯು ಕ್ರಮವಾಗಿ ಎರಡಾಣೆ ನಾಲ್ಕಾಣೆಯಂತೆ ಏರುತ್ತ ಬಂದಿರುವದು. ಆದರೆ ಕಳೆದ ವರುಷದ ಮತ್ತು ಈಗಿನ ಧಾರಣೆ ವ್ಯತ್ಯಾಸವನ್ನು ನೋಡಿದರೆ ಮುಡಿಯ ಮೇಲೆ ಕಳೆದ ವರುಷಕ್ಕಿಂತ ಈ ವರುಷ ರೂಪಾಯಿ ಒಂದು ಹೆಚ್ಚಿದೆ ಎಂತ ಹೇಳಬಹುದು. ಗತವರುಷದಲ್ಲಿ ಬೆಳೆಗೆ ಹಿಡಿದ ಹುಳದಿಂದ ಅಕ್ಕಿ ಪೈದಾಸ್ತು ಕಡಿಮೆಯಾದದ್ದು ಇದೇ ಕಂಠಾವಳಿಯಲ್ಲಿರುವ ಗೋವೆಯಲ್ಲಿ ಅಕ್ಕಿಗೆ ಈಗ ರೂ. ೮ರಿಂದ ೯ರ ವರೆಗಿನ ಕ್ರಯ, ಏರಿದ್ದು, ರಂಗೂನ ಅತ್ತಕಡೆಯಿಂದ ಸ್ಟೀಮರುಗಳ ಅನುಕೂಲತೆಯು ಇಲ್ಲದೆ ಹೋಗ ಈ ಜಿಲ್ಲೆಯ ನೆರೆ ಜಿಲ್ಲೆಯಾಗಿರುವ ಮಲಬಾರಿನಲ್ಲಿ ಅಕ್ಕಿಯ ತುಟ್ಟಿ ಉಂಟಾದದ್ದು ಇಲ್ಲಿಯ ಅಕ್ಕಿಯ ಏರಿದ ಧಾರಣೆಯ ಕಾರಣಗಳಾಗಿರುತ್ತವೆ. ಈ ತಿಂಗಳಲ್ಲಿ ಮಾತ್ರವಲ್ಲ, ಕಳೆದ ಮಾರ್ಚ ಎಪ್ರಿಲ ತಿಂಗಳುಗಳಲ್ಲಿಯೇ ಧಾರಣೆಯು ಏರುತ್ತ ಬಂದಿದೆ. ಹೆಚ್ಚಿನ ಅಕ್ಕಿಯು ಗೋವೆ ಮಲಬಾರ ಪ್ರಾಂತ್ಯಗಳಿಗೆ ಹೋಗಿದೆ. ಸಾವುಕಾರರು ವೈತರುಗಳಿಗೆ ರೂ. ೭-೮-೦, ೬-೧೨-೦, ೬-೧೪-೦ ಈ ರೀತಿ ಕ್ರಯಗಳನ್ನು ಕೊಟ್ಟು ಅಕ್ಕಿಯನ್ನು ಪಡೆದಿರುತ್ತಾರೆ. ಆದ್ದರಿಂದ ಪ್ರಕೃತ ಅಕ್ಕಿಯ ಆಮದುರಫ್ತು ಸರಿಯಾಗಿ ಆಗಲು ಸಾಧ್ಯವಲ್ಲವಿದ್ದರೂ ಅಕ್ಕಿಯ ಬೆಲೆಯು ಇಳಿಯಲು ಆಸ್ಪದವಿಲ್ಲ. ಗೋವೆಗೆ ತಕ್ಕೊಂಡು ಹೋಗಲು ತುಂಬಿಸಿದ ಮಚ್ವೆಗಳು ಮಂಗಳೂರು ಹಂಗರಕಟ್ಟೆ ಮೊದಲಾದ ಈ ಜಿಲ್ಲೆಯ ಬಂದರುಗಳಲ್ಲಿ ಈ ತಿಂಗಳಲ್ಲಿ ನಿಂತುಹೋದ್ದರಿಂದ ಅಕ್ಕಿಯ ಬೆಲೆಯು ಈ ಕಾರಣದಿಂದ ಕಡಿಮೆಯಾಗಲು ಸಾಕೆಂತ ಹಲವರ ಭಾವನೆಯಿದೆ. ಆದರೆ ಮಚ್ವೆಗಳಿಂದ ಹಿಂದಕ್ಕೆ ಬಂದ ಅಕ್ಕಿಯಲ್ಲಿ ಕೆಲವು ಮಳೆಯ ನೀರು ಬಿದ್ದು ಹಾಳಾಗಿ ಹೋಗಿದೆ. ಮತ್ತು ಬಾಕಿ ಉಳಿದ ಅಕ್ಕಿಯು ಗೋವೆ ಸಾವುಕಾರರ ಸೊತ್ತಾಗಿರುವದಲ್ಲದೆ ಅದರ ಮೇಲೆ ಇಲ್ಲಿಯ ಸಾವುಕಾರರ ಮಾಲಿಕತನವಿರದು. ಆದ್ದರಿಂದ ಗೋವೆಗೆ ಹೋಗುವ ಅಕ್ಕಿಯು ಇಲ್ಲಿ ಉಳಿದುಹೋದ್ದರಿಂದ ಏರಿದ ಅಕ್ಕಿಯ ಕ್ರಯವು ಇದರಿಂದ ಕಡಿಮೆಯಾಗಬಹುದೆಂತ ನಂಬಲು ಆಸ್ಪದವಿಲ್ಲ. ಅಕ್ಕಿಯ ಕ್ರಯ ಹೀಗೆ. ಇನ್ನು ವಸ್ತ್ರದ ಏರಿದ ವಿಪರೀತ ಕ್ರಯ, ಕೆರೆಸಿನ ಎಣ್ಣೆಯ ಬಾಟ್ಲಿಗೆ ನಾಲ್ಕಾಣೆ, ಆರಾಣೆ ಮೆಣಸು ಇತ್ಯಾದಿಗಳ ಧಾರಣೆಗಳನ್ನು ಈ ಮೇ ತಿಂಗಳಲ್ಲಿಯೇ ಹೀಗೆ ಏರಿದ್ದನ್ನು ನೋಡಿಕೊಂಡು ಇನ್ನೂ ವೃತ್ತಿ ಇಲ್ಲದ ಮಳೆಗಾಲದ ನಾಲ್ಕಾರು ತಿಂಗಳುಗಳನ್ನು ಕಳೆಯುವದು ಹೇಗೆಂತ ಬಡಬಗ್ಗರು ಬೇಸರಪಡುತ್ತಿದ್ದಾರೆ. ಈ ವಿದ್ಯಮಾನಗಳೆಲ್ಲ ಹೀಗಿರುತ್ತ ಪ್ರತಿವರುಷ ಜೂನ ತಿಂಗಳ ಮಧ್ಯಕಾಲದಲ್ಲಿ ಪ್ರಾರಂಭವಾಗುವ ಮಳೆಗಾಲವು ಈ ವರುಷ ಮೇ ತಿಂಗಳ ಪ್ರಥಮ ವಾರದಲ್ಲಿಯೇ ಪ್ರಾರಂಭವಾಗಿ ಹೋದ್ದರಿಂದ ಜನರ ಕಷ್ಟರಾಶಿಯು ಮತ್ತಷ್ಟು ಹೆಚ್ಚಿರುವದು. ಇದರಿಂದ ಬಡಜನರಿಗೆ ವೃತ್ತಿಯು ಒಂದು ತಿಂಗಳ ಮುಂದಾಗಿಯೇ ಹೋಯಿತು. ಗದ್ದೆಗಳಲ್ಲಿ ಕೊಯ್ಯಲಿಕ್ಕೆ ಬಾಕಿ ಇರುವ ಮತ್ತು ಕೊಯ್ದು ಹಾಕಿದ ಕೊಳಕೆ ಬೆಳೆಯ ಅಧಿಕಾಂಶವು ನೀರುಪಾಲಾಯಿತು. ನೇಜಿ ಒಗ್ಗೆ ಹಾಕಿದ ಭತ್ತವು ಅನೇಕ ಕಡೆಗಳಲ್ಲಿ ಕೊಳೆತುಹೋಯಿತು. ಮುಂದಿನ ಅಕ್ಕಿ ಬೆಳೆಗೆ ಬರುವ ಕಂಟಕಗಳನ್ನು ಈಗಲೆ ಇದಿರು ನೋಡಿಕೊಂಡು ಅಕ್ಕಿಯನ್ನು ದಾಸ್ತಾನು ಇಟ್ಟಿರುವ ದೊಡ್ಡ ದೊಡ್ಡ ವರ್ತಕರಾಗಲಿ ಸಾವುಕಾರರಾಗಲಿ ಅಕ್ಕಿಯನ್ನು ಥಟ್ಟನೆ ವಿಕ್ರಯಕ್ಕೆ ಬಿಟ್ಟುಕೊಡುವಂಥಾದ್ದು ಏನೋ ಹೇಳಲಾಗುವದಿಲ್ಲ. ಇದೆಲ್ಲ ಈ ಜಿಲ್ಲೆಯ ಕಾಲಸ್ಥಿತಿ. ಯುದ್ಧದಿಂದ ಪ್ರಾಪ್ತವಾದ ಏರಿದ ಧಾರಣೆಗಳ ಸಂಕಷ್ಟವು ಸಾಮಾನ್ಯವಾಗಿ ದೇಶದ ಎಲ್ಲಾ ಕಡೆಗಳಲ್ಲಿಯೂ ಇರುವಂತೆಯೇ ಇಲ್ಲಿಯೂ ಇರುವದು. ಇದನ್ನು ಜನರು ತಾಳ್ಮೆಯಿಂದ ಅನುಭವಿಸುವರು. ಆದರೆ ಇತರ ಪ್ರಾಂತ್ಯಗಳಿಗಿಂತ ವಿಶೇಷವಾದ ಕೆಲವು ಸಂಕಷ್ಟಗಳು ಇಲ್ಲಿ ಇವೆ. ಇವುಗಳ ಪರಿಣಾಮವು ಮಿತಿಮೀರಿ ಹೋಗದಂತೆ ಇಲ್ಲಿಯ ಅಧಿಕಾರಿಗಳೂ ಪ್ರಜಾ ಮುಂದಾಳುಗಳೂ ಬಡಜನರ ಕಷ್ಟ ನಿವಾರಣೆಯ ಬಗ್ಗೆ ಮುಚಿತವಾಗಿಯೇ ತಕ್ಕ ವ್ಯವಸ್ಥೆಯನ್ನು ಮಾಡುವದು ಅಗತ್ಯವಾಗಿರುವದು. ಏರಿದ ಧಾರಣೆಗಳ ಸಂಕಷ್ಟ ನಿವಾರಣೆಯ ಬಗ್ಗೆ ಜಿಲ್ಲಾ ಕಲೆಕ್ಟರದೊರೆಗಳವರು ಒಂದೆರಡು ವರ್ಷಗಳ ಮೊದಲು ಒಂದು ಫಂಡನ್ನು ಇಲ್ಲಿ ಏರ್ಪಡಿಸಿದ್ದರು. ಇಂಥಾ ಫಂಡುಗಳನ್ನು ಪುನರುಜ್ಜೀವಿಸುವದಕ್ಕೆ ಈ ಕಾಲವು ತಕ್ಕದ್ದಾಗಿದೆಂದು ಈ ಮೂಲಕ ಸೂಚಿಸುವೆವು.

ಸ್ಫುಟವಿಚಾರಗಳು.

೧. ಹಿಂದುಸ್ಥಾನ ಸರಕಾರದ ಕಡೆಯಿಂದ ಸ್ಥಾನಿಕ ಸ್ವರಾಜ್ಯದ ವಿಷಯದಲ್ಲಿ ಒಂದು ಬಹು ದೊಡ್ಡದಾದ ಠರಾವು ಪ್ರಕಟವಾಗಿದೆ. ಈ ಠರಾವು ಪ್ರಾಂತಿಕ ಸರಕಾರಗಳಿಗೆ ಮತ್ತು ಹಿಂದುಸ್ಥಾನ ಸರಕಾರದ ಬೇರೆಬೇರೆ ಖಾತೆಗಳಿಗೆ ತಿಳುವಳಿಕೆಯ ಬಗ್ಗೆ ಕಳುಹಿಸಲ್ಪಟ್ಟಿದೆ. ಈ ಠರಾವಿನ ಸ್ವರೂಪವನ್ನು ಎಷ್ಟು ಸಂಕ್ಷೇಪದಿಂದ ವಾಚಕರ ಮುಂದೆ ಇಡಲು ಪ್ರಯತ್ನಿಸಿದರೂ ಅದು ನಮ್ಮ ಪತ್ರದ ನಾಲ್ಕೈದು ಕಲಮುಗಳನ್ನಾದರೂ ವ್ಯಾಪಿಸದೆ ಇರದು. ಹೀಗಿದ್ದರೂ ಆ ವಿಸ್ತೃತ ಠರಾವಿನಲ್ಲಿ ಜನತೆಯ ಹಿತದ ದೃಷ್ಟಿಯಿಂದ ಮಹತ್ವದ ಅಂಶವು ಹೆಚ್ಚಿನಮಟ್ಟಿಗೆ ಕಂಡುಬರುವದಿಲ್ಲಾದ್ದರಿಂದ ಪ್ರಕಟವಾದ ಈ ಠರಾವಿನ ಸಂಕ್ಷಿಪ್ತಸ್ವರೂಪದಿಂದ ಹೆಚ್ಚಿನ ಜಾಗೆಯನ್ನು ವೆಚ್ಚಮಾಡುವದು ಅಗತ್ಯವಿಲ್ಲ. ಇರಲಿ, ಸ್ಥಾನಿಕಸ್ವರಾಜ್ಯದ ಸುಧಾರಣೆಯ ಠರಾವನ್ನು ಹೊರಡಿಸುವಾಗ ಹಿಂದುಸ್ಥಾನ ಸರಕಾರವು ಕಳೆದ ಆಗೋಸ್ತು ತಾ. ೨೦ರಲ್ಲಿ ಇಂಗ್ಲಂಡಿನ ಲೋಕಸಭೆಯಲ್ಲಿ ಬಾದಶಹರು ಪ್ರಕಟಿಸಿದ ಹಿಂದಿ ಸುಧಾರಣೆಗಳ ವಿಷಯವನ್ನು ಪ್ರಥಮತಃ ಪ್ರಸ್ತಾಪಿಸಿದೆ. ಈ ಪ್ರಸ್ತಾವನೆಯಲ್ಲಿ ಬಾದಶಹರು ಉಚ್ಚರಿಸಿದ ಆಡಳಿತೆಯ ಪ್ರತಿ ಒಂದು ಶಾಖೆಯಲ್ಲಿ ಹಿಂದಿಗಳ ಪುರೋಗತಿ, ಜವಾಬದಾರ ರಾಜ್ಯಪದ್ಧತಿಗೆ ಅರ್ಹವಾಗುವಂತೆ ಹಿಂದುಸ್ಥಾನದ ಮೆಲ್ಲಮೆಲ್ಲನೆ ಆಗಬೇಕಾದ ಸುಧಾರಣೆ ಮುಂತಾದ ಮಾತುಗಳನ್ನು ಅವತರಿಸಿ ಬ್ರಿಟಿಷ್ ಸಾಮ್ರಾಜ್ಯದೊಳಗೆ ಹಿಂದುಸ್ಥಾನವು ಮುಖ್ಯ ಮತ್ತು ಸಮಭಾಗಿತ್ವದ ಸ್ಥಾನವನ್ನು ಹೊಂದಬೇಕಾದರೆ ಯಾವ ಉಪಾಯವನ್ನು ಅವಲಂಬಿಸಬೇಕು, ಈ ವಿಷಯವಾಗಿ ಸದರಿ ಠರಾವು ಹೇಳುವದೇನೆಂದರೆ, ಬಾದಶಹರ ಜಾಹಿರನಾಮೆಯ ಕುರಿತು ವೈಸರಾಯರು ಸಪ್ಟಂಬರ ತಾ. ೫ರಲ್ಲಿ ಕೌನ್ಸಿಲಿನೊಳಗೆ ಹೀಗೆ ಹೇಳುವರು: ಜವಾಬದಾರ ರಾಜ್ಯಪದ್ಧತಿಯನ್ನು ಹೊಂದಬೇಕಾದರೆ ಮೂರು ದಾರಿಗಳಿವೆ. ಈ ಮೂರು ದಾರಿಗಳಲ್ಲಿ ಸ್ಥಾನಿಕ ಸ್ವರಾಜ್ಯ ಎಂದರೆ ಲೋಕಲ್ ಬೋರ್ಡು ಮತ್ತು ಮುನ್ಸಿಪಾಲಿಟಿ ಈ ಸಂಸ್ಥೆಗಳ ಯೋಗ್ಯ ಸುಧಾರಣೆಯು. ಈ ರೀತಿಯಿಂದ ಪ್ರಸ್ತಾವನೆಯನ್ನು ಮಾಡಿ ಆ ಠರಾವಿನಲ್ಲಿ ಸ್ಥಾನಿಕ ಸ್ವರಾಜ್ಯದ ಸುಧಾರಣೆಯು ಯಾವ ತತ್ವದ ಮೇಲೆ ಮಾಡಬೇಕಾದ್ದು ಎಂಬುದನ್ನು ನಿರ್ಣಯಿಸುವದಕ್ಕಾಗಿ ಲಾರ್ಡ ರಿಪನ್ ದೊರೆಗಳು ೩೦ ವರ್ಷಗಳ ಹಿಂದೆ ಉಪಕ್ರಮಿಸಿದ ಪ್ರಯತ್ನಗಳ ಪ್ರಸ್ತಾಪವನ್ನು ಸರಕಾರವು ಮಾಡಿದೆ. ೧೯೦೭–೯ರಲ್ಲಿ ಅಧಿಕಾರ ವಿಭಜನದ ಕಮಿಷನು ಹಿಂದುಸ್ಥಾನದಲ್ಲಿ 'ಅಧಿಕಾರ' ವಿಭಜನದ ಪ್ರಶ್ನದ ಮೇಲೆ ಲೋಕಮತವನ್ನು ಸಂಗ್ರಹಿಸುವದಕ್ಕಾಗಿ ಕುಳಿತಿತ್ತು. ಆ ಕಮಿಷನಿನಲ್ಲಿ ಸ್ಥಾನಿಕ ಸ್ವರಾಜ್ಯದ ಪ್ರಶ್ನವು ಕೂಡ ಬಂದುಹೋಗಿದೆ. ಆ ಸಂದರ್ಭದಲ್ಲಿ ಅಧಿಕಾರ ವಿಭಜನ ಕಮಿಷನು ಯಾವ ಶಿಫಾರಸುಗಳನ್ನು ಮಾಡಿರುವದೂ ಆ ವಿಷಯದಲ್ಲಿ ಲೋಕಮತ ಪ್ರಾಂತಿಕ ಸರಕಾರಗಳ ಮತ್ತು ಸ್ಟೇಟ್ ಸೆಕ್ರೆಟರಿಯ ಮತ ಈ ಎಲ್ಲ ಸಂಗತಿಗಳ ಸಂಮಿಶ್ರಣದಿಂದ ೧೯೧೫ನೆ ಇಸವಿಯಲ್ಲಿ ಹಿಂದುಸ್ಥಾನ ಸರಕಾರವು ಸ್ಥಾನಿಕ ಸ್ವರಾಜ್ಯದ ವಿಷಯದಲ್ಲಿ ಒಂದು ಠರಾವನ್ನು ಸಾದರಪಡಿಸಿದೆ. ಇತ್ಯಾದಿ ರೀತಿಯಿಂದ ಸ್ಥಾನಿಕ ಸ್ವರಾಜ್ಯ ಪ್ರಶ್ನದ ಲಾರ್ಡ ರಿಪನರ ಕಾಲದಿಂದ ಇತಿಹಾಸವನ್ನು ಕೊಟ್ಟು ಈಗಿನ ಸರಕಾರಿ ಠರಾವು ಮುಂದಿನಂತೆ ಇತ್ಯರ್ಥಿಸುವದು.

೨. ತಾಲೂಕು ಮತ್ತು ಜಿಲ್ಲಾ ಲೋಕಲು ಬೋರ್ಡುಗಳಲ್ಲಿ ಮುಖ್ಯವಾಗಿ ಚುನಾಯಿಸಿದ ಮೆಂಬರುಗಳ ಬಹುಮತವು ಇರುವಂತೆ ಮಾಡಬೇಕು. ಅಲ್ಪ ಸಂಖ್ಯಾತರ ಹಿತದ ಮೇಲೆ ಸರಕಾರಿ ಅನುಭವದ ಅಭಾವವುಂಟಾಗದಂತೆ ಸರಕಾರಿ ನಿಯುಕ್ತ ಸಭಾಸದರೂ ಕೂಡ ಯೋಗ್ಯ ಪ್ರಮಾಣದಲ್ಲಿರತಕ್ಕದ್ದೆಂದು ಮೊದಲು ಅಧಿಕಾರ ವಿಭಜನ ಕಮಿಷನು ಸೂಚಿಸಿತ್ತು. ಈ ಸೂಚನೆಯು ಸರಕಾರಕ್ಕೆ ಮಾನ್ಯವಾದ್ದರಿಂದ ಈಗಿನ ಮಟ್ಟಿಗೆ ಸಾಧಾರಣವಾಗಿ ಮ್ಯುನಿಸಿಪಾಲಿಟಿಗಳಲ್ಲಾಗಲಿ ಲೋಕಲ್ ಬೋರ್ಡುಗಳಲ್ಲಾಗಲಿ ಇದೆ ಕ್ರಮವು ಅಂಗೀಕೃತವಾಗಿದೆಂದು ಹೇಳಬಹುದು. ಮಾತ್ರವಲ್ಲ, ಲೋಕಲ್ ಬೋರ್ಡುಗಳು ಮತ್ತು ಮ್ಯುನಿಸಿಪಾಲಿಟಿಗಳಲ್ಲಿ ಅರ್ಧದಷ್ಟು ಪ್ರತಿನಿಧಿಗಳು ಲೋಕಮತದಿಂದ ಚುನಾಯಿಸಿದವರಾಗಿರಬೇಕೆಂದು ಅ. ವಿ. ಕಮಿಷನು ಏನು ಅಭಿಪ್ರಾಯಪಟ್ಟಿರುವದೊ ಅದನ್ನು ಸರಕಾರವು ಈಗ ಸಮ್ಮತಿಸುತ್ತದೆ. ಚಿಕ್ಕಚಿಕ್ಕ ಜಾತಿಗಳ ಹಿತಸಂರಕ್ಷಣದ ದೆಸೆಯಿಂದ ಅವರ ಪ್ರತಿನಿಧಿಗಳನ್ನು ತೆಗೆದುಕೊಳ್ಳುವದಕ್ಕಾಗಿ ಜಾತಿ ಪ್ರತಿನಿಧಿತ್ವದ ತತ್ವವನ್ನು ಅಂಗೀಕರಿಸುವದಕ್ಕಿಂತ ಸರಕಾರಿ ನಿಯುಕ್ತರಾದ ಸಭಾಸದರಿಂದಲೆ ಈ ಕಾರ್ಯವನ್ನು ನಿರ್ವಹಿಸಬಹುದಾಗಿದೆಂದು ಸರಕಾರದ ಅಭಿಪ್ರಾಯವು. ಆದರೆ ಜನರಲ್ಲಿ ಪಾತ್ರತೆಯು ಬರಬೇಕಾದರೆ ಅವರಿಗೆ ಸರಕಾರಿ ಅಧಿಕಾರಿಗಳ ಅನುಭವದ ಕರಬೇತು ಅಗತ್ಯವಿರುವದರಿಂದ ಅದಕ್ಕೆ ಸರಕಾರಿ ನಿಯುಕ್ತರನ್ನು ನೇಮಿಸುವದು ಹಿತಕರವು. ಆದರೆ ಅವರು ಚರ್ಚಾಸ್ಪದ ವಿಷಯಗಳ ವಾದರಣದಲ್ಲಿ ಬರಿ ತಮ್ಮ ಅನುಭವವನ್ನು ಹೇಳಬಹುದು, ತಕ್ಕ ಹಿತೋಕ್ತಿಗಳನ್ನು ಉಪದೇಶಿಸಬಹುದು, ಹೊರತು ಯಾವದಾದರೂ ಒಂದು ಪಕ್ಷದಿಂದ ತಮ್ಮ ಮತಗಳನ್ನು ಕೊಡಕೂಡದು. ಸಾರಾಂಶ ಮ್ಯುನಿಸಿಪಾಲಿಟಿ ಮತ್ತು ಬೋರ್ಡುಗಳಲ್ಲಿ ಲೋಕನಿಯುಕ್ತ ಪ್ರತಿನಿಧಿಗಳ ಮತವೆ ಮುಖ್ಯವಾಗಿ ನಿಲ್ಲುವಂತೆ ಏರ್ಪಡಿಸುವದು ಹಿಂದೂಸ್ಥಾನ ಸರಕಾರದ ನಿಶ್ಚಯವಿರುವದರಿಂದ ಜಿಲ್ಲಾಧಿಕಾರಿಗಳು ಅಧಿಕಾರ ವಿಭಜನದ ಕಮಿಷನ ಶಿಫಾರಸಿನಂತೆ ತಮ್ಮ ಜಿಲ್ಲೆಗಳ [illegible] ಉಪ

ಫಿನೆನ್ಶಿಯಲ್ ಇಲಾಖೆ.

ಪ್ರಕಟಣೆ.

ಉಟಾಕಮಂಡ್, ತಾರೀಖು 11ನೇ ಮೇ 1918ನೇ ಇಸವಿ

ನಂ 18.—ಇಂಡಿಯಾ ಗವರ್ನ್‌ಮೆಂಟಿನವರ ಈ ಕೆಳಗಿನ ಇಸ್ತಿಹಾರುಗಳು ಪುನಃ ಪ್ರಕಟಿಸಲ್ಪಟ್ಟಿವೆ:—

ಫಿನೆನ್ಸು ಇಲಾಖೆ.

ನಂ. 1250-F. ಸಿಮ್ಲಾ, ತಾರೀಖು 11ನೇ ಮೇ 1918ನೇ ಇಸವಿ.

ಯುದ್ಧದಬಗ್ಗೆ ಇಂಡಿಯದಿಂದ ಎತ್ತಲ್ಪಡುವ ಎರಡನೆಯ ಸಾಲವು

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವಬಗ್ಗಾಗಿ ಇಂಡಿಯಾ ದೇಶವು ಕೊಡುವ ಸಹಾಯಾರ್ಥವಾದ 100 ಮಿಲ್ಲಿಯ ಪವನುಗಳ ಭಾಗವಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವುವು.

ಈ ಕೆಳಗಿನ ಸಾಲಪತ್ರಗಳು ಸಾದರುಮಾಡೋಣಾಗುವವು

1921ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ, ವಾರ್ ಬಾಂಡುಗಳೆಂಬ ಸಾಲಪತ್ರಗಳು

ಸೇಕಡಾ 100ರ ಪ್ರಕಾರ 1921ನೇ ಇಸವಿ ಸಪ್ಟಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು

1923ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್ ಬಾಂಡುಗಳು

ಸೇಕಡಾ 100ರ ಪ್ರಕಾರ 1923ನೇ ಇಸವಿ ಸಪ್ಟಂಬರು 15ನೇ ತಾರೀಕಿನಲ್ಲಿ ಮರ ಪಾವತಿಯಾಗತಕ್ಕವು

1925ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್‌ಬಾಂಡುಗಳು

ಸೇಕಡಾ 103ರ ಪ್ರಕಾರ 1925ನೇ ಇಸವಿ ಸಪ್ಟಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು

1928ನೇ ಇಸವಿಯ, ಸೇಕಡಾ 5½ರ ದರದ ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್‌ಬಾಂಡುಗಳು

ಸೇಕಡಾ 105ರ ಪ್ರಕಾರ 1928ನೇ ಇಸವಿ ಸಪ್ಟಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು

ಮತ್ತು

ಪೋಸ್ಟ್ ಆಫೀಸು ಮೂಲಕವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು

ಇನ್ಕಮ್ ಟಾಕ್ಸ್ ಮಾಫಿ

ಅಸಲ್ ವ ಬಡ್ಡಿಯ ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಕಂದಾಯಗಳ ಜವಾಬ್ದಾರಿ ಇರುವುದು

1921, 1923, 1925 ವ 1928ನೇ ಇಸವಿಯಲ್ಲಿ ಸಂದಾಯವಾಗತಕ್ಕ ವಾರ್ ಬಾಂಡುಗಳು

ಸಾದರು ಮಾಡುವ ಬೆಲೆ ದರಖಾಸ್ತು ಮಾಡಿದ ಪ್ರತಿ 100 ರೂಪಾಯಿಗಳ ಬಗ್ಗೆ ರೂ 100

ಬಡ್ಡಿ.—ವರ್ಷ ಒಂದರ ಸೇಕಡಾ 5½ಯ ಮೇರೆಗೆ ಮಾರ್ಚಿ 15ನೇ ತಾರೀಕಿನಲ್ಲಿ ಮತ್ತು ಸಪ್ಟಂಬರು 15ನೇ ತಾರೀಕಿನಲ್ಲಿ ಪಾವತಿಯಾಗುವುದು

ಬಾಂಡುಗಳನ್ನು ಕೊಂಡುಕೊಳ್ಳುವ ಕಾಲದಲ್ಲಿ ಕೊಂಡುಕೊಂಡ ತಾರೀಕಿನಿಂದ 1918ನೇ ಇಸವಿಯ ಸಪ್ಟಂಬರು 14ನೇ ತಾರೀಕಿನ ವರೆಗಿನ ಬಡ್ಡಿಯು ಮುಂಗಡವಾಗಿ ಪಾವತಿಮಾಡಲ್ಪಡುವುದು

1918ನೇ ಇಸವಿಯ ಸಪ್ಟಂಬರು 14ನೇ ತಾರೀಕಿನ ನಂತರ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳೋಣಾದ ಬಾಂಡುಗಳ ಸಂಗತಿಯಲ್ಲಿ ಕೊಂಡುಕೊಂಡ ತಾರೀಕಿನಿಂದ 1919ನೇ ಇಸವಿಯ ಮಾರ್ಚಿ 14ನೇ ತಾರೀಕಿನ ವರೆಗಿನ ಬಡ್ಡಿಯು ಮುಂಗಡವಾಗಿ ಕೊಡಲ್ಪಡುವದು

ವಿಶೇಷ ಹಕ್ಕುಗಳು —1921, 1923, 1925 ವ 1928ನೇ ಇಸವಿಯ ವಾರ್ ಬಾಂಡುಗಳು, ಅವು ಚಲಾವಣೆಯಲ್ಲಿರುವ ಕಾಲದಲ್ಲಿ, ಇನ್ನು ಮುಂದೆ ಇಂಡಿಯಾ ಗವರ್ನ್‌ಮೆಂಟಿನವರು ಸಾದರು ಮಾಡುವ ಯಾವದಾದರೂ ದೀರ್ಘಕಾಲದ ಸಾಲಕ್ಕೆ ಚಂದಾ ಹಾಕುವ ಉದ್ದೇಶದಬಗ್ಗೆ, ಅಂಥ ಸಾಲಕ್ಕೆ ಯಾವ ದರದಲ್ಲಿ ಬಡ್ಡಿ ಕೊಡುವುದಾದರೂ ಸರಿಯೇ, ರೊಕ್ಕಕ್ಕೆ ಸಮಾನವಾಗಿ ನೂರಕ್ಕೆ ನೂರರಂತೆ ಸ್ವೀಕರಿಸಲ್ಪಡುವುವು

1921, 1923, 1925 ವ 1928ನೇ ಇಸವಿಯ ವಾರ್ ಬಾಂಡುಗಳ ಮೇಲಣ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಡುವುದು. ಆದರೆ ಇತರ ಆದಾಯದ ಮೇಲೆ ಹೊರಿಸಲ್ಪಡುವ ತೆರಿಗೆಯ ದರವನ್ನು ನಿರ್ಣಯಿಸುವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲ್ಪಡುವದು, ಮತ್ತು ಸುಪರ್ ಟಾಕ್ಸಿಗೆ ಗುರಿಪಡುವುದು

ಸೆಕ್ಯೂರಿಟಿ ಪತ್ರಗಳ ನಮೂನೆ.—ವಾರ್ ಬಾಂಡುಗಳು (*a*) ಇನ್ಸ್‌ಕ್ರಾಯಿಬ್ಡ್ (ಹೆಸರು ರಿಜಿಸ್ಟ್ರಿಮಾಡಿರುವ) ಸ್ಟಾಕ್ ಸರ್ಟಿಫಿಕೇಟುಗಳ, ಅಥವಾ (*b*) ಪ್ರಾಮಿಸರಿ ನೋಟುಗಳ ನಮೂನೆಯಲ್ಲಿ ಕೊಡಲ್ಪಡುವವು ಇವುಗಳು ತದನಂತರ, ಅಪೇಕ್ಷಿಸುವುದಾದರೆ, ಬ್ಯಾರರ್ ಬಾಂಡುಗಳಬಗ್ಗೆ ಅವು ಸಿಕ್ಕುವಲ್ಲಿ, ಖರ್ಚು ಇಲ್ಲದೇನೇ, ಬದಲಾಯಿಸಲ್ಪಡುವುವು

ಯಾವ ನಮೂನೆಯಲ್ಲಿ ಸಿಕ್ಕಿದರೆ ಉತ್ತಮವೆಂದು ಕೊಂಡುಕೊಳ್ಳುವವನು ಸೂಚಿಸದಿದ್ದಪಕ್ಷದಲ್ಲಿ, ವಾರ್‌ಬಾಂಡುಗಳು ಇನ್ಸ್‌ಕ್ರಾಯಿಬ್ಡ್ ಸ್ಟಾಕ್ ಸರ್ಟಿಫಿಕೇಟಿನ ರೂಪವಾಗಿ ಸಾದರುಮಾಡಲ್ಪಡುವವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ನೇಕಡಾ 2½ ದರದಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ನೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜಾಮೀನಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

P. Gopal Naik,

Secretary

ಮೈಸೂರು ಊದುಬತ್ತಿಗಳು.

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ.

ಊದುಬತ್ತಿಗಳು. 24 ರೂಪಾಯಿ ತೂಕದ ಸೇರು 1ಕ್ಕೆ ರೂ. 12, 6, 3, 2-8-0, 1-6-0.

ಅರಗಜ ಮತ್ತು ಬಿಲ್ಲೆಗಳು. ಶೀಸೆ 1ಕ್ಕೆ ರೂ. 3, 2, 1.

ಬಾಲಗ್ರಹಧೂಪ. ಮಕ್ಕಳಿಗೆ ಬರುವ ಗಾಳಿದೋಷಗಳಿಗೆ ಸಂಜೀವನವಾದ ಧೂಪ. ಇದಕ್ಕಿಂತಲೂ ಬೇರೆ ವಿಧವಾದ ಚಿಕಿತ್ಸೆಯು ಇಲ್ಲ. ಟಿನ್ 1ಕ್ಕೆ 8 ಆಣೆ.

ಜರದ. ಹೊಗೆಸೊಪ್ಪು ತಿನ್ನತಕ್ಕವರಿಗೆ ಅತಿ ... ಶೀಸೆ 1ಕ್ಕೆ 6 ಆಣೆ.

ರಾಯಲ್ ಸುಗಂಧಿ. ಶೀಸೆ 1ಕ್ಕೆ 8 ಆಣೆ ... ಬಹಳ ಸುವಾಸನೆಯಾಗಿ ತಯಾರಿಸಿರುತ್ತೆ. 1 ಶೀಸೆ ಸುಮಾರು 100 ಜನಕ್ಕೆ ಸಾಕಾಗುತ್ತೆ.

ಲೆವೆಂಡರ್. ಶೀಸೆ 1ಕ್ಕೆ 1—4—0.

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರುಷಕ್ಕೆ ಒಂದಾವರ್ತಿ ಬಹುಮಾನ ಹಂಚಲ್ಪಡುತ್ತೆ. ಈ ಮೇಲ್ಕಂಡ ಸಾಮಾನುಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ವಿಕರಿಗೆ ಸಿದ್ಧವಾಗಿರುತ್ತವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,

ಸುಗಂಧಕಾರಿ, ಮೈಸೂರು.

ವಿಲ್ಲಿಯಮ್ಸ್ ಡೆಂಟೋನ್.

ಅನುಭವಸಿದ್ಧ ಅದ್ವಿತೀಯ ಔಷಧ.

ಅನೇಕ ಉತ್ತಮವಾದ ವನಸ್ಪತಿ ಔಷಧಿಗಳಿಂದ ತಯಾರಿಸಿದ "ವಿಲ್ಲಿಯಮ್ಸ್ ಡೆಂಟೋನ್" ಎಂಬ ಈ ದಂತ ಪುಡಿಯನ್ನು ಸಾವಿರಾರು ಜನರು ಉಪಯೋಗಿಸಿ ಸುಖಹೊಂದಿ ತಮ್ಮ ಹಲ್ಲುಗಳನ್ನು ವೃದ್ಧಾಪ್ಯಕಾಲದವರೆಗೆ ಭದ್ರವಾಗಿ ಉಳಿಸಿ ಸಂತೋಷದಿಂದ ಜೀವಿಸುತ್ತಾರೆ.

ಇದನ್ನು ಬಳಸಿದ್ದೇ ಪ್ರಾತಃಕಾಲ ಹಲ್ಲುಗಳಿಗೆ ತಿಕ್ಕಿ ಬಾಯಿ ತೊಳೆಯುವದರಿಂದ ಹಲ್ಲುಗಳು ಮುತ್ತಿನಂತೆ ಥಳಥಳಿಸಿ ಬಾಯಿಯ ದುರ್ವಾಸನೆ ಹೋಗಲಾಡಿಸುವದಲ್ಲದೆ, ನಾಲಿಗೆ ಸವ್ಯಗಾಗುವದೂ, ವಸಡಿನಿಂದ ಕೀವು ಮತ್ತು ರಕ್ತ ಹೊರಡುವದೂ, ಹಲ್ಲಿನ ಬುಡದಲ್ಲಿ ಸುಣ್ಣ ಕಟ್ಟುವದೂ, ವಸಡು ಬೇಗಿಕೆಯಿಂದ ಆಹಾರ ತಿನ್ನುವರೆ ಆತಂಕವಾಗಿ ಉಪದ್ರವಾಗುವದೂ, ಖಂಡಿತವಾಗಿ ಗುಣವಾಗುತ್ತವೆ. ಅಲುಗಾಡುವ ಹಲ್ಲುಗಳು ಬಲವಾಗಿ ಆಹಾರವನ್ನು ಜಗಿದು ತಿನ್ನುವರೆ ಅನುಕೂಲವಾಗಿ ಹೆಚ್ಚು ಕಾಲ ಬದುಕಲಿಕ್ಕೆ ಆಸ್ಪದ ಉಂಟಾಗುತ್ತದೆ.

ಅನುಭವವೇ ಮುಖ್ಯ.

ಗುಣ ವಿಶೇಷ! ಕ್ರಯ ಕಮ್ಮಿ!! ಹುಡಿ ಹೆಚ್ಚು!!!

ಕ್ರಯ ಆಣೆ 5 ಮತ್ತು ಆಣೆ 9.

ದರಪಟ್ಟಿಗಳಲ್ಲಿ ಏಜಂಟುಗಳಾಗಬೇಕೆನ್ನುವವರು ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಸೋಲ್ ಏಜಂಟ್ಸ್— ಜೆ. ಎಸ್. ಸೋಜ ಮತ್ತು ಕಂಪೆನಿ,

ಬಂದರಕಟ್ಟ, ಮಂಗಳೂರು.

ಆರ್. ಮಾರ್ಟಿನ್ಸರ

ಸ್ವಾರ ಸಾಪರಿಲ್ಲಾ

ಈ ಸಾರ್ಸಾಪರಿಲಾ ಔಷಧವನ್ನು ಪ್ರತಿದಿನವೂ ನಿರಂತರವೂ ತಗಲುತೊಳ್ಳುವದರಿಂದ ವ್ಯಾಧಿಗಳು ರಕ್ತವನ್ನು ಚೆನ್ನಾಗಿ ಶುದ್ಧಿಮಾಡುತ್ತದೆ. ಸುಖಭೋಗ, ಕೆಟ್ಟ ರಕ್ತ ಸಂಬಂಧದಿಂದುಂಟಾದ ಎಲ್ಲಾ ತರಹದ ಕಾಹಿಲೆ, ಉಬ್ಬಸ ... ನರಗಳ ... ವಾತ, ಸಂಧಿವಾತ, ಯಕೃತ್ಸಾರ, ಕೆಮ್ಮು, ಫರಂಗಿಹುಣ್ಣು, ಕಜ್ಜಿ ... ಮತ್ತು ಚರ್ಮದ ರೋಗಗಳು, ವಿಷಕಡಿತದಿಂದುಂಟಾದ ವ್ಯಾಧಿ, ಪೆರಾಲಿಸಿಸ್, ಇವು ... ರಕ್ತವನ್ನು ಚೆನ್ನಾಗಿ ಶುದ್ಧಿಯಾ... ಇದು ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟದ್ದಾಗಿರುತ್ತದೆ. ಬಾಟ್ಲಿ 1ಕ್ಕೆ ಕ್ರಯ ರೂ. 0-13-0.

ಆರ್. ಮಾರ್ಟಿನ್ಸರ ಎಗ್ಯೂ ಮಿಕ್ಸ್‌ಚರ್

ಇದು ಜ್ವರ, ಶೀತಜ್ವರ, ಮಲೇರಿಯಾ, ಚಾಳಿಜ್ವರ, ಸನ್ನಿಪಾತ, ಕೆಟ್ಟ ಬಾಯು ... ಮೊದಲಾದ ಎಲ್ಲಾ ತರಹದ ಜ್ವರಗಳನ್ನು ಕೂಡಲೇ ನಾಶಮಾಡುತ್ತದೆ. ... ಜ್ವರವನ್ನು ಸಹ ನಾಶಮಾಡುವದಲ್ಲದೆ ಇದು ಸಹಿಯಾಗಿರುವುದರಿಂದ ಸಣ್ಣ ಹುಡುಗರಿಗೂ ಸಹ ಕುಡಿಯಲಿಕ್ಕೆ ಇಷ್ಟವಾಗುತ್ತವೆ. ಅನೇಕ ಜನ ವಿಖ್ಯಾತ ವೈದ್ಯರಿಂದ ಗುಣವಾಗದಿರುವಂಥ ಜ್ವರವನ್ನು ಈ ಔಷಧಿ ಎರಡು ಬಾಟ್ಲಿಗಳ ಸೇವನೆಯಿಂದ ಗುಣವಾಗಿದೆ. ಬಾಟ್ಲಿ 1ಕ್ಕೆ ರೂ. 0—12—0.

ಆರ್. ಮಾರ್ಟಿನ್ಸರ ಮೂಲವ್ಯಾಧಿ ಮುಲಾಮು.

ಮನುಷ್ಯರಿಗೆ ಮೂಲವ್ಯಾಧಿ ಆದಾಗ, ಬಹಳ ಸಲ ಉಬ್ಬೆ ಹೊಯ್ಯುವಿಕೆ, ... ಮೂಲಬದ್ಧತೆ ಇವೇ ಮೊದಲಾದವುಗಳಿಂದ ... ಈ ಔಷಧ ಒಂದೇ ಒಂದು ಬಾಟ್ಲಿಯ ಉಪಯೋಗದಿಂದ, ರಕ್ತ ಸುರಿಯುವ ಮೂಲವ್ಯಾಧಿ ಹಾಗೂ ನೋಯುವ ಮೂಲವ್ಯಾಧಿ ಮತ್ತು ಎಂಥ ತರದ ಕಠಿಣವಾದ ಮೂಲವ್ಯಾಧಿಯಾದರೂ ಕೂಡಲೇ ವಾಸಿಯಾಗುತ್ತದೆ. ಇದು ... ನೋವನ್ನು ಕೊಡದೆ ಶಾಂತಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 0—8—0.

ಏಜಂಟರು— ಆರ್. ಡಿ. ಕಟ್ಲಿ ಮತ್ತು ಕಂಪೆನಿ,

ನಂ. ಡಿ. ಫ್ರಿಯರ್ ರೋಡ್,

ರೈಟ್ ಎಂಡ್ ಕೋ ಹತ್ತರ, ಫೋರ್ಟ, ಮುಂಬಯಿ.

R. D. Kately & Co.

No. D. Frere Road,

Near Wright & Co. Fort Bombay.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ.

ಏಜಂಟರು ಬೇಕು! ಧರಪುರ್ ಕಮಿಷನ್!!

ರಕ್ತಮೂಲಿಕಾ ಅಮರ ಸಂಜೀವಿನಿ ಟಾನಿಕ್, ಬಾಲಸಂಜೀವನ ಟಾನಿಕ್, ವಸಂತ ಕುಸುಮಾಕರ ತೈಲ, ಸುದರ್ಶನ ಮಾತ್ರೆ, ... ಆನಂದವನ ವಿಲಾಸ, ಕೌಟುಂಬ ಜೀವನ ... ಕಲು ಮಾರಿರುತ್ತೇವೆ.

೧. ಶಂಖೀರಮ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ... ಗುಣವಾಗುತ್ತದೆ. ಕ್ರಯ 16 ಮಾತ್ರೆ, ರೂ. 1.

೨. ಸೂರ್ಯಪ್ರಭಾ. ಇದು ಸ್ವಪ್ನಸ್ಖಲನ, ... ಶೀಸೆ 1ಕ್ಕೆ ರೂ. 1.

೩. ಆರೋಗ್ಯಸಾರ. ಈ ... ನಷ್ಟ ವಾದ ... ಬಾಟ್ಲಿ 1ಕ್ಕೆ 1—4—0.

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ... 1ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್, ಇದು ಸ್ತ್ರೀಯರ ... ಮಾತ್ರೆ 60ಕ್ಕೆ ರೂ. 2.

೬. ಬಾಲಸಂಜೀವಿನಿ, ... 1 ಶೀಸೆ 1ಕ್ಕೆ ರೂ. 1—8—0.

೭. ದಹಾರ್ ಬ್ಯೂಟಿ ವೆಸ್ಲಿನ್, ... ಬಾಟ್ಲಿ 1ಕ್ಕೆ ರೂ. 0—8—0.

೮. ಅಮೃತಸಾರ. ... ಶೀಸೆ ರೂ. 1—0—0.

N. B.—ನಮ್ಮ ...

ಮ. ಎಸ್. ವಿ. ಶಂಕರನಾರಾಯಣ ... ಮೇನೇಜರ್,

ವೃತ್ತಿಶಿಕ್ಷಣ.

ಓದುಬರಹ ಗೊತ್ತಿಲ್ಲದವರಿಗೆ ಕೂಡಾ ಒಳ್ಳೇ ಸಂದರ್ಭ.

ಒರೇ ಸ್ವಲ್ಪ ಮೂಲಧನದಿಂದ ಜೀವನ ದುಡಿಯಲಿಕ್ಕೆ ಅನುಕೂಲವಾಗುವ ಮತ್ತು ಎಲ್ಲರಿಗೂ ಯಾವಾಗಲೂ ಆಗತ್ಯವಿರುವ ವೃತ್ತಿಯೇ

ಹೊಲಿಗೆ ವೃತ್ತಿ.

ಇದನ್ನು ಶಾಸ್ತ್ರಪ್ರಕಾರ ಸಮಯೋಚಿತ ಚಾರ್ಟ್ಸು ಅಂದಚಂದಗಳಿಗೆ ಅನುಸರಿಸಿ ಯೋಗ್ಯರೀತಿಯಿಂದ ಮಾಡುವ ದರ್ಜಿಗಳು ಯಾವಾಗಲೂ ಎಲ್ಲೆಲ್ಲಿಯೂ ಆಗತ್ಯಬೇಕು.

ಉಡಿಗೆಯೇ ಮನುಷ್ಯನ ಮುಖ್ಯ ಶೃಂಗಾರ.

ಉಡಿಗೆಯು ಮನುಷ್ಯನ ಇತರ ಗುಣಗಳಂತೆಯೇ ಎಲ್ಲಿಯೂ ಮಾನ್ಯ. ಉಡಿಗೆಗಳು ಗಿರಾಕಿಗಳ ಪಸಂದಿಗೆ ಬರಬೇಕಾದರೆ ಪ್ರಕೃತ ಇಂಗ್ಲಿಷ್ ಸಿಸ್ಟಮುಗಳಿಗೆ ಅನುಸರಿಸಿ ಅವರವರ ಅಂಗೋಪಾಂಗಗಳಿಗೆ ಒಪ್ಪುವಂತೆ ಕತ್ತರಿಸಲ್ಪಟ್ಟವುಗಳಾಗಿಯೂ ಯೋಗ್ಯರೀತಿಯಿಂದ ಹೊಲಿಯಲ್ಪಟ್ಟವುಗಳಾಗಿ ತೃಪ್ತಿಕರವಾಗಿಯೂ ಇರಲೇ ಬೇಕು.

ಹೊಸ ಇಂಗ್ಲಿಷ್ ಪದ್ಧತಿ ಸಿಸ್ಟಮುಗಳೂ ಹೊಲಿಗೆಗೆ ಬೇಕಾದ ಇತರ ಮಾಹಿತಿಗಳೂ ಕಲಿಯುವವರಿಗೆ ಅನುಕೂಲವಾದ ಸಮಯಗಳಲ್ಲಿ ಸ್ವಲ್ಪ ಕಾಲದೊಳಗೇನೇ ಸುಲಭ ದರಗಳಲ್ಲಿ ಕಲಿಸುವ ಏರ್ಪಾಡು ನಮ್ಮ ಟೈಲರಿಂಗ್ ಹೌಸಿನಲ್ಲಿ ಮಾಡಿರುವವು. ಹೆಚ್ಚಿನ ಮಾಹಿತಿಯನ್ನು ನಮ್ಮಲ್ಲಿ ವಿಚಾರಿಸಿಕೊಳ್ಳಬಹುದು.

M. Anantha Prabhu,

The Tailoring House, C.

MANGALORE, SOUTH CANARA.

ಎಲ್ಲಾ ತರದ ಸ್ವಾಕಲುಗಳ ದುರುಸ್ತಿಗಳನ್ನೂ, ಸ್ವಾಕಲುಗಳ ಉಪಕರಣಗಳನ್ನೂ ಸುಲಭಕ್ರಯದಲ್ಲಿ ಮನಸ್ಸಿಗೆ ತೃಪ್ತಿಕರವಾಗಿ ಒದಗಿಸಿಕೊಡುವ

ಮಂಗಳೂರು ಸ್ವಾಕಲ್ ಸ್ಟೋರ್ಸ್

(1917ನೇ ಇಸವಿಯಲ್ಲಿ ಮಂಗಳೂರಲ್ಲಿ ನಡೆದ ವಸ್ತುಪ್ರದರ್ಶನದಲ್ಲಿ ಬಹುಮಾನಪಡೆದಿರ್ವವ ಪಡೆದಿದೆ.)

ಇವರಿಂದ

ಬರೇ ವನಸ್ಪತಿಗಳಿಂದಲೇ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ

ಡೆಂಟಲೀನ್

ಈ ದಂತಾಮೃತವು ಎಲ್ಲಾ ತರದ ಹಲ್ಲುನೋವುಗಳಿಗೂ ಒಸಡಿಗೂ ಕೈಕಂಡ ದಿವ್ಯ ಔಷಧ.

ಹಲ್ಲುನೋವು ಕುರುವಾದಕೂಡಲೇ 2 ಯಾ 3 ತಟಕುಗಳನ್ನು ತಿಂಗಳಿಗೆ ಹಾಕಿ ... ದೀರ್ಘಕಾಲದ ನೋವುಗಳಿಗೆ ಈ ಔಷಧವನ್ನು ಒಂದು ವಾರದವರೆಗೆ ಉಪಯೋಗಿಸಿದ್ದಲ್ಲಿ ದಂತಪುಡಿಗಳ ಚಿಕಿತ್ಸೆ ಅಗತ್ಯವಿರದು. ಒಮ್ಮೆ 1 ಶೀಸೆಯನ್ನು ತರಿಸಿ ಉಪಯೋಗಿಸಿದ್ದಲ್ಲಿ ...

ಶೀಸೆ ಗರ ಕ್ರಯ ರೂ. 1—0—0. ವಿ. ಪಿ. ಖರ್ಚು ಪ್ರತ್ಯೇಕ.

ಒಮ್ಮೆ ... ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಳಾಸ— ಮಂಗಳೂರು ಸ್ವಾಕಲ್ ಸ್ಟೋರ್ಸ್,

ಮಂಗಳೂರು, ದ. ಕನ್ನಡ.

ವಿಶೇಷ ಸೂಚನೆ— ...

ಯೂರೋಪದ ಮಹಾ ಯುದ್ಧ.

ಹಡಗುಗಳ ನಾಶ—ಮೇ ೩೧ನೆ ತಾರೀಖಿಗೆ ಒಂದು ಬ್ರಿಟಿಷ ಡಿಸ್ಟ್ರಾಯರ್ ನಾವೆಯು ಮುಳುಗಿತು. ಜನರು ಯಾರೂ ಸಾಯಲಿಲ್ಲ.

"ಪ್ರೆಸಿಡೆಂಟ್ ಲಿಂಕನ್" ಎಂಬ ಹೆಸರಿನ ೧೮,೦೦೦ ಟನ್ ತೂಕವಾಗಿದ್ದ ಅಮೇರಿಕದ ಹಡಗು ಟೊರ್ಪಿಡೊ ತಗಲಿ ಮುಳುಗಿತು.

ವಿಮಾನಗಳ ಹಾವಳಿ—ಜೂನು ೨ನೆ ತಾರೀಖಿಗೆ ಶೆಂಸ್ ಪಟ್ಟಣದ ಸಮೀಪದಲ್ಲಿ ಶತ್ರುವಿಮಾನಗಳು ಸಂಚರಿಸಿ ಪ್ಯಾರಿಸ್ ಪಟ್ಟಣದ ಮೇಲೆ ಹಾರ್‍ಯಾಡಲಿಕ್ಕೆ ಪ್ರಯತ್ನಿಸಿದ್ದು ಸಾಧ್ಯವಾಗಲಿಲ್ಲ. ೪ ಮಂದಿಗೆ ಮಾತ್ರ ಸಿಡಿಮದ್ದಿನಿಂದ ಜಖಂ ಆಯಿತು. ಶತ್ರುಗಳ ದೊಡ್ಡದೊಂದು ವಿಮಾನವು ಮುರಿದು ಬಿದ್ದುದನ್ನು ಫ್ರೆಂಚರು ಸೆರೆಹಿಡಿದರು.

ಜರ್ಮನರು ಮಿತ್ರಮಂಡಲಿಯ ಯುದ್ಧ ಆಸ್ಪತ್ರೆಗಳ ಮೇಲೆ ಸಿಡಿಮದ್ದನ್ನು ಚೆಲ್ಲುತ್ತಿರುವುದು ಬಹಳ ಕ್ರೂರವೃತ್ತಿಯನ್ನು ತೋರ್ಪಡಿಸುತ್ತದೆ.

ಇಟಲಿಯ ಯುದ್ಧರಂಗ—ಮೊಂಟ್‌ಡಿವಲ್‌ಬೆಲ್ಲೊ ಎಂಬಲ್ಲಿ ಇಟಲಿಯವರು ಸ್ವಲ್ಪ ಮುಂದರಿಸಿ ೫೮ ಮಂದಿ ಸೈನಿಕರನ್ನೂ ೬ ಯಂತ್ರಚಾಲಿತ ತೋಪುಗಳನ್ನೂ (ಮೆಶಿನ್ ಗನ್ಸ್) ಹಿಡಿದರು.

ಪಶ್ಚಿಮ ಯುದ್ಧರಂಗ—ಎಯುನ್ನ, ಒಯ್ಸ್, ಮತ್ತು ಮಾರ್ನ ನದಿಗಳ ನಡುವೆ ಇರುವ ಪ್ರದೇಶಗಳಲ್ಲಿ ಯುದ್ಧವು ನಡೆಯುತ್ತಾ ಇದೆ. ಆದರೆ [illegible] ದಲ್ಲಿ ಇದ್ದ ರಭಸವು ಶತ್ರುಗಳ ಕಡೆಯಿಂದ ಕಂಡುಬರುವುದಿಲ್ಲ. [illegible]

[illegible]

ಒಳದೇಶ ವೃತ್ತಾಂತ

[illegible]

ಮುಂಬಾಯಿ—ಬೇಡಾದಲ್ಲಿ ಸತ್ಯಾಗ್ರಹ— [illegible] ಪ್ರಕಟಿಸಿದರು. ಬೇಡಾದಲ್ಲಿ ಬೇರೆ ಗ್ರಾಮಗಳಲ್ಲಿಯೂ ಇದೇ ಹುಕುಂ ಜಾರಿಗೆ ಬರುವದಾದರೆ ರೈತರ ಮನವಿಯಲ್ಲಿ ಒಂದು ಭಾಗವನ್ನು ಸರಕಾರದವರು ಒಪ್ಪಿಕೊಂಡಂತಾಯಿತು.

ಯುದ್ಧ ಸಾಲ

ಜೂನು ೬ನೆ ತಾರೀಖು ವರೆಗೆ ಯುದ್ಧದ ಎರಡನೇ ಸಾಲದ ವಿವರಣೆಗೆ ೧೧ ಕೋಟಿ ೪೮ ಲಕ್ಷ ೪೫ ಸಾವಿರದ ೨೦೦ ರೂಪಾಯಿ ವಂತಿಗೆಯಾಯಿತೆಂದು ಕಲ್ಕತ್ತೆಯಿಂದ ತಿಳಿದು ಬರುತ್ತದೆ. ಈ ವೃತಿ—

ಬಂಗಾಳ ಸಂಸ್ಥಾನ	ರೂ. ೫,೫೭,೦೪,೩೦೦
ಮುಂಬಾಯಿ,	,, ೨,೫೭,೬೬,೯೦೦
ಯುನೈಟೆಡ್;	,, ೧,೦೨,೩೦,೪೦೦
ಮದ್ರಾಸು,	,, ೯೯,೦೪,೦೦೦
ಪಂಜಾಬು,	,, ೪೭,೭೦,೩೦೦
ಬರ್ಮಾ;	,, ೩೦,೦೩,೨೦೦
ಸೆಂಟ್ರಲ್;	,, ೧೦,೩೦,೪೦೦
ಬಿಹಾರ ಮತ್ತು ಒರಿಸ್ಸಾ;	,, ೯,೨೯,೯೦೦
ಆಸ್ಸಾಂ;	,, ೨೦,೦೦೦
ಇತರ ಸಣ್ಣ ಸಂಸ್ಥಾನಗಳು;	,, [illegible],೦೦೦

ಕೋಲ್ಕನಾಡಾ—೨೮ ತಾರೀಖಿನ "ಹಿಂದೂ" ಪತ್ರಿಕೆಗೆ ಕೋಕನಾಡದಿಂದ ಒಬ್ಬ ಬಾತ್ಮೀದಾರರು ಬರೆದ ಲೇಖನ [illegible]

[illegible]

ದಕ್ಷಿಣ ಕನ್ನಡ

[illegible]

ಬರಹಾಂಪುರದ ನೇಯ್ಗೆಯವರ ಸಹಕಾರ ಸಂಘ

[illegible]

ಸಂಘವೂ ಕಂಪೆನಿಯವರೂ ಸಮಪಾಲಿನಿಂದ ಹಂಚಿಕೊಳ್ಳುವರು. ನಷ್ಟವಾದರೆ ಕಂಪೆನಿಯವರೇ ಸಹಿಸಿಕೊಳ್ಳಬೇಕೆಂದು ನಿರ್ಣಯಿಸಿದೆ. ಇದಕ್ಕೆ ಒಬ್ಬ ನೇಯಿಗೆಯವನಿಗೆ ೬ ಆನೆ ಕೂಲಿ ಸಿಕ್ಕುವ ಹಾಗೆ ಕೊಡಿಯು ಪಟ್ಟಿಯನ್ನು ಸಂಘದವರು ತಯಾರಿಸಬೇಕು. ಈ ಕೂಲಿಯನ್ನು ಕಂಪೆನಿಯವರು ಸಂಘದ ಮುಖಾಂತರ ಕೊಡುವರು. ಈ ಕೆಲಸವು ಇತ್ತೀಚಿನಿಂದಲೂ ೧೪ ದಿನಗಳ ಬಾಯಿದೆಯಿಂದ ಕೊಡಲ್ಪಡುವದು.

ಇದರಿಂದ ಪ್ರಥಮದಲ್ಲಿ ನೇಯಿಗೆಯವರಿಗೆ ದಿವಸಕೂಲಿಯು ದೊರೆವುದಕ್ಕೆ ಉದರನಿರ್ವಾಹಕ್ಕೆ ಬೇಕಷ್ಟು ಸಿಕ್ಕುವದಿಲ್ಲದೂ ಈ ಸಂಘದ ಮೂಲಕವಾಗಿ ಕಸ್ತೂರಿ ಈ ನೇಯಿಗೆಯವರು ಉದ್ಧಾರವಾಗಲಿಕ್ಕೆ ಎಡೆ ಇದೆ. ನಮ್ಮ ಮಂಗಳೂರಲ್ಲಿ ಹಲವು ತರದ ಕಾರ್ಖಾನೆಗಳು ನೇಯ್ಗೆಯವರೂ ಇರುವರು. ಮಗ್ಗದ ಕೆಲಸಕ್ಕೆ ಬೇಕಾಗುವ ನೂಲನ್ನು ಅನುಕೂಲಸ್ಥರು ತಾವೇ ಬೊಂಬಾಯಿಂದಲೂ ತರಿಸಿ ಇಲ್ಲಿ ಸ್ಥಳೀಯ ವ್ಯಾಪಾರಿಗಳ ಮೂಲಕವಾಗಿಯೂ ತರಿಸುತ್ತಾರೆ. ಆದರೆ ಬಟ್ಟೆ ವಿಕ್ರಯಕ್ಕೆ ಸರಿಯಾದ ಏರ್ಪಾಡು ಬಡ ನೇಯಿಗೆಯವರಿಗೆ ಇಲ್ಲ. ಇದಲ್ಲದೆ ಕೆಲವರಲ್ಲಿ ಬಡವನಾದ ನೇಯಿಗೆಯವನು ನಾಲ್ಕಾರು ಕೆಲಸವನ್ನು ಮಾಡಿ ಅದನ್ನು ಸಮಯನೋಡಿ ಮಾರಾಟ ಮಾಡಿ ಹೆಚ್ಚಿನ ಮುನಾಫೆ ಹೊಂದಲಿಕ್ಕೆ ಎಡೆಯಿಲ್ಲದೆ ದೊರೆಗು ಬಟ್ಟೆ ಮತ್ತು ಸಾಧಾರಣ ರೀತಿಯ ಕೆಲಸ ಮಾತ್ರವೇ ಆಗುತ್ತದೆ. ಮೇಲಿನ ಕ್ರಮವನ್ನು ಅನುಸರಿಸಿ ಒಂದು ಸಂಘವನ್ನು ಏರ್ಪಡಿಸುವ ಆಲೋಚನೆಯನ್ನು ಸಣ್ಣ ಸಣ್ಣ ಕಾರ್ಖಾನೆಗಳವರು ಮಾಡಿದರೆ ಕೋಆಪರೇಟಿವ್ ಇಲಾಖೆಯವರಾಗಲೀ ಥಿಯಸೊಫಿಸ್ಟ್ ಸೆಂಟ್ರಲ್ ಬ್ಯಾಂಕಿನವರಾಗಲೀ ಈ ವಿಷಯದಲ್ಲಿ ತಕ್ಕ ಆಲೋಚನೆಯನ್ನೂ ಪ್ರತ್ಯಕ್ಷ ಸಹಾಯವನ್ನೂ ಒದಗಿಸಿಕೊಡುವರೆಂದು ನಾವು ನಂಬುತ್ತೇವೆ.

ಕನ್ನಡ ವಾಙ್ಮಯದ ದೀನಸ್ಥಿತಿ.

(ಲೇ: ಆತ್ಮಾರಾಮ ಶಾಸ್ತ್ರೀ ಒಕ್ಕಲಮನೆ)

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು)

[illegible]

ಅನುಕ್ರಮಣಿಕೆ

ಅಗ್ರಲೇಖ: ಪಾಮು
೧. ಎಲಿಮೆಂಟರಿ ಶಾಲೆಯ ಬಡ ಉಪಾಧ್ಯಾಯರು ೪
೨. ಸ್ಥಾನಿಕ ಸ್ವರಾಜ್ಯದ ಠರಾವು ೪ ೫
ಸ್ಫುಟವಿಚಾರಗಳು:—
೧. ಸತ್ಯಾಗ್ರಹದ ಸಮಾಪ್ತಿ
೨. ಐಕ್ಯವನ್ನು ಸಾಧಿಸಿರಿ ೫ ೬
೩. ಸ್ವಿಕರ್ ಕಾಂಗ್ರೆಸ್ಸಿನ ಅಧಿವೇಶನ
೪. ಪೊಲಿಸರ ಖಂಡುತನ.
ಸ್ಥಳಕ— ಮಂಗಳೂರು
ವರ್ತಮಾನ ಸಂಗ್ರಹಗಳು:—
೧. ಯೂರೋಪದ ಮಹಾಯುದ್ಧ
೨. ಒಳದೇಶ ವೃತ್ತಾಂತ
೩. ದಕ್ಷಿಣ ಕನ್ನಡ ಕುಂಬಳೆ
೪. ಬರಹಾಂಪುರದ ನೇಯಿಗೆಯವರ ಸಹಕಾರ ಸಂಘ
೫. ಕನ್ನಡದ ದೀನಸ್ಥಿತಿ ೩ ೬
೬. ಕರ್ನಾಟಕ ಸಾಹಿತ್ಯ ಸಮ್ಮೇಳನ

ಸ್ವದೇಶಾಭಿಮಾನಿ.

ಶಕ ೧೮೪೭ ಜ್ಯೇಷ್ಠ ಶು ೬ ಶುಕ್ರವಾರ

ಎಲಿಮೆಂಟರಿ ಶಾಲೆಗಳ ಬಡ ಉಪಾಧ್ಯಾಯರು

(ಲೇಖಾಂಕ ೨)

ವಿದ್ಯಾದಾನದ ದೊಡ್ಡ ದೃಷ್ಟಿಯನ್ನು ಇಟ್ಟುಕೊಂಡ ಉಪಾಧ್ಯಾಯ ವೃತ್ತಿಯನ್ನು ಪರೀಕ್ಷಿಸಿದರೆ ಅದು ಪವಿತ್ರವೆಂದು [illegible] ವ್ಯಾವಹಾರಿಕ ದೃಷ್ಟಿಯಿಂದ ಅದನ್ನು ಪರೀಕ್ಷಿಸುವದು ಅತ್ಯಾವಶ್ಯಕ [illegible] ಕಳೆದ ಲೇಖಾಂಕದಲ್ಲಿ ನಾವು ಸೂಚಿಸಿರುವೆವು ನಮ್ಮ [illegible] ಸಂಸ್ಥಾನದಲ್ಲಿ ಸರಕಾರವು ಪ್ರಾಥಮಿಕ [illegible] ಮತ್ತು ಉಚ್ಚ [illegible] ಸೇರಿ ಮೂರು ವಿಧದ ಶಿಕ್ಷಣದ ಮೇಲೆ [illegible] ತ್ತದೆಂಬುದನ್ನು ಮೊದಲು ನೋಡೋಣ ಅದನ್ನು ನೋಡಿದರೆ [illegible] ನೆಯು ಇಷ್ಟರಲ್ಲಿ [illegible] ರೂಪಾಯಿಯನ್ನು ಸರಕಾರವು [illegible] ವನ್ನು ಈ ಸಂಸ್ಥಾನದ ಜನಸಂಖ್ಯೆ [illegible] ಒಂದು ತಲೆಗೆ ಸಾಧಾರಣವಾಗಿ [illegible] ಜನಸಂಖ್ಯೆಯು ೪೧ ಕೋಟಿ [illegible] ಶಿಕ್ಷಣ ಇನ್ನು ಶೋಚನೀಯ ಪರಿಸ್ಥಿತಿ [illegible] ದೇಶದಲ್ಲೂ ಇಲ್ಲವೆನ್ನಬಹುದು [illegible] ಪ್ರಾಥಮಿಕ ಶಿಕ್ಷಣದ ಮೇಲೆ ಖರ್ಚಾಗುವ ಹಣವೆಷ್ಟು ಇದನ್ನೇ ನಾವು ಈಗ ನೋಡೋಣ ಕಳೆದ ವರುಷ ೧೬ ಲಕ್ಷ ೫೩ ಸಾವಿರ [illegible] ರೂಪಾಯಿ ಖರ್ಚಾಗಿದೆ ಇದರ ಪ್ರಮಾಣವು ಎಲ್ಲ ಶಿಕ್ಷಣದ ಮೇಲೆ ಖರ್ಚಾಗುವ ಹಣದಲ್ಲಿ [illegible] ಕಡಿಮೆ ಬರುವದು ಆದರೆ ಶಿಕ್ಷಣದ ಅವಸ್ಥೆ [illegible] ವಿಭಾಗಗಳಲ್ಲಿ ಪ್ರಾಥಮಿಕ ಶಿಕ್ಷಣವು ಎಲ್ಲರ ಪಾಲಿಗೆ ಅವಶ್ಯವಾಗಿ ಒರಬೇಕಾದ್ದರಿಂದ ಅದರ ಮೇಲೆ ಹಣವನ್ನು ಹೆಚ್ಚಾಗಿ ಖರ್ಚು ಮಾಡುವದು ವಿಹಿತವು. ಪರಂತು ಅದರ ಪ್ರಮಾಣವು ನಾವು ಮೇಲೆ ಹೇಳಿದಂತೆ ಒರೆ ಇದರಲ್ಲಿ ಒಂದಕ್ಕೆ ಮಿಕ್ಕಿ ಹೋಗುವದಿಲ್ಲ! ಗಣಿತ ಕುಶಲಿಗಳು ಒಂದುವೇಳೆ ಅಂಕೆಗಳ ಗೊಡಬಂಗಾಲವನ್ನು ಮಾಡಿದರೂ ಹೆಚ್ಚೆಂದರೆ ಐದರಲ್ಲಿ ಒಂದು ವರೆಗೆ ಆ ಸಂಖ್ಯೆಯನ್ನು ತಂದು ನಿಲ್ಲಿಸಬಹುದು. ಈಗ ಎಲಿಮೆಂಟರಿಯ ಮೇಲೆ ಖರ್ಚಾಗುವ ೧೬ ಚಿಲ್ಲರೆ ಲಕ್ಷ ರೂಪಾಯಿಯನ್ನು ಪ್ರತಿ ಒಂದು ತಲೆಗೆ ನೋಡಿದರೆ ಅದು ಖರೆ ಒಪ್ಪೆ ಬೀಳುವದು! ಹಾ ದೈವವೇ! ಈ [illegible] ಯಿಂದ ಮೂಲ ವಿದ್ಯಾಭ್ಯಾಸವನ್ನು ಕಲಿಯುವದು ಹ್ಯಾಗೆ ಇದನ್ನು ವಾಚಕರೆ ವಿಚಾರಿಸಲಿ. ಜಮೀನಿನ ತೆರಿಗೆಯ ಭಾರವು ಅಥವಾ ಅಂಶವು ಪ್ರತಿ ಒಂದು ತಲೆಯ ದೃಷ್ಟಿಯಿಂದ ನೋಡಿದರೆ ಅದು [illegible], ಆಣೆಗಳಿಗಿಂತಲೂ ಹ್ಯಾಗೆ ಮಿಕ್ಕಿಯೆ ಇರುವದೋ ಹಾಗೆ ಮೂಲ ವಿದ್ಯಾಭ್ಯಾಸದ ಖರ್ಚಿನ ಅಂಶವು ಬೀಳಬೇಕಲ್ಲವೆ? ಹಾಗೆ ಬೀಳುವದಿಲ್ಲವೆಂದಾದ ಮೇಲೆ ಈ ದ್ರವ್ಯದಾನವು ಎಷ್ಟು ಅಲ್ಪವಾದ್ದೆಂದು ಬೇರೆ ಹೇಳಬೇಕಾದ ಅಗತ್ಯವಿಲ್ಲ

ಇನ್ನೊಂದು ದೃಷ್ಟಿಯಿಂದ ಇದೆ ಸಂಖ್ಯೆಯನ್ನು ಪರೀಕ್ಷಿಸಿದರೆ ಇದರ ಮರ್ಮವು ಸರಿಯಾಗಿ ವಾಚಕರ ಲಕ್ಷ್ಯದಲ್ಲಿ ಒಂದೀತು. ಕಾರಣ ಎಲಿಮೆಂಟರಿ ಉಪಾಧ್ಯಾಯ ವೃತ್ತಿಯ ಲಾಭಾಲಾಭಗಳನ್ನು ನಮಗೆ ನಿರೀಕ್ಷಿಸಬೇಕಾದ ಕಾರಣ ಅವರ ಸಂಖ್ಯೆಯು ಎಷ್ಟಿದೆ ಹಾಗೆ ಈ ದ್ರವ್ಯವು ಅವರ ಪಾಲಿಗೆ ಯಾವ ಪ್ರಮಾಣದಿಂದ [illegible] ತ್ತದೆ ಇದನ್ನು ನೋಡಿದರೆ ನಮ್ಮ ಪ್ರಸ್ತುತ ಲೇಖನದ ಆ [illegible] ನಮ್ಮ ಮದ್ರಾಸ ಸಂಸ್ಥಾನದಲ್ಲಿ ಎಲಿಮೆಂಟರಿ ಉಪಾಧ್ಯಾಯರು [illegible]

[illegible] ಡುವ ೧೬,೫೩,೫೬೭ ರೂಪಾಯಿಯ ಈ ರಕಮನ್ನು ಉಪಾಧ್ಯಾಯರಿಗೆ ಹಂಚಿ ಹಾಕಿದರೆ ಒಬ್ಬೊಬ್ಬ ಉಪಾಧ್ಯಾಯನಿಗೆ ಸರಾಸರಿ ವರುಷ ೧೬೫ ೩೪ ರೂಪಾಯಿ ೮ ಆಣೆ ಬೀಳುವದು ಎಂದರೆ ತಿಂಗಳು ೧ಕ್ಕೆ ರೂ ೩ ಸಿಗಬೇಕಾದರೆ ವರುಷದ ರಕಮಿನಲ್ಲಿ ೧|| ರೂ ಇನ್ನೂ ಬೇಕಬೇಕು! ಆದರೆ ೧೬,೫೩,೫೬೭ ರೂಪಾಯಿಯ ರಕಮು ಉಪಾಧ್ಯಾಯರ ಸಂಬಳದಲ್ಲೆ ವಿನಿಯೋಗಿಸಲ್ಪಡುವದಲ್ಲ, ಅದರಲ್ಲಿ ಪುನಃ ಕಟ್ಟೋಣ, ಪುಸ್ತಕಾಲಯ, ಆಟದ ಸಾಹಿತ್ಯ ಇತ್ಯಾದಿ ಬೇರೆ ಬೇರೆ ಖಾತೆಗಳ ವಿಲವಾರಿಯು ಇರುವದರಿಂದ ಮೇಲೆ ನಾವು ಇಡಿ ರಕಮನ್ನು ಹಂಚಿ ಹಾಕಿದ್ದು ಪ್ರಮಾದವೆ ಸರಿ ಪರಂತು ಆ ಪ್ರಮಾದವನ್ನಾದರೂ ಅಂಗೀಕರಿಸಿಕೊಳ್ಳೋಣ ಮತ್ತು ಇಡಿ ದೊಡ್ಡ ರಕಮನ್ನೆ ಹಂಚಿ [illegible] ಕೊಳ್ಳೋಣ ಹಾಗಾದರೂ ಎಲಿಮೆಂಟರಿ ಉಪಾಧ್ಯಾಯರ ಪಾಲಿಗೆ ತಿಂಗಳ ಒಂದಕ್ಕೆ [illegible] ರೂಪಾಯಿ ಬೀಳಲಿ ಎಂದು [illegible] ಮಾಡಿದೆವು ಆದರೆ ಗಣಿತಶಾಸ್ತ್ರದ ಕರಕ [illegible] ನಿಷ್ಟುರವಾದಿಯೆಂದರೆ ಮೂರು ರೂಪಾಯಿಯ ಭರತಿಗೆ ಸರಕಾರವು ವರ್ಷ [illegible] ರೂಪಾಯಿ ಯಷ್ಟು ಇನ್ನೂ [illegible] ವರೆ ರೂಪಾಯಿಯನ್ನು ಕೂಡಿಸಬೇಕಾಗಿ ಬರುತ್ತದೆ!

ಪ್ರಕೃತ [illegible] ಈ ರಕಮು ಎಲಿಮೆಂಟರಿ [illegible] ಸಂಖ್ಯೆ [illegible] ಹ್ಯಾಗ ಬೀಳುತ್ತದೆ ಇದನ್ನು ನೋಡುವ [illegible] ಕೇವಲ ಅನುಪಯುಕ್ತವಾಗಲಾರದು ಎಲಿಮೆಂಟರಿ ಶಾಲೆಗಳಲ್ಲಿ [illegible] ಇಷ್ಟು ಹುಡುಗರ ಕಲಿಯುತ್ತಿದ್ದಾರೆ ಸರಾಸರಿ ಈ ಒಂದು ಶಾಲೆ [illegible] ಶಾಲೆಗಳ ಸಂಬಂಧ ಸರಕಾರಿ ವಿದ್ಯಾ [illegible] ರೂ ಖರ್ಚು ಮಾಡುತ್ತದೆ ಎಂದರೆ ಒಬ್ಬೊಬ್ಬ ಹುಡುಗನಿಗೆ [illegible] ಶಿಕ್ಷಣವನ್ನು ಕೊಡುವದಕ್ಕಾಗಿ ವರ್ಷ [illegible] ರೂ [illegible] ವಿನಿಯೋಗಿಸುತ್ತದೆ [illegible] ಹುಡುಗನೆ ಈ ವಿದ್ಯೆಯನ್ನು ಗಳಿಸಲು ಇದಕ್ಕಿಂತ ಎಷ್ಟೋ ಹಣವನ್ನು [illegible] ಕೊಡುತ್ತಾನೆ [illegible] ಶಿಕ್ಷಣವು [illegible] ಅವಶ್ಯಕ ವಸ್ತು [illegible] ಪರಿಗಣಿಸಲ್ಪಡುವ [illegible] ಶಿಕ್ಷಣವು [illegible] ಸರಕಾರವು ಈ ರೀತಿಯಿಂದ ಹಣದ [illegible] ಹುಡುಗರ ಸಂಖ್ಯೆಯ ಮೊದಲು [illegible] ದೇಶದೊಳಗಿನ ಹುಡುಗರ ಸಂಖ್ಯೆಯ ಮಾನದಿಂದ ಶಾಲೆ [illegible]

[illegible]

[illegible] ಇದೆ? ಇದಕ್ಕಾಗಿಯೆ ಕಾಂಗ್ರೆಸ್ [illegible] ಸ್ವರಾಜ್ಯದ ಯೋಜನೆಯನ್ನು [illegible] ಯೋಜನೆಯ [illegible] ಅಂತರ್ಗತಕಾರಭಾರವು [illegible] ಪ್ರಾಥಮಿಕ ಶಿಕ್ಷಣದ ಮೇಲೆ ತೃಪ್ತಿಕರವಾಗಿ ಹಣವನ್ನು ವಿನಿಯೋಗಿಸಲು ಜನತೆಗೆ ಸಂದರ್ಭವು ಒದಗ [illegible] ಎಂದಮೇಲೆ ಸ್ವರಾಜ್ಯದ ಮೊದಲನೆ ಲಾಭವು ಹಳ್ಳಿಯ ಹುಡುಗರಿಗೆ ಸಿಗುವದೆಂಬುದಕ್ಕೆ ಸಂದೇಹವಿಲ್ಲ ಈ ದೃಷ್ಟಿಯಿಂದ ನೋಡಿಯಾದರೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ಪ್ರಸಾರವನ್ನು ಬಯಸುವವರ ಕಾಂಗ್ರೆಸ್ [illegible] ಯೋಜನೆಯನ್ನು ಸ್ವೀಕರಿಸುವದು ಜಾಣತನದ್ದಾಗಿದೆ

ಇರಲಿ ಎಲಿಮೆಂಟರಿ ಶಾಲೆಗಳನ್ನು ಹೆಚ್ಚಿಸುವದರಿಂದಾಗಲಿ, ಶಿಕ್ಷಣವನ್ನು ಸಾರ್ವತ್ರಿಕ ಮಾಡುವದರಿಂದಾಗಲಿ ಅಥವಾ ಒಬ್ಬೊಬ್ಬ ಹುಡುಗನ ಮೇಲೆ ಖರ್ಚು ಮಾಡುವ ಹಣದ ಪ್ರಮಾಣವನ್ನು ಹೆಚ್ಚಿಸುವದರಿಂದಾಗಲಿ ನಾವು ಈ ಲೇಖಮಾಲೆಯ ಶಿರೋಲೇಖದಲ್ಲಿ ಸೂಚಿಸಿದಂಥ "ಬಡ ಉಪಾಧ್ಯಾಯರ" ಸ್ಥಿತಿಯನ್ನು ಸುಧಾರಿಸಿದ್ದಂತೆ ಆಗುವದಿಲ್ಲ ಉತ್ಪನ್ನದ ದೃಷ್ಟಿಯಿಂದ ಅವರಿಗೆ ಈ ಉಪಾಧ್ಯಾಯತನವು ತಿಂಗಳಿಗೆ ೩ ರೂಪಾಯಿಗಿಂತ ಹೆಚ್ಚಿನ ದ್ರವ್ಯವನ್ನು ತಂದುಕೊಡದು ಎಂದರೆ ಉಪಾಧ್ಯಾಯರಿಗೆ ಸ್ವತಃ ೩ ರೂಪಾಯಿಗಿಂತ ಹೆಚ್ಚಿನ ರೂಪಾಯಿಗಳು ಸಿಗುತ್ತವಾದರೂ ಸರಕಾರವು ತನ್ನ ಖಜಾನೆಯಿಂದ ಖರೆ ೩ ರೂಪಾಯಿಗಿಂತ ಹೆಚ್ಚು ಕೊಡುವದಿಲ್ಲ ಈ ಸತ್ಯವನ್ನು ಯಾರೂ ಮರೆಯಕೂಡದು. ಈಗಿನ ಎಲಿಮೆಂಟರಿ ಶಾಲೆಗಳಲ್ಲಿ ಬೋರ್ಡ ಶಾಲೆಗಳು, ಗ್ರಾಂಟಪಡೆಕೊಳ್ಳುವ ಖಾಸಗಿ ಶಾಲೆಗಳು ಎಂದು ಹಲವು ವಿಧವಿದ್ದಾವೆ. ಮತ್ತು ಅಪವಾದಕ್ಕಾಗಿ ಈ ಸಂಸ್ಥಾನದೊಳಗಿನ ಒಂದೆರಡು ಜಿಲ್ಲೆಗಳಲ್ಲಿ ಸರಕಾರವೆ ಖುದ್ದಾಗಿ ನಡೆಸುವ ಕೆಲವು ಪ್ರಾಥಮಿಕ ಶಾಲೆಗಳಿದ್ದಾವೆ. ಈ ಎಲ್ಲ ವಿಧದ ಶಾಲೆಗಳಲ್ಲಿಯ ಉಪಾಧ್ಯಾಯರು [illegible]

[illegible] ಪಟ್ಟ ಖಾತೆಯವರು ವ್ಯಥೆಪಡುತ್ತಿದ್ದರೂ, ಅಲ್ಲದೆ ಆ ವ್ಯಥೆಯು ಕೆಲವಂಶದಿಂದ ಫಲಿಸುತ್ತ ಬಂದದ್ದರಿಂದ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಬಳವು ೧೨ ರಿಂದ ಮುಂದಿನ ಸಂಖ್ಯೆಯ ಮನೆಯಲ್ಲೆ ಇದ್ದಾಗ್ಯೂ ಸರಕಾರವು ತನ್ನ ಖಜಾನೆಯಿಂದ ಕೊಡುವ ಹಣವು ಒಬ್ಬೊಬ್ಬನಿಗೆ ಎಷ್ಟು ಬೀಳುತ್ತದೆ ಎಂಬ ಪ್ರಶ್ನವನ್ನು ಸರಿಯಾಗಿ ಉತ್ತರಿಸಬೇಕಾದರೆ ನಾವು ಮೇಲೆ ಹೇಳಿದ್ದಂತೆ ವರ್ಷಕ್ಕೆ ೩೪ ರೂ ೮ ಆ. ಎಂದೆ ಹೇಳಬೇಕು ಶಾಲೆಗಳೊಳಗಿನ ಹುಡುಗರ ಸಂಖ್ಯೆಯಿಂದ, ಪುನಃ ಅವರಲ್ಲಿಯ 'ಮುಂದರಿಸಿದ' 'ಹಿಂದುಳಿದ' ಇತ್ಯಾದಿ ಭೇದಗಳ ಮಾನದಿಂದ ಗ್ರಾಂಟಿನಲ್ಲಿ ಕೊಡಲ್ಪಡುವ ಹಣ, ಹುಡುಗರ ಸಂಬಳ ಮುಂತಾದ್ದನ್ನೆಲ್ಲ ಸೇರಿಸಿದರೆ ಒಂದು ವೇಳೆ ಒಬ್ಬ ಉಪಾಧ್ಯಾಯನಿಗೆ ಖಾಸಗಿ ಶಾಲೆಗಳಲ್ಲಿ ೬ ೭ ರೂಪಾಯಿ ಬೀಳುತ್ತದೊ ಏನೊ ಇದ. ಸಂಶಯವೆ ಸರಿ ಈಗ ಬೋರ್ಡು ಶಾಲೆಗಳಲ್ಲಿ ಇಂತಿಷ್ಟು ಸಂಬಳ ಇಂಥ ಗ್ರೇಡು, ಇಂಥ ಕೊಲಿಫಿಕೇಶನ್ ಮೊದಲಾದ ನಮೂನೆಗಳೆಲ್ಲ ಇದ್ದಾವೆ ಅದರಂತೆ ಅವರಿಗೆ ೧೨ ಅಥವಾ ೧೫ರಿಂದ ಸಂಬಳವು ಪ್ರಾರಂಭವಾಗಿ ಅದು ಮುಂದೆ ೨೫ ಅಥವಾ ೩೦ರಲ್ಲಿ ಸಮಾಪ್ತಿಯನ್ನು ಹೊಂದುತ್ತದೆ ಈ ೩೦ ರೂಪಾಯಿಯ ಒಂದೆ ಗಂಟನ್ನು ನೋಡಬೇಕಾದರೆ ಆ ಉಪಾಧ್ಯಾಯನು ರಾಮರಾವಣರ ಯುದ್ಧದ ಕಾಲದಲ್ಲಿ ಕೆಲಸದ ಮೇಲೆ ಸೇರಿದವನಾಗಿ ಕೌರವಪಾಂಡವರ ಯುದ್ಧ ಸಮಾಪ್ತಿಯನ್ನು ಅನುಭವಿಸಿದವನಾಗಿರಬೇಕಂತೆ! ಈ ವಿಷಯವನ್ನು ತಕ್ಕ ಸ್ಥಲದಲ್ಲಿ ಸ್ವತಂತ್ರವಾಗಿ ವಿಚಾರಿಸುವದಿದ್ದರಿಂದ ಇಲ್ಲಿ ಆ ಪ್ರಸ್ತಾಪವನ್ನು ಹೆಚ್ಚಿಗೆ ಬೆಳಿಸುವದಿಲ್ಲ ನಮಗ ಮುಖ್ಯವಾಗಿ ತೋರಿಸಿಕೂಡಬೇಕಾದ ಸಂಗತಿಯು ಯಾವದೆಂದರೆ ಸರಕಾರಿ ಖಜಾನೆಯಿಂದ ಪ್ರಾಥಮಿಕ ಶಿಕ್ಷಣದ ಪ್ರೀತ್ಯರ್ಥ ವಿನಿಯೋಗಿಸಲ್ಪಡುವ ಹಣವು ಒಬ್ಬ ಶಿಕ್ಷಕನಿಗೆ ಒಂದು ತಿಂಗಳ ೩ ರೂಪಾಯಿ ಕೂಡ ಬೀಳುವದಿಲ್ಲ ಇದು ಎಷ್ಟು ಶೋಚನೀಯವು? ತಿಂಗಳ ಒಂದಕ್ಕೆ ಪ್ರತಿಫಲದ ರೂಪದಿಂದ ೩ ರೂಪಾಯಿಯನ್ನು ಕೂಡ ಹೊಂದದವನು ತನ್ನ ವೃತ್ತಿಯು ಧರ್ಮಶಾಸ್ತ್ರ ನೀತಿಸೂತ್ರ, ಮಾನಸಶಾಸ್ತ್ರ, ಇತ್ಯಾದಿಗಳಲ್ಲಿ ಅತಿ ಶ್ರೇಷ್ಠವೆಂದು ಹೊಗಳಲ್ಪಟ್ಟಾಗ್ಯೂ ಅದನ್ನು ಯಾವ ಶ್ರದ್ಧೆಯಿಂದ ಕೈಕೊಂಡಾನು? ಅಂಥ ವೃತ್ತಿಯ ಅವನಿಗೆ ಹ್ಯಾಗೆ ಆದರಣೀಯವಾದೀತು? ಒಂದು ಸಾಮಾನ್ಯ [illegible] ನವನ್ನು ಸಾಕುವವಳು ತಿಂಗಳ ಒಂದಕ್ಕೆ ಆ ದನದಿಂದ ಸಾಧಾರಣ ೪—೬ ರೂಪಾಯಿಗಳನ್ನು ಸಂಪಾದಿಸುತ್ತಾಳೆ ಒರೆ ಆದರ ಸೆಗಣಿ ಬೆರಣೆಗಳನ್ನು ಮಾರಿದರಾದರೂ ಇದಕ್ಕಿಂತ ಕಡಿಮೆ ಉತ್ಪನ್ನ ಒರಲಿಕ್ಕಿಲ್ಲವೆಂದು ತೋರುತ್ತದೆ ಆದರೆ ಸರ್ವೋತ್ತಮವೆಂದು [illegible] ಶಾಸ್ತ್ರಗಳಲ್ಲೂ ಕೊಂಡಾಡಲ್ಪಟ್ಟ ಉಪಾಧ್ಯಾಯ ವೃತ್ತಿಯು ಈ ಕಾಲವ [illegible] ಸರಕಾರಿ ಖಜಾನೆಯಿಂದ ತಿಂಗಳಿಗ ೩ ರೂಪಾಯಿಯನ್ನು ಸಹ ತೆಗೆಸಿಕೊಡುವದಿಲ್ಲವೆಂದಾದರೆ ಅದು ಕೇವಲ ಲಜ್ಜಾಸ್ಪದವಲ್ಲವೆ? ಹೀಗಿರಲು ಎಂದರೆ ವ್ಯಾವಹಾರಿಕ ದೃಷ್ಟಿಯಿಂದ ಈ ವೃತ್ತಿ [illegible] ಜೀವನಕ್ಕೆ ಅನುಪಯುಕ್ತವಾಗಲು ಆ ವೃತ್ತಿಯನ್ನು ಕೇವಲ [illegible] ಶಕ್ತಿ ಇರುವವರು ಅವಲಂಬಿಸ ಒಲ್ಲರು? [illegible] "[illegible] ಲವಣತಾಯ ವಾಸಸ್ಯಾತ್" ಎಂದು ಹೇಳಿಕೊಂಡು ಈ ವೃತ್ತಿಯನ್ನು ೩೪ ರೂಪಾಯಿ ೮ ಆ ಈ ರಕಮಿಗೆ ಆಸೆಪಟ್ಟು ಯಾರು [illegible] ಅವರಿಂದ ನಾವು ಏನನ್ನು ನಿರೀಕ್ಷಿಸಬಹುದು? ಮೂರು ರೂಪಾಯಿ ಯ ಆಶ್ರಯವನ್ನು ಹೊಂದಲು ಅಪಾತ್ರವಾದ ಈ ವರ್ಗವು ಶಿಕ್ಷಣದ ಯಾವ ಕರ್ತವ್ಯವನ್ನು ಮಾಡೀತು? ಅದರ ಮೇಲೆ ಶಿಕ್ಷಣದ ಯಾವ ಜವಾಬದಾರಿಯನ್ನು ಹಾಕಬಹುದು? ಹಾಗು ಅದರಿಂದ ಯಾವ [illegible] ವನ್ನು ನಿರೀಕ್ಷಿಸಬಹುದು? ಇತ್ಯಾದಿ ಅನೇಕ ಪ್ರಶ್ನೆಗಳು ಒರುತ್ತವೆ. ಒರುವ ಲೇಖಾಂಕದಲ್ಲಿ ಇವುಗಳನ್ನು ಪ್ರಸ್ತಾಪಿಸಿ ಮುಂಬಯಿ ವ ದ್ರಾಸ ಈ ಸಂಸ್ಥಾನದೊಳಗಿನ ಪ್ರಾಥಮಿಕ ಶಿಕ್ಷಣವನ್ನು ಹೋಲಿಸಿ ನೋಡೋಣ

ಸ್ಥಾನಿಕ ಸ್ವರಾಜ್ಯದ ಠರಾವು

ಹಿಂದುಸ್ಥಾನ ಸರಕಾರದವರು ಪ್ರಜೆಗಳಿಗೆ ಸ್ಥಾನಿಕ ಸ್ವರಾಜ್ಯದ ಹಕ್ಕುಗಳನ್ನು ಹೆಚ್ಚಿಸಬೇಕೆಂದು ಈಚೆಗೆ ಹೊರಡಿಸಿದ ಠರಾವಿನ ವಿಷಯದಲ್ಲಿ ದೇಶೀಯ ವರ್ತಮಾನ ಪತ್ರಿಕೆಗಳಾಗಲೀ ಪ್ರಜಾಪ್ರತಿನಿಧಿಗಳಾಗಲೀ ಸಂತೃಪ್ತಿಪಟ್ಟಂತೆ ವಿಶೇಷವಾಗಿ ತೋರಲಿಲ್ಲ. ಈ ಠರಾವನ್ನು ಪರ್ಯಾಲೋಚಿಸಿದರೆ ಇದಕ್ಕೆ ಕಾರಣ [illegible] ಗೊತ್ತಾಗುವುದು.

ಈ ಸ್ಥಾನಿಕ ಸ್ವರಾಜ್ಯದ ಬೆಣ್ಣೆಯನ್ನು ಕಡೆಯಲಾರಂಭಿಸಿ ಇಂದಿಗೆ ೪೩ ವರ್ಷಗಳಾದುವು ಆದರೂ ಪ್ರಜಾಜನಗಳು ಈ ಬೆಣ್ಣೆಯನ್ನು ತಿನ್ನುವುದು ಅತಿರಲಿ, ನೋಡುವ ಕಾಂಕ್ಷೆಯು ಸಹಾ [illegible] ಗೂಡಲಿಲ್ಲ ಹಿಂದುಸ್ಥಾನದ ವೈಸರಾಯಿಗಳಲ್ಲಿ ಸುಪ್ರಖ್ಯಾತರಾದ ಮತ್ತು ಉದಾರ ಮನಸ್ಕರಾದ ಲೊರ್ಡರಿಪನ್‌ರು 1882ರಲ್ಲಿ ಈ ಬೆಣ್ಣೆಯನ್ನು ಕಡೆಯಲು ಮೊದಲು ಮಾಡಿದರು. ಆದರೆ ಅವರ ಕೈಕೆಳಗಿನವರು ಭಾಂಡದಲ್ಲಿ ಅಗತ್ಯವಿರುವ ಹಾಲು ಮತ್ತು ಪ್ರೋತ್ಸಾಹಗಳೆಂಬ ಹೆಪ್ಪನ್ನು ಕೈಬಿಟ್ಟು ಎರೆಯಲೂ ಇಲ್ಲ ಅದಕ್ಕೆ ಬದಲಾಗಿ ಹೆಜ್ಜೆ ಹೆಜ್ಜೆಯಲ್ಲಿಯೂ ಸರಕಾರದ ಮೇಲ್ವಿಚಾರ, ತಜ್ಞರ ಸೂಚನೆ, ಎಂಬ ಪಾಶಗಳಿಂದ ಕಡೆಗೋಲನ್ನು ಬಿಗಿದು ಬಿಟ್ಟರು. ಕಡೆಗೋಲು ತಿರುಗಲೇ ಇಲ್ಲ, ಅಥವಾ ಒಂದೊಂದು ಸಲ ಕಡೆಯುವವರ ಕೈ ಸ್ಪರ್ಶಶಕ್ತಿ [illegible] ಮಾತ್ರವೇ ಸ್ವಲ್ಪ ತಿರುಗಿತು. ಕಡೆಗೋಲಿನ ಹಗ್ಗವನ್ನು [illegible] ನಿಲ್ಲಿಸಿದರೆ ಭಾಂಡ [illegible] ಎಂದು [illegible] ಇದ್ದರು. [illegible]

ರಲ್ಲದೆ ಆ ಭಾಂಡವನ್ನು ಇಣಿಕಿ ನೋಡಿಸಲಿಕ್ಕೂ ಮೊತ್ತಮೊದಲು ಬಿಡಲಿಲ್ಲ. ಕಡೆಗೆ ಈ ರೀತಿಯಿಂದ ಕಡೆದರೆ ಬೆಣ್ಣೆ ಬರುವುದಕ್ಕೆ ಕಲ್ಪಾಂತದ ವರೆಗೂ ಕಾಯಬೇಕಾದೀತು ಎಂಬ ಸಂದೇಹದಿಂದ ಆಗಾಗ ನೆಶನಲ್ ಕೊಂಗ್ರೆಸ ಎಂಬ ರಾಷ್ಟ್ರೀಯ ಸಭೆಯೂ ಪ್ರಜಾಜನರಲ್ಲಿ ಮುಖಂಡರೂ ವಾದಿಸುವುದಕ್ಕೂ ಪತ್ರಗಳಲ್ಲಿ ತಮ್ಮ ಮನೋಗತಗಳನ್ನು ಪ್ರಕಟಿಸುವುದಕ್ಕೂ ವಿಲಾಯತಿಯಲ್ಲಿ ಸೆಕ್ರೆಟರಿ ಒಫ್ ಸ್ಟೇಟ್ ಮತ್ತು ಬ್ರಿಟಿಷ ಪಾರ್ಲಿಮೆಂಟುಗಳನ್ನು ಈ ವಿಷಯದಲ್ಲಿ ಎಚ್ಚರಗೊಳಿಸುವುದಕ್ಕೂ ಪ್ರಯತ್ನ ನಡಿಸಿದರು. ಅದೆಷ್ಟಾದರೂ ಇವರು ಅಧಿಕಾರ ವಿಭಜನೆಯ ಕಮ್ಮಿಶನ್ (ಡಿಸೆಂಟ್ರಲಾಯಿಜೇಶನ್) ಒಂದನ್ನು 1907—9ಲ್ಲಿ ನೇಮಕಮಾಡಿ ಪುನಃ ನಿದ್ದೆ ಹೋದರು. ಈ ಕಮ್ಮಿಶನದವರು ಪ್ರಜಾಜನಗಳಿಗೆ ಕೊಡಬೇಕಾದ ಅಧಿಕಾರಗಳನ್ನು ಕುರಿತು ಬಾಯ್ಬಿಟ್ಟು ಹೇಳಿದರೂ ಆ ಸೂಚನೆಗಳನ್ನು ಕುರಿತು ಇಂಡಿಯಾ ಸರಕಾರದವರು ಪುನಃ ಸ್ಥಾನಿಕ ಸರಕಾರದವರ ಅಭಿಪ್ರಾಯಗಳನ್ನು ಕೇಳಿದರು. ಈ ಅಭಿಪ್ರಾಯಗಳೂ ಆ ಕಮ್ಮಿಶನ್ನಿನವರು ಸಂಗ್ರಹಮಾಡಿದ ರುಜುವಾತು ಮುಂತಾದ್ದೆಲ್ಲ ಕೂಡಿ ಇಂಡಿಯಾ ಸರಕಾರದ ಬೊಕ್ಕಸ ದಂಡಾರ ತುಂಬಿ ಹೋಗಿ ಕಡೆಯುವ ಕೋಣೆಯಲ್ಲಿ ಮುಚ್ಚಿ ಕವಿದ [illegible] ರಲ್ಲಿ ಸೆಕ್ರೆಟರಿ ಒಫ ಸ್ಟೇಟರು ಪುನಃ [illegible] ಬೆಣ್ಣೆ ಕಡೆಯುವ ಕೆಲಸ ಎಲ್ಲಿ ವರೆಗಾಯಿತು ಎಂದು ಕೇಳತೊಡಗಿದರು. ಆಗ 1915ನೆ ಇಸವಿಯಲ್ಲಿ ಆ ವರೆಗೆ ನಡೆದ ಪ್ರಯತ್ನ ಮತ್ತು ಅದರ ಫಲವನ್ನು [illegible] ಒಂದು ರಾಯಸಪತ್ರವು ಹೊರಟಿತು. ಅದರಲ್ಲಿ ಕಾಣುವ ಮೇರೆಗೆ ಮೊಸರು ತಕ್ಕಮಟ್ಟಿಗೆ ಆದರಲ್ಲಿರುವ ಬೆಣ್ಣೆಯನ್ನು ಬಿಟ್ಟುಕೊಟ್ಟಿದ್ದರೂ [illegible] ಮುದ್ದೆಗಟ್ಟುವುದಕ್ಕೆ ಹಲವು ತೊಡಕಗಳಿದ್ದವೆಂದು ಹೇಳಿ ಕೃತಕೃತ್ಯರಾದೆವೆಂದು ಸರಕಾರದವರು ತಮ್ಮಲ್ಲಿಯೇ ಸಮಾಧಾನಪಟ್ಟರು. ಮೊಸರಿನಿಂದ ನೀರು ಬೇರೆಯಾದ್ದರಿಂದ ಬೇಗನೆ ಬೆಣ್ಣೆ ಉಂಡೆಯಾಗ [illegible] ದೆಂಬ ಅವರ ಧೈರ್ಯ ಹೇಳಿದರ. ಕಾಲಹರಣವಾದ್ದಕ್ಕೆ ಅವರು ಕಂಡ ಹಿಡಿದ ಕಾರಣಗಳು ಹಲವು ಇವೆ. ಸ್ಥಳೀಯ ರಾಜ್ಯಭಾರಕ್ಕೆ [illegible] ದ್ರವ್ಯಾನುಕೂಲದ ಸಂಕೋಚ, ಹೊಸ ಕಂದಾಯಗಳನ್ನು ಹೊರಿಸುವುದಕ್ಕೆ ಇದ್ದ ತೊಡಕು, ಈ ನೂತನ ಸಂಸ್ಥೆಗಳ ಕಡೆಗೆ ಜನಸಾಮಾನ್ಯದಲ್ಲಿ ಇರುವ ಉದಾಸೀನ್ಯ ಪ್ರಜಾಜನಗಳಿಂದ ಆರಿಸಲ್ಪಡುವ [illegible] ರಿಗೆ ವಸ್ತು ಖರ್ಚಿಗ ತಲೆಕೊಡುವುದಕ್ಕೆ ಹಲವರಲ್ಲಿ ಇರುವ ಅಶಕ್ತಿ, ಇಂಥ ತೊಂದರೆಗಳನ್ನು ಸಹಿಸಿ ಆರಿಸಲ್ಪಟ್ಟವರಲ್ಲಿ ಇರುವ [illegible] ಅಲ್ಲದೆ ಬೆಳೆದಿರುವ ಜಾತಿ ಮಾತ್ಸರ್ಯ ಇವೆಲ್ಲ ಈ ಸರಕಾರದ ದೃಷ್ಟಿಯಲ್ಲಿ ಬೆಣ್ಣೆ ಮುದ್ದೆಗಟ್ಟುವುದಕ್ಕೆ ಇದ್ದ ತೊಡಕುಗಳು. ಅವರೆ ಹಗ್ಗಗಳನ್ನು ಬಿಗಿಹಿಡಿದ ಕಾರಣ ಕಡೆಗೋಲ [illegible] ತಿರುಗುತ್ತಿರಲಿಲ್ಲ ಮತ್ತು ಮೇಲೆ ಹೇಳಿದಂತೆ ಲೋಕದ ದೃಷ್ಟಿಯಿಂದ [illegible] ಜಾಕಿರ ಹೆಪ್ಪು ಫಲಕಾರಿಯಾಗಲಿಲ್ಲವೆಂಬುದನ್ನು [illegible] ಇಲ್ಲ. [illegible] ವಾಗ ಕೇಳಿದರೂ ರಾಜ್ಯದ ಭಾಂಡ ಒಡೆಯದಂತೆ ನೋಡ[illegible] ಪ್ರಥಮ ಕರ್ತವ್ಯವೆಂದು ಮಾತ ಕೇಳಿಸುತ್ತಲಿ [illegible] ಕೆಲಸವು ಈಗ ಐದು ವರ್ಷಗಳಿಂದಲೂ ನೋಕರಶಾಹಿ [illegible] ಇನ್ನಂತೆ ಇರಲಿಲ್ಲ. ಜನರ ಮನವಿಯನ್ನು ಕೇಳಿ ಅವರಿಗೆ ಸಮಾಧಾನಪಡಿಸುವುದಕ್ಕೂ ಮೊತ್ತಮೊದಲು ಸರಕಾರಿ ನಿಯುಕ್ತರ, ಅನಂತರ ಕೆಲವು ನಿಯುಕ್ತರು ಮತ್ತು ಕೆಲವು ಪ್ರಜೆಗಳಿಂದ ಆರಿಸಲ್ಪಟ್ಟವರು ಹಗ್ಗದ ಒಂದು ತುದಿಯನ್ನೂ ನೋಕರಶಾಹಿಯು ಇನ್ನೊಂದು ತುದಿಯನ್ನೂ ಹಿಡಿದರು. ಆದರ ನೋಕರಶಾಹಿಯ ಬಲ ಹೆಚ್ಚಾದ್ದರಿಂದ ಮಂತು ತಿರುಗುತ್ತಿರಲಿಲ್ಲ. ಇದಕ್ಕೆ "ಎದುರು ಕಡೆಯಲ್ಲಿ ಹಿಡಿದವರು ಮಥನದ ಅರಿವಿಲ್ಲದವರು, ನಿತ್ರಾಣಿಗಳು ಆದ್ದರಿಂದ ಈ ಮಥನದ ಕೆಲಸವನ್ನು ಅವರಿಗೆನೆ ಅಂದರೆ ಪ್ರಜಾಜನಗಳಿಗನೇ ಬಿಟ್ಟುಕೊಡಲಾರೆವು, ಒಂದು ವೇಳೆ ಕೊಟ್ಟರೆ ಮಂತು ಭಾಂಡದ ಮೇಲೆ ಬಿದ್ದು ಭಾಂಡ ಒಡೆದು ಮೊಸರೆಲ್ಲ ಚೆಲ್ಲಿ ಹೋದೀತು" ಎಂದು ಒಂದೇ ನುಡಿಯು ಪದೇ ಪದೇ ಕೇಳಿಸುತ್ತಿತ್ತು. ಈಗ ಹೊರಟಿರುವ ರಾಯಸ ಪತ್ರದಲ್ಲಿ ಈ ಭೀತಿಯನ್ನು ಇನ್ನೂ ಇಂಡಿಯಾ ಸರಕಾರದವರು ತೊರೆದುಬಿಡಲಿಲ್ಲವೆಂದು ತೋರುತ್ತದೆ. ಈ ಮಾತನ್ನು ಈ ಕೆಳಗೆ ನಾವು ಸಮರ್ಥಿಸುವೆವು.

ಹಿಂದೆ ಸರಕಾರದವರು ಎತ್ತಿ ತೋರಿಸಿದ ಕೊರತೆಗಳನ್ನೂ ಮತ್ತು ಅವುಗಳ ಪರಿಹಾರಕ್ಕೆ ಈಗಿನ ರಠಾವಿನಲ್ಲಿ ಸೂಚಿಸಿದ ದಾರಿಗಳನ್ನೂ ಪರ್ಯಾಲೋಚಿಸೋಣ. ಸ್ಥಳೀಯ ರಾಜ್ಯಭಾರಕ್ಕೆ ಬೇಕಾದ ಹಣದ ಕೊರತೆಯು ಈ ರಾಜ್ಯಭಾರದ ಧ್ಯೇಯವನ್ನು ಕೊನೆಗಾಣಿಸಲಿಲ್ಲವಂತೆ

ದೊಂದು ಅಂಶವನ್ನು ನಿರ್ಣಯಪ್ರಕಾರ ವಿಂಗಡಿಸಿಕೊಟ್ಟರೆ ಆಗಬಾರದೇ? ಆಗ ವರ್ಷಂಪ್ರತಿ ಬೋರ್ಡುಗಳು ಸರಕಾರ ಹಣದ ವೃಷ್ಟಿಯನ್ನು ಕಾದಿರುವ ಚಾತಕಪಕ್ಷಿಗಳಂತೆ ಇರುವುದು ಅಗತ್ಯವಿರದು. ತಮ್ಮ ಆದಾಯವು ಸರಿಯಾಗಿ ವೃದ್ಧಿಯಾಗುತ್ತ ಹೋಗುವುದೆಂದು ಗೊತ್ತಾಗಿ ಅದಕ್ಕೆ ಸರಿಯಾಗಿ ಹೊಸ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದಕ್ಕೆ ಅನುಕೂಲವಾಗುವುದು. ಅದಕ್ಕೆ ಬದಲಾಗಿ ಈಗಿನ ರಠಾವು ಏನು ಹೇಳುತ್ತದೆ? ಈ ಲೋಕಲ್‌ಬೋರ್ಡುಗಳು ಎತ್ತುವ ಕಂದಾಯಕ್ಕೆ ಸರಕಾರವು ಇಟ್ಟ ಮಿತಿಯೊಳಗೆ ಈ ಬೋರ್ಡುಗಳು ಬೇಕಾದ ಹಾಗೆ ಕಂದಾಯ ಹೆಚ್ಚಿಸುವ ಅಧಿಕಾರವನ್ನು ಕೊಡಬೇಕಂತೆ? ಇದರಿಂದ ಈಗಿನ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಡಿಸಲಿಕ್ಕೆ ಸಾಧ್ಯವಾಗುತ್ತೆ? ಇಲ್ಲವಾದರೆ ಇನ್ನೂ ಹೊಸ ತೆರಿಗೆಗಳನ್ನು ವಿಧಿಸಿಕೊಳ್ಳಿರಿ ಎಂದು ಹೇಳುವ ಮಾತು ಆಗರ ಹಿಂದೆಯೇ ಒಂದೀತೆಂದು ನಾವು ನೆನಸಲೇಬೇಕು. ಈಗ ಪ್ರತಿ ಜನವು ತೆರುವ ಕಂದಾಯದ ಭಾರವೇನಾದರೂ ಕಡಿಮೆ [illegible] ರಾಜ್ಯಗಳ ದೃಷ್ಟಿಯಿಂದ ಇಲ್ಲಿಯು [illegible] ಹೊಸ ಸಂಸ್ಥೆ [illegible] ಲೋಕಲ್‌ಬೋರ್ಡುಗಳ [illegible] ಸರಕಾರವು [illegible] ಕೊಡುವ ಒರತೆ [illegible] ಕಂದಾಯದ ಜಲಾಶಯಗಳಿಂದ [illegible] ಈ ರಠಾವಿನಲ್ಲಿ ದಾರಿ ಕಾಣಿಸಲಿಲ್ಲವೆಂದು ನಮ್ಮ ಅಭಿಪ್ರಾಯ. [illegible] ಸಮಾಧಾನ ಪಡಿಸ [illegible] ಪ್ರಶ್ನೆಗಳನ್ನು ನಿವೇದಿಸುವ [illegible] ಒಂದೇಕಡೆಗೆ ಅಫೀಮಿನ ಕಂದಾಯವನ್ನು ಕಳಕೊಳ್ಳಲಿಕ್ಕೆ ಸಮ್ಮತಿಸಿದ ಸರಕಾರವು ಸರಕಾರದ ವರ್ಷಾವಧಿ ಆದಾಯದ ನಿರ್ದಿಷ್ಟ ಅಂಶವನ್ನು ಲೋಕಲ್‌ಬೋರ್ಡುಗಳಿಗೆ ದತ್ತಮಾಡದ ವರೆಗೆ [illegible] ಹಿಂಜರಿಯಬೇಕು?

[illegible] ಇಂಥ ಸಂಸ್ಥೆಗಳ ಕಡೆಗೆ ಜನರ [illegible] [illegible] ಲೋಕಲ್‌ಬೋರ್ಡುಗಳ [illegible] ಸಂಸ್ಥೆಗಳ [illegible] ಕಾರಣವಾಗಿದೆ [illegible] ಹೇಳಿದಂತೆ ಸರಕಾರವು [illegible] ಕಷ್ಟಸಾಧ್ಯ. ನೋಕರ[illegible] ದೃಢವಾಗಿ [illegible] ಲಾಂಛ[illegible] [illegible] ? ಎಲ್ಲಿ ನೋಡಿದರೂ [illegible]

[illegible] ಇನ್ನೊಂದ [illegible] ಸ್ವಾರ್ಥಪರರು [illegible] ಈ ಲೋಕಲ್‌ಬೋರ್ಡುಗಳಲ್ಲಿ ತುಂಬುವುದೇನಾಶ್ಚರ್ಯ? ಈ ಬಗೆಯನ್ನು ದುರುಸ್ತಿ ಮಾಡಲಿಕ್ಕೆ ಇಂಡಿಯಾ ಸರಕಾರದವರು ಸೂಚಿಸುವುದೇನು?

ಈಗ ಚುನಾಯಿಸುವ ಮತ್ತು ಚುನಾಯಿಸಲ್ಪಡುವ ಹಕ್ಕುಗಳಿಂದ ವಿರಹಿತರಾದ ಹಲವರನ್ನು ಈ ಹಕ್ಕಿಗೆ ಸೇರಿಸಿ ಇಂಥವರ ಸಂಖ್ಯೆಯನ್ನು ಹೆಚ್ಚಿಸುವುದು ಒಂದು ಬಗೆ. ಇದು ಅತ್ಯಗತ್ಯ. ನಮ್ಮ ಜಿಲ್ಹೆಯಲ್ಲಂತೂ ಮುಖ್ಯವಾಗಿ ಅಳಿಯಕಟ್ಟನ್ನು ಆಚರಿಸುವ ಅವಿಭಕ್ತ ಕುಟುಂಬಗಳು ವಿನಾ ಇತರರಲ್ಲಿ ಆಸ್ತಿ ಪಾಲಾಗುತ್ತಲೆ ಇರುವುದರಿಂದ ಈಗ ಹಕ್ಕುದಾರರಾಗಿರುವ ಅನೇಕ ಕುಟುಂಬಗಳು ಈ ಹಕ್ಕನ್ನು ಬೇಗನೇ ಕಳಕೊಳ್ಳುವ ಸಂದರ್ಭವಿದೆ. ಹೀಗಾದ್ದರಿಂದ ಈ ಮಿತಿಯನ್ನು ತಗ್ಗಿಸುವುದು ಅತಿ ಅಗತ್ಯ.

ಎಂಬ ಶಂಕೆಯಿಂದ ಇನ್ನೂ ಹಗ್ಗವನ್ನು ಬಿಗಿಯಾಗಿ ಹಿಡಿದು ಎಳೆಯುವಂತೆ ತಲ್ಲಣಿಸುತ್ತಿದೆ.

"ಮುನಾಸಿಬ" ಎಂಬ ಪದವು ಸರಕಾರಿ ಬಹಿವಾಟುಗಳಲ್ಲಿ ಬಹಳ ಅಪಾಯಕರವಾಗಿದ್ದು—ಈ ಮುನಾಸಿಬದ ಮೊರೆಗೆ ಉದಾರಬುದ್ಧಿಯನ್ನು ತೋರಿಸುವುದಕ್ಕೆ ಜನರೊಡನೆ ಹೊಕ್ಕು ಬಳಕೆಯಿಲ್ಲದ ಅನ್ಯದೇಶೀಯರು ಮುಂದರಿಸಬೇಕಾದರೆ ಬಹಳ ಆಲೋಚನೆ ಮಾಡಬೇಕಾಗುತ್ತದೆ. ಚಿಲ್ಲರೆ ಅಧಿಕಾರಗಳನ್ನು ನೋಡಿಕೊಂಡು ವಯೋವೃದ್ಧರಾದ ದೇಶೀಯರಿಗೆ ಈ ಮುನಾಸಿಬವನ್ನು ಪ್ರಯೋಗಮಾಡುವುದರಲ್ಲಿ ಒಂದು ಕಣ್ಣು ತನ್ನ ಮೇಲಂಫಿಸರನ ಹುಬ್ಬುಗಳ ಕಡೆಗೆ ಇನ್ನೊಂದು ತನ್ನ ಒಡ್ಡಿಯ ಕಡೆಗೆ ಮಾತ್ರವೇ ವಿಶೇಷವಾಗಿ ಇದ್ದು ಬೇರೆ ಕಡೆಗಳೆಲ್ಲ ಶೂನ್ಯವಾಗಿಯೇ ತೋರುತ್ತಿವೆ. ಇಂಥವರು ಸರಕಾರಿ ನಿಯುಕ್ತ ಅಧ್ಯಕ್ಷರಾದರೆ ಬಹಳ ಕಾಲದಿಂದ ನಡೆದು ಬಂದ ಹುಟ್ಟುಗುಣದಂತೆಯಾದ ಈ ದುರ್ಗುಣವು ಪ್ರಜಾಜನಗಳ ಶ್ರೇಯಸ್ಸಿನ ಚಿಂತನೆಯ ಕಡೆಗೆ ಅವರ ಮನಸ್ಸು ಓಡುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ಲೋಕನಿಯುಕ್ತರೇ ಬಹಳಮಟ್ಟಿಗೆ ಇಂಥ ಲೋಕಲ್ ಬೋರ್ಡುಗಳ ಅಧ್ಯಕ್ಷರಾಗಬೇಕೆಂದು ಇಂಡಿಯಾ ಗವರ್ನಮೆಂಟಿನವರು ಮಾಡಿದ ಸೂಚನೆಯು ಶ್ಲಾಘ್ಯವೇ ಸರಿ. ಆದರೆ ಇದು ಪ್ರಚಾರಕ್ಕೆ ಬರುವುದು ಸ್ಥಾನಿಕ ಸರಕಾರದ ಮುನಾಸಿಬದ ಮೇಲೆ ಹೊಂದಿದೆ ಎಂದು ಇಂಡಿಯಾ ಗವರ್ನಮೆಂಟಿನವರು ಹೇಳುವುದರಿಂದ ನಮ್ಮ ಕಾಲಕ್ಕೆ ತೀರಾ [illegible] ಒಂದೀತೊ ಎಂದು ನೋಡಲಿಕ್ಕೆ ಇದೆ. ಪ್ರಜಾಜನರು ತಪ್ಪುಗಳನ್ನು ಮಾಡಿ ಅವುಗಳ ಮೂಲಕ ಆತ್ಮವಿವೇಚನದಿಂದಲೆ ತಮ್ಮ ಕಾರ್ಯಗಳನ್ನು ಸರಿಗೊಳಿಸಬೇಕೆಂಬ ಇಂಡಿಯಾ ಸರಕಾರದ ಪರಿಜ್ಞಾನ ನೆರವೇರಿದಂದು ನಮಗೆ ಸುದಿನವು.

~~~~

ಸ್ಫುಟ ವಿಚಾರಗಳು.

೧ ಖೇಡಾಜಿಲ್ಲೆಯೊಳಗಿನ ಸತ್ಯಾಗ್ರಹದಿಂದ ದೇಶಭಕ್ತ ಗಾಂಧಿಗಳ ಯಶಸ್ಸನ್ನು ಪಡೆದರು ಎಂದು ಹೇಳಲು ಅಡ್ಡಿ ಇಲ್ಲವೆಂದು ತೋರುತ್ತದೆ. ಯಾಕೆಂದರೆ ಶ್ರೀ ಗಾಂಧಿಗಳು ಸತ್ಯಾಗ್ರಹವ್ರತದ ಪಾರಣವನ್ನು ಮಾಡಲು ಒಂದು ಜಾಹೀರ ಪತ್ರಕದ ಮುಖಾಂತರ ಉಪದೇಶಿಸಿದ್ದಾರೆ. ಖೇಡಾಜಿಲ್ಲೆಯೊಳಗಿನ ಎಲ್ಲ ಮಾಮಲೆದಾರರಿಗೆ (ತಾಲೂಕಿನ ಅಧಿಕಾರಿಗಳಿಗೆ) ಕಲೆಕ್ಟರ ದೊರೆಗಳಿಂದ ಕಳೆದ ಏಪ್ರಿಲ್ [illegible] ತಾರೀಕಿನ ಶೆರಿಗೆಯ ವಸೂಲಿನ ವಿಷಯದಲ್ಲಿ ಜನಗಳ ಮೇಲೆ ಸರ್ವಥಾ ಒತ್ತಾಯಮಾಡಕೂಡದೆಂದಾಗಿ ಹುಕುಮು ಒಂದಿದ್ದರೂ ಅದು ಜನಗಳ ತಿಳುವಳಿಕೆಗೆ (ಯಾವ ಕಾರಣದಿಂದಲೊ?) ಬರಲಿಲ್ಲವಾದ ಕಾರಣ ಜನರು ಅನೇಕ ತೊಂದರೆಗಳನ್ನು ವೃಥಾ ಅನುಭವಿಸಬೇಕಾಯಿತೆಂದು ಗಾಂಧಿಗಳು ಜಾಹೀರಪತ್ರಕದಲ್ಲಿ ಅಭಿಪ್ರಾಯಪಡುತ್ತಾರೆ. ಮೇಲಿನ ಅಧಿಕಾರಸ್ಥರು ಕೊಟ್ಟಿರುವ ಹುಕುಮನ್ನು ಜನಗಳಿಗೆ ಪ್ರಕಟಪಡಿಸುವದು ಹಾಗು ಅದರಂತೆ ನಡಕೊಳ್ಳುವದು ಯಾರ ಕೆಲಸವಿತ್ತು? ತಾಲೂಕಿನ ಅಧಿಕಾರಿಗಳು ಆ ಕೆಲಸವನ್ನು ಕೂಡಲೆ ಮಾಡಿದರೆ? ಇರಲಿ. ಈಗ ಇಂಥ ಕುಂದುಗಳನ್ನು ಹೆಕ್ಕಿ ಚರ್ಚಿಸುವುದರಲ್ಲಿ ಪ್ರಯೋಜನವಿಲ್ಲ. ಖೇಡಾಜಿಲ್ಹೆಯ ಕಲೆಕ್ಟರರು ಕಡೆಗೆ ಜನರ ಕಷ್ಟಗಳನ್ನು ತಿಳಿದು ಸರಕಾರಿ ದುರಾಗ್ರಹವನ್ನು ಬಿಟ್ಟು ಸಮಾಧಾನವುಂಟಾಗುವಂತೆ ಮಾಡಿದರು. ಈ ಬಗ್ಗೆ ಶ್ರೀ ಗಾಂಧಿಗಳಂತೆಯೆ ನಾವು ಕೂಡ ಕಲೆಕ್ಟರರನ್ನು ಅಭಿವಂದಿಸುವೆವು. ಅಲ್ಲಿಯ ತೆರಿಗೆ ವಸೂಲಿಯಲ್ಲಿ ಶೇಕಡಾ [illegible] ರಷ್ಟು ಬಾಕಿ ಉಳಿದದೆ ಎಂದು ತಿಳಿದುಬರುತ್ತದೆ. ಸತ್ಯಾಗ್ರಹದ ಬಲದಿಂದ ಇದನ್ನು ಕಾದಿರಿಸಿದದ್ದು ಅಲ್ಲಿಯ ಜನರಿಗೆ ಭೂಷಣಾಸ್ಪದವೆ ಸರಿ. [illegible] ಮಾರ್ಚ ತಾ [illegible] ರಲ್ಲಿ ಪ್ರಾರಂಭವಾದ ಈ ಸತ್ಯಾಗ್ರಹವು ಸಾಧಾರಣ ಒಂದುವರೆ ತಿಂಗಳು ನಡೆದು ಕೊನೆಗೆ ಜಯವನ್ನು ಪಡೆಯಿತು. ಇದು ಮಹಾತ್ಮಾ ಗಾಂಧಿಗಳ ಮಾತಿನಿಂದ ಹೇಳುವದಾದರೆ 'ಸ್ವರಾಜ್ಯ ಮತ್ತು ಸಾಮ್ರಾಜ್ಯದ ಕೀರ್ತಿಗೆ ಭೂಷಣಾಸ್ಪದವೆ ಸರಿ.'

೨ ಎಷ್ಟೋ ದೀರ್ಘಕಾಲದ ಹಿಂದುಸ್ಥಾನದ ಇತಿಹಾಸವನ್ನು ನಿರೀಕ್ಷಿಸಿದರೆ ಒಡಕೆಂಬುವುದು ಇಲ್ಲಿಯ ಒಂದು ಸ್ವಭಾವವೆಂದೆ ಹೇಳಬೇಕಾಗುತ್ತದೆ. ಇದು ನಿಜವಾಗಿ ನಮ್ಮ ದೇಶದ ದುರ್ದೈವವು. [illegible] ವಿಷಯದ ಹಿಂದಿನ ಎಷ್ಟೊ ಸಂಗತಿಗಳನ್ನು ಎತ್ತಿ ಹೇಳಬಹುದು. ಅದರ ಪ್ರವೃತ್ತಿಗಳನ್ನು ಹೇಳುವಷ್ಟು ನಮಗೆ ಸಮಯವೂ ಇಲ್ಲ, ನಮ್ಮಲ್ಲಿ ಅಷ್ಟು

ಮ್ಯುನಿಸಿಪಾಲಿಟಿಗಳಲ್ಲಿ ವಿನಾ ಇತರ ಬೋರ್ಡುಗಳಲ್ಲಿ ಈ ಖರ್ಚಿನ ಹೆಚ್ಚಿನ ಭಾರವು ವರ್ಗದಾರರ ಮೇಲೆಯೇ ಬೀಳುತ್ತದೆ. ಈ ಲೋಕಲ್ ಬೋರ್ಡುಗಳಿಗೆ ಈಚೀಚೆಗೆ ಸರಕಾರದಿಂದ ಸಾಲವಾಗಿ ಅಥವಾ ಉಚಿತವಾಗಿ ಕೊಡುವ ಸಹಾಯ ಧನದಲ್ಲಿ ಹೆಚ್ಚಿನ ಅಂಶವು ಭೂಕಂದಾಯದಿಂದಲೇ ಹೋಗುತ್ತಿದೆ. ಇತರ ವೃತ್ತಿಗಳನ್ನು ನಡಿಸುವವರು ಲೋಕಲ್ ಬೋರ್ಡುಗಳ ಪ್ರಯೋಜನವನ್ನು ಹೊಂದುತ್ತ ಇದ್ದರೂ ಅದಕ್ಕೋಸ್ಕರ ವಾಸ್ತವವಾಗಿ ತೆರಬೇಕಾದ ಪಾಲನ್ನು ಈ ವರೆಗೆ ವಹಿಸಿಕೊಂಡಿಲ್ಲ. ಒಂದು ವೇಳೆ ಈಗ ನೂತನವಾಗಿ ಅವರ ಮೇಲೆ ವೃತ್ತಿ ತೆರಿಗೆಗಳನ್ನು ಹೊರಿಸಿದರೂ ಈ ಲೋಕಲ್‌ಬೋರ್ಡುಗಳ ಮೇಲೆ ಹೊರಿಸಿದ ಜವಾಬ್ದಾರಿಯನ್ನು ತೀರಾ ವಹಿಸಿಕೊಳ್ಳಲಿಕ್ಕೆ ಅವುಗಳಿಗೆ ತ್ರಾಣವಾಗದು. ಮ್ಯುನಿಸಿಪಾಲಿಟಿಗಳಲ್ಲಾದರೂ [illegible] ರೀತಿಯಿಂದ ಕಂದಾಯ [illegible] ತ್ತಿದ್ದರೂ ಶಿಕ್ಷಣ [illegible] [illegible] ದಿಂದ ಆಗಾಗ [illegible]

ಸರಕಾರಿ ನಿಯುಕ್ತರನ್ನು ಹೊರದು ಕಾಲಂಶಕ್ಕೆ ಮೀರಬಾರದೆಂದೂ, ಕೆಲವು ಜಾತಿಗಳ ಪರವಾಗಿ ಬೇರೆ ಮೆಂಬರರನ್ನು ಚುನಾಯಿಸುವ ಬದಲಾಗಿ ಸರಕಾರದವರು ಆ ನಿಯುಕ್ತ ಮೆಂಬರರಲ್ಲಿ ಕೆಲವರನ್ನು ಅಂಥ ಜಾತಿಗಳ ಪರವಾಗಿ ನೇಮಿಸಬೇಕೆಂದೂ, ಸರಕಾರಿ ಉದ್ಯೋಗಸ್ಥರಾಗಲಿ ಮೆಂಬರರಾಗಿದ್ದರೆ ಅವರು ಯಾವುದೊಂದು ಚರ್ಚೆಯಲ್ಲಿ ತಮ್ಮ ಅಭಿಪ್ರಾಯವನ್ನು ಹೇಳುವದಾದರೂ ಬಹುಮತವನ್ನು ನಿರ್ಣಯಿಸುವಾಗ ಅವರ ಓಟುಗಳನ್ನು ಲೆಕ್ಕಿಸಬಾರದೆಂದೂ ಇಂಡಿಯಾ ಗವರ್ನಮೆಂಟಿನವರು ಸೂಚಿಸುತ್ತಾರೆ, ಆದರೆ ಕಟ್ಟುನಿಟ್ಟಾಗಿ ಹುಕುಂ ಕೊಡುವುದಿಲ್ಲ. ಅಂದರೆ ಸ್ಥಾನಿಕ ಸರಕಾರದ ಮುನಾಸಿಬದಿಗೆ ಇದರ ಕಾರ್ಯಕಾರಿ ವಿಚಾರಗಳನ್ನು [illegible] ತಿಳಿದು ಮಾಡ[illegible] ಸ್ವಾತಂತ್ರ್ಯವನ್ನು [illegible] [illegible]

ಸ್ಥಲವೂ ಇಲ್ಲ. ಅಲ್ಲದೆ ಅವುಗಳನ್ನು ಉಲ್ಲೇಖಿಸುವದು ಅಷ್ಟೊಂದು ಭೂಷಣಾಸ್ಪದವೂ ಅಲ್ಲ. ಆದರೆ ಆಗಾಗ್ಗೆ ಇದರ ಪುನರಾವರ್ತನವಾಗುತ್ತಿರುವುದರಿಂದ ದೇಶಹಿತದ ದೃಷ್ಟಿಯಿಂದ ಇಂಥ ಪ್ರಕಾರವನ್ನು ನಿಷೇಧಿಸದೆ ನಮ್ಮಿಂದ ಇರಲಾಗದು. ಈ ಪ್ರಸ್ತಾವವನ್ನು ಎತ್ತಲು ಕಾರಣವೇನೆಂದರೆ ಮೊನ್ನೆಯ ಪ್ರಾಂತಿಕ ಪರಿಷತ್ತು [illegible] ಮದ್ರಾಸ ಅತ್ತಕಡೆಯಲ್ಲಿ ಮಿಸೆಸ್ ಎನಿಬೆಸೆಂಟರ [illegible] ಯ ಪಕ್ಷದಲ್ಲಿ ಕೆಲವರು [illegible] ನೆರೆದ ಪ್ರಾಂತಿಕ ಪರಿಷತ್ತಿನಲ್ಲಿ [illegible] ತಮ್ಮ ತಂಡಾಗ [illegible]
~~~~

ತೊಡಗಿದರು. ಈ ಡೊ ನಾಯ್ಡುರವರು ಮೊದಲಿನಿಂದಲೆ ಅಮೋಘವಾದ ದೇಶಸೇವೆಯನ್ನು ಮಾಡುತ್ತ ಬರುವವರಲ್ಲಿ ಒಬ್ಬರು, ಅಂಥವರನ್ನು ಬಿಝುಂಟರು ಬೈದದ್ದು ಅವಿಚಾರದ ಕೆಲಸ, ಆದ್ದರಿಂದ ಬಿಝುಂಟರು ತಮ್ಮ ದುರುಕ್ತ ಶಬ್ದಗಳನ್ನು ಹಿಂದಕ್ಕೆ ತೆಕೊಳ್ಳಬೇಕೆಂಬುದಾಗಿ ಮದ್ರಾಸ, ತಂಜಾವರ ಮೊದಲಾದ ಕಡೆಗಳಲ್ಲಿ ನಿಷೇಧ ಪ್ರದರ್ಶಕ ಸಭೆಗಳು ಆಗುತ್ತಲಿವೆ ಈ ಸಭೆಗಳಲ್ಲಿ ಮದ್ರಾಸಿನಲ್ಲಿ ನೆರೆದ ಪರಿಷತ್ತು ಬಹು ಪ್ರಚಂಡವಾಗಿತ್ತು ಇರಲಿ ಹ್ಯಾಗೂ ಇರಲಿ, ಇದರಲ್ಲಿ ಸತ್ಯವು ಅಥವಾ ಪ್ರಾಮಾಣಿಕತ್ವವು ಯಾರ ಕಡೆಗೆ ಇರಲಿ, ಮಿಸೆಸ್. ಬಿಝುಂಟರಂಥವರು ವಿವೇಕದಿಂದ ಪುನಃ ಐಕ್ಯವನ್ನು ಸಾಧಿಸುವದು ಉಚಿತವಾಗಿದೆ ಮಾತ್ರವಲ್ಲ, ಅವರು ಸ್ವತಃ ಹೇಳಿಕೊಳ್ಳುವಂತೆ ಹಿಂದುಸ್ಥಾನವನ್ನು ಅವರು ಪ್ರೀತಿಸುವವರಾದ ಕಾರಣ ಈ ರೀತಿಯಿಂದ ಐಕ್ಯವನ್ನು ಸಾಧಿಸುವದು ಅವರ ಕರ್ತವ್ಯವಾಗಿದೆ ಇದನ್ನು ಯಾರೂ ಮರೆಯಕೂಡದು

[illegible] ಸ್ಪೆಶಲ್ ಕೊಂಗ್ರೆಸಿನ ಅಧಿವೇಶನಕ್ಕೆ ಅಧ್ಯಕ್ಷರು ಯಾರ ಇರಬೇಕು ಈ ವಿಷಯದಲ್ಲಿ ಈಚೆಗೆ ವಾದವಿವಾದವು ನಡೆಯುತ್ತಿದೆಂಬುದನ್ನು ನಾವು ಕಳೆದ ಸಾರಿಯೇ ವಾಚಕರಿಗೆ ತಿಳಿಸಿದ್ದೇವಷ್ಟೆ [illegible] ಮಾನ್ಯ ಟಿಳಕರು ಈ ವಿಶಿಷ್ಟ ಅಧಿವೇಶನದ ಅಧ್ಯಕ್ಷಸ್ಥಾನವು ತಮಗೆ ಬೇಡವೆಂದು ಅಸಮ್ಮತಿಯನ್ನು ವ್ಯಕ್ತಗೊಳಿಸಿದ್ದಾರಂತೆ [illegible] ಬಾದಿನ ರಾಜರಿಗೆ ಈ ಸ್ಥಾನದ ಬಹುಮಾನವನ್ನು ಕೊಡಬಹುದೆಂತಲೂ ಅವರು ಅದಕ್ಕೆ ಸರ್ವಥಾ ಪಾತ್ರರೆಂತಲೂ ಕೆಲವು ಸೂಚನೆಗಳನ್ನು ಕೊಡುತ್ತಿದ್ದಾರೆ ಆದರೆ ಅವರ ಕೂಡ ತನಗೆ [illegible] ಅದನ್ನು ಅಲ್ಲಗಳೆಯುತ್ತಿದ್ದಾರೆಂ[illegible] ಲಖನೌದೊಳಗಿನ ಒಂದು ಪತ್ರವು ಹೇಳುತ್ತಿದೆ ಆ ರೀತಿಯಿಂದ ಯೋಗ್ಯರಾದವರೆಲ್ಲರ [illegible] ವಾಗ ಆ ಸ್ಥಾನದ ಮೇಲೆ ಯಾರ ಒರತ್ತಾರೆಂಬ ಕಡೆಗೆ ಎಲ್ಲರ ದೃಷ್ಟಿಯೂ ವೇಧಿಸಿದೆ ಆದರೆ [illegible] ರಣೆಗಳನ್ನು ಸಾರ್ವಜನಿಕ [illegible] ಬೇಗನೆ ಇಡುವ ಸಂಭವವು ಇಲ್ಲ [illegible] ವಿಶಿಷ್ಟ ಅಧಿವೇಶನ[illegible] ಯಾಕೆ? [illegible] ಧಾರಣೆಗಳ ಬೆಳಕಿಗೆ [illegible] ತಿಂಗಳ ತನಕ ಸಾಧಾರಣವಾಗಿ [illegible] ರಾಷ್ಟ್ರೀಯ ಸಭೆಯು ದ್ವಾರಾ ಈ [illegible] ಯುಕ್ತವೆಂದು [illegible] ಇದೆ ಯುಕ್ತ[illegible] ನಮಗೆ ತೋರುವದು

[illegible] ಪೋಲಿಸರ [illegible] ಎಲ್ಲರಿಗೆ ಆಗಾಗ್ಯೆ ಒರತ್ತೆ ಇರುತ್ತದೆ ಈ ತಿಂಗಳ ತಾ [illegible] ಹಿಂದು ಪತ್ರಿಕೆಯಲ್ಲಿ [illegible] ಪ್ರಕಟ[illegible] ಒಂದು ವೃತ್ತಾಂತವು ಕೊಡಲ್ಪಟ್ಟಿದೆ ಆ ವೃತ್ತಾಂತವೇನ [illegible] ಸಿಲೂರಿನ ಲೋರಿಸ್ ರೋಡಿನ ಮೇಲಿಂದ ಈ ವೃತ್ತಾಂತವ[illegible] ಮನವನ ಮೋಟಾರ್ ಕಾರು [illegible] ಇಬ್ಬರು ಪೋಲಿಸರು ಕಟ್ಟಿಕೊಂಡು ಹೋಗುತ್ತಿದ್ದರು [illegible] ಅವನನ್ನು ಎರಡು ಕಡೆಗಳಿಂ [illegible] ಉಪದ್ರವ ಮಾಡುತ್ತಿದ್ದರು ಮತ್ತು ಕೈಯಲ್ಲಿರುವ [illegible] ಪೆಟ್ಟುಕೊಡುತ್ತಿದ್ದರು ಆಗ ಆ ತಮಿಳಿಯನನು ಪೋಲಿಸನ [illegible] ಸೂಕಿ[illegible] ಈ ಗಡಬಡಿಯಲ್ಲಿ ಮೇಲಿನ ಪ್ರತ್ಯಕ್ಷದರ್ಶಿ [illegible] ಮೋಟಾರಕಾರು [illegible] ದಲ್ಲಿ ಬಂದದ್ದರಿಂದ ಪೋಲಿಸನ ಪುನಃ ಕೆಳಗೆ [illegible] ಪೆಟ್ಟುಕೊಟ್ಟನು ಆಗ ಅವನು ಕೆಳಗೆ ಬಿದ್ದನು ಇಬ್ಬರೂ ಪೋಲಿ[illegible] ಅವನನ್ನು ಹೊಡೆಯಹತ್ತಿದರು. ತಮಿಳಿಯನನು ಬೋರೆ ತಪ್ಪಿಸಿದ್ದನು [illegible] ತಮಿಳಿಯನನು ಸತ್ತನೂ ಎಂಬ ಭಯದಿಂದ ಮೋಟಾರದ[illegible] ಬೇಕಾಯಿತು. ಅನಂತರ ಒಂದೆರಡು ಮಿನಿಟನಲ್ಲಿ ಅವನಿಗೆ ಬೋಧವು ಬಂತು ಈ ವೃತ್ತಾಂತವನ್ನು ಕೊಟ್ಟ ಪ್ರತ್ಯಕ್ಷದರ್ಶಿಯು ಪೋಲಿಸರ ಬಾಧೆಯಿಂದ ಜನರನ್ನು ತಪ್ಪಿಸಲು ಒಂದು ಕಮಿಟಿಯನ್ನು ನಿರ್ಮಿಸಿ ಆ ಕಮಿಟಿಯವರು ಇಂಥ ಅನೇಕ ಮಾಹಿತಿಗಳನ್ನು ಸಂಗ್ರಹಿಸಿ ಬೆಳಕಿಗೆ ತಂದು ಇವುಗಳ ಸತ್ಯಾಸತ್ಯತೆಯನ್ನು ಬಹಿರಂಗ ಪಡಿಸಬೇಕೆಂದು ಸೂಚಿಸುತ್ತಾನೆ

ಸ್ಥಳೀಕ – ಮಂಗಳೂರು.

ಇಲ್ಲಿಯ ಶ್ರೀ ಸಾಹೇಬ ಕುದ್ಮುಲ ರಂಗರಾಯರು ಅಕ್ಕಿಯ ಬದಲಿಗೆ ಕಂಬು ಜೋಳ, ಕೆಂಪು ಮತ್ತು ಬಿಳಿ ಜೋಳಗಳನ್ನು ಆಹಾರ ಜೀವನಕ್ಕಾಗಿ ಉಪಯೋಗಿಸುವ ವಿಚಾರದಲ್ಲಿ ಪ್ರಯತ್ನ ನಡಿಸುತ್ತಿರುವರು ಮೇಲಣ ಧಾನ್ಯಗಳು ಸೇಲಂ ಪೂನ ಇತ್ಯಾದಿ ಪ್ರಾಂತ್ಯಗಳಿಂದ ತರಿಸಿಕೊಂಡು ಅವುಗಳನ್ನು ಪರೀಕ್ಷಾರ್ಥ ಉಪಯೋಗಿಸಿ ನೋಡಬೇಕೆಂದು ಇಲ್ಲಿಯ ಹಲವರಲ್ಲಿಗೆ ಈ ಧಾನ್ಯಗಳನ್ನು ಕಳುಹಿಸಿ ಕೊಟ್ಟಿರುವರು.

ರಿಜಿಸ್ಟ್ರೇಶನ್ ಇಲಾಖಾ ಸಿಬಂದಿಯವರ ಸಂಬಳವನ್ನೂ ಇಸಂಗಳನ್ನೂ ಹೆಚ್ಚಿಸಿಕೊಂಡು ಸೆಂಕ್ಷನ್ ಬಂದಿದೆಂಬುದಾಗಿ ಕೇಳುತ್ತೇವೆ. ರೂ. ೩೦ರ ತಲಬಿನ ೧೦ ಯಾ ೧೧ ಗುಮಾಸ್ತೆಯವರ ಹೊಸ ನೇಮಕಗಳು ಈ ಜಿಲ್ಲೆಯಲ್ಲಿ ಈ ಸಂಬಂಧ ಆಗಲಿಕ್ಕಿವೆ ಎಂಬುದಾಗಿ ವರ್ತಮಾನವಿರುವದು. ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಸೇಕಡಾ ೩೦ರಷ್ಟು ಮಾರ್ಕುಗಳು ಸಿಕ್ಕಿರುವವರು ಈ ಕೆಲಸಗಳಿಗೆ ಅರ್ಜಿ ಮಾಡಬಹುದು.

ಕಳೆದ ಆದಿತ್ಯವಾರ ಇಲ್ಲಿಯ ಮಹಿಳಾ ಸಭೆಯವರ ಸಭೆಯು ಇಲ್ಲಿಯ ಗಣಪತಿ [illegible]

ದೊಳಂಪ, ಮತ್ತು ಆಯಾ ಋತುಗಳಿಗೆ ಅನುಸಾರವಾಗಿ ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳನ್ನು "ಮ್ಯಾಜಿಕ್ ಲೆಂಟರ್ನ್" ದೇಖಾವೆಗಳ ಮೂಲಕ ತೋರಿಸಿ ರಾ। ಪಿ ಮಂಗೇಶರಾವ್, ರಾ। ಯು ಮಂಗೇಶರಾವ್ ಮತ್ತು ರಾ। ಎಮ್. ಬಾಬುರವರು ಸಭಿಕರಿಗೆ ವಿವರಿಸಿ ಹೇಳಿದರು ಮಹಿಳಾ ಸಭೆಯವರ ಶಿಕ್ಷಣ ಪಾಠಗಳ ಕ್ಲಾಸುಗಳು ಎಂದಿನಂತೆಯೇ ನಡಿಯುವವಲ್ಲದೆ, ಸರಕಾರದವರಿಂದ ಇವರಿಗೆ ಕೊಡೋಣಾದ ಸ್ಥಳದಲ್ಲಿ ಕಟ್ಟೋಣವು ಇನ್ನು ಬೇಗನೆ ಕಟ್ಟಿಸಲ್ಪಡುವದೆಂಬುದಾಗಿ ತಿಳಿಯುತ್ತೇವೆ

ಇಲ್ಲಿಯ ಭಾರತ ಶಿಕ್ಷಣ ಸಂಘದವರ ರಾಷ್ಟ್ರೀಯ ಶಿಕ್ಷಣ ಬಾಲಿಕಾ ಪಾಠಶಾಲೆಯು ಕಳೆದ ಸಂಚಿಕೆಯಲ್ಲಿ ಸೂಚಿಸಿರುವಂತೆ ಇದೇ ತಿಂಗಳ ತಾ [illegible]ನೇ ಮಧ್ಯಾಹ್ನ [illegible] ತೆರೆಯಲ್ಪಡುವದು [illegible] ಉಪಾಧ್ಯಾಯಿನಿಯವರು ಆ ದಿನ ವಿದ್ಯಾರ್ಥಿಗಳನ್ನು ದಾಖಲು ಮಾಡುವರು ನಂತರ ಅಲ್ಲಿಯೇ ಒಂದು [illegible] ಇರುವದು ಸರ್ವರೂ ಇದಕ್ಕೆ ಬರಬೇಕೆಂ[illegible] ಶಿಕ್ಷಣ ಸಂಘದ ಕಡೆಯಿಂದ ರಾ [illegible] ಸೂಚಿಸಿರುತ್ತಾರೆ ಬಾಲಿಕಾ ಪಾಠಶಾಲೆಯಲ್ಲಿ ಕೊಡೋಣಾಗುವ ಶಿಕ್ಷಣಕ್ರಮ [illegible] ಸಂಬಂಧಿಸಿದ ವಿಷಯಗಳು ಆ ಸಭೆಯಲ್ಲಿ ಪ್ರಸ್ತಾಪಿಸೋಣಾಗುವವು

ಇಲ್ಲಿಯ ಗೌಡಸಾರಸ್ವತರ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಹರಿಕಥೆಗಳ ಸಮಾರಂಭವು [illegible] ಪಂಢರಪುರದ [illegible] ಹರಿದಾಸರೂ [illegible] ಹರಿದಾಸರೂ ಕೂಡಿಕೊಂಡು ನಾಲ್ಕಾರು [illegible] ಪ್ರಕಾರ ರಾತ್ರಿಕಥೆಗಳ [illegible]

ಇಲ್ಲಿ [illegible]

[illegible]

[illegible]

[illegible] ಹುದೊಡ್ಡ [illegible] ಇಲ್ಲಿ [illegible] ಸಂಸ್ಥೆಗೆ ಪ್ರತ್ಯಕ್ಷ [illegible] ಮಾಡಿದಂಥವರ [illegible] ಇಲ್ಲಿ [illegible] ಆ [illegible] ತಾ [illegible]ನೇ ಸಾಯಂಕಾಲ [illegible] ಗಂಟೆಗೆ ಕೂಡಬೇಕೆಂದೂ ಆ ಸಭೆಯಲ್ಲಿ ದೇಶಹಿತಕಾರ್ಯಕ್ಕೆ ಸಭೆಯ ಸಿಲುಕಿನಲ್ಲಿ ಕೂಡಿದ ಹಣವನ್ನು ಹ್ಯಾಗೆ ಉಪಯೋಗಿಸಬೇಕೆಂದು ನಿರ್ಣಯಿಸೋಣಾಗುವದೆಂದೂ ಸಂಬಂಧಪಟ್ಟವರು ಈ ಸಭೆಗೆ [illegible] ಮಾಡಿ [illegible]ಬೇಕೆಂದೂ ಇದರ ಕಾರ್ಯದರ್ಶಿಗಳಾಗಿದ್ದ ಮ. ರಾ ಕೇಶವ ಭಟ್ಟ [illegible] ರಾ ಅತ್ತಾವರ ಬಾಲಕೃಷ್ಣ ಶೆಟ್ಟಿಯವರು [illegible] ಜನರೆಲ್ಲರಿಗೂ ನಮ್ಮ ಪತ್ರಮೂಲಕ ತಿಳಿಸಬೇಕೆಂದು ವಿಜ್ಞಾಪಿಸಿಕೊಂಡಿದ್ದಾರೆ ಅಲ್ಲದೆ ಅದೇ ದಿನ [illegible] ಸ್ಥಳದಲ್ಲಿ ಸಾಯಂಕಾಲ [illegible] ಇಲ್ಲಿಯ ರಾಷ್ಟ್ರೀಯಶಿಕ್ಷಣದ ಕಮ್ಮಿಟಿಯು ಸಭೆಯು ಕೂಡುವದೆಂದೂ, ಕಮ್ಮಿಟಿಯವರಿಗೆ ಹಣ ಸಹಾಯ ಮಾಡಲು ವಾಗ್ದತ್ತರಾಗಿರುವವರ ತಮ್ಮ ಚಂದಾ ಮೊಬಲಗುಗಳನ್ನು ಕಮ್ಮಿಟಿಯ ಖಜಾನಚಿಯವರಾದ ರಾ। ಕಾರ್ನಾಡ ಸದಾಶಿವರಾಯರಿಗೆ ಪಾವತಿ ಕೊಡಬೇಕೆಂದೂ ತಿಳಿಸಿರುವರು

ರಾಷ್ಟ್ರೀಯ ಶಿಕ್ಷಣ ವಾರದ ಸೋದ್ದಿಸಂತೆಗೆ ಸಾಮಗ್ರಿಗಳನ್ನು ಕೊಟ್ಟ ಗೃಹಸ್ಥರುಗಳ ಹೆಸರು ಪಟ್ಟಿಯು ಪ್ರಕಟನೆ ಬಗ್ಗೆ ಬಂದಿರುವದು ಸ್ಥಳ ಇಲ್ಲದ್ದರಿಂದ ಪ್ರಕಟಿಸಲಿಲ್ಲ

(೩ನೇ ಪುಟದಿಂದ)

"ಶಾರದಾ" ಎಂಬದೊಂದು ನಾಟಕವನ್ನು ಬರೆದು ಅದರಿಂದ ೨ ಸಂಗತಿಗಳನ್ನು ಜನರ ಮನಸ್ಸಿನಲ್ಲಿ ಚುಚಿಕಡಿಸಿದರು ಚಿಕ್ಕ ಹುಡುಗಿಯನ್ನು ವೃದ್ಧನಿಗೆ ಮದುವೆ ಮಾಡುವದು ತಪ್ಪು; ಎಂದರೆ ವೃದ್ಧ ಬಾಲಿಕಾ ವಿವಾಹ ನಿಷೇಧ ಇದೊಂದು ಸಸಂಕ್ಷಿ ಬ್ರಾಹ್ಮಣರ ಪರಸ್ಪರ ವಿವಾಹವು ಆಕ್ಷೇಪಕರವಲ್ಲ ಈ ಎರಡು ಸಂಗತಿಗಳು ನಾಟಕಾರಾತ್ಮಕ ಮುಂದೆ ಈಗ ೪೦–೪೫ ವರ್ಷಗಳಿಂದ ಇವೆ ಇವುಗಳ ವಿಷಯದಲ್ಲಿ ವರ್ತಮಾನ ಪತ್ರಿಕೆಗಳಲ್ಲಿ ಸಾಧಕಬಾಧಕ ಚರ್ಚೆಯಾಗುತ್ತಿದೆ ದೊಡ್ಡ ದೊಡ್ಡ ಸುಧಾರಣಾ ಪರಿಷತ್ತುಗಳಲ್ಲಿ ಇವೆ ವಿಷಯಗಳ ಮೇಲೆ ಎಷ್ಟು ಸಾರೆ ದೊಡ್ಡ ದೊಡ್ಡವರು ಠರಾವುಗಳನ್ನು ಮಾಡುತ್ತಿದ್ದಾರೆ – ಆದರೆ ಈ ಎರಡು ತಪ್ಪುಗಳು ಸಾಮಾನ್ಯ ಜನರ ದೃಷ್ಟಿಯಲ್ಲಿ ಅಷ್ಟು ಬೇಗನೆ ಬಂದಿರಲಿಲ್ಲ. ಪರಂತು "ಶಾರದಾ" ನಾಟಕವು ಯಾವಾಗ ರಂಗಭೂಮಿಯ ಮೇಲೆ ಬಂತೊ ಆಗ ವೃದ್ಧನಿಗೆ ಚಿಕ್ಕ ಕನ್ನಿಕೆಯನ್ನು ಕೊಡುವದು ಎಷ್ಟು ಅನ್ಯಾಯಕರ, ನಿಷ್ಠುರತನದ ಮತ್ತು ಬೀಭತ್ಸತ್ವಯುಕ್ತ ಕೆಲಸವು ಎಂಬುದು ಎಲ್ಲರಿಗೂ – ಸುಶಿಕ್ಷಿತ ಅಶಿಕ್ಷಿತರಿಗೆ ತಿಳಿಯುತ್ತಿತು ಈ ಒಂದು ನಾಟಕವು ಎಷ್ಟು ಕಾರ್ಯವನ್ನು ಮಾಡಿತೊ ಅಷ್ಟು [illegible]

ವೃದ್ಧರು ಜನಾಂಗದ ರೋಗವನ್ನು ಸರಿಯಾಗಿ ಮೊದಲು ಪರೀಕ್ಷಿಸಿ ಔಷಧವನ್ನು ಯೋಜಿಸಿದರೆ ಅವರ ಪರಿಣಾಮವು ಇಷ್ಟವಾದ ರೀತಿಯಲ್ಲಿ ಉಂಟಾಗುತ್ತದೆ

ಕನ್ನಡದಲ್ಲಿ ಈ ತರದ ಪ್ರಯತ್ನವಿದೆಯೇ? ಕನ್ನಡ ಜನಾಂಗದ ಮತ್ತು ಕನ್ನಡ ಸಮಾಜದ ರೋಗವು ಯಾವದು ಇದನ್ನು ಲೇಖಕರಾಗಲಿ ಅಥವಾ ಕೃತಿಕಾರರಾಗಲಿ – ಈ ವೈದ್ಯರಾಜರು ಪರೀಕ್ಷಿಸುವರೇ? ಪ್ರಪಂಚದೊಳಗಿನ ಶೋಕೋಷ್ಣ ಆಧಿವ್ಯಾಧಿ ಇತ್ಯಾದಿಗಳಿಂದ ಪೀಡಿತನಾಗಿ 'ಅಯ್ಯೋ! ಈ ಸಂಸಾರವು ಬೇಡ'ವೆಂದು ಬಳಲುತ್ತಿರುವ ಮುಮುಕ್ಷುವಿಗೆ ಗುರುವು ಶಾಂತಿಯ ಮತ್ತು ಆತ್ಮಾನಂದದ ಉಪದೇಶವನ್ನೆ ಮಾಡಬೇಕಲ್ಲದೆ ಅಥವಾ ಗೀತೋಪದೇಶವನ್ನೆ ಹೇಳಬೇಕಲ್ಲದೆ ಭರ್ತೃಹರಿಯ ಶೃಂಗಾರಶತಕವನ್ನು ವಿವರಿಸುವದು ಯುಕ್ತವೇ? ಬಿಡಮುಖ್ಯರವು ತಲೆಯ ಮೇಲೆ ಹುಟ್ಟುಹುಟ್ಟಾಗಿ ಬಡಬಡಿಸುವವನಿಗೆ ಮಲ್ಲಿಗೆಯನ್ನು ಮುಡಿಸುವದು ಯುಕ್ತವೆ? ಧರ್ಮಶ್ರದ್ಧೆಯು ಸಡಿಲಾಯಿತು ಸಾಮಾಜಿಕ ಕರ್ತವ್ಯವು ಮರೆತುಹೋಯಿತು ಆಗ ಮಹಾರಾಷ್ಟ್ರದಲ್ಲಿ ಶ್ರೀ ಸಮರ್ಥ ರಾಮದಾಸರು ಶಾಕುಂತಲ ನಾಟಕವನ್ನು ಮರಾಠಿಯಲ್ಲಿ ಭಾಷಾಂತರಿಸಿದರೇ? ಇಲ್ಲವೆ ಯೋಗಶಾಸ್ತ್ರವನ್ನು ಉಪದೇಶಿಸಿದರೆ ಇಲ್ಲ ಆದರೆ ದಾಸಬೋಧದಂಥ ಅಪ್ರತಿಮ ಗ್ರಂಥವನ್ನು ನಿರ್ಮಿಸಿ ಅದರಲ್ಲಿ ಸಾಮಾಜಿಕ ಹಾಗು ರಾಷ್ಟ್ರೀಯ ಕರ್ತವ್ಯದ ಸ್ಫೂರ್ತಿಯನ್ನು ಹುಟ್ಟಿಸಿದರು ಯಾಕೆ? ರೋಗವು ಒಂದು ಕಡೆಯಲ್ಲಿ ಮದ್ದು ಇನ್ನೊಂದು ಕಡೆಯಲ್ಲಿ ಹೀಗಾಗಬಾರದು ಪರಂತು ಕನ್ನಡಿಗ ವೈದ್ಯರ ಕಡೆಗೆ ನೋಡಿರಿ ಈ ವೈದ್ಯರ ರೋಗಿಯಲ್ಲಿ ಯಾವ ರೋಗವು ಉಂಟಾಗಿದೆ, ಇದನ್ನು ಪರೀಕ್ಷಿಸುವರೆ ಪರೀಕ್ಷಿಸಲು ಶ್ರಮಪಡುತ್ತಾರಾದರೆ ಇವರು ವಸಂತವನ್ನು ವರ್ಣಿಸುವದು ಯಾಕೆ? ಉಪವನದ ಮಹಾಕಾವ್ಯವು ಯಾಕೆ? ರತಿಕಲ್ಯಾಣದ ನಾಟಕವು ಯಾಕೆ? ಇನ್ನು ಕೆಲವು ರಾಜವೈದ್ಯರಿರುವರು ಅವರು ಅಮೇರಿಕಾ, ಆಫ್ರಿಕಾ ಮೊದಲಾದ ಕಡೆಗಳಲ್ಲಿಯ ಗ್ರಾಂಥೀಲ್ಡರಂಥ ವೀರ ಪುರುಷರ ಚರಿತ್ರೆಗಳನ್ನು ಕನ್ನಡಿಸುವರು ಇಂಥವರ ಕೃತಿಗಳೊಳಗಿನ ಕಥಾನಾಯಕರ ಚರಿತ್ರವು ವೀರಶ್ರೀಯನ್ನು ಹುಟ್ಟಿಸಬಹುದಾದರೂ ಇರುವದೇ? ಒಟ್ಟಾರೆ ರೋಗನಿದಾನವಿಲ್ಲ, ಸರಿಯಾದ ಚಿಕಿತ್ಸೆಯೊ ಅದಲ್ಲ ದೇಶದ ಶರೀರದಲ್ಲಿ ಯಾವ ರೋಗವು ನೆಲೆಗೊಂಡಿದೆ, ಸಮಾಜದಲ್ಲಿ ಯಾವ ಕೊರತೆ ಹುಟ್ಟಿಕೊಂಡಿದೆ ಅದನ್ನು ದೂರಪಡಿಸಲು ಎಂಥ ಔಷಧವು ಅವಶ್ಯವಿದೆ ಇತ್ಯಾದಿ ಪ್ರಶ್ನೆಗಳನ್ನು ಸರಿಯಾಗಿ ಪರೀಕ್ಷಿಸಿದ [illegible] ತಮ್ಮ [illegible] ಮಾಡ[illegible] ಅರೆದುಕೊಡುವವರು ಸದ್ವೈದ್ಯರ ವರ್ಗದಲ್ಲಿ ಸೇರ[illegible] ಪ್ರಕಾಶಕರ ಮತ್ತು ಲೇಖಕರ ಏಕವಾಕ್ಯವಿಲ್ಲದೆ [illegible] ಹಾಗು [illegible] ಪರಸ್ಪರ ಸ್ಪರ್ಧೆಯ ಅಭಾವ ಇವುಗಳಿಂದ ಹಿಂದೆ ಹೇಳಿದಂತೆ ಹ್ಯಾಗೆ [illegible] ವಾಙ್ಮಯವು ದೀನಸ್ಥಿತಿಗೆ ಬಂದ ಕಳಸಿರುವದೊ ಹಾಗೆಯೆ ಪ್ರಕಾಶಕರೂ ಲೇಖಕರೂ ದೇಶದ ಪ್ರಸ್ತುತ ಪರಿಸ್ಥಿತಿಯ [illegible]ಧಾನವನ್ನು ಮಾಡದೆ ರಾಷ್ಟ್ರದ ಏಳಿಗೆಗೆ [illegible] ಹಾಳುಹರಟೆಗಳನ್ನು ಬರೆಯುವದರಿಂದಲೂ ಪ್ರಕಟಿಸುವದರಿಂದಲೂ ಆ ದೀನಸ್ಥಿತಿಯು ದೃಢವಾಗುವದು ಪುಸ್ತಕ ಪ್ರಕಾಶನದ [illegible] ಕೆಲಸವು ಪವಿತ್ರವೆಂದಿದ್ದರೆ ಅದು ಆಯಾ ಕಾಲದ ದೇಶ [illegible] ಸಮಾಜದ ಪರಿಸ್ಥಿತಿಯನ್ನು ಕೊರತೆಯನ್ನೂ, ಕೊಳಕನ್ನೂ ಹಾಗೆ ನ್ಯೂನತೆಯನ್ನು ಪರೀಕ್ಷಿಸಿ ಆ ಎಲ್ಲ [illegible] ಹೋಗುವಂತೆ ಮಾಡಿದ್ದಲ್ಲಿ ಪವಿತ್ರ [illegible] ಉದಯಕಾಲವು ಕನ್ನಡಿಗರಿಗೆ ಇನ್ನೂ ಬಂದದ್ದಾಗಿ ಕಾಣುವದಿಲ್ಲ ಒಟ್ಟಿನಲ್ಲಿ ಅದರ ದೀನಸ್ಥಿತಿಯ ದೃಷ್ಟಾಂತವು ಅಥವಾ ನಿದರ್ಶನವು

(ಮುಂದರಿಯುವದು)

ಕರ್ನಾಟಕ ಸಾಹಿತ್ಯ ಸಮ್ಮೇಲನ

ಅಧ್ಯಕ್ಷರ ಆರಂಭ ಭಾಷಣ

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಕನ್ನಡನಾಡಿನ ಮತ್ತು ಕನ್ನಡನುಡಿಯ ಪ್ರಾಚೀನತೆ

ಕಿ. ಪೂ. ೩ನೆಯ ಶತಮಾನದಲ್ಲಿ ಅಶೋಕನು ಬನವಾಸಿಗೆ ಒಬ್ಬ ಬೌದ್ಧಬೋಧಕನನ್ನು ಕಳುಹಿಸಿದಂತೆ ತಿಳಿಯುತ್ತದೆ ಅದೇ ಕಾಲದಲ್ಲಿ ಮಹಿಷಮಂಡಲಕ್ಕೆ ಮತ್ತೊಬ್ಬ ಬೋಧಕನನ್ನು ಕಳುಹಿಸಿದಂತೆಯೂ ತಿಳಿಯುತ್ತದೆ. ಈ ಮಹಿಷಮಂಡಲವು ಮೈಸೂರು ದೇಶವಲ್ಲ ಗೋದಾವರಿಯ ಸಮೀಪದ ಪ್ರಾಂತವು ಎಂದು ವಿ। ಫ್ಲೀಟ್ ಬರೆದಿದ್ದಾರೆ ಆದರೂ ಮೈಸೂರ ಸೀಮೆಗೆ ಮಹಿಷರಾಷ್ಟ್ರ ಅಥವಾ ಮೈಸನಾಡು ಎಂಬ ಹೆಸರು ಶಾಸನಗಳಲ್ಲಿಯೂ ಪ್ರಾಚೀನ ಗ್ರಂಥಗಳಲ್ಲಿಯೂ ದೊರೆಯುತ್ತದೆ ಮೈಸ ಎಂಬುದು ಮಹಿಷ ಎಂಬ ಶಬ್ದದ ತದ್ಭವವು. ತಮಿಳ ಭಾಷೆಯಲ್ಲಿರುವ ಅಗನಾನೂರು ಎಂಬ ಕವಿಸೂಕ್ತಿ ಕದಂಬದಲ್ಲಿ ಕ್ರಿಸ್ತಶಕ ೨ನೆಯ ಶತಮಾನದಲ್ಲಿದ್ದ ಮಾಮೂಲನಾರ್ ಎಂಬ ಕವಿಯ ಉಕ್ತಿಯಾದ ೧೧೫ನೆಯ ಪದ್ಯದಲ್ಲಿ ಎರುಮೈನಾಡು (ಎರುಮೈ = ಮಹಿಷ) ಎಂಬ ಹೆಸರನ್ನು ಹೇಳಿ ಇದು ಪಶ್ಚಿಮ ಪ್ರಾಂತದಲ್ಲಿ (ಕುಡನಾಡು) ಇದೆ ಎಂದೂ ಹೇಳಿದೆ ನಕ್ಕೀರರ್ ಎಂಬ ಮತ್ತೊಬ್ಬ ಪುರಾತನ ಕವಿಯ ಉಕ್ತಿಯಾದ ೩೬ನೆಯ ಪದ್ಯದಲ್ಲಿ – ನೆಡುಂಚೆಳಿಯನ್ ಎಂಬ ಪಾಂಡ್ಯರಾಜನು ತಲೈಯಾಲಂಕಾನಂ ಎಂಬ ಸ್ಥಳದಲ್ಲಿ ಚೇರನ್, ಚೋಳನ್, ತಿತಿಯನ್ ಎಳಿನಿ ಎರುಮೈಯೂರನ್ (ಮಹಿಷಪುರದವನು), ಇರುಂಕೋವೆಣ್ಮಾನ್, ಪೊರುನನ್ ಎಂಬ ಏಳು ರಾಜರನ್ನೂ ಯುದ್ಧದಲ್ಲಿ ಸೋಲಿಸಿದಂತೆ ಹೇಳಿದೆ. ಅದೇ ಕವಿಯ ಉಕ್ತಿಯಾದ ೨೫೩ನೆಯ ಪದ್ಯದಲ್ಲಿ ಮಹಿಷಪುರದವನು ಬಡ[illegible] ಕೆ[illegible]ಲದವನು ಎಂದು ಉಕ್ತವಾಗಿದೆ ಶಿಲಪ್ಪದಿಕಾರಂ ಎಂಬ ಮತ್ತೊಂದು ತಮಿಳು ಗ್ರಂಥದಲ್ಲಿ ಎರಡನೆಯ ಶತಮಾನದಲ್ಲಿದ್ದ ಶೆಂಗುಟ್ಟುವನ್ ಎಂಬ ಚೇರರಾಜನು ಉತ್ತರದಿಕ್ಕಿಗೆ ಹೋಗುವಾಗ ನೀಲಗಿರಿಯಲ್ಲಿ ತಂಗಿ, ಕನ್ನಡರು ಆಡುವ ಕಾಣಿಕವನ್ನು ನೋಡಿ ಸಂತೋಷಿಸಿದರು ಎಂದು ಹೇಳಿದೆ ಈ ಕುಣಿತವು ಈಗ ಮಲೆನಾಡಿನಲ್ಲಿ ಆಡುವ ಸುಗ್ಗಿಯ ಕುಣಿತದಂತಿದ್ದಿರಬಹುದೆಂದು ತೋರುತ್ತದೆ

ಕೆಳಗಣ ಈಜಿಪ್ಟ್ ದೇಶದಲ್ಲಿಯ ಆಕ್ಸಿರಿಂಕಸ್ ಎಂಬ ಸ್ಥಳದಲ್ಲಿ ದೊರೆತ ೨ನೆಯ ಶತಮಾನದಲ್ಲಿ ರಚಿತವಾದ ಒಂದು ಗ್ರೀಕ್ ನಾಟಕದಲ್ಲಿ ಕೆಲವು ಕನ್ನಡ ಶಬ್ದಗಳೂ ವಾಕ್ಯಗಳೂ ದೊರೆಯುತ್ತವೆ. ಉದಾಹರಣ – ಪಾನಂ ಬೇರೆತ್ತಿ, ಕಟ್ಟಿ ಮಧುವಂ ಬೇರೆಕ್ಕುವೆನ್. ರಾಷ್ಟ್ರಕೂಟರಾಜನಾದ ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ತನಗೆ ಹಿಂದೆ ಇದ್ದ ಗದ್ಯ ಗ್ರಂಥಕರ್ತೃಗಳಲ್ಲಿ ದುರ್ವಿನೀತನ ಹೆಸರನ್ನು ಹೇಳಿದ್ದಾನೆ ಈತನು ಆ ಹೆಸರಿನ ಗಂಗರಾಜನಾಗಿರಬಹುದು ಇವನ ಕಾಲವು ಸುಮಾರು ೫೦೦ ಆಗುತ್ತದೆ ೫ನೆಯ ಶತಮಾನದಿಂದ ಕನ್ನಡ ಶಾಸನಗಳು ದೊರೆಯುತ್ತವೆ ಭಟ್ಟಾಕಳಂಕನು ಕನ್ನಡ ಭಾಷೆಯ ವಿಷಯವಾಗಿ – "ಕನ್ನಡದಲ್ಲಿ ತತ್ವಾರ್ಥ ಮಹಾಶಾಸ್ತ್ರಕ್ಕೆ ವ್ಯಾಖ್ಯಾರೂಪವಾದ ೯೬,೦೦೦ ಗ್ರಂಥಪರಿಮಿತಿಯುಳ್ಳ ಚೂಡಾಮಣಿಯೂ, ಶಬ್ದಾಗಮ, ಯುಕ್ತ್ಯಾಗಮ, ಪರಮಾಗಮ ಇವುಗಳಿಗೆ ಸಂಬಂಧಪಟ್ಟ ಗ್ರಂಥಗಳೂ, ಕಾವ್ಯ, ನಾಟಕ, ಅಲಂಕಾರ, ಕಲಾ(ಶಾಸ್ತ್ರ) ಈ ವಿಷಯವಾದ ಗ್ರಂಥಗಳೂ ಹೇರಳವಾಗಿ ದೊರೆವುದರಿಂದ ಈ ಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಾದುದಲ್ಲ" ಎಂದು ಬರೆದಿದ್ದಾನೆ ಈ ಚೂಡಾಮಣಿಯನ್ನು ಬರೆದವನು ತುಂಬುಲೂರಾಚಾರ್ಯ ಎಂಬ ನಾಮಾಂತರವುಳ್ಳ ಶ್ರೀವರ್ಧದೇವನು.

ಯಾಕ್ಷರಯುಂಗಲಸ್ಯಾರಿಷ್ಯೆ ಎಂಬ ಕವಿಯು ಛಂದೋಗ್ರಂಥದಿಂದ ಕನ್ನಡದಲ್ಲಿ ಗುಣಗಾಂಕಿಯಂ ಎಂಬ ಒಂದು ಛಂದೋಗ್ರಂಥವು ಇದ್ದಂತೆ ತಿಳಿಯುತ್ತದೆ. [illegible]

ಅದ್ಭುತಸಾಗರನೆಂಬ ಕವಿ ೧೦ನೆಯ ಶತಮಾನಕ್ಕೆ ಹಿಂದೆ ಇದ್ದನಷ್ಟೆ. 'ಕನ್ನಡ ಗ್ರಂಥವನ್ನು ಬರೆದ ಕವಿಯ ಹೆಸರು ಹೇಳಿಲ್ಲ. ಅವನು ತನ್ನ ಗ್ರಂಥವನ್ನು ಗುಣಗ, ಗುಣಗಾಂಕ, ಗುಣಕೆನಲ್ಲ ಎಂಬ ವಿಶೇಷಣಗಳುಳ್ಳ ಇನೆಯ ವಿಜಯಾದಿತ್ಯನೆಂಬ (೮೪೪-೮೮೮) ಪೂರ್ವದೇಶದ ಚಾಳುಕ್ಯರಾಜನಿಗೆ ಅಂಕಿತಮಾಡಿದಂತೆ ತೋರುತ್ತದೆ. ಈ ಗ್ರಂಥವು ನಮಗೆ ದೊರಕಿಲ್ಲ. ನಾಗವರ್ಮನ ಕಾಲಕ್ಕೆ ಹಿಂದೆ ಹುಟ್ಟಿದ ಈ ಗ್ರಂಥವೇ ಕನ್ನಡ ಛಂದಸ್ಸಿನಲ್ಲಿ ಆದಿಗ್ರಂಥ.

ಕನ್ನಡನಾಡ ದೊರೆಗಳು.

“ಕನ್ನಡನಾಡಿನಲ್ಲಿ ಕಾಲಕ್ರಮದಲ್ಲಿ ಅನೇಕ ರಾಜ್ಯಗಳು ಹುಟ್ಟಿ ಅವುಗಳಲ್ಲಿ ಆಂಧ್ರರೂ, ಕದಂಬರೂ, ಗಂಗರೂ, ಚಾಳುಕ್ಯರೂ, ರಾಷ್ಟ್ರಕೂಟರೂ, ಕಾಳಚುರ್ಯರೂ, ಹೊಯ್ಸಳರೂ, ವಿಜಯನಗರದರಸರೂ, ಮೈಸೂರರಸರೂ ಆಳಿದರು. ಈ ಮೂರ್ಧಾಭಿಷಿಕ್ತರಾದ ರಾಜರಲ್ಲದೆ ಅಲ್ಲಲ್ಲಿ ಅನೇಕ ಸಾಮಂತರಾಜರೂ ಇದ್ದರು. ಈ ರಾಜರೆಲ್ಲರೂ ಪ್ರಾಯಿಕವಾಗಿ ಪರಾಕ್ರಮಶಾಲಿಗಳಾಗಿಯೂ ಧರ್ಮಪರಾಯಣರಾಗಿಯೂ ವಿದ್ಯಾಪಕ್ಷಪಾತಿಗಳಾಗಿಯೂ ದಿಗಂತ ವಿಶ್ರಾಂತ ಕೀರ್ತಿಭಾಜನರಾಗಿಯೂ ರಾಜ್ಯಭಾರವಮಾಡಿದರು. ಹಲವರು ಭಿನ್ನಮತಸ್ಥರಾದರೂ ರಾಗದ್ವೇಷವಿಲ್ಲದೆ ಅನ್ಯಮತಗಳನ್ನು ಸಮದೃಷ್ಟಿಯಿಂದ ಕಾಣುತ್ತ ಅವಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಬೇರೆ ಬೇರೆ ಮತಸ್ಥರಿಗೆ ಪರಸ್ಪರ ವೈಮನಸ್ಯವು ಹುಟ್ಟಿದಾಗ ರಾಜರುಗಳು ಸಮಾಧಾನ ಪಡಿಸಿ ಸೌಹಾರ್ದವನ್ನು ನೆಲೆಗೊಳಿಸಿದಂತೆ ಶಾಸನಗಳಿಂದ ತಿಳಿಯುತ್ತದೆ. ವಿದ್ವಾಂಸರು, ವಿರಕ್ತರು, ಭಕ್ತರು ಇವರುಗಳಿಗೆ ತಕ್ಕ ಮನ್ನಣೆಯನ್ನು ಮಾಡಿ ಗೌರವಿಸುತ್ತಿದ್ದರು. ಗುಣಗ್ರಾಹಿಗಳಾಗಿ ಗುಣಶೀಲರನ್ನು ಆರಿಸಿ ತಕ್ಕ ಪದವಿಗಳಲ್ಲಿಟ್ಟು ತಮಗೂ ತಮ್ಮ ರಾಜ್ಯಕ್ಕೂ ಕ್ಷೇಮವುಂಟಾಗುವಂತೆ ಪೋಷಿಸಿದರು. ಕನ್ನಡನಾಡು ವಿದ್ಯಾವಿಭವದಿಂದಲೂ ವಾಣಿಜ್ಯ ಶಿಲ್ಪಾದಿ ಕಲಾಕೌಶಲದಿಂದಲೂ ಪ್ರಜಾನುರಾಗದಿಂದಲೂ ಶೋಭಿಸುತ್ತಿದ್ದಿತು.

ಕನ್ನಡನಾಡ ಮಹಿಮೆ

ದ್ವೈತಮತೋದ್ಧಾರಕರಾದ ಮಧ್ವಾಚಾರ್ಯರಿಗೆ ಕನ್ನಡ ನಾಡು ತವರುಮನೆ. ಅದ್ವೈತಮತೋದ್ಧಾರಕರಾದ ಶಂಕರಾಚಾರ್ಯರಿಗೂ ವಿಶಿಷ್ಟಾದ್ವೈತ ಮತೋದ್ಧಾರಕರಾದ ರಾಮಾನುಜಾಚಾರ್ಯರಿಗೂ ಆಶ್ರಯಸ್ಥಾನ. ಇವರುಗಳಿಂದ ಸ್ಥಾಪಿತವಾದ ಮಠಗಳೂ ಶಾಖಾಮಠಗಳೂ ಇಲ್ಲಿ ಈಗಲೂ ಶೋಭಿಸುತ್ತಿರುವುವು. ಈ ನಾಡು ವಿದ್ಯಾತೀರ್ಥ, ವಿದ್ಯಾರಣ್ಯ, ಸಾಯಣಾಚಾರ್ಯ, ಶ್ರೀಪಾದರಾಯ, ವ್ಯಾಸರಾಯ, ರಾಘವೇಂದ್ರಯತಿ, ಅನಂತಾಚಾರ್ಯ, ವೇದಾಂತಾಚಾರ್ಯ, ಪುರಂದರದಾಸ, ಕನಕದಾಸ, ಬಸವ, ಸಿದ್ಧರಾಮ, ನೇಮಿಚಂದ್ರ, ಶುಭಚಂದ್ರ ಇವರೇ ಮುಂತಾದ ತಪೋಧನರಿಂದಲೂ ವಿದ್ವದ್ವರ್ಯರಿಂದಲೂ ತತ್ವದರ್ಶಿಗಳಿಂದಲೂ ಭಕ್ತಶಿರೋಮಣಿಗಳಿಂದಲೂ ಅಲಂಕೃತವಾಗಿದ್ದಿತು. ವಾಣಿಜ್ಯ, ಶಿಲ್ಪ ಮುಂತಾದ ಕಲೆಗಳಲ್ಲಿ ಅಸದೃಶವಾದ ನೈಪುಣ್ಯವನ್ನು ಹೊಂದಿದವರೂ ಕನ್ನಡನುಡಿಯ ಸೊಬಗನ್ನು ಪ್ರಕಾಶಗೊಳಿಸಲು ಸಮರ್ಥರಾದ ಕವಿಶಿಖಾಮಣಿಗಳೂ ಈ ನಾಡಿನ ಕೀರ್ತಿಯನ್ನು ಸ್ಥಿರೀಕರಿಸಿದ್ದಾರೆ.

ವಾಣಿಜ್ಯ

ಚಿತ್ರದುರ್ಗದಲ್ಲಿ ಆಂಧ್ರಭೃತ್ಯರ ಸೀಸದ ನಾಣ್ಯಗಳು ದೊರೆತುವೆಂದು ತಿಳಿಯಬಂದಿದೆ. ಅದೇ ಸ್ಥಳದಲ್ಲಿ ಕ್ರಿಸ್ತಪೂರ್ವ ೨ನೆಯ ಶತಮಾನದಲ್ಲಿದ್ದ ಹನ್‌ವಿ ಎಂಬ ಚೀನದೇಶದ ಚಕ್ರವರ್ತಿಯ ಹಿತ್ತಾಳೆ ನಾಣ್ಯವೂ ಕ್ರಿಸ್ತಶಕ ೧೪ರಲ್ಲಿ ಸತ್ತ ಅಗಸ್ಟಸ್ ಎಂಬ ರೋಮ್ ಚಕ್ರವರ್ತಿಯ ಡಿನೇರಿಯಸ್ ಎಂಬ ಬೆಳ್ಳಿ ನಾಣ್ಯಗಳೂ ದೊರೆತುವು. ಇದರಿಂದ ಪೂರ್ವಕಾಲದಲ್ಲಿ ಕನ್ನಡನಾಡಿನ ವಾಣಿಜ್ಯವು ಎಷ್ಟರಮಟ್ಟಿಗೆ ವ್ಯಾಪಿಸಿದ್ದಿತು ಎಂಬಂಶವನ್ನು ಸ್ವಲ್ಪಮಟ್ಟಿಗೆ ಊಹಿಸಬಹುದಾಗಿದೆ.

ಶಿಲ್ಪ

ವಾಸ್ತುವಿದ್ಯಾವಿಶಾರದರಾದ ಕನ್ನಡನಾಡಿನ ಶಿಲ್ಪಿಗಳು ಎಲ್ಲೋರ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರ, ನಂದಿ, ಶೃಂಗೇರಿ, ಶ್ರವಣಬೆಳ್ಗೊಳ ಮುಂತಾದ ಸ್ಥಳಗಳಲ್ಲಿ ನಿರ್ಮಿಸಿರುವ ದೇವಾಲಯಗಳೂ ಕೆತ್ತಿರುವ ವಿಗ್ರಹಗಳೂ ವಿದೇಶೀಯರಾದ ಶಿಲ್ಪಶಾಸ್ತ್ರಜ್ಞರನ್ನು ಆಶ್ಚರ್ಯಸಾಗರದಲ್ಲಿ ಮಗ್ನರಾಗುವಂತೆ ಮಾಡಿವೆ. ಶ್ರವಣಬೆಳ್ಗೊಳದಲ್ಲಿರುವ ಸುಮಾರು ೬೦ ಅಡಿ ಎತ್ತರವುಳ್ಳ ಗೋಮಟೇಶ್ವರನ ಸುಂದರವಾದ ವಿಗ್ರಹವು ನೋಡಿದವರನ್ನೆಲ್ಲ ಸ್ತಬ್ಧರನ್ನಾಗಿ ಮಾಡುತ್ತದೆ. ಈಜಿಪ್ಟ್ ದೇಶವನ್ನು ಬಿಟ್ಟರೆ ಇಂಥ ಅದ್ಭುತವಾದ ಕೆಲಸವು ಪ್ರಪಂಚದ ಇನ್ನಾವ ಭಾಗದಲ್ಲಿಯೂ ಇಲ್ಲವೆಂದು ತಿಳಿಯುತ್ತದೆ. ೧೪ನೆಯ ಶತಮಾನದ ಪೂರ್ವಾರ್ಧದಲ್ಲಿ ಶೃಂಗೇರಿಯ ಮಠದಲ್ಲಿ ವಿದ್ಯಾತೀರ್ಥರೆಂಬುವರು ಸ್ವಾಮಿಗಳಾಗಿದ್ದರು. ಇವರು ಭಾರತೀತೀರ್ಥರಿಗೂ ವಿದ್ಯಾರಣ್ಯರಿಗೂ ಗುರುಗಳು. ಇವರ ದರ್ಶನವನ್ನು ಮಾಡುವುದಕ್ಕಾಗಿ ವಿಜಯನಗರದ ೧ನೆಯ ರಾಜನಾದ ಹರಿಹರನು ೧೩೪೬ರಲ್ಲಿಯೂ ಅವನ ತಮ್ಮನಾದ ಬುಕ್ಕನು ೧೩೫೬ರಲ್ಲಿಯೂ ಶೃಂಗೇರಿಗೆ ಹೋಗಿದ್ದಂತೆ ಶಾಸನಗಳಿಂದ ತಿಳಿಯುತ್ತದೆ. ಈ ಮಹಾತ್ಮರ ಜ್ಞಾಪಕಾರ್ಥವಾಗಿ ಇವರ ಸಮಾಧಿಯ ಮೇಲೆ ಇವರ ಶಿಷ್ಯರಾದ ಭಾರತೀತೀರ್ಥರು ತಾವೇ ಮೇಲ್ವಿಚಾರಣೆಯನ್ನು ವಹಿಸಿ ವಿದ್ಯಾಶಂಕರ ಎಂಬ ನಾಮಧೇಯವುಳ್ಳ ಒಂದು ದೇವಸ್ಥಾನವನ್ನು ಸುಮಾರು ೧೩೫೭ರಲ್ಲಿ ಕಟ್ಟಿಸಿದರು. ಈ ದೇವಸ್ಥಾನವು ಚಿತ್ರವಿಚಿತ್ರವಾದ ಕೆಲಸಗಳಿಂದ ಶೋಭಾಯಮಾನವಾಗಿರುವುದು. ಇದರ ಸಂವಿಧಾನವೂ ರಚನೆಯೂ ಅಸಾಧಾರಣವಾದವು. ಇದರ ಸಂವಿಧಾನವು (plan) ಆಸೇತು ಹಿಮಾಚಲದಲ್ಲಿಯೂ ಇಲ್ಲ. ಭರತಖಂಡದಲ್ಲಿ ಕೆಲವು ಕಟ್ಟಡಗಳು ಮಾತ್ರ ಗಜಪೃಷ್ಠಾಕೃತಿಯಾಗಿ ಒಂದು ತುದಿಯಲ್ಲಿ ವರ್ತುಲವಾಗಿವೆ (apsidal at one end). ಈ ಕಟ್ಟಡವಾದರೋ ನೌಕೆಯಾಕಾರದ ಹಾಗೆ ಎರಡು ತುದಿಗಳಲ್ಲಿಯೂ ವರ್ತುಲವಾಗಿದೆ. ಇಂಥ ಸಂವಿಧಾನದ ಕಟ್ಟಡಗಳು ಭರತವರ್ಷದಲ್ಲಿಲ್ಲ. ಇವನ್ನು ನೋಡಬೇಕಾದರೆ ರೋಂ ಪಟ್ಟಣಕ್ಕೆ ಹೋಗಬೇಕು. ಇಂಥ ಕಟ್ಟಡಕ್ಕೆ ಬಸಿಲಿಕ (Basilica) ಎಂದು ಹೆಸರು. ಭರತವರ್ಷದಲ್ಲಿ ಎಲ್ಲಿಯೂ ದೃಗ್ಗೋಚರವಾಗದ ಇಂಥ ಸಂವಿಧಾನವನ್ನು ಏರ್ಪಡಿಸಿ ಈ ಕಟ್ಟಡವನ್ನು ಕಟ್ಟಿದ ಶಿಲ್ಪಿಗಳ ಚಾತುರ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು. ಇದು ಹಾಗಿರಲಿ. ದೇವಸ್ಥಾನದ ನವರಂಗದೊಳಗೆ ೧೨ ಚಿತ್ರಮಯವಾದ ಕಂಭಗಳಿವೆ. ಒಂದೊಂದು ಕಂಭದ ಮೇಲೆಯೂ ಮೇಷ, ವೃಷಭ ಮುಂತಾದ ೧೨ ರಾಶಿಗಳ ಚಿಹ್ನೆಗಳಲ್ಲೊಂದು ಅಂಕಿತವಾಗಿದೆ. ಆಯಾ ಚಿಹ್ನೆಗೆ ಅನುಗುಣವಾಗಿ ಆಯಾ ಕಂಭದ ಮೇಲೆ ಆಯಾ ತಿಂಗಳಲ್ಲಿ ಸೂರ್ಯರಶ್ಮಿ ಬೀಳುವಂತೆ ಕಂಭಗಳನ್ನು ನಿಲ್ಲಿಸಿರುವ ಶಿಲ್ಪ ಕೌಶಲವು ಯಾರಿಗೆ ತಾನೆ ಆಶ್ಚರ್ಯವನ್ನು ಉಂಟುಮಾಡದು?

ಕನ್ನಡನುಡಿಗೆ ಪ್ರೋತ್ಸಾಹ

ಪೂರ್ವದಿಂದಲೂ ಕನ್ನಡನುಡಿ ರಾಜರುಗಳ ಮತ್ತು ಮಂಡಲಿಕರ ಪ್ರೋತ್ಸಾಹದಿಂದ ಬೆಳೆಗೆಯನ್ನು ಹೊಂದುತ್ತಿತ್ತು. ಗಂಗರು, ರಾಷ್ಟ್ರಕೂಟರು, ಚಾಳುಕ್ಯರು, ಕಾಳಚುರ್ಯರು, ಕಾಕತೀಯರು, ಹೊಯ್ಸಳರು, ವೆಂಗಿಯ ಅರಸರು ಅಥವಾ ಪೂರ್ವದೇಶದ ಚಾಳುಕ್ಯರು, ವಿಜಯನಗರದ ಅರಸರು, ಮೈಸೂರರಸರು, ಸೌಂದತ್ತಿಯ ರಟ್ಟರು, ಕರಹಾಟದ ಶಿಲಾಹಾರರು, ಸಾಂತರರು, ಕೊಂಗಾಳ್ವರು, ತುಳುದೇಶದ ಅರಸರು, ಕೊಡಗು ಅರಸರು, ಉಮ್ಮತ್ತೂರು, ಸುಗ್ಗನಹಳ್ಳಿ, ಸುಗಟೂರು, ಆವತಿ, ಇಕ್ಕೇರಿ, ಬೇಲೂರು, ಚಿತ್ರದುರ್ಗ, ಕೆಳದಿ, ಪಿರಿಯಾಪಟ್ಟಣ, ಹದಿನಾಡು, ಚಿಕ್ಕನಾಯಕನಹಳ್ಳಿ, ದುಡಿಗೆರೆ, ಬಿಜ್ಜವರ, ಈ ಸ್ಥಳಗಳ ಪಾಳೆಯಗಾರರು, ಚೌಟರ ಇವರುಗಳಲ್ಲಿ ಕೆಲವರ ಸ್ವತಃ ಕವಿಗಳಾಗಿದ್ದುದಲ್ಲದೆ ಅನೇಕ ಕವಿಗಳಿಗೆ ಪೋಷಕರಾಗಿ ಬಹಳ ಪ್ರೋತ್ಸಾಹವನ್ನು ಉಂಟುಮಾಡಿದ್ದಾರೆ. ಈ ಪ್ರಭುಗಳ ಮಾತ್ರವಲ್ಲದೆ ಇವರ ಕೈಯಕೆಳಗೆ ದೊಡ್ಡ ದೊಡ್ಡ ಪದವಿಗಳನ್ನು ವಹಿಸಿದ್ದ ಮಂತ್ರಿಗಳ ದಂಡನಾಯಕರ, ಸಾಮಂತರು ಮುಂತಾದ ಅಧಿಕಾರಿಗಳಲ್ಲಿಯೂ ಕೆಲವರು ಕವಿಗಳಾಗಿಯೂ ಹಲವರು ಕವಿಪೋಷಕರಾಗಿಯೂ ಇದ್ದರು. ಅಲ್ಲದೆ ಚಿಕ್ಕ ಚಿಕ್ಕ ಪಾಳೆಯಪಟ್ಟಿಗೆ ದೊರೆಗಳಾದ ಹಲವರು ಗ್ರಂಥರಚನೆಯನ್ನು ಮಾಡಿದ್ದಾರೆ.

ಕವಿಗಳ ಜನ್ಮಸ್ಥಾನ

ಕನ್ನಡ ಕವಿಗಳಲ್ಲಿ ಸುಪ್ರಸಿದ್ಧರಾದ ಅನೇಕರಿಗೆ ಧಾರವಾಡ ಜಿಲ್ಲೆಯೂ ಅದಕ್ಕೆ ಸುತ್ತಮುತ್ತಿನ ಪ್ರಾಂತವೂ ಜನ್ಮಸ್ಥಾನವಾಗಿದ್ದಿತು. ನೃಪತುಂಗನು ಕಿಸುವೊಳಲ್ ಕೊಪಣನಗರ ಪುಲಿಗೆರೆ ಒಂಕುಂದ ಇವುಗಳ ಮಧ್ಯಪ್ರದೇಶವೇ ತಿರುಳ್ಗನ್ನಡದ ನಾಡೆಂದು ಹೇಳಿದ್ದಾನೆ. ಆದಿಪಂಪನು ಪುಲಿಗೆರೆಯ ತಿರುಳುಕನ್ನಡದೊಳ್ ತನ್ನ ಗ್ರಂಥವನ್ನು ಬರೆದುದಾಗಿ ಹೇಳಿದ್ದಾನೆ. ಆದುದರಿಂದ ಧಾರವಾಡ ಜಿಲ್ಲೆಯಲ್ಲಿನ ಪುಲಿಗೆರೆಯ ಕನ್ನಡವು ಪೂರ್ವದಲ್ಲಿ ಕವಿಗಳಿಗೆ ಆದರಣೀಯವಾಗಿದ್ದಂತೆ ತಿಳಿಯುತ್ತದೆ. ಇದು ಈ ಪ್ರಾಂತದವರಿಗೆ ನಿಜವಾಗಿಯೂ ಹೆಮ್ಮೆಯನ್ನು ಉಂಟುಮಾಡಬೇಕಾದ ವಿಷಯವಾಗಿದೆ. ಪ್ರಕೃತಸ್ಥಿತಿಯಲ್ಲಿ ಇಲ್ಲಿಯ ಕನ್ನಡನುಡಿ ಕಾರಣಾಂತರಗಳಿಂದ ಸ್ವಲ್ಪ ಮಾರುಪಾಡುಗಳನ್ನು ಹೊಂದಿರಬಹುದು. ಅವನ್ನು ಸಾಧ್ಯವಾದ ಮಟ್ಟಿಗೆ ಪೂರ್ವಸ್ಥಿತಿಗೆ ತರುವುದಕ್ಕೆ ಐಕಮತ್ಯದಿಂದಲೂ ಅಭಿಮಾನದಿಂದಲೂ ಪ್ರಯತ್ನಿಸಿದರೆ ಆ ಪ್ರಯತ್ನವು ಪ್ರಾಯಶಃ ವಿಫಲವಾಗಲಾರದೆಂದು ನಂಬಿದ್ದೇನೆ.

ಕನ್ನಡನುಡಿಯ ಈಗಿನ ಸ್ಥಿತಿ

ಈಗಲಾದರೋ ಕನ್ನಡನುಡಿಯು ತಾನು ಪೂರ್ವದಲ್ಲಿ ಭಾಷೋನ್ನತಿಗಾಗಿ ಉತ್ಕೃಷ್ಟಸ್ಥಿತಿಯಿಂದ ಕ್ಷಯಿಸಿ ಕನ್ನಡಿಗರ ನುಡಿಯು ಇದೆಯೋ ಅಲ್ಲವೋ ಎಂದು ಸಂದೇಹಪಡಬಹುದಾದ ಹೀನಸ್ಥಿತಿಗೆ ಬಂದಿದೆ. ಈ ಹೀನಸ್ಥಿತಿಯನ್ನು ನೋಡಿ ಯಾವ ನಿಜವಾದ ಕನ್ನಡಿಗನ ಹೃದಯವು ತಾನೇ ಶೋಕಸಂತಪ್ತವಾಗದು? ಯಾವ ದೇಶಾಭಿಮಾನವುಳ್ಳ ಕನ್ನಡಿಗನ ಮನವು ತಾನೆ ಕಂದದು? ಯಾವ ಭಾಷಾಭಿಮಾನಿಯಾದ ಕನ್ನಡಿಗನ ಕಣ್ಣು ಕಣ್ಣೀರಿನಿಂದ ತುಂಬದು? ಈ ಹೀನಸ್ಥಿತಿಯನ್ನು ನಿವಾರಣಮಾಡಲಿಕ್ಕೆ ಬದ್ಧಕಂಕಣರಾಗಿ ಸರ್ವಪ್ರಯತ್ನವನ್ನೂ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಈ ಹೀನಸ್ಥಿತಿಗೆ ಹಲವು ಕಾರಣಗಳುಂಟು. ಅವುಗಳಲ್ಲಿ ಕೆಲವನ್ನು ತಿಳಿಸುತ್ತೇನೆ. ಕನ್ನಡಿಗರಿಗೆ ತಮ್ಮ ಭಾಷೆಯ ಮೇಲಿರಬೇಕಾದ ಆದರಾತಿಶಯಕ್ಕೆ ಬದಲಾಗಿ ಆಸಕ್ತಿ ತೋರಿಸದಿರುವುದೇ ಪ್ರಬಲಕಾರಣವೆಂದು ಹೇಳಬಹುದು. ಅನೇಕರು ಕನ್ನಡಭಾಷೆಯನ್ನು ಮಾತನಾಡುವುದೂ ಪತ್ರಗಳನ್ನು ಬರೆಯುವುದೂ ಅವಮಾನಕರವೆಂದು ಭಾವಿಸಿದ್ದಾರೆ. ಇದಕ್ಕಿಂತಲೂ ಶೋಚನೀಯವಾದ ವಿಷಯವುಂಟೇ? ಈಗಿನ ಶಿಕ್ಷಣಪದ್ಧತಿಯೂ ಈ ಅನಾದರಕ್ಕೆ ಸಹಕಾರಿಯಾಗಿದೆ.

ಕನ್ನಡನುಡಿಯ ಏಳಿಗೆಗೆ ಉಪಾಯಗಳು.

ಪೂರ್ವದಂತೆ ಉದ್ಯಮಶೀಲರಿಗೆ ಹಸ್ತವೇಕೆಂದಾಗಲಿ ಪೂರ್ವದಂತೆ ರಾಜರೂ ಮಂಡಲಿಕರೂ ಅಧಿಕಾರಿಗಳೂ ಪ್ರೋತ್ಸಾಹಕರಾಗಬೇಕೆಂದಾಗಲಿ ಹಾರೈಸುವುದರಿಂದ ಫಲವಿಲ್ಲ. ಪ್ರಕೃತಕಾಲಕ್ಕೆ ಅನುಗುಣವಾಗಿ ಕನ್ನಡಿಗರೆಲ್ಲರೂ ಅಶ್ರದ್ಧೆಯನ್ನು ತೊಲಗಿಸಿ ಭಾಷಾಸೇವೆಯಲ್ಲಿ ನಿರತರಾಗಬೇಕು. ಪಂಡಿತರನ್ನು ಗೌರವಿಸಬೇಕು. ಕನ್ನಡನುಡಿಗಾಗಿ ಶ್ರಮಪಡುವವರಿಗೆ ಮರ್ಯಾದೆಯನ್ನು ಮಾಡಬೇಕು. ಸಾಹಿತ್ಯವನ್ನು ವೃದ್ಧಿಗೊಳಿಸುವುದಕ್ಕಾಗಿ ಶಾಸ್ತ್ರೀಯ ಗ್ರಂಥಗಳೇ ಮೊದಲಾದುವನ್ನು ಅನ್ಯಭಾಷೆಗಳಿಂದ ಪರಿವರ್ತಿಸಬೇಕು. ಕೋಶಗಳನ್ನೂ ಸಾಂಕೇತಿಕ ಶಬ್ದಗಳ ಪಟ್ಟಿಯನ್ನೂ ಏರ್ಪಡಿಸಬೇಕು. ಗ್ರಂಥಸ್ಥಭಾಷೆಗೆ ಏಕರೂಪತೆಯನ್ನು ಉಂಟುಮಾಡಬೇಕು. ವಿದ್ಯಾವಂತನಾದ ಪ್ರತಿಯೊಬ್ಬ ಕನ್ನಡಿಗನೂ ತನಗಿಂತ ವಿದ್ಯೆಯಲ್ಲಿ ಕಡಮೆಯಾದ ಕನ್ನಡಿಗರ ಉಪಯೋಗಾರ್ಥವಾಗಿ ಗ್ರಂಥ ಪರಿವರ್ತನವನ್ನು ಮಾಡುವುದು ತನ್ನ ಕರ್ತವ್ಯವೆಂದು ತಿಳಿಯಬೇಕು. ಜ್ಞಾನವೃದ್ಧಿಕರವಾದ ಪತ್ರಿಕೆಗಳನ್ನು ಹೊರಡಿಸಬೇಕು. ಭಾಷೆಯ ಏಕೀಭಾವ, ಪರಸ್ಪರ ವ್ಯಾಪ್ತಿ, ಮುದ್ರಣ ಸೌಕರ್ಯ, ಗ್ರಂಥಪ್ರಚಾರಕ್ಕೆ ಅನುಕೂಲ್ಯ ಇವುಗಳನ್ನು ಉಂಟುಮಾಡುವುದಕ್ಕಾಗಿ ಗ್ರಂಥಕರ್ತರ ಮತ್ತು ಪತ್ರಿಕಾಸಂಪಾದಕರ ಒಂದು ಸಂಘವನ್ನು ಏರ್ಪಡಿಸಬಹುದು. ಎಲ್ಲಾ ಕರ್ನಾಟಕ ಭಾಗಗಳ ವಿದ್ವಾಂಸರನ್ನೂ ಸೇರಿಸಿ ಒಂದು ಗ್ರಂಥ ಪರಿಶೀಲಕಮಂಡಲಿಯನ್ನೂ ಏರ್ಪಡಿಸಬಹುದು.

ಉಪಸಂಹಾರ

“ಭಕ್ತಶಿರೋಮಣಿಯಾದ ಕನಕದಾಸನು ಭಕ್ತಿರಸದಿಂದ ತುಂಬಿ ತುಳುಕುತ್ತಿದ್ದ ತನ್ನ ಹೃದಯದಲ್ಲಿ ಹಾಸ್ಯರಸಕ್ಕೂ ಸ್ವಲ್ಪ ಎಡೆಮಾಡಿದ್ದಂತೆ ತಿಳಿಯುತ್ತದೆ. ಅವನು ಬರೆದ ಗ್ರಂಥಗಳಲ್ಲಿ ರಾಗಿಯ ಮಹತ್ವವನ್ನು ಬೋಧಿಸುವ ರಾಮಧಾನ್ಯಚರಿತೆ ಎಂಬುದೊಂದು. ಈ ಗ್ರಂಥದಲ್ಲಿ ಕವಿ ಈ ಧಾನ್ಯಕ್ಕೆ ನರೆದಲೆಗ ಎಂಬ ಹೆಸರನ್ನು ಹೇಳಿ ಇದಕ್ಕೆ ಶ್ರೀರಾಮನು ರಾಘವ ಎಂಬ ತನ್ನ ಹೆಸರನ್ನಿಟ್ಟುದರಿಂದ ರಾಗಿ ಎಂಬ ಹೆಸರು ಪ್ರಸಿದ್ಧಿಗೆ ಬಂದಿತೆಂದು ಹೇಳಿದ್ದಾನೆ. ಹಳೆಯ ಶಾಸನಗಳಲ್ಲಿ “ಈ ಧಾನ್ಯದ ಹೆಸರು “ರಾಗಿ” ಎಂದು ತೋರುತ್ತದೆ (ಮುಳಬಾಗಿಲು ೧೩) ಈ ಹೇಳಿಕೆಗೆ ಉಪಷ್ಟಂಭಕವಾಗಿದೆ. ಈ ಗ್ರಂಥದಲ್ಲಿ ರಾಗಿಗೂ ಬ್ರೀಹಿ(ಭತ್ತ)ಕ್ಕೂ ಸಂವಾದರೂಪವಾದ ಈ ಪದ್ಯಗಳು ದೊರೆಯುತ್ತವೆ.

ವ್ರೀಹಿಯ ಮಾತು.

ಕ್ಷಿತಿಯಮರರ್ಭುಜಿಯಿಸಲವರಿಂ ಸು |
ವ್ರತಸುಭೋಜನಗಳಲಿ ಮುಂಪ್ಪ |
ಕ್ರತುಗಳಲಿ ಶುಭಶೋಭನಕಾರ್ಯದಿ ಬೆಳಗುತಿಹೆಂ ||
ಕ್ರತುಗಳೆಡೆಯೊಳಗಮರನಿಕರ |
ಪ್ರತಿದಿನವು ಕಂಡಿಸುತ ದೇವರಿ |
ಗತಿಶಯದ ನೈವೇದ್ಯವಾಗಿಹೆನೆಂದನಾ ವ್ರೀಹಿ ||
ಜನಪರಿಗೆ ಶಿಶುಗಳಿಗೆ ಬಾಂಧವ |
ಜನರೆಡೆಗೆ ಬ್ರಾಹ್ಮಣರ ಸವಾಸಿ |
ಧನಿಗೆ ವಿದ್ಯಾರಂಭಕಲಿಸುವ ಸಕಲಭೋಗದೆ ||
ವ್ರತಗಳೊಳು ದರಿದವಸದಾ |
ಸನೆಗಳೊಳು ತಾಯೋಗ್ಯನೆನಿಪೆಂ |
ದೆನಿಸಿಕೊಂಬೆನು ತಾವಯೋಗ್ಯನ ವೃತ್ತಗಳಿಗೊಂದೆ ||

ರಾಗಿಯ ಮಾತು.

ಸಜ್ಜನರ ಒಡವೆರನು ಕೇಳ್ |
ಸ್ನೇಹಿತರೊಡೆ ಧನಾಢ್ಯರನಾಟಂ |
ಚಿತ್ತದೆವಿಯೊಳಿಕ್ಕೆ ನಿನ್ನಯ ಹೇಳಲೇನದರ ||
ಹೆತ್ತಬಾಣತಿಯರಿಗೆ ರೋಗಿಗೆ |
ಪಥ್ಯವೆನಿಸಿ ಹೊಡೆದುವೆಯಾಗಿ |
ತುತ್ತುನೀಗಿದೆ ನಿನ್ನ ಜನ್ಮ ನಿರರ್ಥಕರವೆಂದ ||
ಸತ್ಯರರ ಪ್ರತಿಬಿಂಬರೂಪರನು |
ವಿಸ್ತರಿಸಿ ಪಕ್ಷಿನಾಮಗಳ ತಿನ |
ಗಿಸ್ತು ಮೂವರ ಬೆಸನಿನಲಿ ಕೆರೆಕರೆದ ದರ್ಪಯಲಿ ||
ನೆತ್ತಿನೆತ್ತಿಯ ಬಡಿದು ಕಡೆಯಲಿ |
ತುತ್ತಿಸುವರು ಶಿಶುಗಳಿಗೆ ನೀ |
ನೆತ್ತಿದೆಯಲಾ ತನವ ಸುಡಬೇಕೆಂದ ನರದಲೆಗ ||

ನಿರ್ದೋಷವಾಗಿಯೂ ನಿಗೂಢವಾಗಿಯೂ ಇರುವ ವಸ್ತುಗಳು ಪ್ರಪಂಚದಲ್ಲಿಲ್ಲ. ಆದುದರಿಂದ ಮೇಲಣ ಪದ್ಯಗಳಲ್ಲಿ ಹೇಳಿರುವಂತೆ ಭಿನ್ನಪ್ರಾಂತಗಳ ಕನ್ನಡಿಗರು ನಾನು ಹೆಚ್ಚು ತಾನು ಹೆಚ್ಚು ಎಂಬ ಮತ್ಸರದಿಂದ ಹೋರಾಡಿ ಅಲ್ಪಸ್ವಲ್ಪವಾದ ವ್ಯತ್ಯಾಸಗಳನ್ನು ಹೆಚ್ಚಿಸಿ ಕನ್ನಡನುಡಿಯ ಏಳಿಗೆಗೆ ಕುಂದಕವನ್ನು ಉಂಟುಮಾಡಕೂಡದೆಂಬುದು ನನ್ನ ಪ್ರಾರ್ಥನೆ. ಅಲ್ಪಸ್ವಲ್ಪವಾದ ಅಭಿಪ್ರಾಯ ಭೇದಗಳಿದ್ದರೂ ಅವುಗಳನ್ನೆಲ್ಲಾ ಒತ್ತಟ್ಟಿಗಿಟ್ಟು ಎಲ್ಲರೂ ಪರಸ್ಪರ ಪ್ರೀತಿಯಿಂದಲೂ ಐಕಮತ್ಯದಿಂದಲೂ ಭಾಷಾಸೇವೆಯನ್ನು ಉತ್ಸಾಹದೊಡನೆ ಮಾಡಬೇಕಾದುದು ಅತ್ಯವಶ್ಯಕ. ಇದೂ ಅಲ್ಲದೆ 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂದು ಕೃಷ್ಣಪರಮಾತ್ಮನು ಅರ್ಜುನನಿಗೆ ಮಾಡಿದ ಉಪದೇಶಕ್ಕೆ ಅನುಸಾರವಾಗಿ ಫಲಾಭಿಸಂಧಿಯಿಲ್ಲದೆ ಕರ್ತವ್ಯಬುದ್ಧಿಯಿಂದ ಕನ್ನಡ ಮಾತೆಯ ಮಕ್ಕಳಾದ ನಾವೆಲ್ಲರೂ ಏಕೀಭವಿಸಿ ಪ್ರಯತ್ನಮಾಡಿದರೆ ಕನ್ನಡನಾಡಿನ ಮತ್ತು ಕನ್ನಡನುಡಿಯ ಉನ್ನತಿ ಶೀಘ್ರದಲ್ಲಿಯೇ ಲಭಿಸುವುದರಲ್ಲಿ ಯಾವ ಸಂದೇಹವೂ ಇಲ್ಲ.”

NOTICE.

ದಕ್ಷಿಣ ಕನ್ನಡಾಡಿಸ್ಟ್ರಿಕ್ಟ್ ಕೋರ್ಟಿನಲ್ಲಿ
O. P. ನಂಬ್ರ 40/1918

In the matter of the appointments of guardian of the person and property of the minor Subraya Hebbara

ಮಲ್ಲಿಗೆ ಕೃಷ್ಣಯ್ಯ ಗೋವಿಂದಯ್ಯನವರ ಮಗ ಉಪ್ಪಿನಂಗಡಿ ತಾಲೂಕು ಪೊಕರ್ಲ ಮಾಗಣೆ ನಿಡ್ಲೆ ಗ್ರಾಮದಲ್ಲಿ ಇರುವವ. } ಅರ್ಜಿದಾರ.

ಸದರಿ ಅರ್ಜಿದಾರನು ತನ್ನನ್ನು ಸದ್ರಿ ಮೈನರನ ಸ್ವಾಸ್ತಿಗಳ ವ ಆತನ ದೇಹದ ಗಾರ್ಡಿಯನನಾಗಿ ನೇಮಿಸಬೇಕಾಗಿ ಮೇಲೆ ಕಂಡ ಕೋರ್ಟಿನಲ್ಲಿ ಸದ್ರಿ ಅರ್ಜಿಯನ್ನು ದಾಖಲು ಮಾಡಿರುವದರಿಂದ ಸದರಿ ಅರ್ಜಿಯ ತನಿಖೆಯು ಇದೇ ತಿಂಗಳ ತಾರೀಕು 27ನೇ ಗುರುವಾರ ದಿವಸ ನಿಶ್ಚಯಿಸಿರುವದರಿಂದ ಸದರಿ ಅರ್ಜಿಯನ್ನು ಆಕ್ಷೇಪಿಸುವವರು ತಮ್ಮ ಆಕ್ಷೇಪಗಳನ್ನು ಸದರಿ ತಾರೀಕು ಹಾಜರುಪಡಿಸತಕ್ಕದ್ದು.

ತಾರೀಕು 10-6-1918.

N. Ganapathi Rau.
Vakil for Petitioner.

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದವುಗಳು.
ಅಜ್ಜಿ ಕಥೆಗಳು:
ಮೂರು ಕರಡಿಗಳು.
ಹೇನುಸತ್ತು ಕಾಗೆ ಬಡವಾಯಿತು.
ಮೆಣಸಿನ ಕಾಳನ್ನು...

ಅಗರ್ಣಿ ಮುದ್ದೆ.
ಇಲಿಗಳ ಥಕ್ಕೆ ಥೈ
ಅಕ್ಷರಮಾಲಿಕೆಯನ್ನು ಕಲಿಸುವುದರಲ್ಲಿ ಸಹಕಾರಿಯಾಗಿದೆ. [illegible] ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ [illegible] ಪ್ರಾಯದಿಂದಲೇ ಕ್ರಮವಾಗಿ ಬೋಧಿಸುವದೇ [illegible] ಕಥೆಗಳನ್ನು [illegible]

ಫಿನೇನ್ಷಿಯಲ್ ಇಲಾಖೆ.

ಪ್ರಕಟಣೆ.

1250-F ಸಿಮ್ಲಾ, ತಾರೀಖು 11ನೇ ಮೇ 1918ನೇ ಇಸವಿ

ಯುದ್ಧದಬಗ್ಗೆ ಇಂಡಿಯದಿಂದ ಎತ್ತಲ್ಪಡುವ ಎರಡನೆಯ ಸಾಲವು

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವಬಗ್ಗಾಗಿ ಇಂಡಿಯಾ ದೇಶವು ಕೊಡುವ ಸಹಾಯಾರ್ಥವಾದ 100 ಮಿಲಿಯ ಪವನುಗಳ ಭಾಗವಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವುವು.

ಈ ಕೆಳಗಿನ ಸಾಲಪತ್ರಗಳು ಸಾದರುಮಾಡೋಣಾಗುವವು.

1921ನೇ ಇಸವಿಯು, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ, ವಾರ್ ಬಾಂಡುಗಳೆಂಬ ಸಾಲಪತ್ರಗಳು

ಸೇಕಡಾ 100ರ ಪ್ರಕಾರ 1921ನೇ ಇಸವಿ ಸಪ್ಟೆಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು

1923ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್ ಬಾಂಡುಗಳು

ಸೇಕಡಾ 100ರ ಪ್ರಕಾರ 1923ನೇ ಇಸವಿ ಸಪ್ಟೆಂಬರು 15ನೇ ತಾರೀಕಿನಲ್ಲಿ ಮರು ಪಾವತಿಯಾಗತಕ್ಕವು

1925ನೇ ಇಸವಿಯ, ಸೇಕಡಾ 5½ ದರದ ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್ ಬಾಂಡುಗಳು

ಸೇಕಡಾ 103ರ ಪ್ರಕಾರ 1925ನೇ ಇಸವಿ ಸಪ್ಟೆಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು

1928ನೇ ಇಸವಿಯ, ಸೇಕಡಾ 5½ ದರದ ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್ ಬಾಂಡುಗಳು

ಸೇಕಡಾ 105ರ ಪ್ರಕಾರ 1928ನೇ ಇಸವಿ ಸಪ್ಟೆಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು

ಮತ್ತು

ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು ಇನ್ಕಮ್‌ಟಾಕ್ಸ್ ಮಾಫಿ

ಅಸಲ್ ವ ಬಡ್ಡಿಯ ಬಗ್ಗೆ ಇಂಡಿಯಾ ಗವರ್ನಮೆಂಟಿನವರ ಸ್ವತ್ತುಗಳ ಮತ್ತು ಕಂದಾಯಗಳ ಜವಾಬ್ದಾರಿ ಇರುವುದು

1921, 1923, 1925 ವ 1928ನೇ ಇಸವಿಯಲ್ಲಿ ಸಂದಾಯವಾಗತಕ್ಕ ವಾರ್ ಬಾಂಡುಗಳ ಸಾದರ ಮಾಡುವ ಬೆಲೆ ದರಖಾಸ್ತು ಮಾಡಿದ ಪ್ರತಿ 100 ರೂಪಾಯಿಗಳ ಬಗ್ಗೆ ರೂ 100

ಬಡ್ಡಿ—ವರ್ಷ ಒಂದರ ಸೇಕಡಾ 5½ಯ ಮೇರೆಗೆ ಮಾರ್ಚ 15ನೇ ತಾರೀಕಿನಲ್ಲಿ ಮತ್ತು ಸಪ್ಟೆಂಬರು 15ನೇ ತಾರೀಕಿನಲ್ಲಿ ಪಾವತಿಯಾಗುವುದು

ಬಾಂಡುಗಳನ್ನು ಕೊಂಡುಕೊಳ್ಳುವ ಕಾಲದಲ್ಲಿ ಕೊಂಡುಕೊಂಡ ತಾರೀಕಿನಿಂದ 1918ನೇ ಇಸವಿ ಸಪ್ಟೆಂಬರು 14ನೇ ತಾರೀಕಿನ ವರೆಗಿನ ಬಡ್ಡಿಯು ಮುಂಗಡವಾಗಿ ಪಾವತಿಮಾಡಲ್ಪಡುವುದು

1918ನೇ ಇಸವಿಯ ಸಪ್ಟೆಂಬರು 14ನೇ ತಾರೀಕಿನ ನಂತರ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳೋಣಾದ ಬಾಂಡುಗಳ ಸಂಗತಿಯಲ್ಲಿ ಕೊಂಡ ಕೊಂಡ ತಾರೀಕಿನಿಂದ 1919ನೇ ಇಸವಿಯ ಮಾರ್ಚಿ 14ನೇ ತಾರೀಕಿನ ವರೆಗಿನ ಬಡ್ಡಿಯು ಮುಂಗಡವಾಗಿ ಕೊಡಲ್ಪಡುವದು

ವಿಶೇಷ ಹಕ್ಕುಗಳು—1921 1923 1925 ವ 1928ನೇ ಇಸವಿಯ ವಾರ್ ಬಾಂಡುಗಳು, ಅವು ಚಲಾವಣೆಯಲ್ಲಿರುವ ಕಾಲದಲ್ಲಿ ಇನ್ನು ಮುಂದೆ ಇಂಡಿಯಾ ಗವರ್ನಮೆಂಟಿನವರು ಸಾದರ ಮಾಡುವ ಯಾವದಾದರೂ ದೀರ್ಘಕಾಲದ ಸಾಲಕ್ಕೆ ಚಂದಾ ಹಾಕುವ ಉದ್ದೇಶದ ಬಗ್ಗೆ ಅಂಥ ಸಾಲಕ್ಕೆ ಯಾವ ದರದಲ್ಲಿ ಬಡ್ಡಿ ಕೊಡುವುದಾದರೂ ಸರಿಯೇ ರೊಕ್ಕಕ್ಕೆ ಸಮಾನವಾಗಿ ನೂರಕ್ಕೆ ನೂರರಂತೆ ಸ್ವೀಕರಿಸಲ್ಪಡುವುವು

1921 1923 1925 ವ 1928ನೇ ಇಸವಿಯ ವಾರ್ ಬಾಂಡುಗಳ ಮೇಲಿನ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿತಿ ಹೊಂದಿದುದು ... ಆದರೆ ಇತರ ಆದಾಯದ ಮೇಲೆ ಹೊಂದಿಸಲ್ಪಡುವ ತೆರಿಗೆ ... ದವನ್ನು ... ವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲ್ಪಡುವ ... ಟಾಕ್ಸಿಗೆ ಗುರಿಪಡುವುವು.

ಸೆಕ್ಯೂರಿಟಿ ಪತ್ರಗಳ ನಮೂನೆ—... ಇನ್ಸ್‌ಕ್ರಾಯಿಬ್ಡ್ (ಹೆಸರು ರಿಜಿಸ್ಟ್ರಿಮಾಡಿರುವ) ಸ್ಟಾಕ್ ಸರ್ಟಿಫಿಕೇಟುಗಳ ಅಥವಾ (b) ಪ್ರಾಮಿಸರಿ ನೋಟುಗಳ ನಮೂನೆಯಲ್ಲಿ ಕೊಡಲ್ಪಡುವವು ಇವುಗಳ ತದನಂತರ ಅಪೇಕ್ಷಿಸಿದುದಾದರೆ, ಬ್ಯಾರರ್ ಬಾಂಡುಗಳಬಗ್ಗೆ ಅವು ಸಿಕ್ಕುವಲ್ಲಿ, ಖರ್ಚು ಇಲ್ಲದೇನೇ ಬದಲಾಯಿಸಲ್ಪಡುವುವು

ಯಾವ ನಮೂನೆಯಲ್ಲಿ ಸಿಕ್ಕಿದರೆ ಉತ್ತಮವೆಂದು ಕೊಂಡುಕೊಳ್ಳುವವನ ಸೂಚಿಸದಿದ್ದಪಕ್ಷದಲ್ಲಿ ವಾರ್‌ಬಾಂಡುಗಳು ಇನ್ಸ್‌ಕ್ರಾಯಿಬ್ಡ್ ಸ್ಟಾಕ್ ಸರ್ಟಿಫಿಕೇಟಿನ ರೂಪವಾಗಿ ಸಾದರುಮಾಡಲ್ಪಡುವವು

ಪ್ರಾಮಿಸರಿ ನೋಟುಗಳು, ಕಾಲವಿಳಂಬವನ್ನು ತಪ್ಪಿಸುವುದಕ್ಕಾಗಿ, ಪ್ರಥಮತಃ ಸಾಧ್ಯವಿರುವಮಟ್ಟಿಗೆ ಆದಷ್ಟು ಕಡಿಮೆ ಬೇರೆ ಬೇರೆ ಪತ್ರಗಳಾಗಿ ಕೊಡಲ್ಪಡುವುವು, ಆದರೆ, ಕ್ರಮೇಣ ಏನೂ ಖರ್ಚು ಹೊರಿಸಲ್ಪಡದೆನೇ ಯಾವ ತರಗತಿಯವುಗಳು ಬೇಕೆಂದು ಅಪೇಕ್ಷಿಸಲ್ಪಡುತ್ತದೋ ಆ ತರಗತಿಯವುಗಳ ಬಗ್ಗೆ ಬದಲಾಯಿಸಲ್ಪಡಬಹುದು ದರಖಾಸ್ತು ಮಾಡಿದ ಮೊಬಲಗಿನ ಬಗ್ಗೆ ಒಂದೇ ಸ್ಟಾಕ್ ಸರ್ಟಿಫಿಕೇಟು ಕೊಡಲ್ಪಡುವುದು

1 ಬ್ಯಾಂಕುಗಳಲ್ಲಿ ಮತ್ತು ಗವರ್ನಮೆಂಟ್ ಆಫೀಸುಗಳಲ್ಲಿ ಪ್ರಾಮಿಸರಿ ನೋಟುಗಳ ರೂಪವಾಗಿ ಬಾಂಡುಗಳನ್ನು ಕೊಂಡುಕೊಳ್ಳೋಣ

100 ರೂಪಾಯಿಗಳ—ಯಾ—ಅದರ ಅಪವರ್ತ್ಯಗಳ (ಎಂದರೆ, ರೂ, 100, 200 300 ಈ ಮೇರೆಗಿನ ತರಗತಿಗಳಲ್ಲಿ ಪ್ರಾಮಿಸರಿ ನೋಟುಗಳ ರೂಪವಾಗಿ ವಾರ್ ಬಾಂಡುಗಳನ್ನು 1918ನೇ ಇಸವಿಯ ಜೂನ್ 3ನೇ ತಾರೀಖಿನಿಂದ 1918ನೇ ಇಸವಿಯ ಸಪ್ಟೆಂಬರು 14ನೇ ತಾರೀಖಿನ ವರೆಗೆ, ಸಲಬೇಕಾದ ಮೊಬಲಗನ್ನು ಪಾವತಿಮಾಡಿದ್ದಲ್ಲಿ

(a) ಕ್ರಮವಾಗಿ ಅರ್ಜಿಕೊಡದೇನೇ, ಬಂಗಾಳ, ಬೊಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಹೆಡ್ ಆಫೀಸುಗಳಲ್ಲಿ, ಅಥವಾ ಅವುಗಳ ಯಾವದಾದರೂ ಇಂಡಿಯದಲ್ಲಿರುವ ಶಾಖೆಯಲ್ಲಿ; ಮತ್ತು

(b) ಅರ್ಜಿಯನ್ನು ಮಾಡಲಾಗಿ, ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಆಫೀಸಿನಲ್ಲಿ, ಅಥವಾ ಯಾವನಾದರೂ ಅಕೌಂಟಾಂಟ್ ಜನರಲ್‌ರ—ಯಾ—ಕಂಟ್ರೋಲರರ ಆಫೀಸಿನಲ್ಲಿ, ಅಥವಾ ಯಾವದಾದರೂ ಗವರ್ನಮೆಂಟ್ ಟ್ರೆಜರಿ—ಯಾ—ಸಬ್ ಟ್ರೆಜರಿಯಲ್ಲಿ, ಕೊಂಡುಕೊಳ್ಳಬಹುದು

೨ ಅನಂತರ (೧) ರಾಜನಿಷ್ಠೆ ಮತ್ತು (೨) ಬಾದಶಹರ ಸಂದೇಶವನ್ನು ಸ್ವೀಕರಿಸುವಂತೆ ಮುಂಬಯಿ ಪ್ರಾಂತದೊಳಗಿನ ಮನುಷ್ಯಬಲ, ದ್ರವ್ಯಬಲ, ಮತ್ತು ಸಾಧನಬಲಗಳನ್ನು ಸಂಗ್ರಹಿಸಲು ಮಾಡಬೇಕಾದ ವ್ಯವಸ್ಥೆ ಈ ಎರಡು ಸಂಗತಿಗಳನ್ನು ಒಳಕೊಂಡ ಠರಾವು ಪರಿಷತ್ತಿನ ಮುಂದೆ ಬಂತು. ಈ ಠರಾವನ್ನು ಕೆಲವು ಸಂಸ್ಥಾನಿಕರು, ಸರಕಾರಿ ಪದವಿ ಪಡೆಯುವವರು ಹಾಗು ಕೆಲವು ಖಾಸಗಿ ವ್ಯಕ್ತಿಗಳು ಅನುಮೋದಿಸಿದ ಮೇಲೆ ಲೋಕಮಾನ್ಯ ತಿಲಕರನ್ನು ಭಾಷಣಕ್ಕಾಗಿ ಕರೆದರು. ಲೋಕಮಾನ್ಯ ತಿಲಕರು ಠರಾವಿನೊಳಗಿನ ಪೂರ್ವಾರ್ಧವನ್ನು ಎಂದರೆ ರಾಜನಿಷ್ಠೆಯ ಭಾಗವನ್ನು ಮನಃಪೂರ್ವಕವಾಗಿ ಸಮ್ಮತಿಸಿ ಸೈನ್ಯಭರತಿಯ ಕ್ರಮ ಮತ್ತು ದ್ರವ್ಯಸಂಗ್ರಹ ಇವುಗಳ ವಿಷಯದಲ್ಲಿ ಒಂದು ಉಪಸೂಚನೆಯನ್ನು ತರುವವರಿದ್ದರು. ಆದರೆ ಚೆಯರ್ಮನರ (ಅಧ್ಯಕ್ಷರಾದ ಗವರ್ನರರ) ಅಪೇಕ್ಷೆಯ ಪ್ರಕಾರ ಉಪಸೂಚನೆಯ ಆಗ್ರಹವನ್ನು ಬಿಟ್ಟು ಕೆಲವು ಸೂಚನೆಗಳನ್ನು ಕೊಡಲು ತಿಲಕರು ಉಪಕ್ರಮಿಸಿ "ಸಾಮ್ರಾಜ್ಯ ದೇಶದ ಸಂರಕ್ಷಣ ಮತ್ತು ಸ್ವರಾಜ್ಯ ಇವೆರಡು ಒಟ್ಟಿಗೆ ಇರಬೇಕು" ಎಂದು ಯಾವಾಗ ಹೇಳಲಾರಂಭಿಸಿದರೋ ಆಗ ಪುನಃ ಚೆಯರ್ಮನರು ರಾಜಕೀಯ ವಿಷಯದ ಸಂಬಂಧವನ್ನು ಹೇಳಕೂಡದೆಂದು ಕಟ್ಟಪ್ಪಣೆಯನ್ನು ಕೊಟ್ಟರು. ಅರ್ಥಾತ್ ಶ್ರೀ ತಿಲಕರಿಗೆ ತಮ್ಮ ಭಾಷಣವನ್ನು ಅರ್ಧದಲ್ಲಿ ನಿಲ್ಲಿಸಿ "ಅಧ್ಯಕ್ಷರ ಸ್ವಹಸ್ತದಿಂದ ಇಂಥ ಸಂದರ್ಭದಲ್ಲಿ ಇಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ" ಎಂದುಹೇಳಿ ಸಭಾಸದನವನ್ನು ಬಿಡಬೇಕಾಗಿ ಬಂತು. ಅವರ ಹಸ್ತಕರಾದ ಶ್ರೀ ನರಸಿಂಹ ಚಿಂತಾಮಣಿ ಕೇಳಕರರು ಕೂಡ ಇದೆ ರೀತಿಯಿಂದ ಅರ್ಧ ಭಾಷಣದಲ್ಲಿ ಸಭಾಸ್ಥಾನವನ್ನು ಬಿಟ್ಟುಹೋದರು. ಮಾತ್ರವಲ್ಲ, ಕೂಡಲೆ ಮಿಸೆಸ್ ಬೆಝಂಟ್, ಹಾರ್ನಿಮನ್, ಜಮುನಾದಾಸ್ ದ್ವಾರಕಾದಾಸ್ ಈ ಹೋಮ್‌ರೂಲರುಗಳು ಸಹ ಹೊರಟುಹೋದರು.

೩. ತಥಾಪಿ ಹೋಮ್‌ರೂಲರುಗಳ [illegible] ಗವರ್ನರರು ತಕ್ಕಷ್ಟು [illegible] [illegible]

...ವಿರೆ. ಅವರನ್ನು ದೂಷಿಸುವಿರಿ ಸೈನ್ಯಭರತಿ ಮುಂತಾದ ವಿಷಯದಲ್ಲಿ ನಿಮ್ಮ ಮಾರ್ಗವನ್ನೆ ನಾವು ಅವಲಂಬಿಸಬೇಕು ಆದರಲ್ಲಿ ಯಾರ, ಯಾವ ತರದ ಸೂಚನೆಗಳು, ಸುಧಾರಣೆಗಳು ಇರಕೂಡದು ಎಂದು ಅಧಿಕಾರಿಗಳು— ನೀವು— ಅಭಿಪ್ರಾಯಪಡುವಿರಿ ನಾವು ಹೋಮ್‌ರೂಲಿನ ಪ್ರಸ್ತಾಪವನ್ನು ಎತ್ತಿದ ಕೂಡಲೆ ಅದಕ್ಕೆ ಕರಾರಿನ ಶರ್ತಗಳನ್ನು ಹೇಳುವದೆಂದು ಹೆಸರು ಕೊಡುತ್ತೀರಿ. ಆದರೆ ಈ ಮಹಾ ಯುದ್ಧದಲ್ಲಿ ಕರಾರಿನ ಶರ್ತಗಳಿಂದ ಸಹಾಯ್ಯ ಮಾಡಕೂಡದೆಂಬುದು ನಿಜ ಪರಂತು ಸೈನ್ಯದಲ್ಲಿ ಉತ್ಸಾಹದಿಂದ ಸೇರಬೇಕಾದ ತರುಣರು ಈ ಎಲ್ಲ ವೇದಾಂತತತ್ವವನ್ನು ವಿಚಾರಮಾಡಬಲ್ಲರೆ? ಅಥವಾ ತಮ್ಮ ಮಾತೃದೇಶದ ಸ್ವಾಯತ್ತತೆಯನ್ನು ನೋಡುವರೆ? ಈ ಸಂಗತಿಗಳನ್ನು ಅಧಿಕಾರಿಗಳು ಆಲೋಚಿಸಿ ನೋಡಬೇಕಲ್ಲವೆ? ಇದೆ ಹೋಮ್‌ರೂಲರುಗಳ ಅಂಬೋಣವು ಅದನ್ನು ವಿಪರ್ಯಾಸಗೊಳಿಸುವದು ಚಂದವಲ್ಲ ಗವರ್ನರ ದೊರೆಗಳ ಭಾಷಣವನ್ನು ಎಂದರೆ ಹೋಮ್ ರೂಲರುಗಳ ಮೇಲೆ ತೆಕ್ಕೊಂಡ ಅರಾಜನಿಷ್ಠೆಯ ಆರೋಪವನ್ನು ತೀವ್ರವಾಗಿ ನಿವೇದಿಸುವದು ನನ್ನ ಕರ್ತವ್ಯವಾಗಿದೆ" ಎಂದು ನಾಮದಾರ ಜೇನರು ಸ್ಪಷ್ಟವಾಗಿ ಅಂದರು. ಶ್ರೀ ಕರಂದೀಕರರು ಕೂಡ ಇದೆ ಕ್ರಮವನ್ನು ಅನುಸರಿಸಿದರು ಕೊನೆಗೆ ಲೊರ್ಡ ವಿಲಿಂಗ್ಡನರು ಹೋಮ್‌ರೂಲರುಗಳ ಮೇಲೆ ತಾನು ಆರೋಪಣೆಯನ್ನು ತೆಕ್ಕೊಂಡಿದ್ದಿಲ್ಲವೆಂದ ಯಾವಾಗ ಹೇಳಲಾರಂಭಿಸಿದರೊ ಆಗ ನಾಮದಾರ ಜೇನರು ಅವರ ಭಾಷಣದ ವಿವಕ್ಷಿತ ಭಾಗವನ್ನು ಓದಲು ಪ್ರಭುಗಳಿಗೆ ಸೂಚಿಸಿದರು. ಅವರು ಓದಲಾರಂಭಿಸಿದ ಕೂಡಲೆ ಇದರ ಅರ್ಥವೇನೆಂದು ನಾಮದಾರ ಜೇನರು ಕೇಳುತ್ತಾರೆ ಆಗ ಮಧ್ಯದಲ್ಲ ಬಹುಮಾನಪಟ್ಟ ಕಾರ್ಯಕರ್ತರು ನಾಮದಾರ ಜೇನರನ್ನು ಮುಂದೆ ಮಾತಾಡಲು ಬಿಡಲಿಲ್ಲ! ಹೀಗಾಗಿ ಈ ಯುದ್ಧ ಪರಿಷತ್ತು ಅಧಿಕಾರಿಗಳು ನೆನಸಿದ್ದಷ್ಟು ನಿರ್ವಿಘ್ನವಾಗಿ ಮುಗಿಯಲಿಲ್ಲ ಇದೇನೊ ನಿಜ

೪ ಮುಂಬಯಿಯ ಯುದ್ಧಪರಿಷತ್ತಿನ ಮುಖ್ಯ ವಿಷಯವು ಮೇಲೆ ಹೇಳಿದಂತಾಯಿತು ಇದಕ್ಕೆ ಸಂಬಂಧಪಟ್ಟ ಅವಾಂತರ ವಿಷಯವು ಯಾವದೆಂದರೆ ಯುದ್ಧಸಾಲವನ್ನು ಎತ್ತುವದಕ್ಕಾಗಿ ಮುಂಬಯಿಯ ನಾಗರಿಕರ ಒಂದು ಮಹಾ ಸಭೆಯು ಅಲ್ಲಿಯ ಶೆರಿಫರ ಕರೆಯಿಂದ ಜರಗಿತು ಈ ಸಭೆಯನ್ನು ಆಮಂತ್ರಿಸುವವರಲ್ಲಿ ಮುಖ್ಯ ಮುಖ್ಯ ಪ್ರಭೃತಿಗಳ ಹೆಸರುಗಳು [illegible] ಈ ಸಂದರ್ಭದಲ್ಲಿ [illegible] ಜಮನಾದಾಸ ದ್ವಾರಕಾದಾಸ ಎಸ್ [illegible] ಹೊರ್ನಿಮನ್ ಮತ್ತು ಉಮರಸೋಬನಿ ಈ ೪ ಗೃಹಸ್ಥರ [illegible] ಪಟ್ಟಿಯೊಳಗಿನ ತಮ್ಮ ಹೆಸರುಗಳನ್ನು ಹಿಂತೆಗೆದಿದ್ದಾರೆ ಈ ಗೃಹಸ್ಥರು ಮುಂಬಯಿಯ ಶೆರಿಫರಿಗೆ ಬರೆದೇನೆಂದರೆ—"ಸಭೆಯ ಉದ್ದೇಶದ ವಿಷಯದಲ್ಲಿ ನಮ್ಮ ಸಂಪೂರ್ಣ ಸಹಾನುಭೂತಿ ಇದೆ ಆದರೆ ಯಾವ ಸಭೆಯಲ್ಲಿ ಲೋರ್ಡ ವಿಲಿಂಗ್ಡನರ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರೊ ಆ ಸಭೆಗೆ [illegible] ಯುದ್ಧಪರಿಷತ್ತಿನಲ್ಲಿ ಅಕಸ್ಮಾತ್ತಾಗಿ ಹೋಮ್‌ರೂಲರುಗಳ ಮೇಲೆ ಆರೋಪಿಸಿದ ಆರೋಪಗಳನ್ನು ಹಿಂದಕ್ಕೆ ತೆಕ್ಕೊಂಡ [illegible] ಪಶ್ಚಾತ್ತಾಪವನ್ನು ವ್ಯಕ್ತಗೊಳಿಸುವವರೆಗೆ ನಮಗೆ [illegible] ಅಲ್ಲದೆ ಇದೆ ಗೃಹಸ್ಥರು ಮುಂಬಯಿಯ ಯುದ್ಧಸಾಲದ ಜನರಲ್ ಕಮಿಟಿಯಲ್ಲಿ ತಮ್ಮ ಹೆಸರುಗಳನ್ನು ಸೇರಿಸಕೂಡದೆಂದು ಯುದ್ಧಸಾಲ ಕಮಿಟಿಯ ಕಾರ್ಯಕಾರಿ ಮಂಡಲದ ಕಾರ್ಯದರ್ಶಿ [illegible] ತಿಳಿಸಿದ್ದಾರೆ ಜನರ ಸಂಪೂರ್ಣ ಮದತ ಬೇಕಾಗಿರುವ ಇಂಥ ಸಮಯದಲ್ಲಿ ಅವರ ಮನಸ್ಸಿನಲ್ಲಿ ಬೇಸರ ಹುಟ್ಟುವಂತೆ ವರ್ತಿಸುವ [illegible] ಅಧಿಕಾರಿಗಳ ಜಾಣತನದ ಲಕ್ಷಣವಲ್ಲ

೫ ದಕ್ಷಿಣ ಹಿಂದೂಸ್ಥಾನದ ಪ್ರಜಾಸಂಘದ ಮುಖಂಡರಾದ ಸರ್ ಸುಬ್ರಮಣ್ಯ ಅಯ್ಯರರು ಕಳೆದ ವರ್ಷ ಎನಿಬೆಸೆಂಟ ಪ್ರಭೃತಿಗಳಿಗೆ ಪ್ರತಿಬಂಧ ಉಂಟಾದಾಗ ಇಲ್ಲಿಯ ದೇಶಸ್ಥಿತಿಯನ್ನು ಕುರಿತು ಅಮೇರಿಕದ ಪ್ರೆ. ವಿಲ್‌ಸನ್ ಈ ಸ್ವಾತಂತ್ರ್ಯಪ್ರಿಯ ಸದ್‌ಗೃಹಸ್ಥರಿಗೆ ಒಂದು ಪತ್ರವನ್ನು ಬರೆದಿದ್ದರಷ್ಟೆ ಆ ಪತ್ರದ ಸಾರಾಂಶ ಮತ್ತು ಅದರ ವಿಷಯದ ಬೇರೆ ಆವಶ್ಯಕ ಮಾಹಿತಿಯನ್ನು ಹಿಂದೆ ಒಂದೆರಡು ಸಾರೆ ವಾಚಕರ ಮುಂದೆ ಇಟ್ಟಿದ್ದೇವೆ ಮಧ್ಯದಲ್ಲಿ ಸರ್ ಸುಬ್ರಮಣ್ಯ ಅಯ್ಯರರಿಗೆ ಮದ್ರಾಸ್ ಸರಕಾರದ ಸೆಕ್ರೆಟರಿಯವರ ಕಡೆಯಿಂದ ಒಂದು ಕಾಗದವು ಬಂದು ಅದರಲ್ಲಿ ಈ ಪತ್ರದ ವಿಷಯವಾಗಿ ಮುಂದರಿಸುವದು ಸರಕಾರದ ಆಲೋಚನೆ ಇಲ್ಲ ಎಂದು ಹೇಳಿದ್ದಿತ್ತು ಆದರೆ ಈಗ ಪುನಃ ಇಂಗ್ಲಂಡಿನ ಪಾರ್ಲಿಮೆಂಟಿನಲ್ಲಿ ನಡೆದ ಪ್ರಶ್ನೋತ್ತರಗಳನ್ನು ನೋಡುವಾಗ ಈ ವಿಷಯವು ತಿರಿಗಿ ಅಂಕುರಿಸಿದೆ ಅಥವಾ ಅಂಕುರಿಸುತ್ತದೆ ಎಂದು ತೋರುತ್ತದೆ ಯಾರೊ ಇಬ್ಬರು ಪಾರ್ಲಿಮೆಂಟಿನ ಸಭಾಸದರು ಸರ್ ಸುಬ್ರಹ್ಮಣ್ಯರ ಪತ್ರದ ಕುರಿತು ಮಾಡಿದ ಪ್ರಶ್ನೆಕ್ಕೆ ಉತ್ತರ ಕೊಡುವಾಗ ಭಾರತ ಮಂತ್ರಿಗಳಾದ ಮಿ. ಮೊಂಟೆಗ್ಯುಗಳು ಈ ಅಯೋಗ್ಯ ಮತ್ತು ನಿಂದ್ಯ ಪತ್ರದ ಲೇಖಕರ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದರೆ ಹಾಗೆ ಬರೆಯುವದು ಅಕ್ಷಮ್ಯವೆಂದು ಹೇಳಬೇಕಾಗುತ್ತದೆ ಅಲ್ಲದೆ ಈ ಪತ್ರದಲ್ಲಿ ಇರುವ ಸಂಗತಿಗಳು ನಿರಾಧಾರವಿದವು. ಈ ವಿಷಯದಲ್ಲಿ ವೈಸರಾಯ ಮತ್ತು ನಾನು ಈ ನಮ್ಮಿಬ್ಬರಲ್ಲಿ ಮುಂದಿನ ಆಲೋಚನೆಯು ನಡೆಯುತ್ತಿದೆ." ಎಂದು ಉತ್ತರಕೊಟ್ಟರು. ಮೊಂಟೆಗ್ಯುಗಳು ಇಂಥ ವಿಲಕ್ಷಣ ಉತ್ತರವನ್ನು ಕೊಟ್ಟಬಗ್ಗೆ ಪತ್ರಗಳು ತಮ್ಮ ನಿವೇದನವನ್ನು ಪ್ರದರ್ಶಿಸುತ್ತಿವೆ. ಆದರೆ ಎಂಗ್ಲೊ ಇಂಡಿಯನರಿಗೆ—ವಿಶೇಷತಃ ಮದ್ರಾಸ್ ಮೇಲ್ ಪತ್ರಿಕೆಗೆ ಸರ್. ಸುಬ್ರಹ್ಮಣ್ಯರ [illegible]ವನ್ನು ಹರಿದು ತಿನ್ನಲು ಇದೆ ಯೋಗ್ಯಸಮಯವೆಂದು ತೋರುತ್ತದೆ! ಪರಂತು ಸರ್. ಸುಬ್ರಹ್ಮಣ್ಯರು ವರ್ತಮಾನಪತ್ರಗಳಲ್ಲಿ [illegible] ಮಾತೃದೇಶದ ಪ್ರೀತ್ಯರ್ಥ [illegible]

ಹಿಂದೂಸ್ಥಾನದಲ್ಲಿ ಪ್ರತಿಬಂಧಿಸಲಿ, ಹೊರಗೆ ಇಡಲಿ, ಇಲ್ಲವೆ ಗಡಿಪಾರ ಮಾಡಲಿ ಅದೊಂದು ತನಗೆ ಸುಪ್ರಸಂಗವೆಂದೆ ಅವರು ಹೇಳುವರು. ಹೀಗಿರಲು ಅವರು 'ಸರ್' ಪದವಿಗಾಗಲಿ ೫೦೦೦ ರೂಪಾಯಿ ಪೆನ್‌ಶನಿಗಾಗಲಿ ಲಕ್ಷ್ಯಮಾಡುವರೊ? ಸರ್ ಸುಬ್ರಮಣ್ಯರಂಥ ಸಾಮ್ರಾಜ್ಯನಿಷ್ಠ ಮತ್ತು ಮಾತೃಭೂಮಿಯ ಕಟ್ಟುಭಕ್ತರ ಮೇಲೆ ಈ ವಾರ್ಧಕ್ಯದಲ್ಲಿ ಇಂಥ ಅನ್ಯಥಾ ಪ್ರಕಾರಗಳನ್ನು ಆಲೋಚಿಸುವದು ಯಾರಿಗೂ ಚಂದವಲ್ಲ ಅದನ್ನು ದೇಶಭಕ್ತನಾದವನು ಅಂತಃಕರಣಪೂರ್ವಕವಾಗಿ ನಿವೇದಿಸದೆ ಇರನು [illegible]

೬ ಹಿಂದಿ ಸುಧಾರಣೆಗಳ ವಿಷಯದಲ್ಲಿ ಸಹ ಮಿ. ಮೊಂಟೆಗ್ಯುಗಳು ಹಿಂದೊಮ್ಮೆ ಹೇಳಿದ ಹಳೆ ವಿಚಾರಗಳನ್ನೆ ಪುನಃ ಪ್ರದರ್ಶಿಸಿದರು ವೈಸರಾಯರ ಮತ್ತು ತನ್ನ ಸಂಯುಕ್ತಯೋಜನೆಯು ವೊರ್‌ಕೆಬಿನೆಟ್ ಎಂದರೆ ಯುದ್ಧಮಂತ್ರಿ ಮಂಡಲದ ಮುಂದೆ ಇದೆ ಆ ಮಂಡಲಕ್ಕೆ ಯುದ್ಧವು ಜೋರಿನಲ್ಲಿರುವದರಿಂದ ಹಿಂದೀಸುಧಾರಣೆಗಳ ವಿಷಯವನ್ನು ವಿವರಿಸಲು ಅವಕಾಶವಿಲ್ಲ ಆದರೂ ಬಾದಶಹರ ಜಾಹೀರನಾಮೆಯ ಪ್ರಕಾರ ಸುಧಾರಣೆಗಳನ್ನು ಜನರ ಮುಂದೆ ಇಟ್ಟು ಜನರಲ್ಲಿ ಸಾಧಕಬಾಧಕ ವಿಚಾರಗಳು ನಡೆದಮೇಲೆಯೆ ಆ ಬಗ್ಗೆ ಅವಶ್ಯವಿದ್ದರೆ ಪಾರ್ಲಿಮೆಂಟಿನಲ್ಲಿ ಬಿಲನ್ನು ತಂದೇವು ಸುಮ್ಮನೆ ಗಾಬರಿ ಯಾಕೆ ಮಾಡುತ್ತೀರಿ! ವಾದವಿವಾದಕ್ಕೆ ನಿಮಗೆ ನಾವು ಬೇಕಷ್ಟು ಸಮಯವನ್ನು ಕೊಟ್ಟೇವು! ಮಿ ಮೊಂಟೆಗ್ಯುಗಳ ಮಾತಿನ ನಮೂನೆಯು ಹೀಗೆ ಇದೆ ಇನ್ನೊಂದು ಕಡೆಯಲ್ಲಿ ಕಲಕತ್ತೆಯ 'ಇಂಗ್ಲಿಷ್‌ಮನ್' ಪತ್ರಿಕೆಯು ಪ್ರಾಂತಿಕ ಸ್ವರಾಜ್ಯದ ಕೆಲವು ಸಂಗತಿಗಳನ್ನು ಹೊರಪಡಿಸಿ ಇವೆ ಮೊಂಟೆಗ್ಯುಗಳ ಹಿಂದಿಸುಧಾರಣೆಗಳು, ತನಗೆ ಅವುಗಳ ಗಟ್ಟಿ ಗೊತ್ತಾಗಿದೆ ಎಂದು ಹೇಳುತ್ತಿದೆ! ಎಂತ ಈಗ ಎಂಗ್ಲೊ ಇಂಡಿಯನರ ಹೆಚ್ಚು ಮೆಂಬುದು ಸರಿಯಲ್ಲ

೭ ಮುಂಬಯಿ ಪ್ರಾಂತದ ಶಿಕ್ಷಣಪರಿಷತ್ತು ಕೆಲವು ದಿವಸಗಳ ಮುಂಚೆ ಪೂನಾ ಪಟ್ಟಣದಲ್ಲಿ ಸೇರಿತು ನಾಮದಾರ ಶ್ರೀನಿವಾಸಶಾಸ್ತ್ರಿಗಳು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಪರಿಷತ್ತಿನಲ್ಲಿ ಪಾಸಾದ ಠರಾವುಗಳು ವಿಶೇಷ ಮಹತ್ವವಿದ್ದವು ಐಚ್ಛಿಕ ಪ್ರಾಥಮಿಕ ಶಿಕ್ಷಣ ಔದ್ಯೋಗಿಕ ಹಾಗು ಶಾಸ್ತ್ರೀಯ ಶಾಲೆಗಳ ಆವಶ್ಯಕತೆ, ಇಂಗ್ಲಿಷ್ ಭಾಷೆಯನ್ನು ಮುಖ್ಯವಾಗಿ ಇಟ್ಟುಕೊಳ್ಳದೆ ಅದನ್ನು ಐಚ್ಛಿಕ ವಿಷಯಗಳ ಸಾಲಿನಲ್ಲಿ ಸೇರಿಸುವದು ಶಿಕ್ಷಕರ ಸಂಬಳದ ಏರ ಮುಂತಾದ ಹಲವು ಮಹತ್ವದ ಠರಾವುಗಳಿದ್ದವಲ್ಲದೆ ಶಾಲಾ ಕೊಲೇಜುಗಳಲ್ಲಿ ಲಷ್ಕರಿ ಶಿಕ್ಷಣವು ಎಂದರೆ ಸೈನಿಕತನದ ಶಿಕ್ಷಣವು ಅವಶ್ಯವಿದೆ ಎಂಬುದಾಗಿಯೂ ಒಂದು ಅತಿ ಮಹತ್ವದ ಠರಾವಿತ್ತು ಈ ಠರಾವು ಏನೆ ಧ್ಯೇಯಾತ್ಮಕವಲ್ಲ ಈ ತರದ ಪ್ರಯತ್ನವನ್ನು ಪಂಜಾಬ ಸರಕಾರವು ಈ ಮೊದಲ ಮಾಡುತ್ತಿದೆ. ಎಂಗವೇಲೆ ಅದನ್ನು ಬೇರೆ ಪ್ರಾಂತೀಯ ವಿದ್ಯಾಧಿಕಾರಿಗಳು ತಮ್ಮಲ್ಲಿ ಸೇರಿಸಿಕೊಳ್ಳಬಹುದೆಂದು ತೋರುತ್ತದೆ ಎಲಿಮೆಂಟರಿ ಉಪಾಧ್ಯಾಯರ ವಿಷಯದಲ್ಲಿ ಕೂಡ ಆ ಪರಿಷತ್ತಿನಲ್ಲಿ ಒಂದು ಠರಾವು ಪಾಸಾಯಿತು ಅದನ್ನು ನಾವು 'ಎಲಿಮೆಂಟರಿ ಶಾಲೆಗಳ [illegible] ಸ್ವತಂತ್ರವಾಗಿ [illegible] ವಿಷಯವನ್ನು ಕೈಕೊಳ್ಳಲಿಲ್ಲ [illegible] ಪರಿಷತ್ತಿನ ಅಧಿವೇಶನವು ಸರ್ವ ದೃಷ್ಟಿಯಿಂದ ಯಶಸ್ವಿಯಾಯಿತೆನ್ನಲು ಅಡ್ಡಿ ಇಲ್ಲ

ಸ್ಥಳೀಕ ಮಂಗಳೂರು

ಇಲ್ಲಿಯ ಕೃಷ್ಣ [illegible]ನ ಸಮೀಪದ ನದಿ ಕಿನಾರೆಯಲ್ಲಿ ನಿನ್ನೆ ಮಧ್ಯಾಹ್ನಕಾಲದಲ್ಲಿ ರೋಡಿನ ನದಿಯಿಂದ ಬಿಮಿನಿ ಎಣ್ಣೆಯ ಸ್ಟೀಮರ್ನಿಂದ ಕೃಷ್ಣ [illegible] ದ್ರಮ್ಮು ಎಣ್ಣೆ ಮತ್ತು ಮುಸ್ಕಿಗೆ ತಕ್ಕೊಂಡು ಹೋಗಲ ದೋಣಿಯ ಮೇಲಿದ್ದ ೨೦೦ ದ್ರಮ್ಮು ಎಣ್ಣೆಯನ್ನು ಕೆಲವು ಮಾಪಿಳ್ಳೆಯವರು ಕೂಡಿಕೊಂಡು ನದಿಗೆ ಇಳಿದು ಬಲಾತ್ಕಾರದಿಂದ ಎಲ್ಲಾ ಎಣ್ಣೆಯನ್ನು ತಕ್ಕೊಂಡು ಹೋಗಿರುವರು ಪೊಲೀಸು ಸಹಾಯವು ಬರುವಷ್ಟರಲ್ಲಿ ಎಣ್ಣೆಯ ದ್ರಮ್ಮುಗಳಲ್ಲಿ ಒಂದೂ ಉಳಿದಿರಲಿಲ್ಲ ಎಲ್ಲಾ ಕಳ್ಳರ ದೊರೆಗಳವರೂ ಪೊಲೀಸು ಸುಪರಿಂಟೆಂಡೆಂಟರೂ ಈ ತಕ್ಷೀರು ನಡೆದ ಸ್ಥಾನಕ್ಕೆ ಒಂದು ತನಿಖೆಯು ಕೂಡಲೆ ಆಗುವ ಏರ್ಪಾಡನ್ನು ಮಾಡಿ ತಕ್ಕ ಬಂದೋಬಸ್ತು ನೋಡಿಕೊಂಡು ಹೋಗಿರುವರು ಪೊಲೀಸಿನವರು ತಲಾಸಿಯಿಂದ ೫ ಜನರನ್ನು ಕೈದುಮಾಡಿರುವರಲ್ಲದೆ ಅಲ್ಲಲ್ಲಿ ಮನೆ ಜಪ್ತಿಮಾಡಿ ಎಣ್ಣೆಯ ಡಬ್ಬಿಗಳನ್ನು ಹಿಡಿದಿರುವರು

ಚಿಮಿನಿ ಎಣ್ಣೆಯ ಕ್ರಯವು ಇಲ್ಲಿ ಬಹಳ ವಿಪರೀತವಾಗಿ ಏರಿಹೋಗಿದೆ ಈ ವಿಪರೀತಾವಸ್ಥೆಯಿಂದ ಜನರು ಬಹಳವಾಗಿ ನರಳುತ್ತಿರುವರಾದರೂ ಜನರ ಈ ಸಂಕಷ್ಟವನ್ನು ನಿವಾರಿಸುವ ಪ್ರಯತ್ನವು ಇನ್ನೂ ತೋರಿದ್ದ ಇದೆ ಬಡವರಿಗ ಆಫೀಸುಧಾರಣೆಗಳಲ್ಲ ಚಿಲ್ಲರೆಯಾಗಿ ಎಣ್ಣೆಯನ್ನು ಇಲ್ಲಿ ವಿಕ್ರಯಿಸುವ ಪ್ರಯತ್ನವು ನಡಿಯುತ್ತಿದೆ ಎಂತ ಕೆಲವರು ಅನ್ನಬಹುದು. ಆದರೆ ಈ ಎಣ್ಣೆಮಾರಾಟದ ವ್ಯವಸ್ಥೆಯನ್ನು ಕಣ್ಣಾರೆ ಕಂಡರೆ ಇದರಿಂದ ನಿವೃತ್ತಿ ಸಿಕ್ಕುವ ಬದಲಿಗೆ ಜನರಿಗೆ ಮತ್ತಷ್ಟು ತೊಂದರೆಯುಂಟಾಗುವದೆಂಬುದು ಎಂಥಾ ಕುರುಡರಿಗಾದರೂ ವ್ಯಕ್ತವಾಗುವದು ಎಣ್ಣೆಗೆ ಕ್ಷಾಮ ಬಂದಿದೆ ಎಂತ ಹೇಳಲಾಗುವದಿಲ್ಲ ಯಾಕಂದರೆ ದ್ರಮ್ಮಿಗೆ ರೂ ೬-೧೨-೦, ೭-೮-೦ ಈ ರೀತಿ ಕ್ರಯ ಕೊಟ್ಟರೆ ಅದು ಖಂಡಿತವಾಗ ಎಲ್ಲಿಯಾದರೂ ಸಿಕ್ಕುವದು ಮಂಗಳೂರು ಏಜಂಟರುಗಳಿಗೆ ಆಫೀಸುಧಾರಣೆಗಳಿಗೆ ಮಿಕ್ಕಿ ಮಾರಕೂಡದೆಂಬ ಕಟ್ಟಾಜ್ಞೆ, ಏಜಂಟರುಗಳ ಲೆಕ್ಕಪತ್ರಗಳಲ್ಲಿಯೂ ಆಫೀಸುಧಾರಣೆಗಳ ವಿಕ್ರಿತ—ಇವರ ಮೇಲೆ ಎಣ್ಣೆಯ ಇನ್ಸಪೆಕ್ಟರುಗಳ ಪದೆಪದೇ ತಪಾಸಿ, ಹೀಗೆಂದಮೇಲೆ, ಎಣ್ಣೆಯ ಧಾರಣೆಯು ಹೀಗೆ ಏರಲು ಕಾರಣವೇನು? ಇದು ಒಂದು ಒಗಟೇ ಸರಿ. ಈ ಎಣ್ಣೆಯ ಒಗಟನ್ನು ಬಿಚ್ಚಲಿಕ್ಕೆ ಎಣ್ಣೆಯ ಇನ್ಸ್‌ಪೆಕ್ಟರ್ ಇತ್ಯಾದಿಯವರಿಂದ ಆಗದೆ ಇದೆ. ಇನ್ನೂ ಆಗುವಂಥಾದ್ದು ಹ್ಯಾಗೆ ಇದೆಯೋ? ಹ್ಯಾಗೂ ಸರಕಾರದವರು ಸ್ವತಹ ಈ ವಿಚಾರಕ್ಕೆ ಕೈಹಾಕುವದು ಈಗ ಅತ್ಯಗತ್ಯವಾಗಿರುವದು.

ಕೋಟುರ ವಾರ್ಡಿಗೆ ಉಮೇದ್ವಾರರಾಗಿ ನಿಂತಿದ್ದ ಮಿ. [illegible]

ಮಾರ್ಟಿನ್ ಪ್ಯಾಸರು ತಮ್ಮ ಉಮೇದ್ವಾರುವಿಕೆಯನ್ನು ಹಿಂತೆಗೆದ್ದರಿಂದ ಚುನಾವಣೆಯಿಲ್ಲದನೇ ಮಿ| ಗೊನ್ಸಾಲವೇಸರು ಮುನ್ಸಿಪಲ್ ಕೌನ್ಸಿಲರರಾಗಿ ಆರಿಸಲ್ಪಟ್ಟಿರುವರು

ಪೆಂಟಲಂಡಪೇಟೆಯ ಪಶ್ಚಿಮ- ಪಾರ್ಶ್ವದಲ್ಲಿರುವ ಖಾಲಿ-ಸ್ಥಳವನ್ನೂ ಮತ್ತು ಪೂರ್ವಕ್ಕೆ ಇರುವ ಉರ್ವದ ಮೈದಾನನ್ನೂ ಬಡವರ ವಸ್ತಿಗಳ ಬಗ್ಗೆ ಉಪಯೋಗಿಸಲ್ಪಡಬೇಕೆಂಬುವ ಆಲೋಚನೆಯು ಮುನ್ಸಿಪಲ್ ಕೌನ್ಸಿಲಿನಲ್ಲಿರುವದು

ಇಲ್ಲಿಯ ಮಹಿಳಾಸಭೆಯವರು ಸೋಮವಾರ ಬುಧವಾರ ಮತ್ತು ಶುಕ್ರವಾರ ಮಧ್ಯಾಹ್ನ ಗಂಟೆ ೩ರಿಂದ ೫ರ ವರೆಗೆ ಬಾಲಿಕೆಯರಿಗೂ ಶಾಲೆಗಳಿಗೆ ಹೋಗಲಿಕ್ಕಾಗದ ಯುವತಿಯರಿಗೂ ಇತರ ಸ್ತ್ರೀಯರಿಗೂ ಶಿಕ್ಷಣವನ್ನು ಕೊಡುವ ಏರ್ಪಾಡನ್ನು ಮಾಡಿರುತ್ತಾರೆ. ಶಿಕ್ಷಣವು ಉಚಿತವಾಗಿ ಕೊಡೋಣಾಗುವದು.

ರಾಷ್ಟ್ರೀಯ ಬಾಲಿಕಾಶಿಕ್ಷಣಶಾಲೆಯು ತಾ ೭ನೇ ಸೋಮವಾರ ತೆರಿಯಲ್ಪಟ್ಟಿರುವದು ಶಾಲೆಯು ತೆರಿಯೋಣಾದ ದಿವಸವೇ ೪೦ ಜನ ವಿದ್ಯಾರ್ಥಿಗಳು ಬಂದು ಸೇರಿರುವರಾಗಿ ತಿಳಿಯುತ್ತೇವೆ

ಇಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫರಾಗಿದ್ದ ರಾ| ಜಗನ್ನಾಥರಾವ್ ತಾಗತ್‌ರವರು ಇಲ್ಲಿಂದ ಗೂಟಿಗೆ ವರ್ಗಾಯಿಸಲ್ಪಟ್ಟು ಅಲ್ಲಿ ಚಾರ್ಜು ವಹಿಸಿಕೊಂಡ ಎರಡು ಮೂರು ದಿವಸಗಳಲ್ಲಿಯೇ ವಾಂತಿಭೇದಿಯಿಂದ ಮೃತಪಟ್ಟರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ

ಈ ತಿಂಗಳು ತಾ ೨೦ಕ್ಕೆ ಅಂತ್ಯವಾಗುವ ವಾರದಲ್ಲಿ ಕೋರ್ಟ ವಾರ್ಡಿನಲ್ಲಿ ಒಂದು ಪ್ಲೇಗು ಮರಣವೂ, ಸೆಂಟ್ರಲ್‌ವಾರ್ಡು ಮತ್ತು ಕೊಡಿಯಾಲಬೈಲ್ ವಾರ್ಡಿನಲ್ಲಿ ಎರಡು ಸಿಡುಬು ರೋಗದ ಮರಣಗಳೂ ಉಂಟಾಗಿವೆ

ದಕ್ಷಿಣಕನ್ನಡ ಡಿಸ್ಟ್ರಿಕ್ಟ ರಿಜಿಸ್ಟ್ರಾರರಾದ ಮು| ರಾ| ಮಂಗಳೂರು ನಾರಾಯಣರಾಯರಿಗೆ ಉತ್ತರ ಮಲಬಾರಿಗೂ ಉಪ್ಪಿನಂಗಡಿ ಸಬ್ ರಿಜಿಸ್ಟ್ರಾರರಾಗಿದ್ದ ಮ| ರಾ| ಮೂಲ್ಕಿ ಬಾಬುರಾಯರಿಗೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾಗಿ ಮಂಗಳೂರಿಗೂ ವರ್ಗವಾಗಿದೆ

ಸರಕಾರದವರು ಕೊಟ್ಟ ಹಣದಿಂದ ಡಿಸ್ಟ್ರಿಕ್ಟ್ ಬೋರ್ಡಿನ ಅಧಿಕಾರದೊಳಗೆ ಬೈಂದೂರು ಮತ್ತು ಮೂಡಬಿದ್ರಿ ಈ ಸ್ಥಳಗಳಲ್ಲಿ ಅಪೂರ್ಣ ಸೆಕೆಂಡರಿ ಸಾಲೆಗಳನ್ನು ಸ್ಥಾಪಿಸುವುದಲ್ಲದೆ ಉಡುಪಿ ಬೋರ್ಡ ಸೆಕೆಂಡರಿ ಸಾಲೆಯನ್ನು ಹೈಸ್ಕೂಲಾಗಿ ಏರ್ಪಡಿಸುವುದಕ್ಕೆ ಹುಕುಂ ಬಂದಿದೆ

ಎಸ್ ಪಿ ಸಿಂಹರ ಶರೀರ ರಕ್ಷಕರಾಗ [illegible] ತಲುಪಿದರೆಂದು ಇಂಡಿಯಾ ಸರಕಾರದವರಿಗೆ ತಂತಿವರ್ತಮಾನ ಬಂದಿದೆಯಂತೆ

[illegible] ರೂಪಾಯಿ ಮೌಲ್ಯದ ಚಿನ್ನದ ಮೊಹರು ನಾಣ್ಯಗಳನ್ನು ಟಂಕಸಾಲೆಯಲ್ಲಿ ಮುದ್ರಿಸುವುದಾಗಿ ಸರಕಾರದವರು ನಿರ್ಣಯಿಸಿರುವರು [illegible] ಕೋಟಿ ರೂಪಾಯಿ ನಾಣ್ಯಗಳನ್ನೂ ಮುದ್ರಿಸುವುದಕ್ಕೆ ಬೇಕಾಗುವಷ್ಟು ಬೆಳ್ಳಿಯು ಅಮೇರಿಕದಿಂದ ಬೇಗನೆ ಬಂದು ತಲುಪುವುದಂತೆ

ಇದಲ್ಲದೆ [illegible] ಇಸವಿಯ [illegible] ತಾರೀಕಿಗೆ ಇಂಡಿಯಾ ಸರಕಾರದವರ ಪತ್ರಗಳನ್ನೂ ರೂಪಾಯಿ ನಾಣ್ಯಗಳನ್ನೂ ಕರಗಿಸಬಾರದಾಗಿಯೂ ಇಂಥಾ ತಕ್ಷೀರಿಗೆ ೩ ವರ್ಷದ ವರೆಗಿನ ಸಜಾ ವಿಧಿಸ ಪದಲ್ಲದೆ ಜುರುಮಾನೆ ಸಹಾ [illegible] ಸರ್ಕಾರು ಕೊಟ್ಟಿರ [illegible] ಅನೇಕರು ಈ ರೀತಿಯಾಗಿ ಚಿನ್ನ ಬೆಳ್ಳಿಯ ನಾಣ್ಯಗಳನ್ನು ಕರಗಿಸತ್ತಾರಾಗಿ ತಿಳಿದು ಬರುವುದರಿಂದ ಇದನ್ನು ನಿಲ್ಲಿಸದಿದ್ದರೆ ಸರಕಾರದವರು ಇನ್ನಷ್ಟು ಕಠಿನ ಕಾಯಿದೆ ಜಾರಿಗೆ ತರ ಬೇಕಾದೀತೆಂದು ಸರಕಾರದವರು ಎಚ್ಚರಿಸುತ್ತಾರೆ

ಜಸ್ಟಿಸ್ ಬೀಚ ಕ್ರಾಫ್ಟ್, ಮತ್ತು ಸರ್ ನಾರಾಯಣ ಗಣೇಶ ಚಂದಾವರಕಾರ್ ಇವರಿಬ್ಬರನ್ನು ಬಂಗಾಳದಲ್ಲಿ ಪ್ರತಿಬಂಧಕದಲ್ಲಿಡಲ್ಪಟ್ಟವರ ತಕ್ಷೀರು ನಡತಗಳ ವಿಚಾರ ನಡೆಸುವುದಕ್ಕೆ ನೇಮಿಸಿರುವರು ಇವರು ಈ ಪ್ರತಿಬಂಧಿತರ ಮೇಲಿನ ಆರೋಪಗಳ ರುಜುವಾತುಗಳನ್ನು ಪರೀಕ್ಷಿಸಿ ಬಂಗಾಳ ಸರಕಾರಕ್ಕೆ ರಿಪೋರ್ಟು ಮಾಡಬೇಕಾಗಿ ಅವರಿಗೆ ಸರಕಾರವು ಅಧಿಕಾರ ಕೊಟ್ಟಿರ ವುದ

ಕರ್ನೂಲ —ರಾಷ್ಟ್ರೀಯ ಶಿಕ್ಷಣಕ್ಕಾಗಿ ಇಲ್ಲಿ ಸುಮಾರು ೧೦೦೦ ರೂಪಾಯಿ ಸಂಗ್ರಹ ಮಾಡಿರುವರು

ಕೊಯಮತ್ತೂರು—ಇಲ್ಲಿ [illegible] ಇಸವಿಯಲ್ಲಿ ಚಕ್ಕಿಲಿಯರು ಎಂಬ ಜಾತಿಯವರ ಪೇಟೆಯಲ್ಲಿರುವ ಮನೆ ಅಡಿಸ್ಥಳವನ್ನು ಮ್ಯುನಿಸಿಪಾಲಿಟಿಯವರು ಕೊಂಡ ಕೊಂಬಂದಿನಿಂದ ಈ ಜನರು ಸ್ವಂತ ಮನೆಮಾರು ಇಲ್ಲದೆ ಬಹಳ ತೊಂದರೆಗೊಳ್ಳುತ್ತಿದ್ದರು ಮಟ್ಟುಪಾಳ್ಯಕ್ಕೆ ಹೋಗುವ ರಸ್ತೆಯಲ್ಲಿ ಇವರ ಬಗೆ ಸ್ಥಳವನ್ನು ವಿಂಗಡಿಸುವುದಾಗಿ ಈ ವರ್ಷ ಆಲೋಚನೆ ಮಾಡಿದಾಗ ಸುಮಾರು ೫೦ ಮಂದಿ ೨೦೦ರೂಪಾಯಿ ಸಂಗ್ರಹಿಸಿ ಆ ಸ್ಥಳವನ್ನು ಕೊಂಡುಕೊಳ್ಳುವ ಬಗ್ಗೆ ಮ್ಯುನಿಸಿಪಾಲಿಟಿಯವರೊಡನೆ ಅನುಮತಿ ಇತ್ತರು ಈ ಕೂಟದವರಿಗೆ ಕಟ್ಟಡ ಸಹಕಾರ ಸಂಘಗಳ [illegible]ದನ್ನು ಏರ್ಪಡಿಸುವದಕ್ಕೆ ಸಹಕಾರ ಸ್ಥಾಪಕರ ರಿಜಿಸ್ಟ್ರಾರರೂ ಮ್ಯುನಿಸಿಪಾಲಿಟಿಯವರೂ ನಿಶ್ಚಯಿಸಿ ಸದರಿ ಸಂಘವು [illegible] ತಾರೀಕಿಗೆ ಸ್ಥಾಪನೆಯಾಯಿತು ಸಂಘಕ್ಕೆ ಕಟ್ಟೋಣಗಳನ್ನು ಕಟ್ಟಿಸುವ ಬಗ್ಗೆ ಸೇಕಡಾ [illegible] ಬಡ್ಡಿಯಲ್ಲಿ ಮ್ಯುನಿಸಿಪಾಲಿಟಿಯವರು ಹಣ ಒದಗಿಸಿಕೊಡಬೇಕೆಂತಲೂ ಈ ಹಣವನ್ನು ಸಂಘದವರು ೨೦ ವರ್ಷಗಳೊಳಗೆ ಮರುಪಾವತಿ ಮಾಡಬೇಕೆಂತಲೂ ನಿರ್ಣಯಮಾಡಿರುವರು ಒಂದು ಪಾಲಿಗೆ ೨೦ ರೂಪಾಯಿ ಮೇರೆಗೆ [illegible] ಪಾಲುಗಳಿಂದ [illegible] ರೂಪಾಯಿ ಬಂಡವಾಳವನ್ನು ಎತ್ತುವುದಕ್ಕೆ ಈ ಸಂಘಕ್ಕೆ ಅಧಿಕಾರವಿದೆ. ಮನೆ ಕಟ್ಟಡ ಅಥವಾ ಇತರ ಮೆಂಬರರ ಜಾಮೀನ ಮೇಲೆ ೫೦೦ ರೂಪಾಯಿ ವರೆಗೆ ಒಬ್ಬನಿಗೆ ಸಾಲ ಕೊಡಬಹುದೆಂದು ನಿಯಮಮಾಡಿರುವರು

ಕಲ್ಲಿಕೋಟೆ—ಮಲಬಾರ ಡಿಸ್ಟ್ರಿಕ್ಟ್‌ಬೋರ್ಡ ಮೆಂಬರರಾದ ಶ್ರೀಮಾನ್ ಕೆ ಬಿ ಕೆ ಎಮ್ ನಂಬೂದ್ರಿಪಾದರು ಯುದ್ಧಸಾಲಕ್ಕೆ ೨೦೦೦೦ ರೂಪಾಯಿ ವಂತಿಗೆ ಹಾಕಿರುವರೆಂದು ತಿಳಿದುಬರುತ್ತದೆ

ಇಲ್ಲಿಯ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ [illegible] ತಾರೀಕಿಗೆ ಮಾಡಿದ ಠರಾವುಗಳಲ್ಲಿ ೩೦ ರೂಪಾಯಿ ಮತ್ತು ಅದಕ್ಕಿಂತ ಕಡಿಮೆ ಸಂಬಳದ ಮ್ಯುನಿಸಿಪಲ್ ನೌಕರರಿಗೆ [illegible] ರೂಪಾಯಿಗೆ ಕಡಿಮೆಯಾಗದಂತೆ ಮತ್ತು ಅವರವರ ಸಂಬಳದಲ್ಲಿ ಸೇಕಡಾ [illegible] ಮೀರದಂತೆ [illegible] ಕೊಡಬಹುದಾಗ ಒಂದು ಠರಾವು ಮಂಜೂರಾಯಿತು

ಮಲಬಾರು ಜಿಲ್ಲೆಯಿಂದ ಲಷ್ಕರಿಗೆ ಯುದ್ಧ ಮಾಡುವವರ ತಂಡಕ್ಕೆ [illegible] [illegible]

ಪುತ್ತೂರು ಸೆಕೆಂಡರಿಶಾಲೆ.

ಈ ಶಾಲೆಯು ಳೆದ ಜೂನ್ ೧ನೇ ತಾರೀಕಿಗೆ ಕೊಂಡದ್ದನಲ್ಲಿ ಕಟ್ಟಿಸಿದ ಹೊಸ ಕಟ್ಟೋಣದಲ್ಲಿ ತೆರೆಯಲ್ಪಟ್ಟಿತು ಹತ್ತುಸನ್ನುರ ಶಾಲೆಯಾದುದರಿಂದ ಆಯಾ ಮತದವರು ಆವವರ ರೀತಿಯಿಂದ ಉತ್ಸವ ಮಾಡಿದರು ... ಶಾಲೆ ತೆರೆಯಲ್ಪಟ್ಟದ ವರ್ಷ ಸೆಕೆಂಡ್ ಫೋರ್ಮಿನ ವರೆಗೆ ಮಾತ್ರ ಇದ್ದದ್ದರು. ಮಾರನೆಯ ವರ್ಷ ಥರ್ಡ್‌ಫೋರ್ಮನ್ನು ಇಟ್ಟರು. ಈ ವರ್ಷ ಫೋರ್ತ್‌ಫೋರ್ಮನ್ನು ಇಟ್ಟಿದ್ದಾರೆ. ಇನ್ನು ಇದರಂತೆಯೇ ಒಂದೊಂದು ವರ್ಷಕ್ಕೆ ಒಂದೊಂದು ತರಗತಿಯನ್ನು ಏರಿಸಿ ಸಕ್ಕಲ್‌ಫಾಯ್ನಲ್ ಕ್ಲಾಸನ್ನು ಇಡುವರು.

ಹೊಸತಾಗಿ ತೆರೆಯಲ್ಪಟ್ಟ ಫೋರ್ತ್‌ಫೋರ್ಮಿನಲ್ಲಿ ಈಗಲೆ ೧೫ ಮಂದಿ ಹುಡುಗರಿದ್ದಾರೆ. ಇನ್ನು ೧೦, ೧೫ ಮಂದಿ ಬರಲಿಕ್ಕಿರುವರು. ಈ ವರ್ಷ ೩೦ ಕ್ಕಿಂತಲಿಂತ ಹೆಚ್ಚು ಹುಡುಗರನ್ನು ಸೇರಿಸಿಕೊಳ್ಳುವದಿಲ್ಲವೆಂದು ನಿರ್ಧರಿಸಿದ್ದೇವೆ. ನವವನ್ನು ಪಾಠಕ್ಕೆ ಬೇಕಾಗುವ ಸವುಸ್ತ ಸಾಮಗ್ರಿಗಳನ್ನು ಮುಂಚಿನಿಂದಲೇ ತರಿಸಿದ್ದೇವೆ. ಮೆಟ್ರಿಕ್ಯುಲೇಶನ್ ಇಲ್ಲವೆ ಸಾಯನ್ಸ್ ಎಕ್ಸಿರವರು ನಮಗೆ ಬೇಕೆಂದು ಪತ್ರಗಳಲ್ಲಿ ಬರೆದುಹಾಕಿದ್ದೇವೆ. ಸಂಸ್ಕೃತ ಪಾಠ ಹೇಳಿಕೊಡುವುದಕ್ಕಾಗಿ ಮೈಸೂರು ಮದ್ರಾಸು ಇಲ್ಲವೆ ತಿರುವಾಂಕೋಡಿನಲ್ಲಿ ಉಪಾಧ್ಯಾಯ ಪರೀಕ್ಷೆ ...ಸಾದವರನ್ನು ಇಡಬೇಕೆಂದು ನಿಶ್ಚಯ ಸಿದ್ದಾರೆ.

ಶಾಲೆಗೆ ಸಮೀಪವಾಗಿ ವಿದ್ಯಾರ್ಥಿಭವನಗಳನ್ನು ಕಟ್ಟಿಸುವುದಕ್ಕೆ ಹುಡುಗ... ಆಯಾ ಜಾತಿಯವರು ತಮ್ಮ ತಮ್ಮ ವಿದ್ಯಾರ್ಥಿಗಳಿಗಾಗಿ ಭವನಗಳನ್ನು ... ದಾದರೆ ಶಾಲೆಯವರು, ಅದಕ್ಕೆ ಬೇಕಾಗುವ ಸ್ಥಳವನ್ನು ಧರ್ಮಾರ್ಥ ಕಡುವುದಲ್ಲದೆ, ಅದಕ್ಕೆ ತಾಗಿ ಹೊಡದಲ್ಲಿ ೪ ಅಂಶವನ್ನೂ ಕೊಡ... ವ... ಕೊಂಡಿದ್ದಾರೆ. ಜೈನಮತದವರು ಈಗ ಗೋಪಾಲಕೃಷ್ಣ ದೇವಳದ ... ಮಿಯ ತಮ್ಮ ವಿದ್ಯಾರ್ಥಿಭವನವನ್ನು ಶಾಲೆಗೆ ಸಮೀಪವಾಗಿ ಒಂದ ... ವನ್ನು ಕಟ್ಟಿಸಿ, ಅಲ್ಲಿಗೆ ಕೊಂಡುಹೋಗಬೇಕೆಂದು ಅವರ ... ಯಲ್ಲಿ ನಿಶ್ಚಯ ಮಾಡಿದ್ದಾರೆ. ಇದೇ ರೀತಿಯಲ್ಲಿ ಬೇರೆ ಜಾತಿಯವರು ... ತಮ್ಮ ಹುಡುಗರಿಗಾಗಿ ಭವನವನ್ನು ಕಟ್ಟಿಸಿದರೆಂದು ಸಾವು ಹ್ಯಾನ್ಸು ...

ನೇಯ್ಲ್.—ಇದೇ ತಿಂಗಳ ತಾ. ೧ನೇ ಶನಿವಾರ ದಿವಸ ಸಿಸವರಿಗೆ ಪುದು ... ಗ್ರಾಮದ ಸಿದ್ದಾಳ ಎಂಬ ಒಂದು ಭೂಕದ ಬನದಲ್ಲಿ ೩ ಕಾಲಿನ ದೊಡ್ಡ ಪುಲಿ ಒಂದ ಹಗಲು ೧೧ ಘಂಟೆ ಸಮಯದಲ್ಲಿ ಆ ಬನದಲ್ಲಿದ್ದ ದಲಸಿನ ಮರಗಳಿಂದ ... ತೆಗೆಯ ವರೆ ಬಟ್ಟ ... ಈ ಹುಲಿಯು ... ಬಂದು ಈ ಮರದ ಮೇಲೆ ... ತಾಕಿ ತಿಂದು ... ಘಂಟೆವರೆಗೂ ... ಹುಲಿ ಅಲ್ಲಿ ಇದ್ದ ಈ ಪ್ರವರವನ್ನು ... ಸಿದ್ದಾಳ ಎಂಬ ದಾರಿಯಿಂದ ... ಹುಲಿಯು ಈಗ ೩ ತಿಂಗಳ ಮುಂಚೆ ... ಈ ಹುಲಿ ... ಹೇಳುತ್ತಾರೆ. ... ಬಿಡಬಾರದಂತೆ ... ಹಿಡಿದು ತಿಂದ ಬದಲಾದುದು ... ದರು.

ಹಿಪ್ಪೆ ಹೂವಿನ ಮಹಾತ್ಮೆ

ಸ್ವಾಮಿ,—ಹೈದರಾಬಾದು ಸಂಸ್ಥಾನದಲ್ಲಿ ಹಿಪ್ಪೆಯ ಹೂವಿನಿಂದ ಇಮುದಗೆ ... ನಾರಾಯಣ ... ಈ ಹೂವಿನಿಂದ ಮೋಟಾರ್ ಗಾಡಿಗಳನ್ನು ನಡೆಸುವ ಪೆಟ್ರೋಲ್ ಎಣ್ಣೆಯನ್ನು ಮಾಡುವ ವಿಧಾನವನ್ನು ... ರೆವನ್ನು ಹೈದರ್ನ ಜನರಲ್ ಮೆ ... ಹಿಪ್ಪೆಯ ಹೂವಿನಿಂದ ಆಗುವ ಪೆಟ್ರೋಲ್ ಎಣ್ಣೆಯಿಂದ ಈಗಾಗಲೆ ಆ ರಾಜ್ಯದಲ್ಲಿ ಮೋಟಾರು ಬಂಡಿಗಳನ್ನು ನಡೆಯಿಸುತ್ತಿರುವರು. ... ವರ್ಷಕ್ಕೆ ಹೈದರಾಬಾದು, ಸಿಕಂದರಾಬಾದು ಪಟ್ಟಣಗಳಿಗೆ ಬೇಕಾಗುವ ... ಲಕ್ಷ ಗ್ಯಾಲನ್ ಎಣ್ಣೆ ಸಿದ್ಧಮಾಡಬಹುದೆಂದು ... ಅಭಿಪ್ರಾಯಪಡುತ್ತಿದ್ದಾರೆ. ... ಈಗಿನ ... ಯುದ್ಧಸಾಮಗ್ರಿಯನ್ನು ಮಾಡುವುದಕ್ಕೆ ಬೇಕಾದ ಅಸಿಟೋನ್ ದ್ರಾವಕವನ್ನು ಇದರಿಂದ ಮಾಡಬಹುದು. ಈ ದ್ರಾವಕವು ಇದುವರೆಗೆ ನಮ್ಮ ದೇಶಕ್ಕೆ ಕೆನಡಾ ದೇಶದಿಂದ ಬರುತ್ತಿದ್ದಿತು. ಇಂಡಿಯಾ ಸರಕಾರದವರು ಈಗ ನಾಸಿಕದಲ್ಲಿ ೭ ಲಕ್ಷ ರೂ ವ್ಯಯಿಸಿ ಈ ದ್ರಾವಕವನ್ನು ಹಿಪ್ಪೆಯ ಹೂವಿನಿಂದ ಮಾಡುವುದಕ್ಕೆ ಒಂದು ಕಾರ್ಖಾನೆಯನ್ನು ಮಾಡಿದ್ದಾರೆ. ... ಈ ಹಿಪ್ಪೆಯ ಹೂವಿನಲ್ಲಿ ಈಶ್ವರನು ಇಷ್ಟು ಮಹಿಮೆಗಳನ್ನು ಇಟ್ಟಿದ್ದಾನೆ. ಈ ಹೂವಿನ ಕೈಗಾರಿಕೆಯಿಂದ ಹೈದರಾಬಾದು ಸಂಸ್ಥಾನದವರಿಗೆ ಬಹಳ ಆದಾಯ ಬರುತ್ತದರಲ್ಲಿ ಅನ್ನಿಯಿಲ್ಲ. ಮತ್ತು ಇದರಿಂದ ಆ ದೇಶದಲ್ಲಿ ಇನ್ನೂ ಅನೇಕ ಕೈಗಾರಿಕೆಗಳನ್ನು ಕೂಡ ಸ್ಥಾಪಿಸಬಹುದು. ಇಂಥಹ ಬಿಕ್ಕಟ್ಟನ್ನು ಪರದೇಶದ ವರ್ತಕರ ಕೈಗೆ ಕೊಡದೆ ಸ್ವರಾಷ್ಟ್ರಾಭಿವೃದ್ಧಿಗಾಗಿ ಉಪಯೋಗಿಸುವವರಾಗಲಿ ಎಂದು ಕೋರುತ್ತೇನೆ. ಈ ರಾಜ್ಯದಂತೆ ನಮ್ಮ ಮೈಸೂರು ದೇಶದಲ್ಲಿಯೂ ಕೈಗಾರಿಕೆಗಳ ಅಭಿವೃದ್ಧಿಗಾಗಿ ಅನೇಕ ಸಾಹಸಗಳನ್ನು ಮಾಡುತ್ತಿರುವರಷ್ಟೆ! ಅವುಗಳಲ್ಲಿ ಗಂಧದ ಎಣ್ಣೆಯ ಕಾರ್ಖಾನೆ, ಸಾಬೂನು ಕಾರ್ಖಾನೆ ಮುಂತಾದವುಗಳು ಮುಖ್ಯವಾದ ವು. ... ಆದ್ದರಿಂದಲೇ ನಮ್ಮ ದೇಶದಲ್ಲಿ ಹೇರಳವಾಗಿರುವ ... ಗಿಡ ... ಎಲ್ಲೆಲ್ಲಿಯೂ ದೊರೆಯುವ ಈ ಹಿಪ್ಪೆಯ ಹೂವಿನಿಂದ ಆಗುವ ಪೆಟ್ರೋಲ್ ಎಣ್ಣೆಯೇ ಮೊದಲಾದ ಪದಾರ್ಥಗಳನ್ನು ವಿದ್ಯಾಪ್ರಸಿದ್ಧರೂ ಕೈಗಾರಿಕೆಯ ಮುಖ್ಯಾಧಿಕಾರಿಗಳೂ ಪರೀಕ್ಷಿಸಿ, ಲಾಭಕರವಾಗಿದ್ದರೆ ಇಲ್ಲಿಯೂ ಅಂತಹ ಕಾರ್ಖಾನೆಯನ್ನು ಸ್ಥಾಪಿಸಿ ಸ್ವರಾಷ್ಟ್ರಾಭಿವೃದ್ಧಿಯನ್ನು ಹೆಚ್ಚಿಸುವರಾಗಲಿ.

ಆಕಸಾಧಕ ಪತ್ರಿಕೆ

ಪತ್ರವ್ಯವಹಾರ.

ಬಲ್ಮರದಲ್ಲಿ ಪ್ಲೇಗು

ಅಯ್ಯಾ ಪತ್ರ ಸಂಪಾದಕರೇ

ಬಲ್ಮರದಲ್ಲಿ ಪ್ಲೇಗು ರೋಗ ಇದ್ದಿಲ್ಲ ... ಬಂದ ಕಳದ ಹತ್ತುದಿನಗಳಲ್ಲಿ ... ಇಲಿ ಬಿದ್ದು ಉಂಟಾದ ರೋಗವು ಅಲ್ಲ ... ಬಲ್ಮರದ ... ದಿನವೇ ಈ ಇನ್ಸ್‌ಪೆಕ್ಟರರು ... ಒಂದು ಬಡ ಏಳವಿಗೆ ನಿನ್ನೆಯ ದಿನ ಪ್ಲೇಗು ರೋಗ ... ಬಾಲೆಯನ್ನು ... ಪರಂಭಾವುದನ್ನು ... ಪರ್ಗಕಕರಾದರು.

ಆದರೆ ... ದಿನವೇ ಆ ಪ್ರಾಂತ್ಯದಲ್ಲಿಯೇ ಇರುವ ಪ್ಲೇಗ ಇನ್ಸ್‌ಪೆಕ್ಟರರ ಮನೆಯಲ್ಲಿ ... ಇನ್ಸ್‌ಪೆಕ್ಟರರು ... ಪ್ಲೇಗು ರೋಗವು ಈ ... ಆರೋಗ್ಯ ಸಂಬಂಧ ವಿಚಾರಿಸಿದರೆ ... ಹಿತಚಿಂತಕ

ಹೊಸದುರ್ಗ

ನಮ್ಮ ಊರಾದ ... ಹೊಸದುರ್ಗ ... ಮಂಗಳವಾರ ... ಪ್ರಸ್ತುತ ಇನ್ನೂ ... ಹಳೆಯ ಗ್ರಾಮ ... ಆದ್ದರಿಂದ ... ಇಂಡಸ್ಟ್ರಿಯಲ್ ... ಉತ್ತರ ... ಸರ್ವರ ... ಹಿರಿಯ ... ಈಗಲೂ ... ಹೊಸದುರ್ಗ ... ಇವರೆಲ್ಲರೂ ... ಭಾಗ ... ಆದ್ದರಿಂದ ... ಕಾರುವಳ್ಳಿ ... ಆಗಲಿಕ್ಕೆ ... ಸಹಾಯ ... ಕ್ರಮವಾಗಿ ... ಅಭಿವೃದ್ಧಿ ... ನಮ್ಮ ಅಜ್ಞಾನದ ... ದೇಶ ... ಕೊಂಡುಹೋಗುವ ... ಬಿಲ್ಲಿನಿಂದ ... ಕೆಲಸಗಳಿಗೆ ... ಕರೆಯಲ್ಪಡುತ್ತಿದ್ದರೂ ಇವರ ಕಣ್ಣು ... ಕಟ್ಟುಗಳು, ಶ್ರೀರಾಮ ... ನಾಲ್ಕು ಪ್ರಮಾಣಿಕ ... ವ್ಯಾಪಾರ ... ಆದ್ದರಿಂದ ಇವರಿಗೆ ... ಈ ಗ್ರಾಮಸ್ಥರಾದ ನಾವು ಇನ್ನು ... ಬಿಳಿದ ಕಳದ ... ಬೆಳೆಸಲ್ಪಡುವ ... ಸಾಧ್ಯವಿಲ್ಲ ... ಆದ್ದರಿಂದ ಇವರಿಗೆ ... ಮಾತ್ರ ... ಶೋಧಿಸುತ್ತ ... ಆದ್ದರಿಂದ ಹೊಸದುರ್ಗ ... ನಮ್ಮ ಈ ಸಂಕಷ್ಟವನ್ನು ತಿಳಿಯಪಡಿಸಬೇಕೆಂದು ... ವಾಗಿ ನಂಬುತ್ತೇವೆ. ಇಂತಿ ವಿಧೇಯ ಸೇವಕ

WANTED.

Offers are invited for the conveyance of Tiles and other articles manufactured by the Basel Mission Tile Works at Jeppoo and Kudroli in Mangalore to the Railway Station, Steamers Kotyas, Patimars and other native crafts

Offers with particulars as to rates per 1000 tiles may be sent to—

Mercantile Mission Branch,
MANGALORE

ಜಪ್ಪು ಮತ್ತು ಕುದ್ರೋಳಿ ಬಾಸೆಲ್ ಮಿಶ್ಶನ್ ಹಂಚು ಕಾರ್ಖಾನೆಗಳಲ್ಲಿ ತಯಾರಾಗುವ ಹಂಚು ವಸ್ತು ಇತರ ಮಾಲುಗಳನ್ನು ಮಂಗಳೂರು ರೈಲ್ವೆ ಸ್ಟೇಶನ್, ಸ್ಟೀಮರ್, ಕೋಟ್ಯ, ಪತೆಮಾರು ಇತ್ಯಾದಿಗಳಿಗೆ ಸಾಗಿಸುವ ಒಳ ಕಂಟ್ರಾಕ್ಟರರು ಬೇಕಾಗಿದೆ.

ಅಪೇಕ್ಷಿಸುವವರು ೧೦೦೦ ಹಂಚುಗಳನ್ನು ಸಾಗಿಸುವ ದರ ಇತ್ಯಾದಿಗಳನ್ನು ಈ ಕೆಳಗಿನ ವಿಳಾಸಕ್ಕೆ ಒಪ್ಪಿಸಿಕೊಳ್ಳುವದು.

ಮರ್ಕೆಂಟೈಲ್ ಮಿಶ್ಶನ್ ಬ್ರ್ಯಾಂಚ್,
ಮಂಗಳೂರು

ಜಿನಸು ಧಾರಣೆ

(ರೂಪಾಯಿ)

ವಸ್ತಿ ಅಕ್ಕಿ	6– 8–0	ರಿಂದ	[illegible]– 2–0
ಸಗ್ಗಿ	6– 0–0		6– 7–0
ದಾಶಿ	5–14–0	,,	6– 6–0
ಗಂಜ್ಯಾ ಅಕ್ಕಿ	6– 4–0	,,	6–12–0
ಅಸ್ಟರ್ ಬೆಳ್ತಿಗೆ	7– 8–0		12–12–0
... ಬೆಳ್ತಿಗೆ ...	13–12–0	,,	13– 4–0
ಗೋಧಿ ಗೋಣಿ ಗದ	18– 0–0	,,	18– 8–0
ಜ... ಗೋಣಿ ಗದ	8–10–0	,,	9– 8–0
ತೊಗರಿ ಗೋಣಿ ಗದ ಬೊಂಬ್ಬೈ	12– 8–0	,,	13– 0–0
ಹೆಸರು ಗೋಣಿ ಗದ		,,	13– 0–0
ಕಡಗಿಂಡೇಳ ಗೋಣಿಗದ 13–8–0	14– 8–0		16– 8–0
... ಗದ	12– 8–0		13– 0–0
... ಖಂಡಿ ಗದ	32– 8–0	,,	35– 0–0
... ಗೋಣಿ ಗದ	[illegible]–14–0	,,	8– 0–0
ಮೆಣಸು ಖಂಡಿ ಗದ	61– 0–0	,,	68– 0–0
... ಖಂಡಿ ಗ	17– 0–0	,,	
ಎಣ್ಣೆಂಡೆ ಖಂಡಿ ಗದ ಬೊಂಬ್ಬೈ	35– 0–0	,,	50– 0–0
ತೊಬ್ಬರಿ ಎಣ್ಣೆ ಮುಡಿ ಗದ	5– 4–0	,,	5– 3–0
ಎಳ್ಳೆಣ್ಣೆ ಮುಡಿ ಗದ (ಕುಡಾಸವ)		,,	6–12–0
... ಎಣ್ಣೆ ಪೆಟ್ಟಿಗೆ ಗದ	7– 2–0	,,	9– 0–0
ಮೋರಿಸ್ ಸಕ್ಕರೆ ಮುಡಿ ಗದ		,,	6– 4–0
ಕಾಫಿ ಖಂಡಿ ಗದ	175– 0–0	,,	179– 0–0
... ಖಂಡಿಗದ	110– 0–0	,,	120– 0–0
... ಮುಡಿ ಗದ		,,	1– 6–0
... ಖಂಡಿ ಗದ	150– 0–0	,,	175– 0–0
... ಮುಡಿ ಗದ		,,	41– 0–0
... ಖಂಡಿ ಗದ	40– 0–0	,,	
... ಗದ	33– 8–0	,,	26– 4–0
... ಗದ		,,	5–13–0
...	170– 0–0	,,	180– 0–0
... ಗದ		,,	12– 0–0

ಕನ್ನಡ ಮಾತನ್ನು
ಕಲಿಯುವ ಚಿಕ್ಕಬಾಲಕರಿಗೆ ಉಪಯುಕ್ತವಾದವುಗಳು

ಅಜ್ಜಿ ಕಥೆಗಳು:
ಮೂರ್ಖ ಕರಡಿಗಳು.
ಹೇನು ಸತ್ತುದಕಾಗೆ ಬಡವಾಯಿತು
ಮೋಸದ ಕಾಳಕಷ್ಟ.

ಅಗ್ರಣಿ ಮುದ್ದೆ.
ಇಲಿಗಳ ಧಕ್ಕಧಪ್ಪೆ

ಅಕ್ಷರಮಾಲಿಕೆಯನ್ನು ಉಮಾಡುವದರಲ್ಲಿ ಸಹಕಾರಿಯಾಗಿವೆ. ... ಅರ್ಥ ಮತ್ತು ವಾಕ್ಯರಚನೆ ಇವುಗಳನ್ನು ಈ ಕಥೆಗಳ ಮೂಲಕ ಮಕ್ಕಳು ತಿಳಿದುಕೊಳ್ಳಬಹುದು. ಪ್ರಾಯದಿಂದಲೇ ಕ್ರಮವಾಗಿ ಬೇರೆ ಬೇರೆ ... ಕಥೆಗಳನ್ನು ಓದುವವರಿಂದ ಮಕ್ಕಳು ...

ಫೈನಾನ್ಶಿಯಲ್ ಇಲಾಖೆ.

ಪ್ರಕಟಣೆ.

ನಂ. 1250-F.

ಸಿಮ್ಲಾ, ಜೂನು 11ನೇ ತಾ॥ 1918ನೇ ಇಸವಿ

ಯುದ್ಧದಬಗ್ಗೆ ಇಂಡಿಯದಿಂದ ಎತ್ತಲ್ಪಡುವ ಎರಡನೆಯ ಸಾಲವು.

ರೊಕ್ಕವಾಗಿ ಬರುವ ಯಾವತ್ತೂ ಚಂದಾ ಮೊಬಲಗುಗಳು ಯುದ್ಧ ಜರಗಿಸಲ್ಪಡುವಬಗ್ಗಾಗಿ ಇಂಡಿಯಾ ದೇಶವು ಕೊಡುವ ಸಹಾಯಾರ್ಥವಾದ 100 ಮಿಲಿಯ ಪವನುಗಳ ಭಾಗವಾಗಿ ಶ್ರೀಮನ್ಮಹಾರಾಜಾ ಚಕ್ರವರ್ತಿಯವರ ಸರಕಾರಕ್ಕೆ ಒಪ್ಪಿಸಲ್ಪಡುವುವು.

ಈ ಕೆಳಗಿನ ಸಾಲಪತ್ರಗಳು ಸಾದರುಮಾಡೋಣಾಗುವವು.

1921ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ, ವಾರ್ ಬಾಂಡುಗಳೆಂಬ ಸಾಲಪತ್ರಗಳು.

ಸೇಕಡಾ 100ರ ಪ್ರಕಾರ 1921ನೇ ಇಸವಿ ಸಪ್ಟಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು.

1923ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್ ಬಾಂಡುಗಳು.

ಸೇಕಡಾ 100ರ ಪ್ರಕಾರ 1923ನೇ ಇಸವಿ ಸಪ್ಟಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು.

1925ನೇ ಇಸವಿಯ, ಸೇಕಡಾ 5½ ದರದ, ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್ ಬಾಂಡುಗಳು.

ಸೇಕಡಾ 103ರ ಪ್ರಕಾರ 1925ನೇ ಇಸವಿ ಸಪ್ಟಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು.

1928ನೇ ಇಸವಿಯ, ಸೇಕಡಾ 5½ರ ದರದ ಇನ್ಕಮ್‌ಟಾಕ್ಸ್ ಮಾಫಿಯಾದ ವಾರ್ ಬಾಂಡುಗಳು.

ಸೇಕಡಾ 105ರ ಪ್ರಕಾರ 1928ನೇ ಇಸವಿ ಸಪ್ಟಂಬರು 15ನೇ ತಾರೀಕಿನಲ್ಲಿ ಮರುಪಾವತಿಯಾಗತಕ್ಕವು.

ಮತ್ತು

ಪೋಸ್ಟ್ ಆಫೀಸು ಮೂಲವಾದ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು

ಇನ್ಕಮ್‌ಟಾಕ್ಸ್ ಮಾಫಿ

ಅಸಲ್ ವ ಬಡ್ಡಿಯ ಬಗ್ಗೆ ಇಂಡಿಯಾ ಗವರ್ನ್‌ಮೆಂಟಿನವರ ಸ್ವತ್ತುಗಳ ಮತ್ತು ಕಂದಾಯಗಳ ಜವಾಬ್ದಾರಿ ಇರುವುದು

1921, 1923, 1925 ವ 1928ನೇ ಇಸವಿಯಲ್ಲಿ ಸಂದಾಯವಾಗತಕ್ಕ ವಾರ್ ಬಾಂಡುಗಳು.

ಸಾದರು ಮಾಡುವ ಬೆಲೆ: ದರಖಾಸ್ತು ಮಾಡಿದ ಪ್ರತಿ 100 ರೂಪಾಯಿಗಳ ಬಗ್ಗೆ ರೂ 100

ಬಡ್ಡಿ —ವರ್ಷ ಒಂದರ ಸೇಕಡಾ 5½ಯ ಮೇರೆಗೆ ಮಾರ್ಚಿ 15ನೇ ತಾರೀಕಿನಲ್ಲಿ ಮತ್ತು ಸಪ್ಟಂಬರು 15ನೇ ತಾರೀಕಿನಲ್ಲಿ ಪಾವತಿಯಾಗುವುದು.

ಬಾಂಡುಗಳನ್ನು ಕೊಂಡುಕೊಳ್ಳುವ ಕಾಲದಲ್ಲಿ ಕೊಂಡುಕೊಂಡ ತಾರೀಕಿನಿಂದ 1918ನೇ ಇಸವಿಯ ಸಪ್ಟಂಬರು 14ನೇ ತಾರೀಕಿನ ವರೆಗಿನ ಬಡ್ಡಿಯು ಮುಂಗಡವಾಗಿ ಪಾವತಿಮಾಡಲ್ಪಡುವುದು.

1918ನೇ ಇಸವಿಯ ಸಪ್ಟಂಬರು 14ನೇ ತಾರೀಕಿನ ನಂತರ ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳೋಣಾದ ಬಾಂಡುಗಳ ಸಂಗತಿಯಲ್ಲಿ ಕೊಂಡುಕೊಂಡ ತಾರೀಕಿನಿಂದ 1919ನೇ ಇಸವಿಯ ಮಾರ್ಚಿ 14ನೇ ತಾರೀಕಿನ ವರೆಗಿನ ಬಡ್ಡಿಯು ಮುಂಗಡವಾಗಿ ಕೊಡಲ್ಪಡುವುದು.

ವಿಶೇಷ ಹಕ್ಕುಗಳು —1921, 1923, 1925 ವ 1928ನೇ ಇಸವಿಯ ವಾರ್ ಬಾಂಡುಗಳು, ಅವು ಚಲಾವಣೆಯಲ್ಲಿರುವ ಕಾಲದಲ್ಲಿ, ಇನ್ನು ಮುಂದೆ ಇಂಡಿಯಾ ಗವರ್ನ್‌ಮೆಂಟಿನವರು ಸಾದರು ಮಾಡುವ ಯಾವದಾದರೂ ದೀರ್ಘಕಾಲದ ಸಾಲಕ್ಕೆ ಚಂದಾ ಹಾಕುವ ಉದ್ದೇಶದಬಗ್ಗೆ, ಅಂಥ ಸಾಲಕ್ಕೆ ಯಾವ ದರದಲ್ಲಿ ಬಡ್ಡಿ ಕೊಡುವುದಾದರೂ ಸರಿಯೇ, ರೊಕ್ಕಕ್ಕೆ ಸಮಾನವಾಗಿ ನೂರಕ್ಕೆ ನೂರರಂತೆ ಸ್ವೀಕರಿಸಲ್ಪಡುವುವು.

1921, 1923, 1925 ವ 1928ನೇ ಇಸವಿಯ ವಾರ್ ಬಾಂಡುಗಳ ಮೇಲಿನ ಬಡ್ಡಿಯು ಇನ್ಕಮ್‌ಟಾಕ್ಸಿನಿಂದ (ಆದಾಯ ತೆರಿಗೆಯಿಂದ) ವಿನಾಯಿಸಲ್ಪಡುವುದು. ಆದರೆ ಇತರ ಆದಾಯದ ಮೇಲೆ ಹೊರಿಸಲ್ಪಡುವ ತೆರಿಗೆಯ ದರವನ್ನು ನಿರ್ಣಯಿಸುವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲ್ಪಡುವುದು ... ಸೂಪರ್ ಟಾಕ್ಸಿಗೆ ಗುರಿಪಡುವುದು.

ಸೆಕ್ಯೂರಿಟಿ ಪತ್ರಗಳ ನಮೂನೆ —ವಾರ್ ಬಾಂಡುಗಳು (a) ಇನ್‌ಸ್ಕ್ರೈಬ್ಡ್ (ಹೆಸರು ರಿಜಿಸ್ಟ್ರಿಮಾಡಿರುವ) ಸ್ಟಾಕ್ ಸರ್ಟಿಫಿಕೇಟುಗಳ ಅಥವಾ (b) ಪ್ರಾಮಿಸರಿ ನೋಟುಗಳ ನಮೂನೆಯಲ್ಲಿ ಕೊಡಲ್ಪಡುವವು. ಇವುಗಳು ತದನಂತರ, ಅಪೇಕ್ಷಿಸುವುದಾದರೆ, ಬ್ಯಾರರ್ ಬಾಂಡುಗಳಾಗ್ಗೆ, ಅವು ಸಿಕ್ಕುವಲ್ಲಿ, ಖರ್ಚು ಇಲ್ಲದೇನೇ, ಬದಲಾಯಿಸಲ್ಪಡುವುವು.

ಯಾವ ನಮೂನೆಯಲ್ಲಿ ಸಿಕ್ಕಿದರೆ ಉತ್ತಮವೆಂದು ಕೊಂಡುಕೊಳ್ಳುವವನು ಸೂಚಿಸದಿದ್ದ ಪಕ್ಷದಲ್ಲಿ, ವಾರ್ ಬಾಂಡುಗಳು ಇನ್‌ಸ್ಕ್ರೈಬ್ಡ್ ಸ್ಟಾಕ್ ಸರ್ಟಿಫಿಕೇಟಿನ ರೂಪವಾಗಿ ಸಾದರು ಮಾಡಲ್ಪಡುವವು.

ಪ್ರಾಮಿಸರಿ ನೋಟುಗಳು, ಕಾಲವಿಳಂಬವನ್ನು ತಪ್ಪಿಸುವುದಕ್ಕಾಗಿ, ಪ್ರಥಮತಃ ಸಾಧ್ಯವಿರುವಮಟ್ಟಿಗೆ ಆದಷ್ಟು ಕಡಿಮೆ ಬೇರೆ ಬೇರೆ ಪತ್ರಗಳಾಗಿ ಕೊಡಲ್ಪಡುವುವು. ಆದರೆ, ಕ್ರಮೇಣ ಏನೂ ಖರ್ಚು ಹೊರಿಸಲ್ಪಡದನೇ, ಯಾವ ತರಗತಿಯವುಗಳು ಬೇಕೆಂದು ಅಪೇಕ್ಷಿಸಲ್ಪಡುತ್ತದೋ ಆ ತರಗತಿಯವುಗಳ ಬಗ್ಗೆ ಬದಲಾಯಿಸಲ್ಪಡಬಹುದು. ದರಖಾಸ್ತು ಮಾಡಿದ ಮೊಬಲಗಿನ ಬಗ್ಗೆ ಒಂದೇ ಸ್ಟಾಕ್ ಸರ್ಟಿಫಿಕೇಟು ಕೊಡಲ್ಪಡುವುದು.

ಬ್ಯಾಂಕುಗಳಲ್ಲಿ ಮತ್ತು ಗವರ್ನ್‌ಮೆಂಟ್ ಆಫೀಸುಗಳಲ್ಲಿ ಪ್ರಾಮಿಸರಿ ನೋಟುಗಳ ರೂಪವಾಗಿ ಬಾಂಡುಗಳನ್ನು ಕೊಂಡುಕೊಳ್ಳೋಣ

1. 100 ರೂಪಾಯಿಗಳ—ಯಾ—ಅದರ ಅಪವರ್ತ್ಯಗಳ (ಎಂದರೆ, ರೂ. 100, 200, 300 ಈ ಮೇರೆಗಿನ ತರಗತಿಗಳಲ್ಲಿ ಪ್ರಾಮಿಸರಿ ನೋಟುಗಳ ರೂಪವಾಗಿ ವಾರ್ ಬಾಂಡುಗಳನ್ನು 1918ನೇ ಇಸವಿಯ ಜೂನ್ 3ನೇ ತಾರೀಖಿನಿಂದ 1918ನೇ ಇಸವಿಯ ಸಪ್ಟಂಬರು 14ನೇ ತಾರೀಖಿನ ವರೆಗೆ, ಸಲಬೇಕಾದ ಮೊಬಲಗನ್ನು ಪಾವತಿಮಾಡಿದ್ದಲ್ಲಿ,

(a) ಕ್ರಮವಾಗಿ ಅರ್ಜಿಕೊಡದೇನೇ, ಬಂಗಾಳ, ಬೊಂಬಾಯಿ ಮತ್ತು ಮದ್ರಾಸ್ ಬ್ಯಾಂಕುಗಳ ಹೆಡ್ ಆಫೀಸುಗಳಲ್ಲಿ, ಅಥವಾ ಅವುಗಳ ಯಾವದಾದರೂ ಇಂಡಿಯದಲ್ಲಿರುವ ಶಾಖೆಯಲ್ಲಿ, ಮತ್ತು

(b) ಅರ್ಜಿಯನ್ನು ಮಾಡಲಾಗಿ, ಕಂಟ್ರೋಲರ್ ಆಫ್ ಕರೆನ್ಸಿ, ಕಲ್ಕತ್ತಾ, ಇವರ ಆಫೀಸಿನಲ್ಲಿ, ಅಥವಾ ಯಾವನಾದರೂ ಅಕೌಂಟಾಂಟ್ ಜನರಲ್‌ರ—ಯಾ—ಕಂಟ್ರೋಲರರ ಆಫೀಸಿನಲ್ಲಿ, ಅಥವಾ ಯಾವದಾದರೂ ಗವರ್ನಮೆಂಟ್ ಟ್ರೆಜರಿ—ಯಾ—ಸಬ್ ಟ್ರೆಜರಿಯಲ್ಲಿ ಕೊಂಡುಕೊಳ್ಳಬಹುದು.

ಅರ್ಜಿಗಳು ಸರಕಾರದ ಯಾವದಾದರೂ ಟ್ರೆಜರಿ ಅಥವಾ ಸಬ್ ಟ್ರೆಜರಿ ಆಫೀಸುಗಳಲ್ಲಿ ದೊರಕುವ ಫಾರಮ್ಮುಗಳಲ್ಲಿ ಮಾಡಲ್ಪಡಬಹುದು, ಅಥವಾ ದರಖಾಸ್ತು ಮಾಡಿರುವ ಬಾಂಡುಗಳ ಮೊಬಲಗನ್ನು ಮತ್ತು ವಿವರವನ್ನು, ಕೊಂಡುಕೊಳ್ಳುವವನ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು, ಮತ್ತು ಬಡ್ಡಿಯು ಯಾವ ಖಜಾನೆಯಲ್ಲಿ ಪಾವತಿಯಾಗಬೇಕೋ ಆ ಖಜಾನೆಯನ್ನು ಸ್ಪಷ್ಟವಾಗಿ ನಮೂದಿಸಿ ಇತರ ಯಾವದಾದರೂ ನಮೂನೆಯಲ್ಲಿ ಮಾಡಲ್ಪಡಬಹುದು.

ಗವರ್ನಮೆಂಟ್ ಆಫೀಸುಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ಇನ್‌ಸ್ಕ್ರೈಬ್ಡ್ ಸ್ಟಾಕ್ ರೂಪವಾಗಿ ಬಾಂಡುಗಳನ್ನು ಕೊಂಡುಕೊಳ್ಳೋಣ.

2. ಇನ್‌ಸ್ಕ್ರೈಬ್ಡ್ ಸ್ಟಾಕ್ ರೂಪವಾದ ವಾರ್ ಬಾಂಡುಗಳನ್ನು 100 ರೂಪಾಯಿಗಳ ಯಾ—ಅದರ ಅಪವರ್ತ್ಯಗಳ ತರಗತಿಗಳಲ್ಲಿ, 1918ನೇ ಇಸವಿಯ ಜೂನ್ 3ನೇ ತಾರೀಖಿನಿಂದ 1918ನೇ ಇಸವಿಯ ಸಪ್ಟಂಬರು 14ನೇ ತಾರೀಖಿನ ವರೆಗೆ, ಸಲಬೇಕಾದ ಮೊಬಲಗನ್ನು ಪಾವತಿಮಾಡಿ ಅರ್ಜಿ ಮಾಡಲಾಗಿ, ಪಬ್ಲಿಕ್ ಡೆಟ್ ಆಫೀಸ್, ಕಲ್ಕತ್ತಾ ಅವರಿಂದ ನೇರಾಗಿ ಅಥವಾ ಈ ಕೆಳಗಿನ ಯಾವದಾದರೂ ಆಫೀಸುಗಳಿಂದ ಪಡೆಯಬಹುದು:—

(a) ಕರೆನ್ಸಿಯ ಕಂಟ್ರೋಲರರ ಆಫೀಸು, ಕಲ್ಕತ್ತಾ, ಅಥವಾ ಯಾವನಾದರೂ ಅಕೌಂಟಾಂಟ್ ಜನರಲ್—ಯಾ—ಕಂಟ್ರೋಲರ್,

(b) ಬಂಗಾಳ, ಬೊಂಬಾಯಿ—ಯಾ—ಮದ್ರಾಸ್ ಬ್ಯಾಂಕುಗಳ ಹೆಡ್ ಆಫೀಸುಗಳಲ್ಲಿ ಯಾ—ಇಂಡ್ಯದಲ್ಲಿರುವ ಸದರೀ ಬ್ಯಾಂಕುಗಳ ಯಾವದಾದರೂ ಬ್ರಾಂಚು ಯಾನೆ ಶಾಖೆ;

(c) ಯಾವದಾದರೂ ಗವರ್ನ್‌ಮೆಂಟ್ ಟ್ರೆಜರಿ—ಯಾ—ಸಬ್ ಟ್ರೆಜರಿ.

ಅರ್ಜಿಗಳು ಇದಕ್ಕೆ ಲಗತ್‌ಮಾಡಿರುವ ನಮೂನೆಯಲ್ಲಿ (A ಫಾರ್ಮಿನಲ್ಲಿ)—ಯಾ—ದರಖಾಸ್ತು ಮಾಡಿರುವ ಬಾಂಡುಗಳ ಮೊಬಲಗು ಮತ್ತು ವಿವರವನ್ನು, ಅರ್ಜಿದಾರನ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು, ಮತ್ತು ಬಡ್ಡಿಯು ಯಾವ ಖಜಾನೆಯಲ್ಲಿ ಪಾವತಿಯಾಗಬೇಕೆಂದು ಆತನು ಅಪೇಕ್ಷಿಸುತ್ತಾನೋ ಆ ಖಜಾನೆಯನ್ನು ಸ್ಪಷ್ಟವಾಗಿ ನಮೂದಿಸಿ ಇತರ ಯಾವದಾದರೂ ನಮೂನೆಯಲ್ಲಿ ಮಾಡಲ್ಪಡಬಹುದು.

ಪೋಸ್ಟ್ ಆಫೀಸುಗಳಲ್ಲಿ ಬಾಂಡುಗಳನ್ನು ಕೊಂಡುಕೊಳ್ಳೋಣ

3. ಇನ್‌ಸ್ಕ್ರೈಬ್ಡ್ ಸ್ಟಾಕ್—ಯಾ—ಪ್ರಾಮಿಸರಿ ನೋಟುಗಳ ರೂಪವಾಗಿ ವಾರ್ ಬಾಂಡುಗಳನ್ನು 25 ರೂಪಾಯಿಗಳ—ಯಾ—ಅದರ ಅಪವರ್ತ್ಯಗಳ ತರಗತಿಗಳಲ್ಲಿ, ಅತ್ಯಧಿಕ 10,000 ರೂಪಾಯಿಗಳ ಮಿತಕ್ಕೆ ಒಳಪಟ್ಟು, 1918ನೇ ಇಸವಿಯ ಜೂನ್ 3ನೇ ತಾರೀಕಿನಿಂದ 1918ನೇ ಇಸವಿಯ ಡಿಸೆಂಬರು 21ನೇ ತಾರೀಖಿನ ವರೆಗೆ, ಸೇವಿಂಗ್ಸ್ ಬ್ಯಾಂಕ್ ಕೆಲಸ ನಡೆಯಿಸುವ ಯಾವದಾದರೂ ಪೋಸ್ಟ್ ಆಫೀಸಿನಲ್ಲಿ ಸಲಬೇಕಾದ ಮೊಬಲಗನ್ನು ಪಾವತಿಮಾಡಿ ಅರ್ಜಿಮಾಡಲಾಗಿ ಕೊಂಡುಕೊಳ್ಳಬಹುದು. ಅರ್ಜಿಗಳು ಪ್ರಾಮಿಸರಿ ನೋಟುಗಳ ರೂಪವಾಗಿ ಬಾಂಡುಗಳನ್ನು ಕೊಂಡುಕೊಳ್ಳುವ ಬಗ್ಗೆ ಉಪಯೋಗಿಸುವ ಫಾರಮ್ಮುಗಳಲ್ಲಿ ಅಥವಾ ದರಖಾಸ್ತು ಮಾಡಿರುವ ಬಾಂಡುಗಳ ಮೊಬಲಗು ವ ವಿವರವನ್ನು, ಅರ್ಜಿದಾರನ ಸಂಪೂರ್ಣ ಹೆಸರು ವ ವಿಳಾಸವನ್ನು ಮತ್ತು ಬಡ್ಡಿಯು ಯಾವ ಖಜಾನೆಯಲ್ಲಿ ಪಾವತಿಯಾಗಬೇಕೆಂದು ಆತನು ಅಪೇಕ್ಷಿಸುತ್ತಾನೋ ಆ ಖಜಾನೆಯಲ್ಲಿ ಸ್ಪಷ್ಟವಾಗಿ ನಮೂದಿಸಿ ಇತರ ಯಾವದಾದರೂ ನಮೂನೆಯಲ್ಲಿ ಮಾಡಲ್ಪಡಬಹುದು.

ಪೋಸ್ಟ್ ಆಫೀಸಿನ ಮುಖಾಂತರ ಕೊಂಡುಕೊಳ್ಳೋಣಾದ ಬಾಂಡುಗಳನ್ನು, ಹಾಗೆ ಇಷ್ಟಪಡುವ ದಾದರೆ, ಪೋಸ್ಟ್ ಮತ್ತು ಟೆಲಿಗ್ರಾಫುಗಳ ಅಕೌಂಟಾಂಟ್ ಜನರಲ್‌ರ ತಾಬೆಯಲ್ಲಿ ಇರಗೊಡಿಸಬಹುದು.

ಪಾವತಿ

4. ಪಾವತಿಯನ್ನು ರೊಕ್ಕದ ರೂಪವಾಗಿಯಾಗಲಿ ಚಕ್ಕಿನ ಮೂಲವಾಗಿಯಾಗಲಿ ಮಾಡಬಹುದು ಬಾಂಡುಗಳನ್ನು ಕೊಂಡುಕೊಳ್ಳುವ ಸಂಗತಿಯಲ್ಲಿ, ಚಕ್ಕುಗಳನ್ನು ಕೊಂಡುಕೊಳ್ಳೋಣವು ಒಂದು ಪ್ರೆಸಿಡೆನ್ಸಿ ಬ್ಯಾಂಕಿನ ಹೆಡ್ ಆಫೀಸಿನಲ್ಲಿದರೆ ಅದರ ಸೆಕ್ರೆಟರಿ ವ ಟ್ರೆಜರರ್ ಇವರ ಹೆಸರಲ್ಲಿ, ಸದರೀ ಪ್ರೆಸಿಡೆನ್ಸಿ ಬ್ಯಾಂಕುಗಳ ಶಾಖೆಯಲ್ಲಾದರೆ ಅದರ ಏಜಂಟಿನ ಹೆಸರಲ್ಲಿ ಬರೆಯತಕ್ಕದ್ದು. ಒಂದು ಗವರ್ನ್‌ಮೆಂಟ್ ಆಫೀಸಿನಲ್ಲಿ ಯಾ ಒಂದು ಪೋಸ್ಟ್ ಆಫೀಸಿನಲ್ಲಿ ಕೊಂಡುಕೊಳ್ಳುವ ಸಂಗತಿಗಳಲ್ಲಿ ಚಕ್ಕು ಅರ್ಜಿಯು ಯಾರ ಮುಂದೆ ಹಾಜರು ಪಡಿಸೋಣಾಗುತ್ತದೋ ಆ ಆಫೀಸರನ ಹೆಸರಲ್ಲಿ ಬರೆಯಲ್ಪಡತಕ್ಕದು.

ಪೋಸ್ಟ್ ಆಫೀಸುಗಳು ಪಾವತಿಮಾಡೋಣವು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಅರ್ಜಿದಾರನ ಹೆಸರಲ್ಲಿ ಜಮೆಯಿರುವ ಮೊಬಲಗುಗಳನ್ನು ಹಿಂದಕ್ಕೆ ಪಡೆಯುವದರ ಮೂಲವಾಗಿ ಸಹಾ ಮಾಡಲ್ಪಡಬಹುದು.

ಪ್ರೆಸಿಡೆನ್ಸಿ ಬ್ಯಾಂಕುಗಳ ಹೆಡ್ ಆಫೀಸುಗಳಲ್ಲಿ ಪಾವತಿಮಾಡೋಣವು ಇಂಡಿಯದ ಟ್ರೆಜರಿ ಬಿಲ್ಲುಗಳ ರೂಪವಾಗಿ ಸಹಾ ಮಾಡಲ್ಪಡಬಹುದು, ಸದರೀ ಬಿಲ್ಲುಗಳು, ಬಿಲ್ಲಿನ ವಾಯಿದೆಯ ಪೈಕಿ ಕಳೆದು ಹೋಗದೆ ಇರುವ ಭಾಗದ ಮೇಲೆ ವರ್ಷಕ್ಕೆ ಸೇಕಡಾ 4ರ ದರದಲ್ಲಿ ಎಣಿಸಲ್ಪಡುವ ಡಿಸ್ಕೌಂಟನ್ನು ವಜಾ ಮಾಡಿ ಅವುಗಳ ಅಂಕಿತ ಮೌಲ್ಯಕ್ಕೆ ಸರಿಯಾಗಿ ನಗದು ಪಾವತಿಯಾಗಿ ಸ್ವೀಕರಿಸಲ್ಪಡುವವು.

ದಲಾಲಿ

5. ಪ್ರೆಸಿಡೆನ್ಸಿ ಬ್ಯಾಂಕುಗಳು, ಅಂಗೀಕರಿಸಲ್ಪಟ್ಟ ಬ್ಯಾಂಕರುಗಳಿಗೂ, ದಲಾಲಿಗಳಿಗೂ, ವಾರ್ ಬಾಂಡುಗಳನ್ನು ಕೊಂಡುಕೊಳ್ಳುವುದಕ್ಕಾಗಿ ರೊಕ್ಕವಾಗಿಯಾಗಲಿ ಚೆಕ್ಕು ಮೂಲವಾಗಿಯಾಗಲಿ ಅವರ ಮುಖಾಂತರ ಮಾಡಿದ ಪಾವತಿಯ ಮೇಲೆ ಸೇಕಡಾ ¼ರ ಪ್ರಕಾರ ದಲಾಲಿಯನ್ನು ಕೊಡುವವು.

ಅಂಗೀಕರಿಸಲ್ಪಟ್ಟ ಬ್ಯಾಂಕರುಗಳಿಗೂ ದಲಾಲಿಗಳಿಗೂ, ಅವರ ಮೊಹರು ಇದ್ದ, ಕಂಟ್ರೋಲರ್ ಆಫ್ ಕರೆನ್ಸಿ, ಇವರ ಮುಂದೆ ಯಾ ಯಾವನಾದರೂ ಅಕೌಂಟಾಂಟ್ ಜನರಲ್ ಅಥವಾ ಕಂಟ್ರೋಲರರ ಮುಂದೆ ಯಾ ಯಾವದಾದರೂ ಗವರ್ನ್‌ಮೆಂಟ್ ಟ್ರೆಜರಿ ಯಾ ಸಬ್ ಟ್ರೆಜರಿಯಲ್ಲಿ ಹಾಜರುಪಡಿಸೋಣಾದ ವಾರ್ ಬಾಂಡುಗಳ ಬಗ್ಗಿನ ಅರ್ಜಿಗಳ ಸಂಗತಿಯಲ್ಲಿ ಸೇಕಡಾ ¼ರ ಪ್ರಕಾರ ದಲಾಲಿಯು ಕೊಡಲ್ಪಡುವುದು.

ಪ್ರೆಸಿಡೆನ್ಸಿ ಬ್ಯಾಂಕುಗಳು ಅಂಗೀಕರಿಸಲ್ಪಟ್ಟ ಬ್ಯಾಂಕರುಗಳಿಗೂ, ದಲಾಲಿಗಳಿಗೂ, ವಾರ್ ಬಾಂಡುಗಳನ್ನು ಕೊಂಡುಕೊಳ್ಳುವದಕ್ಕಾಗಿ ಇಂಡಿಯದ ಟ್ರೆಜರಿ ಬಿಲ್ಲುಗಳ ರೂಪವಾಗಿ ಅವರ ಮುಖಾಂತರ ಮಾಡೋಣಾದ ಯಾವದಾದರೂ ಪಾವತಿಯ ಮೇಲೆ ಸೇಕಡಾ 1/16ರ ಪ್ರಕಾರ ದಲಾಲಿಯು ಕೊಡಲ್ಪಡುವುದು.

ಪೋಸ್ಟ್ ಆಫೀಸಿನ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳು (ಇನ್ಕಮ್‌ಟಾಕ್ಸ್ ಮಾಫಿ).

ರೂ. 10, ರೂ. 20, ರೂ. 50, ರೂ. 100 ಮತ್ತು ರೂ. 500ರ ಬಾಬತು

ಸಾದರು ಮಾಡಲ್ಪಟ್ಟ 5 ವರ್ಷಗಳ ನಂತರ ಪಾವತಿಯಾಗತಕ್ಕವು.

ಸಾದರುಮಾಡುವ ಬೆಲೆ ರೂ. 7-12, ರೂ. 15-8, ರೂ. 38-12, ರೂ. 77-8 ಮತ್ತು ರೂ. 387-8

6. ಪೋಸ್ಟ್ ಆಫೀಸಿನ 5 ವರ್ಷಗಳ ವಾಯಿದೆಯ ಕ್ಯಾಷ್ ಸರ್ಟಿಫಿಕೇಟುಗಳನ್ನು, ಯಾವ ಕಾಲದಲ್ಲಾದರೂ, ಯಾವನೊಬ್ಬ ಮನುಷ್ಯನು ಅತ್ಯಧಿಕ 10,000 ರೂಪಾಯಿಗಳಿಗೆ ಮೀರಿ ಹೊಂದಿರಕೂಡದೆಂಬುದಕ್ಕೆ ಒಳಪಟ್ಟು, ಸೇವಿಂಗ್ಸ್ ಬ್ಯಾಂಕ್ ಕೆಲಸ ನಡೆಯಿಸುವ ಯಾವ ಪೋಸ್ಟ್ ಆಫೀಸಿನಲ್ಲಾದರೂ ಕೊಂಡುಕೊಳ್ಳಬಹುದು.

7. ಈ ಸರ್ಟಿಫಿಕೇಟುಗಳನ್ನು ಅವನ್ನು ಕೊಟ್ಟ ಪೋಸ್ಟ್ ಆಫೀಸಿನಲ್ಲಿ ಸದರೀ 5 ವರ್ಷಗಳ ವಾಯಿದೆಯಲ್ಲಿಯೂ ಯಾವ ಕಾಲದಲ್ಲಾದರೂ, ಯಾವ ಸಂಗತಿಯಲ್ಲಿಯೂ ಅವುಗಳಿಗಾಗಿ ಪ್ರಥಮತಃ ಪಾವತಿಮಾಡಿದ ಮೊಬಲಗಿಗೆ ಕಡಿಮೆಯಾಗದ ದರಗಳಲ್ಲಿ ವಟಾಯಿಸಬಹುದು. ಸದರೀ ದರಗಳನ್ನು ಮತ್ತು ಇತರ ತಪ್ಸೀಲುಗಳನ್ನು ಯಾವ ಪೋಸ್ಟ್ ಆಫೀಸಿನಿಂದಲಾದರೂ ತಿಳಿದುಕೊಳ್ಳಬಹುದು.

ಎಲ್. ಡೇವಿಡ್ಸನ್,
ಆಕ್ಟಿಂಗ್ ಚೀಫ್ ಸೆಕ್ರೆಟರಿ.

C. N. SARAVANA MUDALIYAR,
for Senior Translator to Government.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೇ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1 ಚಿಕ್ಕ ಸ್ವಾಬು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ. ಶತಧೌತ ಘೃತವೆಂಬ ಈ ಘೃತವು ಪ್ಲೇಗ್ ಬ್ಯುಬೋ ಎಂಬ ಗಡ್ಡೆಯನ್ನು ಹುಚ್ಚು ನಾಯಿ ಕಡಿತಗಳನ್ನೂ ಜಳಿ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ವಾಬು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ ವಿ ಎಸ್. ಎ ಎಮ್. ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್

ತಂತಿ ವಿಳಾಸ— "ಪಂಡಿತ್" ಮದರಾಸ್.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರೂ ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮನುಷ್ಯನಿಗೆ ವೈದ್ಯರ ಸಹಾಯವನ್ನು ಕಾಯು ನೋಡುವುದು ಅನಾವಶ್ಯಕವಾಗುವುದು.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಶಕ್ತಿಯಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತಂಗಿದರೆ ಟಪಾಲು ಖರ್ಚು ಸೇರಿ 1—8—0
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತಂಗಿದರೆ ಟಪಾಲು ಖರ್ಚು ಸೇರಿ 2—12—0
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತಂಗಿದರೆ ಟಪಾಲು ಖರ್ಚು ಸೇರಿ 5—0—0

ರಿಜಿಸ್ಟರಾದ ಈ ವ್ಯಾಪಾರದ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಸೀಸೆ 1ಕ್ಕೆ 9 ಆಣೆ ಮಾತ್ರ

ಯೋಗ್ಯತಾ ಪತ್ರಗಳು

ಮ|| ರಾ|| ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್ ವೈ ಇನ್‌ಸ್ಟಿಟ್ಯೂಟ್ ಆಫ್ ಸ್ಕಿನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ಬಿ ಎನ್ ಆಫ್ ದಿ ಸ್ಕಾಟಿಷ್ ಇನ್‌ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕೆಮಿಸ್ಟ್, ಏಡಿಯುರಿವೇಲ್ ನಂ. 2, ಬೆಂಗಳೂರು ಇವರು ಬರೆದಿರುವುದು: ತಮ್ಮ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿದುದರಲ್ಲಿ ಶ್ವಾಸಕೋಶ ವ್ಯಾಧಿ, ಅಜೀರ್ಣ, ಮಲಬದ್ಧತೆ, ಹೊಟ್ಟೆಯ ನೋವು, ಹೊಟ್ಟೆನೋವು, ವಿಷಮಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ, ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನು ಸ್ವರೂಪ ವೈದ್ಯರು ಉಪಯೋಗಿಸಿ ಶಿಫಾರಸ್ ಮಾಡುತ್ತೇನೆ.

ಮ|| ರಾ|| ಪಿ ಎಸ್ ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು: ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ, ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉತ್ಕೃಷ್ಟವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನು ಬಹಳ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕರ್ಮಾಟಿಕ ಮೂಲಿಕೆಗಳಿಂದಲೇ ವಿಶದವನ್ನು ತಯಾರು ಮಾಡುತ್ತಿರುತ್ತಾರೆ.

ಸಮಸ್ತ ರೋಗಗಳಿಗೂ ಫಲಪ್ರದವಾದ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ

ವಿಳಾಸ— **ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.**

ಶ್ರೀಮತ್ ಕಲ್ಯಾಣ ಬಂಧುಗಳೇ!

ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರಾಜ ವೈದ್ಯರು ಗಳಿಂದಲೂ ಪರಿಶೋಧಿಸಿ ತಯಾರಿಸಲ್ಪಟ್ಟ ಅನುಭವ ಸಿದ್ಧೌಷಧಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅಪೇಕ್ಷಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bushaqmandir.
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

"ವಸ್ತ್ರಾಮಯಾಂತಕ ವಟಿಕಾ."

ಮೇಹಸಂಬಂಧವಾದ ಮೂತ್ರ ಘಾತಾಕೃತಿ ಉರಿ ಮೂತ್ರಗಳನ್ನು 24 ಗಂಟೆಯುಲ್ಲಿಯೇ ನಿಲ್ಲಿಸುವದು. ಇದರ ಸೇವನೆಯಿಂದ 20 ತರದ ಮೇಹಗಳು ಕೂಡಲೇ ನಿಲ್ಲುವದು. ಅಶ್ಮರಿಯೆಂಬ ಕಲ್ಲು ಸಹಾ ಇದ್ದಲ್ಲಿ ಕೂಡಲೇ ಮೂತ್ರದೊಂದಿಗೆ ಬೀಳುವದು.

12 ವಾತ್ರೆಗಳಿರುವ ಡಬ್ಬಿ 1ರ ಕ್ರಯ. ... ರೂ. 1—4—0
12 ಡಬ್ಬಿಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ. „ 13—12—0
ವಿ. ಪಿ. ಚಾರ್ಜು ಬೇರೆ

ಇನ್ನೂ ನಮ್ಮಲ್ಲಿ ಅನೇಕ ಸಿದ್ಧೌಷಧಗಳು ದೊರೆಯುವವು. ಅಪೇಕ್ಷಕರು ಅರ್ಧಾಣೆ ಸ್ಟಾಂಪನ್ನಿಟ್ಟು ಪತ್ರಬರೆದಲ್ಲಿ ಕೆಟಲಾಗು ಕಳುಹಿಸಲಾದೀತು.

ನಮ್ಮ ವಿಳಾಸ— **ವೈದ್ಯ ಬಿ. ವಿಠಲ ಭಟ್ಟ,**
ಆಯುರ್ವೇದ ವೈದ್ಯಮಂದಿರ, ಉಡುಪಿ

ರೂ. 1,000 ಬಹುಮಾನ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

(ಗವರ್ನ್‌ಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್ ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲ್ಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಈ "ಸಾಲಾಮಿಸ್ರಿ ಮುರಬ್ಬಾ"ವಿನ ಸೇವನೆಯಿಂದ — ವೀರ್ಯವು ಶರೀರದಲ್ಲಿರಲು ಶಕ್ತಿಯಿಲ್ಲದವರಿಗೂ, ಮತ್ತು ಅದರಿಂದ ವೀರ್ಯ ಹೋಗುತ್ತಿದ್ದರು ಕೈಕಾಲು ಮುಟ್ಟು ಸೊಂಟದಲ್ಲಿ ನೋವಿರು, ತಲೆನೋವು ಇದ್ದರೆ, ಮಲಬದ್ಧ ಮತ್ತು ಸಂಧಿವಾತ ಇವರಿದ್ದರೂ, ಶರೀರದ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಬಲಿಷ್ಠವಾಗಿ ಮಾಡುವುದು. ಮುದುಕರ ಬಲವನ್ನು ಯುವಕನಂತೆ ಮಾಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಕೆಟ್ಟಿರಿಸುವುದು, ಸೊಂಟದ ನೋವು ಸ್ವಲ್ಪವಾದರೂ ಇರದು. ಈ ಸಾಲಾಮಿಸ್ರಿ ಎಂಬುದು ಕಾಬೂಲ್ ಕಾಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಫ್ರಿಕಾ, ಕಲ್ಕತ್ತಾ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳುಹಿ ಅವುಗಳ ಪ್ರತಿಯನ್ನು ನೋಡಬಹುದು. ಅವನ್ನು ಯಾರಾದರೂ ಸುಳ್ಳು ಎಂದು ನಿರ್ಧರಿಸಿಕೊಟ್ಟರೆ ಮೇಲೆ ಹೇಳಿದ ಬಹುಮಾನವು ಕೊಡಲ್ಪಡುತ್ತದೆ. ತಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಪಡೆಯಬಹುದು.

ಒಂದು ಡಬ್ಬ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕೊಡುತ್ತದೆ. 3-4 ಡಬ್ಬಗಳನ್ನು ಉಪಯೋಗಿಸುವುದರಿಂದ ಜನ್ಮಾಂತರ ದವರೆಗೂ ಗುಣ ಕೊಡುತ್ತದೆ. ಉಪಯೋಗಿಸುವ ವಿಧಾನ ಡಬ್ಬಿಯ ಜತೆಯಲ್ಲಿರುವುದು.

ಕ್ರಯ ಡಬ್ಬ 1ಕ್ಕೆ ರೂ. 2 ಟಪ್ಪಾಲು ಖರ್ಚು 1ರಿಂದ 4 ಡಬ್ಬಿಗಳ ವರೆಗೆ ಆ. 6

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬ ಡಿಪೊ, ಬೆಂಗಳೂರು ಸಿಟಿ.

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್ಸ್.

(1ನೇ ಭಾಗ ಮತ್ತು 2ನೇ ಭಾಗ)



ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಮಾಡತಕ್ಕವರುಗಳಿಗೆ ಬಹಳ ಉಪಯುಕ್ತವಾದವುಗಳು. ಇವರಲ್ಲಿ ಒಂದನೇ ಭಾಗ ಮದರಾಸು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಇಂಗ್ಲೀಷು ಟೆಕ್ಸ್ಟನ್ನು ಮತ್ತು ಮೈಸೂರು ಗವರ್ನರ್ ಅವರ ಸಮ್ಮತಿಯಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ದಂಡೆಗಳನ್ನು, ಬಸ್ಕಿಗಳನ್ನು ತೋರಿಸುವ 56 ಪ್ರತಿಮೆ ಗಳನ್ನು, ಎರಡನೇ ಭಾಗದಲ್ಲಿ 43 ಪ್ರತಿಮೆ ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಾಸಮಾಡತಕ್ಕ ಕ್ರಮಗಳನ್ನು ವಿವರಿಸಲ್ಪಟ್ಟಿವೆ.

ಪ್ರತ್ಯೇಕ ಭಾಗಕ್ಕೆ ಕ್ರಯ ರೂ. 0—12—0
ವಿ. ಪಿ. ಚಾರ್ಜು 0—3—0

ಎರಡು ಭಾಗಗಳು ಸೇರಿ ಕ್ರಯ ರೂ. 1—4—0. „ 2 ಆಣೆ

ವಿಳಾಸ— ಬಿ. ರಾಘವುಲು ನಾಯುಡು,
ಜಿಮ್ನಾಸ್ಟಿಕ್ಸ್ ಇನ್‌ಸ್ಟ್ರಕ್ಟರ್, ಪಚ್ಚೆಯಪ್ಪ ಕಾಲೇಜ್, ಮದರಾಸು.

B. RAGHAVULU NAIDU,
Senior Gymnastic Instructor,
Pachaiyappa's College, MADRAS.

ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರ ಬೋಧಿನಿ.

ಈ ಪುಸ್ತಕದಲ್ಲಿ ಅನೇಕ ಜಾತಿಯ ಅರ್ಜಿ ನಮೂನೆ, ಕ್ರಯ ಭೋಗ್ಯಲೀಸ್ ಮುಂತಾದ ಪತ್ರಗಳ ನಮೂನೆಗಳು ಮತ್ತು ಹಿಂದೂ ಲಾ ಧರ್ಮಶಾಸ್ತ್ರವೂ ಮುದ್ರಿಸಲ್ಪಟ್ಟಿರುವದು. ಅತ್ಯುತ್ತಮವಾದ ಪುಸ್ತಕ. ಬೇಗ ತರಿಸಿಕೊಳ್ಳಿರಿ. ಕ್ರಯ ಕ್ಲಾಂ ಬೈಂಡಿನ ಈ ಪುಸ್ತಕ 1ಕ್ಕೆ ರೂ. 1—8—0

ವಿವೇಕ ಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರತ್ರಯದ ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ಅನೇಕ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡ ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಭಟಸಂಖ್ಯೆಗಳು ೪೦೮ ಪ್ರತಿಯೊಬ್ಬ ಆಸ್ತಿಕರಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ 1ಕ್ಕೆ ರೂ. 2—4—0 ಅಂಚೆ 6 ಆಣೆ

ವಿಳಾಸ:—
ಎಚ್. ಎಸ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ

ನವೀನ ಪುಸ್ತಕ! ನವೀನ ಪುಸ್ತಕ!!

ಹಿಂದೂ ವ್ರತವಿವೇಕ

ಟೀಕಾಕಾರರು: ಓಷ್ಟಮನೆ ಆತ್ಮಾರಾಮ ಶಾಸ್ತ್ರಿ.

ಕ್ರಯ—ಪ್ರತಿ ಒಂದಕ್ಕೆ ಆಣೆ 10.

ವಿಳಾಸ— ಮ್ಯಾನೇಜರ್, ಶಾರದಾ ...

ಕ್ರಯ ಸುಲಭ! ಕ್ರಯ ಸುಲಭ!!

ಕಾಶಿಯಲ್ಲಿ ತಯಾರಾಗುವ ಪೀತಾಂಬರ, ಮುಗುಟ, ಶೇಲ, ರವಿಕೆ ಕಣಗಳು, ಕಸ್ತೂರಿ ವಸ್ತ್ರಗಳು ಇನ್ನೂ ಅನೇಕ ತರದ ಸಾಮಾನುಗಳನ್ನು ಕೋರುವವರಿಗೆ ವಿ. ಪಿ. ಯಿಂದ ಕಳುಹಿಸಲಾದೀತು. ...

ADDRESS— ...

ಸಣ್ಣ ಮಕ್ಕಳಿಗೆ ಶಕ್ತಿವರ್ಧಕ.

ಡೊಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವದರಿಂದ ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವದು, ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ

ಕ್ರಯ ಬಾಟ್ಲಿ 1ಕ್ಕೆ 12 ಆಣೆ ಟ ಖ 4 ಆಣೆ

ಕೆ. ಟಿ. ಡೊಂಗರೆ ಕಂಪೆನಿ,

ಗಿರಗಾಂವ, ಮುಂಬಯಿ

ಮಂಗಳೂರು ಏಜಂಟರು

ಉಲನ್ ಮಾರ್ಟ್, ಮಾಧವ ಬಿಲ್ಡಿಂಗ್ಸ್

ಜ್ವರಾಂತಕ ಗುಳಿಗೆಗಳು

ಇದು ವ್ಯಾಪಕ ಕ್ರಿಮಿಹರ ಪಾಚಕಾಗ್ನಿ ನಿಕ್ಷಯುಂಟಾದ ಜ್ವರಗಳಿಗೆ ಮಹೌಷಧವು ಇದನ್ನು ಜ್ವರವಿರುವಾಗಲೂ ಬಿಟ್ಟಿರುವಾಗಲೂ ಸೇವಿಸಬಹುದು 40 ಗುಳಿಗೆಗಳುಳ್ಳ ಡಬ್ಬಿಗೆ ರೂ 1 0

ಕಾಸಾಂತಕ ಗುಳಿಗೆಗಳು

ಇದು ಕೈಯ ಉಬ್ಬಸ ಮುಂತಾದ ಶ್ವಾಸಹಾಳದ ರೋಗಗಳನ್ನು ನಿವಾರಿಸುತ್ತ ... ಸುತ್ತ ಸಂಗೀತಗಾರರಿಗೆ ಇದು ಮ್ಯ ... 6 1 ಗುಳಿಗೆಗಳ ಡಬ್ಬಿಗೆ ರೂ 1

ಶಾಸ್ತ್ರಕಾಸ್ತ್ರವೆಂಬ ಉತ್ತಮ ಪುಸ್ತಕವನ್ನು ದಯ ಮಾಡಿ ಓದುವದು ಉಚಿತವು ಪುಸ್ತಕವು ಉಚಿತವು ಅಂಚೆ ಹಾಸಲ ...

ಪ್ರಸಿದ್ಧವಾದ ಆತಂಕನಿಗ್ರಹ ಗುಳಿಗೆಗಳು ಉಪಯೋಗಿಸಿರಿ ಅದ ಅವ್ಯಕ್ತ ಗುಣದನ್ನುಂಟುಮಾಡುವದು ಕ್ರಯ ೧ ರೂಪಾಯಿ ಮಾತ್ರವೇ

ವಿಳಾಸ —

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ 16 , ಜಾಮ್ನಗರ, ಮದರಾಸು

ಮತ್ತು 96 ಮೌಂಟ್ ರೋಡ್ . ಮದ್ರಾಸು

Local Agents Raphael & Co.

Brito Buildings

Hampankatta MANGALORE

ಅನುಭವಸಿದ್ಧವಾದ ವನೌಷಧಗಳು

೧ ಕುಂತಳಾನಂದ ತೈಲವು ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿನ್ನು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ ರೂ ೩ ಬಾಟ್ಲಿಗೆ ೨ ರೂ ೧೧ ಆಣೆ

೨ ಪ್ರಮೇಹರಿಪು ಬಿಂದು ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ರೂ. ೮ ಆಣೆ.

೩. ಸೂರಣಾವ ಲೇಹ ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು ಪೌಷ್ಟಿಕವಾಗಿದೆ ಡಾಕರಿಗೆ ೨ ರೂ

೪. ಪ್ರಜ್ಞಾ ಸಾರಸ್ವತ ಚೂರ್ಣ ಬುದ್ಧಿವರ್ಧಕ, ಅಪಸ್ಮಾರ, ಉನ್ಮಾದ, ವಾತ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು ಸ್ಮರಣ ಶಕ್ತಿಯನ್ನು ಬೆಳೆಯಿಸುವದು ನಾಲಿಗೆಗೆ ಪಟುತ್ವವನ್ನು ಕೊಡುವದು ಕಂಠ ಸ್ವರವನ್ನು ಮಧುರವನ್ನಾಗಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ

೫. ಜಗನ್ಮೋಹನ ದಂತಮಂಜನ ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೬. ಸರಳಭೇದಿ ಮಾತ್ರೆ. ಆಯಾಸವನ್ನುಂಟು ಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೭. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿರಸಿಯ ಜ್ವರ ಮುಂತಾದ ಎಲ್ಲಾ ಜ್ವರಗಳನ್ನು ತಪ್ಪದೆ ಗೆಲ್ಲುವದು ಅರ್ಧ ತೊಲೆಗೆ ೩ ರೂ.

ವಿಳಾಸ,—ಬಿ. ಎಮ್. ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದ್ರಾಸು,

B. M. NATH & CO. *Ayurvedic Chemists*

Vepery Post, MADRAS.

Karnatak Ague Mixture

ಕರ್ಣಾಟಕ ಜ್ವರಮುಕ್ತ

ಚಳಿಜ್ವರ, ಮಲೇರಿಯಾ, ಅಂತರಿಕ (ದಿನಬಿಟ್ಟು ದಿನಕ್ಕೆ ಬರ ವಂಥ) ಜ್ವರ, ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ಔಷಧ! ಲಕ್ಷಾವಧಿ ಜನರು ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು ದೊಡ್ಡ ಬಾಟ್ಲಿಯ ಕ್ರಯ ರೂ ೧

ಪೆನೋ-ಏಿಸ್ — ಕಾಲೆರಾ ಹೊಟ್ಟೆನೋವು ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ವೈದ್ಯ ಕ್ರಯ ೧೨ ಆಣೆ

ಗಜಕರ್ಣಾದ ಮುಲಾಮು:— ಬಾಟ್ಲಿ ೧ಕ್ಕೆ ೪ ಆಣೆಗಳು ಡಜನ್ ೧ಕ್ಕೆ ರೂ ೨—೪—೦ ಪೋಸ್ಟೇಜ ಬೇರೆ ನಮ್ಮ ಇತರ ಮದ್ದುಗಳ ಕ್ಯಾಟಲಾಗು ಪುಕ್ಕಟೆ

ಕರ್ಣಾಟಕ ಬ್ರದರ್ಸ್,

56 ಗಿರಗಾಂವ ಮುಂಬಯಿ

Agent – The Woollen Mart *Mangalore*

ಪಂಡಿತ ಜಪ್ಪು ಅಂತೋನ ಫೆರ್ನಾಂದಿಸರವರ

ಅನುಭವಸಿದ್ಧವಾದ ಆಯುರ್ವೇದ ಔಷಧಗಳು

ಕಂಕನಾಡಿ ಪೋಸ್ಟ್ ಮಂಗಳೂರು ದ ಕನ್ನಡ



1. ಗ್ರಹಭ್ಯರವಿ ತೈಲ್ಯ — ಈ ತೈಲವು ಮಕ್ಕಳ ಸಂದುಗಳಿಗೆ ತಿಕ್ಕುವದರಿಂದ ಬಾಲಗ್ರಹ ಅಪಸ್ಮಾರಗಳೆಂಬ ವ್ಯಾಧಿಗೆ ದಿವ್ಯ ಔಷಧ ಶೀಶೆ 1ರ ಆ 8

ಕೊಡಜಾಶಾದಿ ಮಾತ್ರೆ — ಮಕ್ಕಳಿಗೆ ಬರುವ ಎಲ್ಲಾ ತರ ವ್ಯಾಧಿಯೂ ಬಾಲಾಪಸ್ಮಾರವೂ ... ಗುಣವಾಗುವದು ಡಜನ್ 1ರ ಕ್ರಯ ಆಣೆ 6

3 ವಜ್ರಕಂದ ಧಾತುವೃದ್ಧಿ ಲೇಹ್ಯವು— ಈ ಲೇಹ್ಯವು ಸೇವಿಸುವದರಿಂದ ನಾನಾ ತರದ ದುರಭ್ಯಾಸಗಳಿಂದ ದುರ್ಬಲಿಸುತಿರುವವರಿಗೆ ಧಾತುಪುಷ್ಟಿಯೂ ರಕ್ತವೃದ್ಧಿಯೂ ಉಂಟಾಗುವದು 1ರ ... ಲೇಹ್ಯಕ್ಕೆ ರೂ 1 ... ಕ್ಕೆ ರೂ —

4 ... ಚೂರ್ಣ — ಈ ಚೂರ್ಣವು ಹಲ್ಲುಗಳಿಗೆ ತಿಕ್ಕುವದರಿಂದ ಬಾಯಿಯ ದುರ್ವಾಸನೆ ಹಲ್ಲಿನ ... ಕ್ತ ಸುರಿಯುವಿಕೆ ಕೀವು ಬರುವದು ರೋಗಗಳಾದಿಯಾಗಿ ಹಲ್ಲುಗಳನ್ನು ಬಲಪಡಿಸಿ ಹಲ್ಲುಗಳ ಸಕಲ ರೋಗ ಗುಣಮಾಡುವದು ಡಬ್ಬಿ ... ಕ್ಕೆ ಆಣೆ ... ಡಬ್ಬಿಗಳಿಗೆ ರೂ 1 ವಿ ಪಿ ಪ್ರತ್ಯೇಕ

5 ಸ್ವದೇಶಿ ಪೇಯಿನ್ ಬಾಮ್ — ಈ ಬಾಮನ್ನು ... ಆನೇಕ ವಿಧದ ನೋವುಗಳನ್ನೂ ಗುಣಮಾಡುವದು ಡಬ್ಬಿ 1ಕ್ಕೆ ಕ್ರಯ ಆಣೆ ... 12 ಡಬ್ಬಿಗಳಿಗೆ ರೂ ... ವಿ ಪಿ ಪ್ರತ್ಯೇಕ

ನಶ್ಯ ಚೂರ್ಣ ಈ ಚೂರ್ಣವನ್ನು ಮೂಗಿಗೆ ಎಳಿಯುವದರಿಂದ ಒರ್ಸೆನ್ನ ... ನಾಶ ... ಕತ್ತಿಗೆಯ ಮೇಲೆ ಆಗುವ ಸರ್ವ ವ್ಯಾಧಿಗಳಿಗೂ ದಿವ್ಯ ಔಷಧ ಡಬ್ಬಿ ... ಆ 4 ... 1 ಡಬ್ಬಿಗಳಿಗೆ ರೂ 1 — ವಿ ಪಿ ಪ್ರತ್ಯೇಕ

ಏಜಂಟರು — ಎ ಎಸ್ ಡಿ'ಸೋಜ,

ಕ್ಯಾಥೋಲಿಕ್ ಮರ್ಚಂಟ್ ಮಾರ್ಕೆಟ್ ರೋಡ ಮಂಗಳೂರು



ಕನ್ನಡ

ಕಾದಂಬರಿಗಳು.

ಸ್ವರ್ಣಲತಾ ರೂ 1—8—		ಪೂರ್ಣಕಲಾ	ರೂ 1—4—0
ಶೋಭನ	0 12—	ಹೆಂಡಾತಿ	0—4—0
ಮನೋರಮ	1—0—0	ಶ್ಯಾಮಲಾಂಗಿ	0—6—0
ಜುವ	0—6—0	ಗಜೇಂದ್ರಸಿಂಹ	12—0
ಉನ್ಮಾದಿನಿ	6—	ಪದ್ಮಿನಿ (ಚಿತ್ತೂರಿನ ಮೊದಲನೇ	
ಪ್ರಿಯಂವದಾ	0—4—0	ಜೋಹರ್	ರೂ. 1—8—0

ನಮ್ಮಲ್ಲಿ ಇನ್ನೂ ಅನೇಕ ಕಾದಂಬರಿಗಳು ದೊರೆಯುತ್ತವೆ ಪುಸ್ತಕದ ಪಟ್ಟಿಗಾಗಿ ½ ಆಣೆ ಸ್ಟಾಂಪು ಕಳುಹಿಸಿ

ಯಂ ಎಸ್ ರಾವ್ ಕಂಪೆನಿ,

ಪುಸ್ತಕ ವ್ಯಾಪಾರಿಗಳು ಬೆಂಗಳೂರು ಸಿಟಿ.

ಅನೇಕ ರೋಗಗಳಿಗೆ ಒಂದೇ ಔಷಧವು.

ಅರ್ಕಶಫಾ ಅಥವಾ ಆರೋಗ್ಯಬಿಂದು.



... ಶಫಾ ತನ್ನ ... ಅದ್ಭುತವಾದ ಗುಣವುಳ್ಳ ಔಷಧವೆಂದು ಈಗಳಾಗಲೇ ಎಲ್ಲರಿಗೆ ಮನವರಿಕೆಯಾಗಿರುವದರಿಂದ ಅದರ ಬಗ್ಗೆ ಇನ್ನು ನಾವು ಪ್ರಶಂಸೆಮಾಡುವದೇನು? ಔಷಧವನ್ನು ತಕ್ಕೊಳ್ಳುವಕ್ಕದರಿಂದ ರೋಗಿಯೇ ಗುಣಾನುವಾದ ಮಾಡಿದಕ್ತ್ಯದ ಬಹಳ ಸರ್ಟಿಫಿಕೇಟುಗಳನ್ನು ತಕ್ಕೊಂಡು ಮಾಡುವದೇನು? ಒಂದಲ್ಲ ಎರಡಲ್ಲ ಎಷ್ಟೋ ತಿಂಗಳುಗಳ ವರೆಗೆ ಸ್ವಂತ ವೆಚ್ಚದಿಂದಲೂ ಪ್ರಯೋಗ ದಿಂದಲೂ ಅನುಭವ ತಕ್ಕೊಂಡೆವು ನಮ್ಮ ಪ್ರಯತ್ನದಂತೆ ನಮಗೆ ಪೂರ್ಣ ಮನವರಿಕೆಯಾದನಂತರ ನಾವು ಇದನ್ನು ಪ್ರಸಿದ್ಧಿಗೆ ತಂದೆವು ರೋಗಗಳ ವಿವರ —

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ವಾಂತಿಭೇದಿ (ಕಾಲರಾ), ಪ್ಲೇಗ, ಚಳಿಜ್ವರ, ವಿಷಮಜ್ವರ, ಅನೇಕ ಪ್ರಕಾರದ ಜ್ವರ ಗಂಡಮಾಲೆ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದ ರೋಗ, ಕಣ್ಣಿನೊಳಗೆ ಹೂವು ಬೀಳೋದು ಮತ್ತು ಕಣ್ಣುನೋವು, ದಮ್ಮು, ಕೆಮ್ಮು, ಶ್ವಾಸ, ಅಡಗ್ಗೆ ಇದ್ದಲಿಸಿ ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರ್ಧತಲೆಶೂಲಿ, ಸೆಡಶೂಲಿ, ವಾತಶೂಲಿ, ರಕ್ತಿಬದ್ದು, ಗುದ್ದವ್ವನ ಬೇನೆ, ಹುರಕು, ಕಜ್ಜಿ, ಗಜಗರ್ಣ, ತದ್ದು, ಇಸಬು ಘಾಯವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನಶೂಲಿ, ಹಡದ ಪಂಚು, ಸಣ್ಣ ಕೂಸುಗಳ ಬಾಲಗ್ರಹ, ಕೋಡಗೆಮ್ಮು, ಆಳಿ, ಮುಟ್ಟದೋಷ, ಹೊಟ್ಟೆ ದೊಡ್ಡದಾಗೋದು, ಮೈ ಹೊರಬೀಳೋದು, ಮತ್ತು ಆಬಾಲವೃದ್ಧರಿಗೂ ವೃದ್ಧರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು, ಚೇಳು ಮತ್ತು ಸರ್ಪದಂಶ ಇದರ ಹೊರತು ಇನ್ನೂ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಅಮೂಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಕ್ರಯ ಇಟ್ಟಿರುತ್ತದೆ ಒಂದು ಕಾಲುತೊಲಿ ಬಾಟಲಿ ಒಂದಕ್ಕೆ 2 ರೂಪಾಯಿ ನಮೂನೆ ಉದ್ದಿಶ್ಯ 5 ಆಣೆ ತೂಕದ ಬಾಟ್ಲಿ ಒಂದಕ್ಕೆ 8 ಆಣೆ ವಿ ಪಿ ಖರ್ಚು ಬೇರೆ ಬೀಳುವದು ೧೦ರಿಂದ ೧೧ ಬಾಟಲಿಗಳ ವರೆಗೆ ತೆಗೆದುಕೊಂಡರೆ ಕಮಿಷನ್ ಇರುವದಿಲ್ಲ ಒಂದು ಡಜನ್ ಬಾಟ್ಲಿ ತಕ್ಕೊಂಡರೆ ನಾಲ್ಕು ಬಾಟ್ಲಿಗಳನ್ನು ಕಮಿಷನ್ ... ಇದಕ್ಕೆ ವಿ ಪಿ ಖರ್ಚು 6 ಆಣೆ ಬೀಳುತ್ತದೆ ಅನುಪಾನ ಪತ್ರಗಳು ... ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ ಬಸಂತ ಪ್ರಕಾರ ಬಾಟ್ಲಿ ... ಸಂಗಡ ಸಿಗುವವು ನಿಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ

ಒಂದುಕಾಲ ತೊಲಿ 3 ಬಾಟಲಿಗಳು ಒಂದೆ ಸಾರಿ ತಕ್ಕೊಂಡರೆ ಒಂದು ಬಾಟಲಿ ಕಮಿಶನ್ ಸಿಗುತ್ತೆ ವಿ ಪಿ ಖರ್ಚು 6 ಆಣೆ ಬೀಳುತ್ತೆ

ನಮ್ಮಲ್ಲಿ ಯಸ್ ಳ ಲಿಂಗಡೆಯವರ ಪ್ರಸಿದ್ಧ ಧಾತುಪೌಷ್ಟಿಕ (ಕಾಮಸಂಜೀವಿನಿ ಲೇಹ) ೪೩ ತೊಲಿ ಡಬ್ಬಿ ೧ಕ್ಕೆ ರೂ 3—0—0 ವಿ ಪಿ ಖರ್ಚು ಬೇರೆ ಅನುಪಾನಪತ್ರಿಕೆ ಡಬ್ಬಿಯೊಂದಿಗೆ ಸಿಗುತ್ತೆ

ಎಚ್ ಎಮ್ ಮುಲ್ಲಾ,

ಅರ್ಕಶಫಾ ಹೆಡ್ ಆಫೀಸ್ ಶಹಾಪೂರ, (ಬೆಳಗಾವ).

The Indian Tooth-ache Specific

ಹಲ್ಲುನೋವಿಗೆ ಖಾತ್ರಿಯಾದ ಔಷಧ.

ಇದನ್ನು ಒಂದು ವಾರ ಉಪಯೋಗಿಸುವದರಿಂದ ಎಲ್ಲಾ ವಿಧದ ಹಲ್ಲುನೋವುಗಳೂ, ವಸಡಿನ ರೋಗಗಳೂ ಅಂದರೆ ವಸಡಿನ ಶಿಥಿಲತೆ, ಬಾವು, ವ್ರಣ, ಬೇಗ ಇತ್ಯಾದಿ ಖಂಡಿತವಾಗಿ ಗುಣವಾಗುತ್ತದೆ ಕೊರೆದುಹೋದ ಮತ್ತು ಅಲ್ಲಾಡುವ ಹಲ್ಲುಗಳಿಂದ ಕಠಿಣ ನೋವು ಬಾಧಿಸುವವರಿಗೆ ಇದು ಒಂದು ದಿವ್ಯ ಔಷಧವಾಗಿದೆ ಇದು ನೋವನ್ನು ಶಾಂತಪಡಿಸಿ ಹಲ್ಲುಗಳ ಬೇರುಗಳನ್ನು ಬಲಪಡಿಸುವದರಿಂದ ಹಲ್ಲುಗಳನ್ನು ಕಿತ್ತು ತೆಗೆಸುವ ಅವಶ್ಯವೇ ಇಲ್ಲ ಈ ಔಷಧದ ಗುಣವನ್ನು ಒಂದು ವೇಳೆ ನೋಡಿ ಎಲ್ಲರೂ ತಿಳಿಸಿ.

ಶೀಶೆ ೧ಕ್ಕೆ ಕ್ರಯ ರೂ 1—4—0 ಟಪಾಲ ಖರ್ಚು 4 ಆಣೆ ಪ್ರತ್ಯೇಕ ವರ್ತಕರಿಗೆ ಒಮ್ಮೆಗೆ ೧೨ ಶೀಶೆ ತರಿಸಿಕೊಂಡರೆ ರೂ 12 ಮಾತ್ರ ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ

STANY BROTHERS, MANGALORE

ಸೊಗಸಾದ ಕಾಫಿ ಹುಡಿ

I	ಕ್ಲಾಸ್	0—10—0
II	ಕ್ಲಾಸ್	0— 8—0
III	ಕ್ಲಾಸ್	— 6—0

ಹೊಟೇಲುಗಳಿಗೂ ಕ್ಲಬ್ಬುಗಳಿಗೂ ಧಾರಾಳವಾಗಿ ವ್ಯಾಪಾರ ಮೇಲೆ ರವಾನಿಸಲಾಗುವದು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಕ್ಕುತ್ತದೆ

STANY BROTHERS, MANGALORE

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ ಸಿದ್ಧೌಷಧಗಳು.

ಶ್ರೀಕರಕಸ್ತೂರಿಮಾತ್ರೆ — ವಂಶಪಾರಂಪರ್ಯವಾಗಿ ಶ್ರೇಷ್ಠವಾದ ಮೂಲಿಕೆಗಳಿಂದ ಬಹಳ ಸುವಾಸನೆಯಾಗಿ ತಯಾರಿಸುತ್ತಲಿರುವ ನಮ್ಮ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿರಿ! ತಾಂಬೂಲದೊಡನೆ ಸೇವಿಸಲ್ಪಟ್ಟಲ್ಲಿ ಬಾಯಿ ಎಷ್ಟೋ ಘಂಟೆಗಳ ಕಾಲ ಘಮಘಮಿಸುತ್ತಿರುವುದಲ್ಲದೆ ಆಹಾರವು ಚೆನ್ನಾಗಿ ಜೀರ್ಣಿಸಿ ಮಾರಣೆದಿನ ಸುಖವಾಗಿ ಮಲವಿಸರ್ಜನೆಯಾಗುವುದು ಮಕ್ಕಳ ಶೀತವಾತ ಮತ್ತು ಅಜೀರ್ಣಗಳಿಗೂ, ಥಂಡಿ,ಹವಾಕ್ಕೂ, ಪ್ಲೇಗ್ ಕಾಲರಾ ಮೊದಲಾದ ಸೋಂಕು ಜ್ವರಗಳಲ್ಲೂ ಪ್ರಯಾಣಕಾಲದಲ್ಲೂ ಈ ಮಾತ್ರೆಗಳು ಸಂಜೀವನವೆಂಬುದನ್ನು ಜ್ಞಾಪಕದಲ್ಲಿಡಿರಿ ಇದರ ಸೇವನೆಯಿಂದ ನೆಗಡಿ ಕೆಮ್ಮು, ವಿಷಮಜ್ವರಗಳು ತಲೆಭಾರ ಮೈಕೈಭಾರ ಆಹಾರದಲ್ಲಿ ಇಚ್ಛೆಯಿಲ್ಲದಿರೋದು, ಮಲಬಂಧ, ಉಬ್ಬಸ ಕಲಿನೋವು, ಗಂಟಲುನೋವು, ನಡುನೋವು, ಮೊದಲಾದವೆಲ್ಲವೂ ಅನುಮಾನವಿಲ್ಲದೆ ಗುಣವಾಗುತ್ತವೆ

ಹಿಂದುಸ್ಥಾನದ ಎಲ್ಲಾ ದೇಶಗಳಲ್ಲೂ ಎಲ್ಲಾ ನಗರಗಳಲ್ಲೂ ಈ ಶ್ರೀಕರಕಸ್ತೂರಿಮಾತ್ರೆಗಳಿದ್ದರೆ ಸಾಮಾನ್ಯವಾಗಿ ಬರುವ ರೋಗವೂ ಬಾಧದಂತೆಯೂ ಅಥವಾ ಏನಾದರೂ ಆಹಾರವಿಹಾರ ವ್ಯತ್ಯಾಸಗಳಿಂದ ಉಂಟಾದ ರೋಗವನ್ನು ತಕ್ಷಣ ಪರಿಹರಿಸಿಕೊಳ್ಳುವುದಕ್ಕೆ ಎಷ್ಟು ಪ್ರಯೋಜನಕಾರಿ ಎಂಬುದನ್ನು ನೀವೇ ತಿಳಿಯಿರಿ ಪ್ರಸಂಚದ ಎಲ್ಲಾ ಭಾಗಗಳಲ್ಲೂ ಪ್ರಖ್ಯಾತಿಹೊಂದಿರುವ ಶ್ರೀಕರಕಸ್ತೂರಿಮಾತ್ರೆಗಳನ್ನೇ ಕೇಳಿರಿ. ಮೋಸ ಹೋಗಬೇಡಿ ಸುಮಾರು 30) ಮಾತ್ರೆಗಳ ಸೀಸೆಗೆ 4 ಆಣೆ 6 ಸೀಸೆಗಳಿಗೆ ರೂ 1 4 0 12ಕ್ಕೆ ರೂ 2-8 0 25ಕ್ಕೆ ರೂ 4 11 0 50ಕ್ಕೆ ರೂ 9-0 0 100ಕ್ಕೆ ರೂ 17 0 0 ಟಪಾಲ್ ಖರ್ಚು ಪ್ರತ್ಯೇಕ

ಜೀರ್ಣಿಗೆರಸಾಯನ. — ಸ್ವಲ್ಪವೂ ಉಷ್ಣಮಾಡದೆ ಪಿತ್ತವನ್ನು ನಿಗ್ರಹಿಸಿ ಸುಖವಾಗಿ ಕಾಲಕ್ರಮತ್ತಿಯನ್ನು ಮಾಡಿಸುವದು ಬೆಲೆ ೧೩ ತೊಲೆಗೆ 12 ಆಣೆ ೨೪ ತೊಲೆಗೆ ರೂ 1-4 0 ಟಪ್ಪಾಲು ಖರ್ಚು ಪ್ರತ್ಯೇಕ

ಖಿಂಡಾಮಲಕರಸಾಯನ:— ವಾಂತಿ, ವಾಕರಿಕೆ, ತಲೆತಿರುಗು, ಅನ್ನದ್ವೇಷ, ಹುಳಿತೇಗು, ಪಿತ್ತಸಂಕಟ, ಹೊಟ್ಟೆಯುಬ್ಬರ, ಮಲಬಂಧ, ಆಹಾರವು ಜೀರ್ಣಿಸದಿರುವದು, ಕಣ್ಣು ಹಳದಿಯಿದ್ದು ಇವೆಲ್ಲವೂ ಗುಣವಾಗುತ್ತವೆ ಬೆಲೆ ೧೩ ತೊಲೆಗೆ 12 ಆಣೆ ಟಪ್ಪಾಲು ಖರ್ಚು ಪ್ರತ್ಯೇಕ.

ಶತಾವರಿರಸಾಯನ:— ಈ ಶ್ರೇಷ್ಠೌಷಧ ಸೇವನೆಯಿಂದ ಹೆಂಗಸರ ಋತುಕಾಲದಲ್ಲಿ ಮತ್ತು ಇತರ ಕಾಲದಲ್ಲಿ ಬರುವ ಹೊಟ್ಟೆಶೂಲಿ, ಹೆಚ್ಚಾಗಿ ಬಿಳುಪುಹೋಗುವದು, ಶರೀರವು ಬೆಂಕಿಯಂತಿರುವದು, ನಿಶ್ಯಕ್ತಿ, ಇವೆಲ್ಲವೂ ನಿಂತುಹೋಗಿ ಸುಖವಾಗಿ ಗರ್ಭಕೋಶವು ಶುದ್ಧವಾಗಿ ಹುಟ್ಟಿದ ಮಕ್ಕಳು ಚಿರಕಾಲ ಆರೋಗ್ಯವಾಗಿರುವಂತೆ ಮಾಡುತ್ತದೆ ಎಷ್ಟೋ ಜನ ಹೆಂಗಸರು ಆಯುರ್ವೇದ ... ಬೇಸರಪಟ್ಟು ತಮ್ಮ ರೋಗಕ್ಕೆ ಔಷಧವಿಲ್ಲವೆಂದು ತಿಳಿದಿದ್ದು ಕೊನೆಗೆ ಇದರಿಂದ ಗುಣಹೊಂದಿದ್ದಾರೆ ಸ್ತ್ರೀಯರಿಗೆ ಇದು ಬಹಳ ಅಮೂಲ್ಯವಾದುದು. ಬೆಲೆ ೨೪ ತೊಲೆಗೆ ರೂ 2 ಟಿ. ಖ. ಪ್ರತ್ಯೇಕ.

ಮಂಗಳೂರು ಏಜಂಟರು — ದಿ. ಉಲ್ಲನ್‌ಮಾರ್ಟ್, ಮಂಗಳೂರು. ಸದ್ವೈದ್ಯಶಾಲಾ, ನಂಜನಗೂಡು.

ಚಂದಾದಾರರಿಗೆ—ವರ್ಷ 1ಕ್ಕೆ ರೂ. 1—8—0

ರಿಜಿಸ್ಟರ್ಡ್ No. M. ೪೮೮

ಸ್ವದೇಶಾಭಿಮಾನಿ

ಪ್ರತಿ—ಶುಕ್ರವಾರವೂ ಪ್ರಕಟಿಸಲ್ಪಡುವುದು.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ಭೇಜಿರೇ ಭೀಮವಿಷೇಣ ಭೀತಿಮ್ ॥
ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ- । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ? ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ? ತೆರಳಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೦ | ಮಂಗಳೂರು, ತಾರೀಕು ೨೮ನೇ ಜೂನ್ ಶುಕ್ರವಾರ ೧೯೧೮. | ಸಂಚಿಕೆ ೨೭.

'ನೈಟ್ರೇಟ್ ಒಫ್ ಸೋಡಾ'

ಹೊಗೆಸೊಪ್ಪು, ಕಬ್ಬು, ತೆಂಗು, ಅಡಕೆ, ವೀಳ್ಯದೆಲೆ, ಬತ್ತ, ತರಕಾರಿ ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ಗೊಬ್ಬರ

ಈ ಗೊಬ್ಬರವು ಒಂದು ಬಗೆಯ ಉಪ್ಪು, ಹಲವು ಪ್ರಾಂತ್ಯಗಳಲ್ಲಿ ಇದರ ಉಪಯೋಗದಿಂದ ಹುಲುಸಾದ ಬೆಳೆಯನ್ನು ಪಡೆದಿರುತ್ತಾರೆ

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ. ಏನೂ ಗೊಬ್ಬರದಂತೆ ನಾತ ಬರೆಯುವುದಿಲ್ಲ

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ಹಟ್ಟಿಗೊಬ್ಬರ ಒಂದು ಮುಡಿ ಬೇಕು. ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ

ಪರಸ್ಪರ ಸಹಾಯಕ ಸಂಘಗಳು ಇದನ್ನು ಹಳ್ಳಿಯವರಿಗೆ ಒದಗಿಸಿ ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು

"ಕೃಷಿ ಸುಧಾರಣೆ" ಎಂಬ ಸಚಿತ್ರ ಪಹಿಯನ್ನು ಕನ್ನಡ ಭಾಷೆಯಲ್ಲಿ ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ,
1 ರೋಯೆಲ್ ಎಕ್ಸ್‌ಚೇಂಜ್ ಪ್ಲೇಸ್, ಕಲ್ಕತ್ತಾ.

The Chilean Nitrate Propaganda,
1, Royal Exchange Place, Calcutta

ಮೇಲಾದ ಸಂಗ್ರಹ.

ಧನಿಕರಿಗೂ ಬಡವರಿಗೂ ಅತ್ಯಗತ್ಯವಾಗಿ ಬೇಕಾದಂಥ ಎಗೆಬಗೆಯ ವಸ್ತ್ರಗಳು । ಸ್ವದೇಶದಲ್ಲಿಯೇ ಸ್ವದೇಶಸ್ಥರಿಂದ ತಯ್ಯಾರು ಮಾಡಲ್ಪಡುವಂಥವುಗಳು

ಬನಾರಸ, ಪೂನಾ ಮಹೇಶ್ವರ, ಬರೋಡಾ, ಇಳಕಲ್ ಗದಗ, ಹುಬ್ಬಳ್ಳಿ ಕೊಯಮತ್ತೂರು, ಮಧುರೆ, ಬೆಂಗಳೂರು, ಅವಳಿವೇಡಿ ಮುಂಬಯಿ, ಮದ್ರಾಸು, ಸೇಲಂ, ಅಹಮದಾಬಾದ ಮೊದಲಾದ ವಸ್ತ್ರನೇಯ್ಗೆಯಲ್ಲಿ ಪ್ರಖ್ಯಾತಪಟ್ಟ ಎಲ್ಲಾ ಊರುಗಳ ಸರಕುಗಳಿಂದ ನಮ್ಮ ಸಂಗ್ರಹವು ಪೂರ್ಣವಾಗಿದೆ

ಮದಿವೆ, ಉಪನಯನಗಳ, ಹಬ್ಬ, ಉತ್ಸವಗಳ ಕಾಲದಲ್ಲಿ ಮತ್ತು ನಿತ್ಯದಲ್ಲಿ ಉಪಯೋಗಕ್ಕೆ ಬೇಕಾದಂಥಾ ಸೀರೆಗಳು, ರವಕೆಕಣಗಳು, ಧೋತ್ರಗಳು, ಅಂಗೀವಸ್ತ್ರಗಳು, ಟೋಪಿಗಳು, ಇತ್ಯಾದಿ ಇತ್ಯಾದಿ ಉಡುಪುತೊಡುಪುಗಳಿಗೆ ಸಂಬಂಧಪಟ್ಟ ಎಲ್ಲಾ ವಸ್ತ್ರಗಳು

ವಿ. ನಾರಾಯಣ ಪೈಜಪ್ಪಭಂಡಾರಿ,
ರಥಬೀದಿ, ಮಂಗಳೂರು,
ಇವರಲ್ಲಿ ದೊರಿಯುತ್ತವೆ.

ಕೆಲಂ ವ್ಯಾಪಾರಸ್ಥರಿಗೆ ವಿಶೇಷವಾದ ಸುಲಭ ದರಗಳು

ಚಿಲ್ಲರೆ ನಗದಿ ಗಿರಾಕಿಗಳಿಗೆ ಡಿಸ್ಕೌಂಟು ಕೊಡಲಾಗುತ್ತದೆ.

ವಿಶೇಷ ಸೂಚನೆ—ನಮ್ಮಲ್ಲಿ ಅತ್ತಲಾಗೆ ಬಂದಿರುವ ಸೀರೆಗಳ ರಚನೆಯನ್ನು ಬಂದು ನೋಡಿರಿ.

ನ್ಯಾಯದರ್ಪಣ.
ಹೊಸ ಪುಸ್ತಕ.

ಬೆಲೆ ರೂ 1—8—0. ವಿ. ಪಿ. 1—12—0.

ಇದರಲ್ಲಿ ಸಿವಿಲ್, ಕ್ರಿಮಿನಲ್ ಮತ್ತು ರೆವಿನ್ಯುಗೆ ಸಂಬಂಧಪಟ್ಟ ವಿಶಿಷ್ಟ ವಿಷಯಗಳೂ, ಅನೇಕ ತರದ ದಸ್ತೈವಜುಗಳ ನಮೂನೆಗಳೂ ವಗೈರೆ ಇರುತ್ತವೆ. ಇದು ಪ್ರತಿಯೊಬ್ಬ ಮನುಷ್ಯನ ಬಳಿಯಲ್ಲಿಯೂ ಯಾವಾಗಲೂ ಇರುವುದಕ್ಕೆ ಅರ್ಹವಾದದ್ದು.

ಎಮ್. ಎಸ್. ನೆಂಜಪ್ಪನವರು,

ಹತ್ತಿರವೇ ಇಟ್ಟುಕೊಳ್ಳಿರಿ!

ಎಲ್ಲಾ ಬೇನೆಗಳನ್ನು ತಲೆಸಿಡಿತ, ಸೊಂಟದ ನೋವು, ಶೀತ, ಕೆಮ್ಮು, ಎದೆನೋವು, ಗಂಟ್ಲುನೋವು ಮೊದಲಾದ ನೂರಾರು ವಿಧಾನಗಳ ನೋವುಗಳನ್ನು ಶೀಘ್ರದಲ್ಲಿ ಗುಣಪಡಿಸುವ

ಅಮೃತಾಂಜನವನ್ನು

ನೀವು ಯಾವಾಗಲೂ ಹತ್ತಿರವೇ ಇಟ್ಟುಕೊಳ್ಳಬೇಕು. ಆಣೆ ಎಂಟಕ್ಕೆ ಅದು ಎಲ್ಲಿಯೂ ದೊರಕುವದು.

12 ಡಬ್ಬಿಗಳಿಗೆ 5—4—0. ವಿ. ಪಿ. ಪ್ರತ್ಯೇಕ

ಗಜಕರ್ಣದ ಮುಲಾಮು.

ಮೂರು ಸತಿಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—0 12 ಡಬ್ಬಿಗಳಿಗೆ 4—0—0 ವಿ. ಪಿ. ಪ್ರತ್ಯೇಕ.

ದಂತಮಂಜನ.
(ರಾಜಾರಾಣಿ ಟ್ರೇಡ್ ಮಾರ್ಕ್)

ಈ ಮಂಜನದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ ಇತ್ಯಾದಿವುಗಳೆಲ್ಲಾ ನಿಲ್ಲುತ್ತವೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ ಒಂದಕ್ಕೆ 0—2—0 12 ಡಬ್ಬಿಗಳಿಗೆ 1—4—0 ವಿ. ಪಿ. ಪ್ರತ್ಯೇಕ.

ಅಮೃತಾಂಜನ ಡಿಪೊ,

6, 7, ತಂಬೆಟ್ಟಿ ಸ್ಟ್ರೀಟ್,
ಜೋರ್ಜ್‌ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

ಉಡುಪಿ—ಕೊಚ್ಚಿಕಾರ್ ಬ್ರದರ್ಸ್, ಇವರಲ್ಲಿಯೂ ದೊರಕುವದು.

ಮೂರಲ್ಲಿ—ಊಲನಾ ಮಾರ್ಟ್, ಹಂಪನಕಟ್ಟೆ ಇವರಲ್ಲಿಯೂ ದೊರಕುವುದು.

ಆನಂದವಿಲಾಸಿನೀವಟಿಕಾ

ಈ ಔಷಧಿಯ ಹೆಸರು ಯಾವುದನ್ನು ಸೂಚಿಸುವದೋ ಆ ಗುಣಗಳೆಲ್ಲವೂ ಈ ಮಾತ್ರೆಗಳಲ್ಲಿ ನೆಲೆಗೊಂಡಿವೆ. ಈ ಮಾತ್ರೆಗಳಲ್ಲಿ ಒಂದನ್ನು ತಿಂದ ಕಾಲು ಗಂಟೆಯ ಕಾಲದಲ್ಲಿ ಈ ಔಷಧಿಯ ಗುಣವು ವ್ಯಕ್ತವಾಗುವದು

ಕ್ರಯ 16 ಮಾತ್ರೆಗಳುಳ್ಳ ಡಬ್ಬಿಗೆ ರೂ. 1

ಮೇಹ ಮರ್ದನ ಚೂರ್ಣ.

ಮೇಹದಿಂದ ಮೂತ್ರದಲ್ಲಿ ಉರಿಯುವದು ಮೂತ್ರದಲ್ಲಿ (ಹೆಸರು) ಬರು ಮುಂತಾದ ವ್ಯಾಧಿಗಳನ್ನು ಈ ಚೂರ್ಣವು 24 ಗಂಟೆಯಲ್ಲಿ ಮಾಡುವದು.

ಕ್ರಯ ಡಬ್ಬಿ 1ಕ್ಕೆ 4—0—0

ವಿಳಾಸ:—

ಒಂದೇ ಮಾತು

ಸ್ಥಳ ಸಂಕೋಚದಿಂದ ವಿವರವಾಗಿ ಬರೆದು ತಿಳಿಸಲು ಆಗದು

ಚಿಕ್ಕಂದಿನ ಕೆಟ್ಟ ಚಾಳಿಗಳಿಂದ ಬರಮಾಡಿಕೊಂಡ ಮೂತ್ರಕೋಶ ಸಂಬಂಧವಾದ ಎಲ್ಲಾ ವ್ಯಾಧಿಗಳನ್ನು ...



ಮದನಮಂಜರಿ ಮಾತ್ರೆಗಳು

ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಕೈಕಾಲು ಸೊಂಟದಲ್ಲಿ ನೋವಿದ್ದರೂ ಮೂತ್ರದಲ್ಲಿಯೂ ನಿದ್ರೆಯಲ್ಲಿಯೂ ಧಾತು ಹೋಗುತ್ತಿದ್ದರೂ ಈ ಮಾತ್ರೆಗಳನ್ನು ಸೇವಿಸುವದರಿಂದ ರೋಗಗಳು ದೇಹವನ್ನು ಬಿಟ್ಟು ಬಿಡುವವು. ಈ ಮಾತ್ರೆಗಳ ... ಕಾಮ, ಧಾತುಗಳು ಎಷ್ಟು ಮಾತ್ರ ...

ಮುಂಗಡ ... 2—5—0

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

ESTABLISHED JULY 1906.

Authorised and issued Capital Rs	300,000— 0—0
Subscribed Capital	246,950— 0—0
Paid up Capital	245,150— 0—0
Deposits	323,420— 9—1
Reserve and other Funds	99,119—15—0

Fixed Deposits of Rs 50/ and above in multiples of Rs. 5/ received for 3, 6, 12 and 24 months @ 5, 5¼, 6, and 6¼% respectively at the discretion of the managing committee. In the case of deposits for 12 months and 24 months interest will be paid half yearly

Short-notice Deposits requiring one week's notice of withdrawal after one month received @ 2½ per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

ಅಧಿಕಾರಗೊಳಿಸಲ್ಪಟ್ಟ ಮತ್ತು ಚಂದಾ ಹಾಕಲಿಕ್ಕೆ ಅರ್ಪಿಸಿದ ಮೂಲ ಧನವು	ರೂಪಾಯಿ 300,000—0—0
ಚಂದಾಹಾಕಿ ಯತ್ತಿದ ಮೂಲ ಧನವು	„ 246,950—0—0
ಮೌಲ್ಯ ತೆತ್ತ ಮೂಲ ಧನವು	„ 245,150—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	323,420—9—1
ಕ್ಷೇಮನಿಧಿ ಮತ್ತು ಇತರ ಫಂಡುಗಳು	99,119—15-0

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 5, 5¼, 6 ಮತ್ತು 6¼ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು 12 ತಿಂಗಳ ವ 24 ತಿಂಗಳ ಠೇವಣಾತಿಗಳ ಸಂಗತಿಗಳಲ್ಲಿ ಅರ್ಧ ವರ್ಷಕ್ಕೊಮ್ಮೆ ಬಡ್ಡಿ ಕೊಡೋಣಾಗುವದು

ಒಂದು ತಿಂಗಳ ನಂತ ಹಿಂದಕ್ಕೆ ಪಡಕೊಳ ಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ತಿಳಿಸಲ್ಪಡಬೇಕಾದ ಅಲ್ಪಕಾಲ ಸೂಚನೆಯ ಠೇವಣಾತಿಗಳು ಸೈಕಡಾ 2½ ಪ್ರಕಾರ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ತೀರ ಕಡಿಮೆ ಎನೂ ಖರ್ಚಿಲ್ಲದೆ ಇಡೋಣಾಗುವವು

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಇಡನ ಮೇಲೆ ಸಾಲಗಳು ಕೊಡೋಣಾಗುತ್ತವೆ.

Canara Bank Ltd,

Mangalore, 1st June 1918

P. Gopal Naik,
Secretary

ಮೈಸೂರು ಊದುಬತ್ತಿಗಳು

ಪ್ರಪಂಚದಲ್ಲಿ ಪ್ರಸಿದ್ಧವಾದ ನಾನು ತಯಾರುಮಾಡುವ ಆರೋಗ್ಯಜನಕವಾದ ಊದುಬತ್ತಿ ಮತ್ತು ಇತರ ಸುಗಂಧ ದ್ರವ್ಯಗಳಿಗೆ ದೇಶಾಭಿಮಾನಿಗಳು ಪ್ರೋತ್ಸಾಹಿಸುವಿರಾಗಿ ನಂಬಿರುತ್ತೇನೆ

ಊದುಬತ್ತಿಗಳು. 24 ರೂಪಾಯಿ ತೂಕದ ಸೇರ 1ಕ್ಕೆ ರೂ 1½, [illegible] 100

ಅರಗಜ ಮತ್ತು ಬಿಲ್ಲೆಗಳು ತೋಲ 1ಕ್ಕೆ ರೂ [illegible]

ಬಾಲಗ್ರಹ ಧೂಪ. ಮಕ್ಕಳಿಗೆ ಬರುವ ಗಾಳಿದೋಷಗ ಸಂಜೀವನವಾದ ಧೂಪ [illegible] ಬೇರೆ ಔಷಧವಾಗ ಚಿಕಿತ್ಸೆಯು ಇಲ್ಲ ಟಿನ್ 1ಕ್ಕೆ 8 ಆಣೆ

ಜರ್ದ. ಹೊಗೆಸೊಪ್ಪು ತಿನ್ನತಕ್ಕವರಿಗೆ [illegible] ಶೀಷೆ 1ಕ್ಕೆ [illegible] ಆಣೆ

ರಾಯಲ್ ಸುಗಂಧಿ. [illegible] ಬಹಳ ಸುವಾಸನೆಯಾಗಿ ತಯಾರಿಸಿರತ್ತೆ 1 ಶೀಸೆ ಸವರಾರು 100 ಜನಕ್ಕೆ ಸಾಲುತ್ತೆ

ಲವೆಂಡರ್. ಶೀಸೆ 1ಕ್ಕೆ 1—1—0

ವರ್ತನೆಯಾಗಿ ನಮ್ಮ ಸಾಮಾನುಗಳನ್ನು ತರಿಸಿಕೊಳ್ಳತಕ್ಕವರಿಗೆ ವರ ವಕ್ಕೆ ಒಂದಾವರ್ತಿ ಬಹುಮಾನ ಕೊಡಲ್ಪಡುತ್ತೆ ಈ [illegible] ಲ್ಲಿಂದ ಸಾಮಾನು ಗಳೆಲ್ಲಾ ಹೋಲ್ ಸೇಲಾಗಿಯೂ ರಿಟೇಲಾಗಿಯೂ ಬಿಕರಿಗೆ ಸಿದ್ಧವಾಗಿರತ್ತವೆ

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣ ಕನ್ನಡ ಜಿಲ್ಲಾ

ಏಜಂಟರು ಬೇಕು! ಭರಪೂರ್ ಕಮಿಷನ್!!

ಶತಮೂಲೀ ಅಮರ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ಸ್ಪೆಷ್ಯಲ್, ಸುದರ್ಶನ ಮಾಲಿನಿ, ಗರುಡ ಧ್ವಜ, ಆನಂದವನ ವಿಲಾಸ, ಕುಟುಂಬ ಜೀವಕ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ

೧ ಕಂಠೀರವ ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠರೋಗ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ ಕ್ರಯ 16 ಮಾತ್ರೆ ರೂ 1

೨ ಸೂರ್ಯಪ್ರಭಾ ಇದು ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳನ್ನು ಥಟ್ಟನೆ ಶಮನಿಸುತ್ತದೆ ತೊಲೆ 1ಕ್ಕೆ ರೂ 1

೩ ಅಶೋಕಾರಿಷ್ಟ ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುಷ್ಟಿಯನ್ನಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ 1 4-0

೪. ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಅಪ ರೋಗಗಳನ್ನು ಗುಣಪಡಿಸಿ ಸುಪುತ್ರಸಂತತಿಯನ್ನು ಸುಪುತ್ರನನ್ನು ಕೊಡುತ್ತದೆ ತೊಲೆ 6ಕ್ಕೆ ರೂ. 1

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ. ಮಾತ್ರೆ 60ಕ್ಕೆ ರೂ. 2.

೬. ಬಾಲಶಂಕರಿ. ಬಾಲರ ಹೊಟ್ಟೆಯಲ್ಲಿ ಹುಟ್ಟುವ ಕೊಮರ ವ್ಯಾಧಿ, ಜ್ವರಗಳು, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತೆ. ಮಾತ್ರೆ 48ಕ್ಕೆ ರೂ 1—8—0,

೭. ಥಂಡಾಕರ್ ಬ್ಯೂಟಿ ವೆಸ್ಲಿನ್. ಇದರ ಸುವಾಸನೆಯಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಶೋಭಿಯುತ್ತದೆ. ಬಾಟ್ಲಿ 1ಕ್ಕೆ ರೂ. 0—8—0

೮. ಅಮೃತಸಾರ್. ಇದು ಬಾಯಿ ಹುಣ್ಣು [illegible] ಸಿದ್ಧೌಷಧವಾಗಿರುತ್ತದೆ. 1 ತೊಲೆ [illegible] ರೂ 1—0—0

[illegible]

ವೃತ್ತಿ ಶಿಕ್ಷಾ

ಓದುಬರಹ ಗೊತ್ತಿಲ್ಲದವರಿಗೆ ಕೂಡ [illegible] ಸಂದರ್ಭ

ಇಟಲಿ ಯುದ್ಧರಂಗ—ಇಲ್ಲಿ ಒಸ್ಟ್ರಿಯರು [illegible] ನದಿಯನ್ನು ದಾಟಿ ಬಂದವರು ಆ ನದಿಯಲ್ಲಿ ಅತಿ ದೊಡ್ಡ ನೆರೆ ಬಂದುದರಿಂದ ಮುಂದೆ ಬಂದ ಸೈನ್ಯಕ್ಕೆ ಯುದ್ಧ ಸಾಮಾಗ್ರಿಗಳನ್ನೂ ಆಹಾರವನ್ನು ಒದಗಿಸುವುದಕ್ಕಾಗಿ ಹಾಕಿದ ಕೆಲವು ಸೇತುವೆಗಳು ಕಡಿದು ಹೋದ ನಿಮಿತ್ತ [illegible] ನದಿಯನ್ನು ಬಹಳ ನಷ್ಟದಿಂದ ಹಿಂದಕ್ಕೆ ದಾಟಿ ಬರಬೇಕಾಯಿತು. ಒಸ್ಟ್ರಿಯರು ಈ ಸಂದರ್ಭದಲ್ಲಿ ತಮ್ಮ ಸೈನ್ಯ [illegible] ನಷ್ಟವಾಗಲಿಲ್ಲ ಎಂದು ವಾದಿಸುತ್ತಾರೆ. ಆದರೆ ಇಟಲಿಯವರು ಕಟ್ಟುವ ಅಂದಾಜು ಮೇರೆಗೆ ಇದು ಒಸ್ಟ್ರಿಯನ್ ಸೈನ್ಯಕ್ಕೆ [illegible] ಇಟಲಿಯ ವರೂ ಫ್ರೆಂಚರೂ ಬ್ರಿಟಿಷರೂ ಕೂಡಿ [illegible] ಒಸ್ಟ್ರಿಯರನ್ನು ಸೆರೆ ಹಿಡಿದರೆಂದ ತಿಳಿದು ಬರುವುದರಿಂದ ಈ ಜನರ ವಿನಾ [illegible] ಪಟ್ಟವರೂ ಯುದ್ಧರಂಗದಲ್ಲಿ ಮಡಿದವರೂ ದೊಡ್ಡ ಸಂಖ್ಯೆಯಾಗಿರಬೇಕು. ಇದಲ್ಲದೆ ಮೊಂಟ ಫೊಬಲ್ಲೊ ಎಂಬ ದಿನ್ನೆಯನ್ನು ಮಿತ್ರಮಂಡಳಿಯವರು [illegible] ವಾಗ ಒಂದು [illegible] ಮಂದಿ ಒಸ್ಟ್ರಿಯರೂ ಹಲವು ಫಿರಂಗಿಗಳೂ ಮಿತ್ರಮಂಡಳಿಯ ಕೈ ಸೇರಿದವು. ಮೇಲಿನ ನಷ್ಟವೆಲ್ಲ ಒಂದೇ ವಾರದೊಳಗೆ ಒಸ್ಟ್ರಿಯರಿಗೆ ಸಂಭವಿಸಿತು.

ಪೆರಿಸ್ ಪಟ್ಟಣದ ಮೇಲೆ ವಿಮಾನಗಳ ಹಾವಳಿ—ಜೂನ [illegible] ನೆ ತಾರೀಕಿನ ರಾತ್ರಿ ೧೧ [illegible] ತಾಸಿಗೆ ಶತ್ರು ವಿಮಾನಗಳು ಪೆರಿಸ ಕಡೆಗೆ ಬಂದು [illegible] ಒಳಗೆ ಹಿಂತಿರುಗಿದವು. ಪುನಃ [illegible] ಕ್ಕೆ ಬಂದು [illegible] ಹೋದವು.

೨೬ನೆ ತಾರೀಕಿಗೆ ಶತ್ರು ವಿಮಾನಗಳು ಪೆರಿಸ್ ಪಟ್ಟಣದ ಮೇಲೆ ೧೦ [illegible] ಗಂಟೆಯಿಂದ ೧೨ [illegible] ಗಂಟೆಯ ವರೆಗೆ ಸಂಚರಿಸಿ ಸಿಡಿಮದ್ದಿನ [illegible] ೨೭ನೆ ತಾರೀಕಿನ ರಾತ್ರಿ ಪುನಃ ಶತ್ರು ವಿಮಾನಗಳು ರಾತ್ರಿ ೧೦ [illegible] ತಾಸಿನಿಂದ ೧೨ [illegible] ವರೆಗೆ ಸಂಚರಿಸಿ ಹಿಂತಿರುಗಿದವು. ೧೧ ಮಂದಿ ಮಡಿದರು. ೧೪ ಜನ [illegible] ಗಾಯಗೊಂಡರು.

೨೮ನೆ ತಾರೀಕಿಗೆ ಪುನಃ ಶತ್ರು ವಿಮಾನಗಳು ರಾತ್ರಿ ೧೧ [illegible] ಬಂದು ೧೨ [illegible] ತಾಸಿಗೆ ಹಿಂದಿರುಗಿದವು.

ವಿದೇಶ ವರ್ತಮಾನ

ಇಂಗ್ಲೆಂಡಿನಲ್ಲಿ ಪ್ಲೇಗ್—ಈಸ್ಟ ಸಫೋಕ್ ಎಂಬಲ್ಲಿ ನ್ಯುಮೋನಿಕ ಪ್ಲೇಗಿನ ೩ ಮರಣಗಳಾದವು. ಈ ರೋಗವು ಅಲ್ಲಿ ಅನಂತರ ಹಬ್ಬಲಿಲ್ಲ.

ರಶ್ಯದ ಅನಾಯಕತ್ವ—ಸೈಬೀರಿಯದ ಪೂರ್ವ ರಶ್ಯೆಯಲ್ಲಿರುವ ಸಮಾರಾ ಮತ್ತು ಟೊಮ್ಸ್ಕ ಎಂಬಲ್ಲಿ ಜೆಕ್ಕೋಸ್ಲಾವೆಕ್ ಜನರು ಬೊಲಶೆವಿಕ ಪಕ್ಷದವರಿಗೆ ವಿರೋಧವಾಗಿ ಎದ್ದು ರೈಲ ರಸ್ತೆಯನ್ನು ತಮ್ಮ ಸ್ವಾಧೀನಮಾಡಿಕೊಂಡಿರುವರು. ಇವರನ್ನು ಎದುರಿಸಲಿಕ್ಕೆ ಬೊಲಶೆವಿಕರು ಸೈನ್ಯಸಂಗ್ರಹ ಮಾಡುತ್ತಲಿದ್ದಾರೆ. ಇದರಿಂದ ಪಾಲಾಯಿತನಾದ ಜನರಲ್ ಸೆಮೊನೊಫನ ಮಂಚೂರಿಯದಲ್ಲಿ ಅವಿತುಕೊಂಡಿರುವನು. ರಶ್ಯದಲ್ಲಿ ಬೊಲಶೆವಿಕರ ಮತ್ತು ಅವರ ನಾಯಕರಾದ ಲೆನಿನ್ ಮತ್ತು ಟ್ರಾಟ್ಸ್ಕಿ ಇವರ ಅಧಿಕಾರದ ಕಡೆಗೆ ಜನರಿಗೆ ಬೇಜಾರವು ಹುಟ್ಟಿ [illegible] ಪದಚ್ಯುತನಾದ ಝಾರನನ್ನು ಕೊಲೆಮಾಡಿದರೆಂಬ ಒಂದು ವರ್ತಮಾನವು ಹುಟ್ಟಿದರೂ ಅದರ ನಿಜತ್ವ ಇನ್ನೂ ಗೊತ್ತಾಗಲಿಲ್ಲ. ಜನರ ಇಷ್ಟಬಂದಹಾಗೆ ಆಡಿಕೊಳ್ಳುತ್ತಾರೆ. ಸ್ವೀಡನಿನ ಸರಕಾರವು ರಶ್ಯದ ಜನರಿಗೆ ಧವಸಧಾನ್ಯಗಳನ್ನು ಸಾಗಿಸಲಿಕ್ಕೆ ನಿರಾಕರಿಸಿಯದೆ. ಜರ್ಮನ ಸೈನ್ಯದ ೩೦೦೦ ಕಾಲಾಳುಗಳೂ ರಾಹುತರೂ ಕಪ್ಪು ಸಮುದ್ರದ ತೀರದಲ್ಲಿ ಪೋಟಿ ಎಂಬಲ್ಲಿ ಇಳಿದಿರುವರು. ಇದಲ್ಲದೆ ಜನರಲ್ ಕೊರ್ನಿಲೊಫ ಮತ್ತು ಕೆಲೆಡಿನ್ ಇವರಿಬ್ಬರೂ ಜರ್ಮನರ ಸಹಾಯದಿಂದ ಮೊಸ್ಕೋ ಪಟ್ಟಣವನ್ನು ಸ್ವಾಧೀನಮಾಡಿಕೊಂಡು ಗ್ರೆಂಡ್ ಡ್ಯೂಕ ನಿಕೊಲಸನನ್ನು ರಶ್ಯದ ಝಾರನೆಂದು ಪ್ರಕಟಿಸಿರುವರಂತೆ. ಟ್ರಾಟ್ಸ್ಕಿ ಮತ್ತು ಲೆನಿನರು ತಲೆತಪ್ಪಿಸಿಕೊಂಡು ವ್ಯಾಟ್ಕಾ (ಬೀಳಗಡಲು) ಬಳಿಗೆ ಓಡಿಹೋಗಿರುವರಂತೆ. ಇನ್ನೊಂದು ವರ್ತಮಾನದ ಮೇರೆಗೆ ಹಿಂದಿನ ಝಾರನು ಇನ್ನೂ ಜೀವಂತನಾಗಿರುವನು. ಈ ಮೊದಲು ಮಂತ್ರಿತ್ವದಿಂದ ಓಡಿಸಲ್ಪಟ್ಟ ಬೊಲಶೆವಿಕರ ಕೈತಪ್ಪಿಸಿಕೊಂಡು ಹೋದ ಕೆರೆನ್ಸ್ಕಿಯು ಇಂಗ್ಲೆಂಡಿಗೆ ಬಂದು ಅಲ್ಲಿ ಬ್ರಿಟಿಷ ಕಾಮನ್ಸರವರ ಒಂದು ಅಧಿವೇಶನದಲ್ಲಿ ಈಗಿನ ರಶ್ಯದ ಗೋಳನ್ನು ವಿವರಿಸಿ ಭಾಷಣ ಮಾಡಿದನು. ಅದರಲ್ಲಿ ಬೊಲಶೆವಿಕರು ತೀರಾ ಜರ್ಮನ ಬೆಂಬಲದಿಂದ ಅನರ್ಥಗಳನ್ನು ಮಾಡುತ್ತಿರುವರೆಂದೂ ರಶ್ಯದಲ್ಲಿ ಝಾರನನ್ನು ಪಟ್ಟದಿಂದ ತಳ್ಳಿಹಾಕಿ ಜನರು ಕೈಕೊಂಡ ಅಧಿಕಾರವನ್ನು ಈ ಬೊಲಶೆವಿಕರ ನುಸುಳಿಂದರು ಜರ್ಮನ ಒಳಸಂಚಿಗೆ ಪಾತ್ರರಾಗಿ ಕಳಕೊಂಡರೆಂದೂ ಬ್ರಿಟಿಷ ಮತ್ತು ಮಿತ್ರಮಂಡಳಿಯ ಇತರ ರಾಜ್ಯಗಳು ಈಗಿನ ರಶ್ಯದ ಸ್ಥಿತಿಯನ್ನು ಕಂಡು ಅದರ ಕಡೆಗೆ ಕನಿಕರವನ್ನು ತೋರಿಸಬೇಕೆಂದೂ ಹೇಳಿದನು. ಸೈಬೀರಿಯದಲ್ಲಿರುವ ಚಳವಳವನ್ನು ಮುರಿಯಲಿಕ್ಕೆ ಜಪಾನರು ತಾವು ಒಂಟಿಯಾಗಿ ಕೈಹಾಕಲಾರೆವೆಂದು ಪ್ರಕಟಿಸಿರುವರು.

ರಶ್ಯ—ಕಪ್ಪು ಸಮುದ್ರದಲ್ಲಿ ರಶ್ಯದ ಯುದ್ಧ ನಾವೆಗಳು ಬ್ರೆಸ್ಟ ಲಿಟೊ[illegible] ಒಪ್ಪಂದಕ್ಕೆ ವಿರೋಧವಾಗಿ ಚಳವಳವನ್ನು ಎಬ್ಬಿಸಿದ್ದರಿಂದ ಅವುಗಳನ್ನು ಜರ್ಮನರು ವಶಮಾಡಿಕೊಂಡರೆಂದು ಪ್ರಕಟಿಸಿರುವರು. ಇವುಗಳನ್ನು ಹಿಡಿಯುವ ಸಂದರ್ಭದಲ್ಲಿ ಕೆಲವು [illegible] ಅವುಗಳ [illegible] ಅವನ್ನು ಮುಳುಗಿಸಿದರು.

ಒಸ್ಟ್ರಿಯನ್ ಜರ್ಮನ ಕೈದಿಗಳಲ್ಲಿ ಬಿಡುಗಡೆ ಹೊಂದಿದವರು ಇರ್ಕುಟ್ಸ್ಕ ಊರನ್ನು ವಶಮಾಡಿಕೊಂಡಿರುವರಂತೆ.

ಹೊಲೆಂಡ—ಈ ಮಹಾಯುದ್ಧವು ಮುಗಿಯುವ ವರೆಗೆ ತಮ್ಮ ದೇಶದ ಗೌರವವನ್ನೂ ಸೊತ್ತನ್ನೂ ಕಾಪಾಡುವುದಕ್ಕಾಗಿ ಕಡ್ಡಾಯದ ಭರ್ತಿಯ ಕಾನೂನನ್ನು ಜಾರಿಗೆ ತರಬೇಕೆಂದು ಡಚ್ಚ ಸರಕಾರದವರು ಒಂದು ಬಿಲ್ಲ ಮಸೂದೆಯನ್ನು ಅವರ ಪಾರ್ಲಿಮೆಂಟಿನ ಮುಂದೆ ಇಟ್ಟಿರುವರು.

ಒಳದೇಶ ವೃತ್ತಾಂತ

ಯುದ್ಧಕ್ಕೆ ಸಹಾಯ—ಮ್ಯಾಮಲಪುರದ ದರ್ಬಾರದಿಂದ ಒಂಟೆಸವಾ[illegible] ರ ಒಂದು ದಳ (೨ನೆ ಸಲ)

ರಾಮಪುರದ ರಾಜನಿಂದ—[illegible] ೧೫,೦೦೦ ಈಗ ಮತ್ತು ಮುಂದೆ ವರ್ಷಂಪ್ರತಿ ರೂ ೧೦,೦೦೦

ರಾಮಪುರದ ರಾಜನಿಂದ ರೂ ೧೨,೦೦೦ ಮತ್ತು ೧೦ ಒಂಟೆಗಳು

ಕಾಥಿಯಾವಾಡದ ವಂಗ್ರೋಳ ಸಂಸ್ಥಾನದ ಠಾಕೂರಿಂದ ವರ್ಷಕ್ಕೆ ರೂ ೫೦೦೦

ಕಾಲಕಂದದ ರಾಜನಿಂದ ರೂ [illegible]

ಮೈಸೂರ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಅಧಿವೇಶನ—[illegible] ನೆ ತಾರೀಕಿಗೆ ಆರಂಭವಾದ ಈ ಅಧಿವೇಶನವನ್ನು ಮುಗಿಸುವಾಗ ದಿವಾನ ಸರ್ ವಿಶ್ವೇಶ್ವರಯ್ಯನವರು ಮಾಡಿದ ಭಾಷಣದಲ್ಲಿ ಹಿಂದೂಸ್ಥಾನದ ಜನರ ಬದುಕಿಗೆ ಈ ಜನಾಂಗ [illegible] ಧಾರಣೆ ಅಲ್ಪ ಸ್ವಲ್ಪ [illegible] ಶಾಂತಿ ಇವುಗಳನ್ನೆಲ್ಲ ವರ್ಣಿಸಿ ಅವುಗಳನ್ನು ಯೋಗ್ಯ [illegible] ಕೈಗಾರಿಕೆಗೆ ಉತ್ತೇಜನ ಕೊಡುವುದು [illegible] ಪರಿಣಾಮದಿಂದ [illegible] ಒಂದು ಕಡೆಯಲ್ಲಿ [illegible] ಸಂಸ್ಥಾನದಲ್ಲಿ ಈ ಕೈಗಾರಿಕೆಯ ಅಭಿವೃದ್ಧಿಯ ಕಡೆಗೆ [illegible] ವಿವರಿಸಿದರು.

ಇಂಡಿಯಾ ಗವರ್ನಮೆಂಟಿನವರ ಒಮ್ಮೆಯ ಸರ್ಕ್ಯುಲರು—ಈ ವರ್ಷ [illegible] ಸೈನ್ಯದ ಸಂಖ್ಯೆಯನ್ನು ಹೆಚ್ಚಿಸಬೇಕಾಗಿದ್ದು ಯುದ್ಧವಿಚಾರದ [illegible] ಸೈನ್ಯಕ್ಕೆ ಅಧಿಕಾರಿಗಳು ಬೇಕಾಗಿವೆ. ಇದಕ್ಕಾಗಿ ಹಿಂದೂಸ್ಥಾನದ ಬೇರೆ ಬೇರೆ ಇಂಗ್ಲಿಷ ವರ್ತಕರ [illegible] ಆಫೀಸುಗಳಲ್ಲಿ [illegible] ಮುಖ್ಯವಾಗಿ ಯುದ್ಧಕ್ಕೆ ಅಗತ್ಯವಿರುವ [illegible] ಇತರ ಕೆಲಸಗಳಿಗೆ [illegible] ಸೈನ್ಯಕ್ಕೆ [illegible] ಜನರ ಸಂಖ್ಯೆ [illegible] ಸೈನ್ಯದಲ್ಲಿ [illegible] ಇಂಡಿಯನ ಸರಕಾರ [illegible]

[illegible] ಧಿಂಗರೀ [illegible]—ಕಳೆದ [illegible] ಹೆಂಗಸರ ಕಚ್ಚೆಗೆ ಧಾರಣೆಗೆ ಸರಕಾರದಿಂದ [illegible] ಕಚ್ಚೆಗೆ ವಿಕ್ರಯಿಸಿದ [illegible] ೧೦೦ ರೂಪಾಯಿ ಜುಲ್ಮಾನೆಗೆ ಗುರಿಯಾದರು.

[illegible]—[illegible] ಯುದ್ಧ ಮುಗಿಯುವ ವರೆಗೆ ವರ್ಷಂಪ್ರತಿ ೧ ಲಕ್ಷ ರೂಪಾಯಿ ಕೊಡುವ [illegible] ಸೈನ್ಯಕ್ಕೆ ೨೦೦ [illegible] ೧೦ [illegible] ಕೊಡುವದಾಗಿ ಮಾತು ಕೊಟ್ಟಿ[illegible]

ಮ್ಯುನಿಸಿಪಲ್ ಮತ್ತು ಲೋಕಲ್‌ಫಂಡ ಕೋಡ್ ಕಮಿಟಿ—೧೯೧೮ನೆ ಎಪ್ರಿಲ ೧ನೆ ತಾರೀಕಿನ ಮದ್ರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಹೇಳಿದ ಮೇರೆಗೆ ಲೋಕಲ್‌ಫಂಡ್ ಮತ್ತು ಮ್ಯುನಿಸಿಪಲ್ ಕೋಡಿನಲ್ಲಿ ತಿದ್ದುವಡಿಗಳನ್ನು ಸೂಚಿಸುವುದಕ್ಕೆ ಮದ್ರಾಸು ಸರಕಾರದವರು ಸರಕಾರಿ ಮತ್ತು ಬಿನ್‌ಸರಕಾರಿ ಮೆಂಬರರುಳ್ಳ ಒಂದು ಕಮಿಟಿಯನ್ನು ನಿರ್ಮಿಸಿರುವರು. ರೆವಿನ್ಯೂ ಬೋರ್ಡಿನ ಮೆಂಬರ [illegible] ಅಧ್ಯಕ್ಷರು. ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟ ರಾವ್ ಬಹದ್ದೂರ ಎನ್ ಬಬ್ಬಾರ್ [illegible] ಬಿನ್‌ಸರಕಾರಿ ಪ್ರೆಸಿಡೆಂಟರೂ ಮ್ಯುನಿಸಿಪಲ್ ಚೆಯರಮನರೂ ೪ ಮಂದಿ ಸರಕಾರಿ ಹುದ್ದೆದಾರರೂ [illegible] ಸೇವಕರಿದ್ದಾರೆ.

ಲೋಕಮಾನ್ಯತಿಳಕ, ಡಾ. ನಾಯರ್ ಬಿ. ಚಂದ್ರಪಾಲ—ಲೋಕಮಾನ್ಯ ತಿಳಕರೂ ಬಿ ಚಂದ್ರಪಾಲರೂ ರಾಜಕೀಯ ವಿಷಯಗಳನ್ನು [illegible] ವಿಲಾಯತಿಯಲ್ಲಿ ಭಾಷಣ ವಗೈರೆ ಮಾಡದಂತೆ ಮುಚ್ಚಳಿಕೆ ಕೊಡುವ ಕರಾರಿನ ಮೇಲೆ ವಿಲಾಯತಿಗೆ ಹೋಗಬಹುದಾಗಿ ಇಂಡಿಯಾ ಸರಕಾರದವರು ಅಪ್ಪಣೆ ಕೊಟ್ಟಿರುವರು. ಡಾ. ನಾಯರರು ವಿಲಾಯತಿಯಲ್ಲಿರುವಾಗ ರಾಜಕೀಯ ವಿಷಯಗಳಲ್ಲಿ ಭಾಷಣ ಮಾಡಬಾರದೆಂದೂ ಅವರ ಆರೋಗ್ಯ ನೆಟ್ಟಗಾದೊಡನೆ ಅವರು ಹಿಂದೆ ಸ್ಥಾನಕ್ಕೆ ಬರಲು ಹೊರಡಬೇಕೆಂದೂ ಸರಕಾರದ ನಿರ್ಬಂಧವು ಹೊರಟಿದೆ. ಈಗ [illegible] ವಿಲಾಯತಿಯಲ್ಲಿ ವಿ. ಚಿರೋಲ ಎಂಬ ಪತ್ರಿಕಾ ಲೇಖಕರ ಮೇಲೆ ತಾನು ನಡಿಸಿದ್ದ ಕೇಸಿನ ವ್ಯವಹರಣೆ ಕೆಲಸ ಮುಗಿದೊಡನೆಯೂ, ಬಿ ಚಂದ್ರಪಾಲರು ವಿಲಾಯತಿಯಲ್ಲಿರುವ ತನ್ನ ಮಗನ ಆರೋಗ್ಯ ನೆಟ್ಟಗಾದಕೂಡಲೆಯೂ ಹಿಂದುಸ್ಥಾನಕ್ಕೆ ಹಿಂತಿರುಗಬೇಕೆಂದೂ ಸರಕಾರದವರ ಕಟ್ಟುಪಾಡಿರುವುದು.

ಬೋಡಾ [illegible] ಯಲ್ಲಿ ಲಕ್ನೋದಿನಲ್ಲಿ ದಾಖಲು ಮಾಡುವ [illegible] ವ ಹಾಸ್ಯಗಂಧಿಯವರು ಜನರಿಗೆ ಕೊಟ್ಟ ಪ್ರೋತ್ಸಾಹದಿಂದ ೧೫೧ ಮಂದಿ ಲಷ್ಕರಿಗೆ ದಾಖಲಾದರು.

ಯುದ್ಧ ಸಾಲ—

ಬಂಗಾಲ	ರೂ	೮,೧೭,೬೪,೦೦೦
ಬೊಂಬಾಯಿ		೪,೫೧,೬೦,೬೦೦
ಮದ್ರಾಸು		೧,೧೪,೭೪,೬೦೦
ಯುನೈಟೆಡ್ ಸಂಸ್ಥಾನ		೧,೦೬,೩೩,೬೦೦
ಇತರ ಸಂಸ್ಥಾನ		೩,೩೩,೨೦,೬೦೦

ಮೇ ತಿಂಗಳಲ್ಲಿ ಲಷ್ಕರಿಗೆ ಮದ್ರಾಸು ಸಂಸ್ಥಾನದಲ್ಲಿ ದಾಖಲು—ಮೇ ತಿಂಗಳಲ್ಲಿ ಸೈನ್ಯದಲ್ಲಿ [illegible] ಇತರ ಕೆಲಸಗಳಿಗೆ [illegible] ಹೀಗೆ ಒಟ್ಟಿಗೆ [illegible] ದಾಖಲಾದರು. [illegible] ಸೈನ್ಯಕ್ಕೆ [illegible] ಕೆಲಸಗಳಿಗೆ [illegible] ಮಂದಿ ದಾಖಲಾದರು ಎಂದು ಮದ್ರಾಸು ಸರಕಾರ [illegible] ಪ್ರಕಟಿಸಿದೆ.

ನೆಲ್ಲೂರಲ್ಲಿ ಜೀವನಸುಧಾರಣೆಯ ಏಲೆವಾರಿ—ಇಲ್ಲಿ ೧೦೦[illegible] ರೂಪಾಯಿ ಬಂಡವಾಳದ ಒಂದು ಕಂಪೆನಿಯನ್ನು ಪ್ರಾರಂಭಿಸಿ ಬಡ ಜನರಿಗೆ ಕಡಿಮೆ ದರದಲ್ಲಿ ಆಹಾರ ಸಾಮಗ್ರಿಯನ್ನು ಸಾಧ್ಯವಿದ್ದರೆ ಬಟ್ಟೆಯನ್ನು ಒದಗಿಸುವ ಏರ್ಪಾಟುಮಾಡಿರುವರು.

ಬಂಗಾಳದಲ್ಲಿ ಬಟ್ಟೆಯ ತುಟ್ಟಿ—ಇಲ್ಲಿ ಅನೇಕ ಭಾಗಗಳಲ್ಲಿ ಉಡುವ ಬಟ್ಟೆಗೆ ಗತಿಯಿಲ್ಲದೆ ಬಡವರು ಅಂಗಡಿಗೆ ಹೋಗುವ ಜನರ ಬಟ್ಟೆಗಳನ್ನು ಕಸುಕೊಳ್ಳಲಾರಂಭಿಸಿದ್ದರಿಂದ ಕಲ್ಕತ್ತಾ ಮತ್ತು ಹೌರಾ ಊರುಗಳಲ್ಲಿ ಬಟ್ಟೆ ಎಷ್ಟು ದಾಸ್ತಾನು ಇದೆ ಎಂದು ತಿಳಿಸಬೇಕಾಗಿ ಸರಕಾರದವರು ತಿಳಿಸಿರುವರು. ಬಂಗಾಳ ಸಂಸ್ಥಾನದ ಬೇರೆ ಬಂದರಗಳಲ್ಲಿಯೂ ಇದೇ ರೀತಿಯ ವಿಚಾರ ನಡಿಸಲಾಗುವುದು.

ಹರಳಿನ ಕ್ರಯ—ರೈಲು ರಸ್ತೆಯ ಅಕ್ಕಪಕ್ಕಗಳಲ್ಲಿ ರೈಲ್ವೆ ಕಂಪೆನಿಗಳಿಗೆ ಸಂಬಂಧಪಟ್ಟ ಸ್ಥಳಗಳಲ್ಲಿ ಹರಳನ್ನು ಕೃಷಿ ಮಾಡಿಸಬೇಕೆಂದು ರೈಲ್ವೆ ಬೋರ್ಡಿನವರು ಸೂಚಿಸಿರುವರು. ಕೆರೊಸಿನ ಎಣ್ಣೆಯ ತುಟ್ಟಿ. ಆದುದರಿಂದ ಹರಳು ಎಣ್ಣೆಯ ಪೈದಾಸ್ತಿ ಹೆಚ್ಚಾಗುವುದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಈಸ್ಟರ್ನ ಬಂಗಾಳ ಸ್ಟೇಟ ರೈಲ್ವೆಯವರು ಈ ವಿಷಯದಲ್ಲಿ ನಾಯಕರಾಗಿರುವರು.

ಬೊಂಬಾಯಿ ಸೆಂಟ್ರಲ್ ಕೋ ಒಪರೆಟಿವ್ ಇನ್ಸ್ಟಿಟ್ಯೂಟ್—ಬೊಂಬಾಯಿ ಸಂಸ್ಥಾನದಲ್ಲಿ ಸಹಕಾರ ಸಂಘಗಳ ಇನ್ನೂ ಹಬ್ಬಿಕೊಳ್ಳುವಂತೆ [illegible] ಯದ ಜ್ಞಾನವನ್ನು ಜನರಲ್ಲಿ ಹರಡುವುದಕ್ಕಾಗಿ ಈ ಸಂಸ್ಥೆಯೊಂದನ್ನು ಬೊಂಬಾಯಿಯಲ್ಲಿ ಸ್ಥಾಪಿಸಿದೆ. ಹಳ್ಳಿಗಳ ಸಹಕಾರ ಸಂಘಗಳ ಮೇಲ್ವಿಚಾರದ ಕೆಲಸವು ಈ ಸಂಘಕ್ಕೆ ಇಲ್ಲ. ಬರೇ ಸಹಕಾರ ಜ್ಞಾನಪ್ರಚಾರವೇ ಇದರ ಕೆಲಸವೆಂದು ಅಲ್ಲಿಯ ರಿಜಿಸ್ಟ್ರಾರರು ಹೇಳುತ್ತಾರೆ.

ಮಿರಜಾಂತರ್ಗ ದೇವಾಲಯ—ಈ ದೇವಾಲಯವನ್ನು ಕೆಲವು ಮಹಾ[illegible] ಯವರು ಒಳನುಗ್ಗಿ ಅಶುದ್ಧಮಾಡಿದರೆಂದು ಅವರ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆಯು ಕಲ್ಲಿಕೋಟೆ ಟೌನ ಮೆಜಿಸ್ಟ್ರೇಟರ ಮುಂದೆ ದಾಖಲಾಗಿದೆ.

ಪೂಜಾಸ [illegible] ಪ್ರಾಥಮಿಕ ಶಾಲಾ ಕಟ್ಟೋಣ—ಕನ್ಯಾಕುಮಾರಿ [illegible] ದು ಪ್ರಾಥಮಿಕ ಶಾಲಾ ಕಟ್ಟೋಣವು ಕುಸಿದು ಬಿದ್ದು ಹಲವು ಮಕ್ಕಳೂ ಒಬ್ಬ ಉಪಾಧ್ಯಾಯನಿಗೂ ಅಪಾಯ ಸಂಭವಿಸಿ [illegible] ಈ ಕಟ್ಟೋಣವನ್ನು ಈಚೆಗೆ ಕಟ್ಟಿಸಿದ್ದರಂತೆ.

ರಾಷ್ಟ್ರೀಯ ಸಭೆಯ ಸೆಕ್ರೆಟರಿಗಳ ಪರ್ಯಟನ—[illegible] ಮ [illegible] ಸ್ವಾಮಿ ಅಯ್ಯರು ಮುಂಬಯಿಗೆ [illegible] ಅಲ್ಲಿ ಈಗಿನ ರಾಜಕೀಯ ಚಳವಳವನ್ನು [illegible] ಭಾಷಣಮಾಡಿರುವರು.

ಮದ್ರಾಸ ರಾಷ್ಟ್ರೀಯ ಯೂನಿವರ್ಸಿಟಿಗೆ ದ್ರವ್ಯಸಹಾಯ—ಸದಾಶಿವ ಅಯ್ಯರ್ ಮತ್ತು ಕೃಷ್ಣಯ್ಯರ್ ಪಾಲುಗಾರರಾಗಿರುವ (ಇವರು ಸೌರಾಷ್ಟ್ರ ಬ್ರಾಹ್ಮಣರು) ಒಂದು ಕಂಪೆನಿಯಿಂದ ೧೦೦೦೦ ರೂಪಾಯಿ ಸದರಿ ಸ್ಥಾನದಲ್ಲಿ ಕೈಗಾರಿಕೆಯ ಶಿಕ್ಷಣಕ್ಕೋಸ್ಕರ ಕೊಡಲ್ಪಟ್ಟಿತು.

ಡಿಲ್ಲಿ ರಾಜಧಾನಿ—ಇದರಲ್ಲಿ ಸರಕಾರದವರು ಕಟ್ಟಿಸಲಿಕ್ಕಿರುವ ಕಟ್ಟಡಗಳ ಕೆಲಸವನ್ನು ತಗ್ಗಿಸಿರುವರು.

ಕಲಿಫೋರ್ನಿಯದಲ್ಲಿ ಕೆಪೊಸಿನ್ ಎಣ್ಣೆಯ ವಿಕ್ರಿಕ—ಇಲ್ಲಿಯ ಮ್ಯುನಿಸಿಪಲ್ ಆಫೀಸಿನ ಬಳಿಯಲ್ಲಿ ಬಡಜನರಿಗೋಸ್ಕರ ಎಣ್ಣೆ ವಿಕ್ರಯಿಸುತ್ತಿರುವ ಗಲಾಟೆಯಲ್ಲಿ ಇಬ್ಬರು ಹೆಣ್ಣುಮಕ್ಕಳೂ ಒಂದು ಗಂಡು ಮಗನೂ ತುಳಿಯಲ್ಪಟ್ಟು ಜಖಂ ಆಯಿತು. ಅವುಗಳ ಪೈಕಿ ಒಂದು ಮಗು ಸತ್ತುಹೋಯಿತು. ಇನ್ನೆರಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಲಿವೆ ಎಂದು ಜುಲೈ ೧ನೆ ತಾರೀಕಿನ ನ್ಯೂ ಇಂಡಿಯ ಪತ್ರಿಕೆಯಿಂದ ತಿಳಿದುಬರುತ್ತದೆ.

ದಕ್ಷಿಣ ಕನ್ನಡ

ಸುಳ್ಯ—ಸಂಪಾಜೆ ಶಾನುಭೋಗ ರಾಮಚಂದ್ರಯ್ಯನವರ ಅನುಭೋಗದ ಅಡಿಕೆ ತೋಟಕ್ಕೆ ಒಂದು ಆನೆಗಳು ಬಂದು ಸುಮಾರು ೧೫೦ ಅಡಿಕೆ ಮರಗಳನ್ನು ನಾಶಮಾಡಿದ್ದಲ್ಲದೆ ಬಾಳೆಯ ಗಿಡಗಳನ್ನು ಸಹಾ ನಾಶಮಾಡಿದ್ದಾವೆ.

ಜರಂಕೋಡು ಮತ್ತು ಮುಡ್ನೂರು ಗ್ರಾಮದ ಭಕ್ತರ ಸ್ವರಿವಿನ ಸರಕಾರಿ ಬಾವಿಗಳಿಗೆ ನೀರು ಕೆಗೆಯುವರೆ ಕಪ್ಪುಹದ ಆಟೆ ಇಲ್ಲದೆ ಇರುವದರಿಂದ ನೀರು ಕೆಗೆಯುವರ ಪ್ರಯಾಣಸ್ಥರಿಗೆ ತುಂಬಾ ಕಷ್ಟ.

ಪುತ್ತೂರು—ಇಲ್ಲಿ ಇದೇ ಕಳೆದ ಜೂನು [illegible] ಸಾವಕಾರ [illegible] ಬೋರ್ಡ ಮೆಂಬರರಾದ ಮಿ[illegible] ಭಟ್ಟ ಎಂಬ ಕಂಪೆನಿಯವರ ಭಂಡಸಾಲೆಯಲ್ಲಿ ಬಡಬಗ್ಗರಿಗೋಸ್ಕರ ಮುಡಿ ೧ಕ್ಕೆ ರೂ ೫-೪-೦ ಸೇರಿಗೆ ಆಣೆ [illegible] ವಿಕ್ರಯಕ್ಕೆ ಆರಂಭಿಸಿರುವರು. ಇದೇ ರೀತಿ [illegible] ಮೊಸೆಸ್ ಪಾಲ್ಫ್ರಯವರು ಸಹಾ ಇದೇ ರೀತಿ ಅಕ್ಕಿಯ [illegible] ಬೆಳ್ಳರೆ ಅಂಗಡಿಗಳಲ್ಲಿ ಸಹಾ ಅಕ್ಕಿ ಬೆಲ್ಲವೆಸಿಯಾಗಿ ಸೇರಿಗೆ ಎರಡಾಣೆ ದರದಲ್ಲಿ ವಿಕ್ರಯಿಸುವರು. [illegible] ಎಣ್ಣೆ ಬಾಟ್ಲಿ ೧ಕ್ಕೆ ೪ ಆಣೆ.

ಮಂಗಳೂರಿನ ಒಟೆಗಳಿಗೆಯಿಂದ ಹಳ್ಳಿಗಳಿಂದ ಪೇಟೆಗೆ ಅಗಲಿ, ಅಲ್ಲಿಂದ ಪಾಣೆಮಂಗಳೂರಿಗೆ ಅಗಲಿ ವ್ಯಾಪಾರ ವಹಿವಾಟು ನಡಿಸುವವರ್ಗೆ ಈವರೆಗೆ ಅಡಚಣೆ ಇಲ್ಲ.

ಹಂಪ್ಪ ಸಾಹುಕಾರ ಮಿ ರಾ ರಾ ರುಕ್ಮಯ್ಯ ಪೈಗಳವರು [illegible] ವಲ್ಲಿ ಮುಡಿ ೧ಕ್ಕೆ ರೂಪಾಯಿ ೫-೪-೦ ಸೇರಿಗೆ ಎರಡಾಣೆ ದರದಲ್ಲಿ ವಿಕ್ರಯಿಸುವರು.

ಗಣಪತಿ [illegible] ದಿನಾಯ [illegible] ಅಂಶಕ್ಕೆ [illegible] ಮಂಗಳೂರು, [illegible] ಶಾ. [illegible] ನಾಯಿಲ್ಲ [illegible]

ಅನುಕ್ರಮಣಿಕೆ

ಅಗ್ರಲೇಖ. ಪುಟ

೧ ಅಕ್ಕಿಯ ಬಗ್ಗೆ ಆಗಲಿಕ್ಕಿರುವ ವ್ಯವಸ್ಥೆ ೪

೨ ಎಲಿಮೆಂಟರಿ ಶಾಲೆಗಳ ಬಡ ಉಪಾಧ್ಯಾಯರು ,,

ಸ್ಫುಟವಿಚಾರಗಳು —

೧ ಮೈಸೂರ ಮಹಾರಾಜರ ಸಂಸ್ಥಾನದ ವಿಚಾರಗಳು ೪ ೫

೨ ಐರಿಶ್ ಹೋಮ್‌ರೂಲ್ ,,

೩ ಕಲಕತ್ತೆಯೊಳಗಿನ ನೂತನ ಶಿಶು ,,

೪ ಸ್ವಪ್ನದಲ್ಲಿ ಹಿಂದಿಗಳಿಗೆ ದೊಡ್ಡ ಹುದ್ದೆಗಳು ೫-೬

ಸ್ಥಳೀಕ — ಮಂಗಳೂರು ,,

ವರ್ತಮಾನ ಸಂಗ್ರಹಗಳು —

೧ ಯುರೋಪದ ಮಹಾಯುದ್ಧ ೩

೨ ವಿದೇಶ ವೃತ್ತಾಂತ ,,

೩ ಒಳದೇಶ ವೃತ್ತಾಂತ ,,

೪ ದಕ್ಷಿಣ ಕನ್ನಡ ಸುಳ್ಳ ಪುತ್ತೂರು ,,

೫ ಮಂಗಳೂರು ಬಂದರದ ಅಕ್ಕಿ ಸಾವುಕಾರರ ಅರ್ಜಿ ೬

೬ ಪತ್ರವ್ಯವಹಾರ

ಸ್ವದೇಶಾಭಿಮಾನಿ.

ಶಕ ೧೮೪೦ ಜ್ಯೇಷ್ಠ ಬ ೧೨ ಶುಕ್ರವಾರ

ಅಕ್ಕಿಯ ಬಗ್ಗೆ ಆಗಲಿಕ್ಕಿರುವ ವ್ಯವಸ್ಥೆ

ನಮ್ಮ ಮಂಗಳೂರ ಪಟ್ಟಣದಲ್ಲೂ ಆಜುಬಾಜಿನ ಹಳ್ಳಿಗಳಲ್ಲೂ ನಡೆದ ಅಕ್ಕಿಲೂಟಿಯ ಕುರಿತು ವಿಸ್ತಾರವಾದ ಮೀಮಾಂಸೆಯನ್ನು ನಾವು ಗತಸಂಚಿಕೆಯಲ್ಲಿ ಮಾಡಿದ್ದೇವಷ್ಟೆ. ಆದರೆ ಜನರಿಗೆ ಪತ್ರದೊಳಗಿನ ನಮ್ಮ ಮೀಮಾಂಸೆಗಿಂತ ಅಕ್ಕಿಯ ವ್ಯವಸ್ಥೆಯೆ ಹೆಚ್ಚಾಗಿ ಬೇಕಾದ್ದರಿಂದ ಆ ವಿಷಯವಾಗಿ ಅವರಲ್ಲಿ ಆತುರತೆ ಇರುವದು ಸಹಜ. ಪರ್ಯಂತ ಅಂಥ ವ್ಯವಸ್ಥೆಯು ಇಷ್ಟು ಬೇಗನೆ ಆಗಲಿಕ್ಕಿದೆ ಎಂದು ತಿಳಿಸಲು ನಾವು ಸಂತೋಷಪಡುತ್ತೇವೆ.

ಅಕ್ಕಿಯ ವ್ಯವಸ್ಥೆಯು ಇನ್ನೇನಾಗಲಿಕ್ಕಿದೆ, ಇಂಥಿಂಥ ಅಕ್ಕಿಯನ್ನು ಇಂಥಿಂಥ ದರಗಳಲ್ಲಿ ಮಾರಬೇಕೆಂದು ವ್ಯಾಪಾರಿಗಳು ಒಪ್ಪಿದ್ದಂತೆ ಸರಕಾರಿ ಪ್ರಕಟನೆಯು ಕೂಡ ಹೊರಟು ಇದಿರ್ಗೆ ಹಲವು ದಿವಸಗಳಾದವು ಮತ್ತು ಅದರಂತೆ ಪೇಟೆಯಲ್ಲಿ ಅಕ್ಕಿಯು ದೊರೆಯ ಹತ್ತಿದೆ. ಹೀಗಿರಲು ಅಕ್ಕಿಯ ವ್ಯವಸ್ಥೆಯು ಇನ್ನೇನಾಗಲಿಕ್ಕಿದೆ ಎಂದು ಅನೇಕರಿಗೆ ಪ್ರಥಮದರ್ಶನದಲ್ಲಿ ತೋರಬಹುದು. "ಪ್ರಥಮದರ್ಶನದಲ್ಲಿ ತೋರಬಹುದೆಂದು ನಾವು ಯಾಕೆ ಅನ್ನುತ್ತೇವೆಂದರೆ ಇಲ್ಲಿಯ ತಹಸೀಲದಾರರು ಒಂದು ಜಾಹೀರನೋಟೀಸನ್ನು ಪ್ರಕಟಿಸಿ ಅದರಲ್ಲಿ "ಬೆಳ್ತಿಗೆ ಹೊರತು ಇತರ ಎಲ್ಲ ಅಕ್ಕಿಗೆ ಮುಡಿ ೧ಕ್ಕೆ ೭ ರೂಪಾಯಿ ೪ ಆಣೆ; ಅವ್ವಲ್ ಮಸ್ಕತಿಗೆ ಮುಡಿ ೧ಕ್ಕೆ ೬ ರೂಪಾಯಿ ... ದುಯ್ಯಮ ಮಸ್ಕತಿಗೆ ಮುಡಿ ೧ಕ್ಕೆ ೫ ರೂಪಾಯಿ ೮ ಆಣೆ" ಎಂದು ಪ್ರಕಟಿಸಿರುವರು. ಕಲೆಕ್ಟರರ ಕಡೆಯಿಂದ ತಹಸೀಲದಾರರು ಪ್ರಕಟಿಸಿದ ಈ ಜಾಹೀರ ನೋಟೀಸಿನ ಮೂಲಕ ಪ್ರಯೋಜನಕ್ಕಿಂತ ಮುಂದೆ ಹೆಚ್ಚಿನ ತೊಂದರೆಗಳು ಎದುರಾಗುವ ಸಂಭವವಿದೆ ಎಂದು ಈ ವಾರದಲ್ಲಿ ಇಲ್ಲಿಯ ಅಕ್ಕಿ ಸಾವುಕಾರರು ಕಲೆಕ್ಟರ ದೊರೆಗಳಿಗೆ ಮಾಡಿದ ವಿನಂತಿ ಅರ್ಜಿಯಲ್ಲಿ ಸಪ್ರಮಾಣವಾಗಿ ತೋರಿಸಿದ್ದಾರೆ. ಆ ಅರ್ಜಿಯನ್ನು ಈ ಹೊತ್ತು ಬೇರೊಂದು ಭಾಗದಲ್ಲಿ ಪ್ರಕಟಿಸಿದ್ದೇವೆ. ಈ ವಿನಂತಿ ಅರ್ಜಿಯಲ್ಲಿ ಉಲ್ಲೇಖಿಸಿದ ವಿಷಯಗಳ ವಿಮರ್ಶವನ್ನು ಮಾಡುವದಕ್ಕಿಂತ ಮುಂಚೆ ಮೇಲಿನ ಸರಕಾರಿ ಜಾಹೀರ ನೋಟೀಸಿನ ವಿಷಯದಲ್ಲಿ ಎರಡು ಮಾತುಗಳನ್ನು ಹೇಳುವದು ಅವಶ್ಯವಾಗಿದೆ. ಮುಡಿ ಒಂದಕ್ಕೆ ೫ ರೂಪಾಯಿ ೪ ಆಣೆ ಇತ್ಯಾದಿ ದರವನ್ನು ನಿರ್ಣಯಿಸಿದ್ದು ತಾತ್ಕಾಲಿನ ಉಪಶಮನಾರ್ಥವಾಗಿಯೆ ಅಲ್ಲದೆ ಸದಾ ಸರ್ವದಾ ಅದೆ ದರಗಳಿಂದ ಎಲ್ಲ ತರದ ಅಕ್ಕಿಯನ್ನು ಮಾರಬೇಕೆಂಬುದಕ್ಕಾಗಿ ಅಲ್ಲ. ಅಕ್ಕಿಯ ಎಲ್ಲ ಸಾವುಕಾರರು ಮತ್ತು ಅಂಗಡಿಗಾರರಲ್ಲಿ ಹೆಚ್ಚಿನವರು ಈ ಜಾಹೀರ ನೋಟೀಸಿಗೆ ಬದ್ಧರಾಗಿ ಕೇಳಕೇಳಿದವರಿಗೆ ಆ ದರಗಳಲ್ಲಿ ಅಕ್ಕಿಯನ್ನು ಕೊಡಬೇಕೆಂಬುದು ಶುದ್ಧ ಭ್ರಾಂತಿಯು. ಕಾರಣ, ಸಾವುಕಾರರಿಗೆ ಅಂಥ ನಿರ್ಬಂಧವನ್ನು ಮಾಡಲು ಅಧಿಕಾರಿಗಳಿಂದ ಆಗಲಿಕ್ಕಿಲ್ಲ. ಮಾತ್ರವಲ್ಲ, ಸ್ವತಃ ಕಲೆಕ್ಟರ ದೊರೆಗಳ ಅಭಿಪ್ರಾಯವು ಸಹ ಸಾವುಕಾರರು ಈ ನಿರ್ದಿಷ್ಟ ದರಗಳಿಂದಲೆ ಅಕ್ಕಿಯನ್ನು ಸರ್ವದಾ ಮಾರಬೇಕೆಂದಿಲ್ಲ. ಇದು ಎಲ್ಲ ಜನರು ತಿಳಿದಿರತಕ್ಕದ್ದು. ತತ್ಕಾಲದ ಉಪಶಮನಕ್ಕಾಗಿ ಮಾಡಿದ ಉಪಾಯವು ಯಾವಾಗಲೂ ನಡೆಯಬೇಕೆಂದು ತಿಳಿಯುವದು ತಪ್ಪಲ್ಲವೆ? ಅಲ್ಲದೆ, ಅಕ್ಕಿಯ ದರಗಳನ್ನು ನಿರ್ಣಯಿಸಿದ್ದು ಬಡಜನರ ಉಪಯೋಗಾರ್ಥವಾಗಿದ್ದರೂ ... ಹೇರಿಯುವವರಿಗೋಸ್ಕರವಲ್ಲ. ಪರಂತು, ಪ್ರಕಟವಾದ ಜಾಹೀರ ನೋಟೀಸಿನ ...

... ನೂರಾರು ರೂಪಾಯಿ ಸಂಬಳವನ್ನು ಪಡೆಯುವವರೂ ಅಂಗಡಿಗಳಲ್ಲಿ ಬಂದು ನಿರ್ಣೀತ ದರಕ್ಕನೆ ಅಕ್ಕಿಯನ್ನು ಕೊಂಡುಹೋಗಲುಪಕ್ರಮಿಸುವರಂತೆ. ಇವರಂತೆಯೆ ಬೇರೆ ಸಂಪನ್ನರೂ ಕೂಡ ಇದೆ ಕ್ರಮವನ್ನು ಅನುಸರಿಸಹತ್ತಿದರಂತೆ. ಎಂದಮೇಲೆ ಬಡವರ ಉದ್ದೇಶದಿಂದ ಮಾಡಿದ ಏರ್ಪಾಡನ್ನು ಈ ತರದ ಸಂಪನ್ನ ಹಾಗು ವರಿಷ್ಠ ತರಗತಿಯವರು ಪಡೆಯಲುಪಕ್ರಮಿಸಿದರೆ ಬಡವರಿಗೆ ಅದರ ಪ್ರಯೋಜನವು ಎಷ್ಟರ ಮಟ್ಟಿಗೆ ಉಂಟಾದೀತು, ಇದನ್ನು ವಾಚಕರೆ ಆಲೋಚಿಸಬಹುದು. ಹೆಸರು ಬಡವರದು, ಹಬ್ಬ ಇವರದು, ಇಂಥ ವಿಪರೀತ ಪರಿಸ್ಥಿತಿಯು ಒದಗುವಪಕ್ಷದಲ್ಲಿ ಆ ಸಾವುಕಾರರಾದರೂ ತಮ್ಮ ವ್ಯಾಪಾರವನ್ನು ನಷ್ಟಮಾಡಿಕೊಂಡು ಎಲ್ಲರಿಗೆ ತರಗತಿಯ ಯಾವ ವಿವೇಚನವನ್ನೂ ಮಾಡದೆ ಅಕ್ಕಿಯನ್ನು ಮೇಲಿನ ದರಗಳಲ್ಲಿ ಯಾಕೆ ಮಾರತಕ್ಕದ್ದು? ಈ ಪ್ರಶ್ನಕ್ಕೆ ಯಾರಾದರೂ ಸಮರ್ಪಕವಾದ ಉತ್ತರವನ್ನು ಕೊಡಬಲ್ಲರೆ? ಇನ್ನೊಂದು ಪಕ್ಷದಲ್ಲಿ ಪೇಟೆಯೊಳಗಿನ ಮಾಲುಗಳನ್ನು ಇಂಥಿಂಥ ವಿವಕ್ಷಿತ ದರಗಳಲ್ಲಿ ಮಾರಬೇಕೆಂದು ಅಧಿಕಾರಿಗಳಿಗಾಗಲಿ ಬೇರೆ ಯಾರಿಗಾಗಲಿ ನಿರ್ಬಂಧವನ್ನು ಹಾಕಲು ಸಾಧ್ಯವಿಲ್ಲ, ಹಾಗೊಂದು ವೇಳೆ ಹಾಕುವ ಪಕ್ಷದಲ್ಲಿ ವ್ಯಾಪಾರಿಗಳು ನಷ್ಟದ ವ್ಯಾಪಾರವನ್ನು ಬಿಟ್ಟುಬಿಟ್ಟರೆ ನಾಳೆ ಅಧಿಕಾರಿಗಳೇನಾದರೂ ಜೀನಸುಗಳ ಅಂಗಡಿಗಳನ್ನು ತೆರೆದ ಕೂತುಕೊಳ್ಳುವರೆ? ಸರಕಾರವು ಯಾವವರೆಗೆ ವ್ಯಾಪಾರವನ್ನು ಮಾಡದೊ ಆ ವರೆಗೆ ಅದರ ಒತ್ತಾಯವು ನಡೆಯಲಿಕ್ಕಿಲ್ಲ. ಇದೆ ಕಾರಣದಿಂದ ಇಲ್ಲಿಯ ಕಲೆಕ್ಟರ ಮುಂತಾದ ಅಧಿಕಾರಿಗಳು ಇಂಥ ಕೆಲಸಗಳಲ್ಲಿ ಪ್ರವೇಶಿಸ ಮಡಿಲ್ಲ. ಇದು ಸಂತೋಷದ ಮಾತಾಗಿದೆ. ಆದ್ದರಿಂದ ೬ ದಿವಸಗಳ ಹಿಂದೆ ತಹಸೀಲದಾರರ ಹೆಸರಿನಿಂದ ಪ್ರಕಟವಾದ ಪತ್ರಕದಲ್ಲಿ ತೋರಿಸಿದ ದರಗಳು ಕಾಯಂ ದರಗಳಲ್ಲ, ತಾತ್ಕಾಲಿಕ ಲೂಟಿ ಮುಂತಾದ ಗಲಭೆಯ ಉಪಶಮನಾರ್ಥವಾದ ದರಗಳು. ಈ ಸಂಗತಿಯನ್ನು ಎಲ್ಲರೂ ಸ್ವಚ್ಛವಾಗಿ ತಿಳಿಯತಕ್ಕದ್ದು. ಕಲೆಕ್ಟರ ದೊರೆಗಳು ಸಹ ಇಲ್ಲಿಯ ಒಂಗರಿದ ಸಾಹುಕಾರರ ಪ್ರತಿನಿಧಿಮಂಡಲದ ಭೇಟಿಯಲ್ಲಿ ಮೇಲಿನ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ.

ಅಧಿಕಾರಿಗಳಾಗಲಿ ವ್ಯಾಪಾರಿಗಳಾಗಲಿ ಅಕ್ಕಿಯ ಸರ್ವಸಾಮಾನ್ಯ ದರವನ್ನು ನಿಶ್ಚಯಿಸಿ ಮಾರಹತ್ತಿದರಿಂದ ದಿನ ಒಂದಕ್ಕೆ ಮೊದಲಿನ ಎಣಿಕೆಗಿಂತ ಮೂರು ಪಾಲು ಹೆಚ್ಚು ಅಕ್ಕಿಯು ಮಾರಾಟವಾಯಿತು (ಇವರ ಲೆಕ್ಕವನ್ನೆಲ್ಲ ಅರ್ಜಿಯಲ್ಲಿ ಕೊಟ್ಟಿದ್ದಾರೆ). ಇದರ ಅರ್ಥವೇನೆಂದರೆ ಕಡಿಮೆ ದರಗಳಲ್ಲಿ ಅಕ್ಕಿಯನ್ನು ಮಾರಬೇಕೆಂದು ಯಾವಾಗ ಒಂದು ಸಾರಿ ನಿರ್ಣಯವಾಯಿತೊ ಆಗ ನಾವು ಮೇಲೆ ಹೇಳಿದಂತೆ ಶ್ರೀಮಂತರೂ ಇತರರೂ ಕೂಡ ಇದರ ಪ್ರಯೋಜನವನ್ನು ಪಡೆಯಲು ಬಂದರು. ಈ ರೀತಿ ಕಡಿಮೆ ದರದ ಅಪೂರ್ವ ಲಾಭವನ್ನು ಹೊಂದುವದಕ್ಕಾಗಿ ಅವರವರಲ್ಲಿ ಮೊದಲ ಸ್ಪರ್ಧೆಯಾಯಿತು. ... ಯ ದರಕ್ಕೆ ಅಕ್ಕಿಯನ್ನು ಮಾರಿದ್ದರೂ ಈಗ ... ಆ ... ಅದೆ ... ನ್ನು ಕ್ರಯಕ್ಕೆ ಕೊಂಡುಕೊಳ್ಳಲು ಅಂಥವರೂ ಇಂದಿರಬಹುದು. ... ಇಂಥ ಅನವಸ್ಥೆಯಿಂದ ಒದಗತಕ್ಕ ಪರಿಣಾಮವೇನೆಂದರೆ ಅರ್ಜಿಯಲ್ಲಿ ಹೇಳಿದ್ದಂತೆ ಮಂಗಳೂರ ಪೇಟೆಯಲ್ಲಿ ಈಗ ಮಾರಾಟದವರ ಹತ್ತರ ಸಿಲುಕಿರುವ ಅಕ್ಕಿಯು ಮುಗಿದ ಮೇಲೆ ಅನಂತರ ಮಾರಲು ಅಕ್ಕಿ ಇಲ್ಲ. ಇಲ್ಲಿಯ ದರವು ಬಿದ್ದು ಹೋದಕಾರಣ ಹಳ್ಳಿಹಳ್ಳಿಗಳಲ್ಲಿ ವರ್ಗದಾರರ ಮಾರಾಟದ ಅಕ್ಕಿಯು ಪೇಟೆಗೆ ಬರುವ ಸಂಭವವು ಇಲ್ಲ. ಆಗ ಬಡಜನರಿಗೆ ಯಾರು ಯಾವ ಅಕ್ಕಿಯನ್ನು ಮಾರಬೇಕಾಯಿತು? ತಗ್ಗಿಸಿದ ದರವು ಯಾರ ಸಲುವಾಗಿ ನಡೆಯಿತು? ಯಾವ ಪ್ರಸಂಗದಲ್ಲಿ ಈ ಸಾಮಾನ್ಯ ತತ್ವವನ್ನು ಕೂಡ ವಿವೇಚಿಸಿ ನೋಡುವಷ್ಟು ವಿಚಾರಶಕ್ತಿಯು ಮತ್ತು ಬಡಜನರಿಗಾಗಿ ಏರ್ಪಡಿಸಿದ ಭಾಗವನ್ನು ತಾವು ಅಪಹರಿಸುವದು ನ್ಯಾಯವಲ್ಲವೆಂಬ ಸೂತ್ರವನ್ನು ತಿಳಿದುಕೊಳ್ಳುವಷ್ಟು ಜ್ಞಾನವು ಸ್ವಾರ್ಥದ ಮುಂದೆ ಈ ಗಿರಾಕಿಗಳಲ್ಲಿ ಇಲ್ಲದೆ ಹೋಗಿಯೆ ಈ ಎಂಟು ಹತ್ತು ದಿವಸಗಳಲ್ಲಿ ವಾಡಿಕೆಗಿಂತ ಮೂರು ಪಾಲನ್ನು ಹೆಚ್ಚು ಅಕ್ಕಿಯು ಖರ್ಚಾಯಿತು. ಇದೆ ಕ್ರಮವು ಇನ್ನು ನಾಲ್ಕೆಂಟು ದಿವಸ ನಡೆದರೆ ಮುಂದೆ ಬಡವರಿಗೆ ಅಕ್ಕಿಯು ಉಪವಾಸವೆ ಒದಗೀತು! ವ್ಯವಸ್ಥೆಯನ್ನು ಮಾಡಲು ಹೋಗಿ ಅವ್ಯವಸ್ಥೆ ಹಾಗು ಅನವಸ್ಥೆಯನ್ನೆ ತಂದುಕೊಂಡಂತೆ ಆಗುತ್ತದೆ. ಆದ್ದರಿಂದ ವ್ಯಾಪಾರಿಗಳು ಇನ್ನು ಮುಂದೆ ಮೇಲಿನ ನೋಟೀಸಿನ ಪ್ರಕಾರವೆ ಅಕ್ಕಿಯನ್ನು ಮಾರಬೇಕೆಂದು ತಿಳಿಯುವದು ಕೇವಲ ಅವ್ಯವಹಾರ್ಯವು.

ಆದರೆ ಬಡಜನರ ನಿರ್ವಾಹವು ಆಗಬೇಕಾಯಿತಷ್ಟೆ? ಅದಕ್ಕಾಗಿ ಇಲ್ಲಿ ಒಂದು ರಿಲೀಫ್ ಕಮಿಟಿಯನ್ನು ಸ್ಥಾಪಿಸುವದು ಅವಶ್ಯವಿದೆ. ಆ ಕಮಿಟಿಯ ಮುಖಾಂತರ ಕೇವಲ ಬಡಜನರಿಗೆ ಮಾತ್ರ ಅವರ ಉಪಯೋಗದ ಅಕ್ಕಿಯನ್ನು ಮಾರುವ ಕ್ರಮವನ್ನಿಟ್ಟುಕೊಂಡರೆ ಅಕ್ಕಿಯ ಸಂಗ್ರಹಕ್ಕೆ ತೊಂದರೆ ಬರಲಿಕ್ಕಿಲ್ಲ. ಹಳ್ಳಿಗಳಿಂದಾಗಲಿ, ಸ್ಥಳೀಕ ವರ್ಗದಾರರಿಂದಾಗಲಿ ಮಾರಾಟದ ಅಕ್ಕಿಯು ಪೇಟೆಯಲ್ಲಿ ಬರಲು ಕೂಡ ಆಗ ಒಂದು ಸಂದರ್ಭವು ಸಿಗುವದು. ಕಾರಣ ಅಕ್ಕಿಯು ಯೋಗ್ಯತಾನುಸಾರ ಅದರದರ ಕ್ರಯವು ಅದಕ್ಕಿದ್ದ ಮೇಲೆ ಸಂಗ್ರಹದಲ್ಲಿ ಅಕ್ಕಿಯನ್ನಿಟ್ಟುಕೊಂಡವರಿಗೆ ಹೊರಗೆ ಹಾಕಲು ಯಾವ ಅಡ್ಡಿಯು ಕಂಡುಬರುವದಿಲ್ಲ. ಈಗ ಇಂಥ ಸುವ್ಯವಸ್ಥೆಯು ಆದಲ್ಲೂ ಅಕ್ಕಿಯ ಸಂಗ್ರಹದಾರರು ಅಕ್ಕಿಯನ್ನು ಮಾರಾಟಕ್ಕೆ ಹೊರಗೆ ತಾರದೆ ಇದ್ದರೆ ಆಗ ಅದನ್ನು ಅಧಿಕಾರಿಗಳಿಂದಲಾದರೂ ಅದನ್ನು ಹೊರಗೆ ತರಿಸುವ ಭಾಗ ... ಜನರಿಗೆ ಬಂದು ಒದಗುತ್ತದೆ. ಮತ್ತು ಇದೆ ಕಾರಣದಿಂದ ... ದಿನ ಅಕ್ಕಿ ಸಾವುಕಾರ ಮಂಡಲದವರು ... ಗುವ ಅಕ್ಕಿಯನ್ನು ಅಲ್ಲಲ್ಲಿ ಸಂಗ್ರಹವಿರುವ ಕಡೆಗಳಿಂದ ಬದಗಿಸಿಕೊಡಲು ಅಧಿಕಾರವನ್ನು ಕೊಡಬೇಕೆಂಬುದಾಗಿ ಮದ್ರಾಸ ಸರಕಾರಕ್ಕೆ ತಂತಿ ಮೂಲಕ ತಿಳಿಸಿಕೊಂಡಿದ್ದಾರೆ. ಕಲೆಕ್ಟರ ದೊರೆಗಳಿಗೆ ಇಂಥ ಅಧಿಕಾರವು ಕೆಲವು ಜನರು ಕೊಡಬೇಕೆಂದು ಹೇಳುವದು ಉಚಿತವೊ ಹ್ಯಾಗೆ, ಈ ಕೆಲವರ ಅಪೇಕ್ಷೆಯಿಂದ ಇಡಿ ಜಿಲ್ಲೆಯು ಕಟ್ಟಿಹೋಗುವುದೊ ಹ್ಯಾಗೆ ಇತ್ಯಾದಿ ಪ್ರಶ್ನಗಳು ಸ್ವತಂತ್ರವಾಗಿವೆ. ಅವುಗಳ ವಿಷಯದಲ್ಲಿ ಸಾರ್ವಜನಿಕ ಪತ್ರಕಾರರ ದೃಷ್ಟಿಯಿಂದ ನಮ್ಮ ಮತವು ಒಂದು ವೇಳೆ ಸ್ವತಂತ್ರವಾಗಿದ್ದರೂ ಪ್ರಕೃತ ಪರಿಸ್ಥಿತಿಯಲ್ಲಿ ಆ ವಿವಾದ್ಯ ಸಂಗತಿಗಳನ್ನು ಚರ್ಚಿಸುವದು ಯೋಗ್ಯವಲ್ಲ. ಅಲ್ಲದೆ, ಇಂಥ ಅಧಿಕಾರವನ್ನು ತಾನು ಎಂದೂ ದುರುಪಯೋಗಿಸಲಿಕ್ಕಿಲ್ಲವೆಂಬುದಾಗಿ ಕಲೆಕ್ಟರ ದೊರೆಗಳು ಈ ಹೊತ್ತಿನ ಸಾವುಕಾರ ಮಂಡಲದ ಭೇಟಿಯಲ್ಲಿ ಬಾಯಿಬಿಟ್ಟು ಹೇಳಿದ್ದನ್ನು ನಾವು ಪ್ರತ್ಯಕ್ಷ ಕೇಳಿದ್ದರಿಂದ ಕಲೆಕ್ಟರ ದೊರೆಗಳ ಸೌಜನ್ಯದ ಮೇಲೆ ನಮಗೆ ಭರವಸೆ ಇಟ್ಟು ಮುಂದರಿಸಲು ಅಡ್ಡಿ ಇಲ್ಲವೆಂದು ತೋರುತ್ತದೆ. ಹಾಗು ಅವರೂ ಕೂಡ ನಮ್ಮ ಪ್ರಜೆಗಳ ನಂಬಿಕೆಯನ್ನು ಖಂಡಿತವಾಗಿ ವ್ಯರ್ಥಗೊಳಿಸಲಿಕ್ಕಿಲ್ಲ. ಇದು ನಿಜ.

ಆದರೂ ಹಳ್ಳಿಹಳ್ಳಿಗಳಲ್ಲೂ ಇಲ್ಲಿ ಪಟ್ಟಣದಲ್ಲೂ ಅಕ್ಕಿಯ ಸಂಗ್ರಹವನ್ನಿಟ್ಟುಕೊಂಡವರಿಗೆ ನಮ್ಮ ಆಗ್ರಹದ ಸೂಚನೆಯೇನೆಂದರೆ, ಈ ಸಮಯದಲ್ಲಿ ರಿಲೀಫ್ ಕಮಿಟಿಗೆ ಬೇಕಾಗುವ ಅಕ್ಕಿಯನ್ನು ಕಮಿಟಿಗೆ ಮಾರಿ ಕೊಡಲು ಅವರು ಸಿದ್ಧರಾಗಬೇಕು. ಬಡವರ ಗೋಳಾಟವನ್ನು ನಿಲ್ಲಿಸುವದೇ ಈಗಿನ ಸಾವುಕಾರರ ಮತ್ತು ನಾಗರಿಕರ ಮುಖ್ಯ ಕರ್ತವ್ಯವಾಗಿದೆ. ಕಲೆಕ್ಟರರಿಗೆ ಅಧಿಕಾರವು ಸಿಕ್ಕಿದರೂ ಅದರ ಕಠೋರ ಉಪಯೋಗವನ್ನು ಮಾಡಲು ಕೊಡದೆ ಇರುವದು ನಮ್ಮ ಕರ್ತವ್ಯ. ಯಾಕಂದರೆ ಒಬ್ಬನ ಕೈಯಲ್ಲಿ ಕತ್ತಿ ಇರುವಾಗ ನಾವು ಅಧರ್ಮ, ಅನ್ಯಾಯ, ಅನೀತಿ, ಭೂತದಯೆ ಈ ತತ್ವಗಳನ್ನು ಅನುಸರಿಸಿಯೆ, ಕರ್ತವ್ಯವೆಂಬ ಬುದ್ಧಿಯಿಂದಲೆ ನಡಕೊಳ್ಳ ಹತ್ತಿದರೆ ಆ ಕತ್ತಿಯು ತನ್ನಷ್ಟಕ್ಕೆ ನೆಲದ ಮೇಲೆ ಬೀಳುವದು. ಈ ಸಂಗತಿಗಳನ್ನೆಲ್ಲ ಆಲೋಚಿಸಿ ಅಕ್ಕಿಯನ್ನು ಸಂಗ್ರಹದಲ್ಲಿಟ್ಟುಕೊಂಡವರು ಮಿತಿಮೀರಿ ಲಾಭದ ಆಶೆಯಿಂದ ಅದನ್ನು ಹಾಗೆಯೆ ಒಳಗೆ ಇರಗೊಡದೆ ಯೋಗ್ಯದರದಲ್ಲಿ ಮಾರಾಟಕ್ಕೆ ಕೊಡ ಬರೆಂಬುದಾಗಿ ತಿಳಿಯುತ್ತೇವೆ. ಸಾವುಕಾರರು ಕೂಡ ಈಗಿನ ನಾಜೂಕ ಪರಿಸ್ಥಿತಿಯ ಜ್ಞಾನವನ್ನು ಪಡಕೊಂಡು ವ್ಯಾಪಾರದ ಧ್ಯೇಯವು ಹಣದ ಲಾಭಮಾತ್ರವಲ್ಲ, ಅದಕ್ಕಿಂತ ಬೇರೆ ಲೋಕಸಂಗ್ರಹವೂ ಇದೆ ಎಂಬುದನ್ನು ತಿಳಿದು ವರ್ತಿಸುವರು ಎಂದು ನಂಬುತ್ತೇವೆ. ಇಲ್ಲಿ ಆಗಲಿಕ್ಕಿರುವ ಅಕ್ಕಿಯ ವ್ಯವಸ್ಥೆಯ ಕುರಿತು ಹಾಗು ವಿನಂತಿ ಅರ್ಜಿಯೊಳಗಿನ ಬೇರೆ ಸಂಗತಿಗಳ ಕುರಿತು ಸ್ಥಳಸಂಕೋಚದ ದೆಸೆಯಿಂದ ನಮಗೆ ಈ ಹೊತ್ತು ಇಲ್ಲೆ ವಿರಮಿಸಬೇಕಾಗಿ ಬರುತ್ತದೆ.

ಎಲಿಮೆಂಟರಿ ಶಾಲೆಗಳ ಬಡ ಉಪಾಧ್ಯಾಯರು.

(ಲೇಖಾಂಕ ೩)

ಎಲಿಮೆಂಟರಿ ಶಾಲೆಗಳ ಬಡ ಉಪಾಧ್ಯಾಯರ ಸಂಬಳದ ತರಗತಿಯನ್ನು ಏರಿಸಲು ವಿದ್ಯಾ ಇಲಾಖೆಗೆ ಹ್ಯಾಗೆ ಅನೇಕ ವಿಘ್ನಗಳು ಒದಗಿದವೊ ಹಾಗೆಯೆ ಈ ವಿಷಯದ ಲೇಖನಕ್ಕೂ ಸಹ ನಮಗೆ ಈಗ ಎರಡು ವಾರಗಳಿಂದ ಮುಂಬಯಿ ಯುದ್ಧಪರಿಷತ್ತು, ಮಂಗಳೂರಿನ ಧಾರಣೆಯ ವಿಷಯಕ ಉಂಟಾದ ಗಲಭೆ ಮುಂತಾದ ಮಹತ್ವದ ವಿಷಯಗಳು ವಿಘ್ನರೂಪವಾಗಿ ಒದಗಿದವು! ಆದರೂ ಈ ವಿಷಯವನ್ನು ಈ ಹೊತ್ತು ಮುಗಿಸುವ ಆಲೋಚನೆ ಮಾಡಿದ್ದೇವೆ. ಕಾರಣ, ಪ್ರಾಥಮಿಕ ಶಿಕ್ಷಣಖಾತೆಯ ಗುಣದೋಷಗಳನ್ನು, ಆ ಖಾತೆಯ ವಾರ್ಷಿಕ ವರದಿಯನ್ನು ಪರೀಕ್ಷಿಸುವ ಸಂದರ್ಭದಲ್ಲಿ ಮೊದಲು ಎಷ್ಟೊ ಸಾರಿ ಸ್ಪಷ್ಟಪಡಿಸಿದ್ದೇವೆ. ಪ್ರಾಥಮಿಕ ಶಿಕ್ಷಣದ ಇಡಿ ಖಾತೆಯನ್ನು ವಿಮರ್ಶಿಸುವದು ನಮ್ಮ ಈ ಲೇಖದ ಉದ್ದೇಶವಲ್ಲವಾದ್ದರಿಂದ ಈ ಲೇಖಮಾಲೆಯ ಪ್ರಾರಂಭದಲ್ಲಿ ಹೇಳಿದ್ದಂತೆ ಅತಿ ಪವಿತ್ರವಾದ ಉಪಾಧ್ಯಾಯ ವೃತ್ತಿಯನ್ನು ಕೈಕೊಳ್ಳಲು, ತಾನು ಒಬ್ಬ ಉಪಾಧ್ಯಾಯನು, ತನ್ನ ತರಗತಿಯು ಸಮಾಜದ ಅಥವಾ ರಾಷ್ಟ್ರದ ಇತಿಹಾಸದಲ್ಲಿ ಉಚ್ಚ ತರಗತಿಯದು ಎಂದು ಒಬ್ಬ ಉಪಾಧ್ಯಾಯನು ಸ್ವಾಭಿಮಾನವಾಗಿ ಕೊಂಡಿರಲು ಈಗಿನ ವಿದ್ಯಮಾನಗಳಲ್ಲಿ ಸರಕಾರವು ತನ್ನ ಶಿಕ್ಷಣಖಾತೆಯ ಮೂಲಕ ಆ ಬಡ ಉಪಾಧ್ಯಾಯರಿಗೆ ಯಾವ ಗುಣವನ್ನು ಮಾಡಿದ ಈ ಪ್ರಶ್ನವನ್ನೆ ಮುಖ್ಯವಾಗಿ ವಿವರಿಸಿ ಈ ಪ್ರಸ್ತಾಪವನ್ನು ಮುಗಿಸುತ್ತೇವೆ.

ಉಪಾಧ್ಯಾಯ ವೃತ್ತಿಯು ಬೇರೆ ಯಾವ ದೃಷ್ಟಿಯಿಂದ ಎಷ್ಟು ಉತ್ತಮವಾದರೂ ವ್ಯಾವಹಾರಿಕ ದೃಷ್ಟಿಯಿಂದ ಅದು ಯಾವವರೆಗೆ ಭರ್ತೃಹರಿಯು ಹೇಳುವಂತೆ "ಅರ್ಥಕರೀ" ಎಂದರೆ ಧನೋತ್ಪಾದಕವಾಗುವದಿಲ್ಲವೊ ಆ ವರೆಗೆ ಅದರ ಕಡೆಗೆ ಸಮರ್ಥರ ಪ್ರವೃತ್ತಿಯು ಹೋಗದು. ಗೋಪೂಜೆ, ಗೋಸೇವೆ ಮುಂತಾದ್ದನ್ನು ಮಾಡುವದು ಧಾರ್ಮಿಕ ದೃಷ್ಟಿಯಿಂದ ಉತ್ತಮವಾದರೂ ಬತ್ತಿಹೋದ ದನವನ್ನು ವಿಶೇಷತಃ ಪಟ್ಟಣಿಗರು ಕಟ್ಟುವದು ಬಹು ಅಪರೂಪ. ಇದೆ ನ್ಯಾಯವು ಪ್ರಕೃತ ವಿಷಯಕ್ಕೂ ಸರಿಯಾಗಿ ಅನ್ವಯಿಸುತ್ತದೆ. ಎಲ್ಲ ದೃಷ್ಟಿಯಿಂದ ಅತ್ಯುತ್ತಮವಾದ ಉಪಾಧ್ಯಾಯ ವೃತ್ತಿಯನ್ನು ಕೈಕೊಂಡವನಿಗೆ ಅವನ ಚಿಕ್ಕದೊಂದು ಎಂದರೆ ಗಂಡ, ಹೆಂಡತಿ, ಮಕ್ಕಳು ಈ ಪ್ರಕಾರ ಮೂರು ಜನರುಳ್ಳ ಕುಟುಂಬವನ್ನು ಪೋಷಿಸಲು ಅಸಾಧ್ಯವಾಗುವ ಪಕ್ಷದಲ್ಲಿ ಅವನು ಇದನ್ನು ... ವೃತ್ತಿಯನ್ನೇ ...

ನಿಲ್ಲುವದಾದರೆ ಅದು ಅವರಿಗೆ ಸಂತೋಷಕರವೆ. ಅಧಿಕಾರಿಗಳಿಂದ ಅವರಿಂದ ಬೇಸರವು ಬೇರೆ ಬಂದಿರಿಕ್ಕಿಲ್ಲ. ಇದು ನಮ್ಮ ಮಟ್ಟಿಗೆ ಅನುಕೂಲವಾದರೂ ಶಾಲೆಗಳಿಗೆ ನಿಂತವನ ಸ್ಥಿತಿಯು ಏನಾದೀತು, ವಾಯು ಧಕ್ಷಿಣ ಜಲಪಾನಗಳ ಕರ್ತವನ್ನು ಯಾರು ಒಪ್ಪುವರು ಇತ್ಯಾದಿ ಸಂಗತಿಗಳನ್ನು ನಾವು ಮೊದಲಾಗಿ ಆಲೋಚಿಸಬೇಕಲ್ಲವೆ? ಶಾಲೆಗಳಲ್ಲಿ ಉಪಾಧ್ಯಾಯತನವನ್ನು ಮಾಡುವದರಿಂದ ಹೊಟ್ಟೆ ಹೊರಕೊಳ್ಳಲು ಅಸಾಧ್ಯವಾಗುವದಾದರೆ ಅರ್ಥಾತ್ ಅವರಿಗೆ ಬೇರೆಬೇರೆ ವ್ಯಾಪಾರಗಳನ್ನು ಕೈಕೊಳ್ಳಬೇಕಾಗಿ ಬರುತ್ತದೆ. ಆಗ ಅವರಿಂದ ವಿದ್ಯಾದಾನದ ಕರ್ತವ್ಯವು ಮನಃಪೂರ್ವಕವಾಗಿ ನಡೆಯದು. ಇದು ಕೇವಲ ತಪ್ಪೆಂದು ಹೇಳಲು ಸಾಧ್ಯವಿಲ್ಲ. ಜೀವನದ ನಿರ್ವಾಹಕ್ಕಾಗಿ ಚಿಕ್ಕದೊಂದು ಅಂಗಡಿಯನ್ನು ತೆರೆಯೋಣ, ದಲಾಲಿ ವ್ಯಾಪಾರವನ್ನು ಮಾಡೋಣ, ಗದ್ದೆಗಳ ಬೇಸಾಯ ಮುಂತಾದ ಹಲವು ಬಗೆಯ ವೃತ್ತಿಗಳನ್ನು ಈ ಉಪಾಧ್ಯಾಯ ವೃತ್ತಿಯೊಡನೆಯೆ ಅವರಿಗೆ ಮಾಡಬೇಕಾಗಿ ಬರುತ್ತದೆ. ಉಪಾಧ್ಯಾಯರ ಕಾರ್ಯಕ್ಷೇತ್ರವು ಈ ರೀತಿಯಿಂದ ವಿಭಿನ್ನವಾದ್ದರಲ್ಲಿ ಅವರು ಶಾಲೆಯ ಕೆಲಸವನ್ನು ಎಷ್ಟು ಮನಃಪೂರ್ವಕವಾಗಿ ಮಾಡಬಹುದು? ಇಂಥ ಪ್ರಸಂಗದಲ್ಲಿ ಉಪಾಧ್ಯಾಯರು ಶಾಲೆಗಳನ್ನು ಡಿಪಾರ್ಟಮೆಂಟಿನ ನಿಯಮದ ಪ್ರಕಾರ ತೆರೆಯುವರೊ ಇಲ್ಲವೆ ಸುಳ್ಳು ರಿಜಿಸ್ಟರನ್ನಿಡುವರೊ ಮೊದಲಾದ ನ್ಯೂನತೆಗಳನ್ನು ಹುಡುಕಲು 'ಹೊಂಚು' ಹಾಕಿಕೊಂಡಿರುವ ಇನ್ಸ್‌ಪೆಕ್ಟಿಂಗ್ ಆಫೀಸರುಗಳನ್ನು ನೋಡುವಾಗ ಉಪಾಧ್ಯಾಯರ ಬಗ್ಗೆ ಕರುಣೆಪಡಬೇಕೊ ಅಥವಾ ಈ ಆಫೀಸರರುಗಳ ಪ್ರವೃತ್ತಿಯನ್ನು ತಿರಸ್ಕರಿಸಬೇಕೊ ಇದೆ ಗೊತ್ತಾಗದು. ತಿಂಗಳ ಒಂದಕ್ಕೆ ನೂರಾರು ರೂಪಾಯಿಗಳಿಂದ ಜೇಬನ್ನು ತುಂಬಿಸಿಕೊಳ್ಳುವ ಈ ಆಫೀಸರುಗಳು ಬಡ ಮಾಸ್ತರರ ಗುಪ್ಪಿಗಳ ಮೇಲೆ 'ಹಲವು ಪರಿಯಿಂದ ಬ್ರಹ್ಮಾಸ್ತ್ರಗಳನ್ನು ಬಿಡಲು ಯಾವಾಗಲೂ ತತ್ಪರರಾಗಿಯೆ ಇರುವರು. ನಿಜವಾಗಿ ನೋಡಿದರೆ ಈ ಬಗ್ಗೆ ಇನ್ಸ್‌ಪೆಕ್ಟಿಂಗ್ ಆಫೀಸರುಗಳನ್ನು ದೂರುವದೂ ನ್ಯಾಯವಲ್ಲ. ಕಾರಣ, ಅವರಾದರೂ ಸ್ವತಂತ್ರರಲ್ಲ; ಅದರೆ ಅವರ ಮೇಲಿಂದ ತಿರುಗುತ್ತಿರುವ ಒಂದು ದೊಡ್ಡ ಚಕ್ರಯಂತ್ರಕ್ಕೆ ಅಧೀನರಾಗಿರುವರು. ತಥಾಪಿ ಬಡ ಉಪಾಧ್ಯಾಯರ ವಿಪತ್ತುಗಳ ಕೋಷ್ಟಕಗಳನ್ನು ಹೇಳುವಾಗ ಅವರಿಗೆ ತಟ್ಟುವ ಈ ಇನ್ಸ್‌ಪೆಕ್ಟಿಂಗ್ ಆಫೀಸರುಗಳ ಬಾಧೆಯನ್ನು ನಿರ್ದೇಶಿಸದೆ ಮುಂದೆ ಹೋಗಲಾರದು.

ಇರಲಿ; ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಸಂಬಳವು ಅತಿ ಸ್ವಲ್ಪವಿದೆ ಎಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾದ ಸಂಗತಿಯು. ಅವರಲ್ಲಿ ತಮ್ಮ ವೃತ್ತಿಯ ಬಗ್ಗೆ ಒಂದು ಆಗ್ರಹವನ್ನು ಹುಟ್ಟಿಸಬೇಕಾದರೆ ಅವರ ಸಂಬಳದ ತರಗತಿಯನ್ನು ಹೆಚ್ಚಿಸಬೇಕು. ಇದು ಮೊದಲನೆ ಮತ್ತು ಮಹತ್ವದ ಸಂಗತಿಯು. ನಮ್ಮ ಮದ್ರಾಸ ಸಂಸ್ಥಾನದಲ್ಲಿ ಮೂಲ ವಿದ್ಯಾಭ್ಯಾಸದ ಹೊರೆಯನ್ನು ಸರಕಾರವು ಪ್ರತ್ಯಕ್ಷವಾಗಿ ತನ್ನ ತಲೆಯ ಮೇಲೆ ಇಟ್ಟುಕೊಂಡದ್ದು ಬಹು ಕಡಿಮೆ. ಲೋಕಲ್ ಬೋರ್ಡಿನ ಮೇಲೂ, ಖಾಸಗಿ ಜನರ ಮೇಲೂ ಹಾಕಿದೆ, ಬಂಗಾಲದಲ್ಲೂ ಹೆಚ್ಚಾಗಿ ಇದೆ ಅವಸ್ಥೆ, ಮುಂಬಯಿಯಲ್ಲಿ ಮಾತ್ರ ಪ್ರಾಥಮಿಕ ಶಾಲೆಗಳನ್ನು ಪ್ರಾಯಶಃ ಸರಕಾರವೆ ನಡಿಸುವದು. ದೇಶಕ್ಕೆ ಪ್ರಾಥಮಿಕ ಶಿಕ್ಷಣವನ್ನು ಕೊಡುವದು ಸರಕಾರದ ಕರ್ತವ್ಯವು. ಈ ದೃಷ್ಟಿಯಿಂದ ನೋಡುವಾಗ ಸರಕಾರವೆ ಪ್ರಾಥಮಿಕ ಶಿಕ್ಷಣದ ಸಂಸ್ಥೆಗಳನ್ನು ನಡಿಸಬೇಕಾದ್ದು. ಬೋರ್ಡಿನ ಮುಖಾಂತರವಾಗಲಿ ಖಾಸಗಿ ಜನರ ಕಡೆಯಿಂದಾಗಲಿ ನಡೆಯುತ್ತ ಶಾಲೆಗಳು ಕೂಡ ಒಂದು ದೃಷ್ಟಿಯಿಂದ ಎಂದರೆ ಸರಕಾರದ ಧನಸಾಹಾಯ್ಯವಿರುವದರಿಂದ ಅವುಗಳ ಪೋಷಕತ್ವವು ಸರಕಾರದ ಕಡೆಗನೆ ಬರುತ್ತದೆನ್ನೋಣ. ಎಂದಮೇಲೆ ಲೋಕಲ್‌ಬೋರ್ಡುಗಳಿಗೆ ಹಾಗು ಖಾಸಗಿ ಸಂಸ್ಥೆಗಳಿಗೆ ಹೆಚ್ಚಿನ ಹಣವನ್ನು ಸರಕಾರವು ಕೊಡಬೇಕಾಗಿದ್ದು, ಆ ಭಾಗದಲ್ಲಿ ಸರಕಾರವು ಕೈ ಎಳೆದು ಹಿಡಿಯುವದಾದರೆ ಬೋರ್ಡುಗಳಿಗೂ ಅಧ್ಯಾಪಕರ ಸಂಬಳವನ್ನು ಬಿಗಿ ಹಿಡಿಯಬೇಕಾಗುತ್ತದೆ. ಇದುವೂ ಅಲ್ಲ; ನಿಜವಾಗಿ ಅಧ್ಯಾಪಕರ ಸಂಬಳದ ತರಗತಿಯನ್ನು ನಿರ್ಣಯಿಸುವದು ವಿದ್ಯಾ ಇಲಾಖೆ ಎಂದರೆ ಸರಕಾರವೆ ಅಲ್ಲದೆ ಬೇರೆ ಅಲ್ಲ. ಎಂದಮೇಲೆ ಬಡ ಮಾಸ್ತರರ ಸಂಬಳದ ತರಗತಿಯು ಗತಿಹೀನವಾದ ಬಗ್ಗೆ ಯಾರನ್ನು ದೂರಬಹುದೆಂದು ಆಲೋಚಿಸುವ ಕಾರಣವೆ ಇಲ್ಲ. ಈ ದೋಷಕ್ಕೆ ಸರಕಾರವೆ ಹೊಣೆಯಾಗುವದು.

ಪರಂತು ಈ ದೋಷವು ಕ್ಷಮ್ಯವಾದ್ದಲ್ಲವೆಂದು ನಾವು ಸ್ಪಷ್ಟವಾಗಿ ಹೇಳುತ್ತೇವೆ. ಮುಂದಿನ ಜನಾಂಗಕ್ಕೆ ವಿದ್ಯಾದಾನಮಾಡುವ ಒಬ್ಬ ಉಪಾಧ್ಯಾಯನು ಒಂದು ತಿಂಗಳಿಗೆ ೧೫ ರೂಪಾಯಿ ಸಂಬಳವನ್ನು ಸಹ ಹೊಂದುವದಿಲ್ಲವಾದರೆ ಎಂದರೆ ೧೨ ರೂಪಾಯಿಯ ಉಪಾಧ್ಯಾಯನು ಈ ವಿದ್ಯಾ ಮಂದಿರದಲ್ಲಿ ಇರುವದಾದರೆ ಅದು ಆ ಇಲಾಖೆಗೆನ ಲಜ್ಜಾಸ್ಪದವಲ್ಲವೆ? ಇಷ್ಟು ಶೋಚನೀಯ ದುರವಸ್ಥೆಯು ಬೇರೆ ಸರಕಾರಿ ಖಾತೆಗಳಲ್ಲಿ ಇಲ್ಲವೆಂದು ತೋರುತ್ತದೆ. ಪೋಸ್ಟುಮನರ ಸಂಬಳವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಎಷ್ಟೊ ಅಧಿಕವಾಗಿರುತ್ತದೆ. ಆದರೆ ಮಧ್ಯಮ ತರದ ಪಟ್ಟಣಗಳಲ್ಲಿ ಅದೆ ಪೋಸ್ಟುಮನರಿಗೆ ಎಷ್ಟು ಸಂಬಳವಿರುವದೊ ಅಷ್ಟು ಕೂಡ ಈ ಉಪಾಧ್ಯಾಯರಿಗೆ ಇರದು. ಎಂದರೆ ಅಷ್ಟೆ ಸಂಬಳದ ಅಥವಾ ಅದಕ್ಕಿಂತಲೂ ಹೆಚ್ಚು ಸಂಬಳದ ಉಪಾಧ್ಯಾಯರಿರಬೇಕು [illegible] ನಮ್ಮ [illegible] ಮುಖ್ಯ ತಾತ್ಪರ್ಯವೇನೆಂದರೆ [illegible] ಕವನ್ನು ಅನುಭವಿಸುವ [illegible]

ಈಗಿನ ಧಾರಣೆಯು ಏರಿದ ದಿವಸಗಳಲ್ಲಿ ದಿನ ಒಂದಕ್ಕೆ ೮-೧೦ ಆಣೆಯನ್ನು ದುಡಿಯುವನು; ಅವನ ತಿಂಗಳ ಉತ್ಪನ್ನವು ಈ ಲೆಕ್ಕದಿಂದ ೧೫-೧೮ ರೂಪಾಯಿ ಆಗುವದು. ಪರಂತು ಪವಿತ್ರವೃತ್ತಿಯನ್ನು ಮಾಡಲು ಪವಿತ್ರವನ್ನು ಧರಿಸಿದ ನಮ್ಮ ಉಪಾಧ್ಯಾಯರ ಸ್ಥಿತಿಯು ಇದಕ್ಕೂ ಹೀನವಾಗಿದೆ. ಈ ಸಂಗತಿಯನ್ನು ನಾವೆ ಮಾತ್ರ ಹೇಳುತ್ತೇವೆಂದಲ್ಲ; ಕಳೆದ ತಿಂಗಳ ಮುಂಬಯಿ ಸಂಸ್ಥಾನದ ಶಿಕ್ಷಣ ಪರಿಷತ್ತಿನಲ್ಲಿ ಈ ವಿಷಯವು ಬಲವಾಗಿ ಚರ್ಚೆಗೆ ಬಂತು. ನಾಮದಾರ ಉಪಾಸನಿಗಳು ಪ್ರಾಥಮಿಕ ಶಾಲೆಗಳೊಳಗಿನ ಶಿಕ್ಷಕರ ಸಂಬಳವು ಅತಿ ಕಡಿಮೆ ಇದೆ; ಅದನ್ನು ಹೆಚ್ಚಿಸದೆ ಇದ್ದರೆ ಕೂಲಿಹೆಂಗಸಿನ ದುಡಿತಕ್ಕೂ ಇವರ ಉತ್ಪತ್ತಿಗೂ ಹೆಚ್ಚು ಕಡಿಮೆಯನ್ನು ತೋರಿಸಲು ಆಗದು; ಎಂದು ಹೇಳಿ ಅವರ ಸಂಬಳವನ್ನು ಹೆಚ್ಚಿಸಲು ಒಂದು ಠರಾವನ್ನು ತಂದರು. ಇದರ ಮೇಲಿಂದ ಮುಂಬಯಿ ಸಂಸ್ಥಾನದಲ್ಲಿ ಪ್ರಾಥಮಿಕ ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸುವ ವಿಷಯದಲ್ಲಿ ಹ್ಯಾಗೆ ಸಂಘಟಿತಪ್ರಯತ್ನವು ನಡೆದಿದೆಂದು ಗೊತ್ತಾಗುವದು. ಮಾತ್ರವಲ್ಲ, ಉತ್ತರ ಕನ್ನಡ ಜಿಲ್ಲೆಯೊಳಗಿನ ಪ್ರಾಥಮಿಕ ಶಾಲೆಗಳ ಶಿಕ್ಷಕರು ತಮ್ಮ ವರಿಷ್ಠ ಅಧಿಕಾರಿಗಳ ಮುಖಾಂತರ ೨೫೦ ಅರ್ಜಿಗಳನ್ನು ಗವರ್ನರ ದೊರೆಗಳ ಸನ್ನಿಧಾನದಲ್ಲಿ ಕಳುಹಿಸಿದ್ದಾರೆ, ಇದೆ ಪ್ರಕಾರ ಇನ್ನೂ ೧೫೦ ಅರ್ಜಿಗಳು ಹೋಗಲಿಕ್ಕಿವೆಯೆಂದು ಕೇಳುತ್ತೇವೆ. ಎಂದಮೇಲೆ ಸ್ವತಃ ಉಪಾಧ್ಯಾಯರು ಹಾಗು ಶಿಕ್ಷಣ ಪರಿಷತ್ತಿನಂಥ ಸಾರ್ವಜನಿಕ ಸಂಸ್ಥೆಗಳು ಮುಂಬಯಿ ಸಂಸ್ಥಾನದಲ್ಲಿ ಒಂದೆ ಧ್ಯೇಯದ ಕುರಿತು ಯತ್ನಿಸುವಾಗ ಆದಕ್ಕೆ ಸಿದ್ಧಿಯು ಬಂದೀತೆಂದು ನೆನಸಲು ಅಡ್ಡಿ ಇಲ್ಲ.

ಇಲ್ಲಿಯವರೂ ನಮ್ಮ ಉಪಾಧ್ಯಾಯ ಬಂಧುಗಳು ಈ ದೀನ ಸ್ಥಿತಿಯನ್ನು ಬರಿ ಅನುಭವಿಸುತ್ತ ಕೂಡ್ರುವದರಲ್ಲಿ ಅರ್ಥವಿಲ್ಲ. ಈಗ ಒಂದು ವರ್ಷದ ಆಚೆಗೆ ಈ ಉಪಾಧ್ಯಾಯರ ಸಂಬಳದ ತರಗತಿಯನ್ನು ಹೆಚ್ಚಿಸಬೇಕೆಂದು ನಿರ್ಣಯವಾಗಿದೆಂಬುದು ನಿಜ. ಆದರೆ ಅದು ಕೂಡ ಅಪೂರ್ಣವೆ ಸರಿ. ಪ್ರಕೃತ ಶಿಕ್ಷಕರ ಜ್ಞಾನಕ್ಕೆ ಅದು ತಕ್ಕಷ್ಟಿದೆಂದಿದ್ದರೆ, ಮುಂಬಯಿ ಇಲಾಖೆಯೊಳಗಿನ ಪ್ರಾಥಮಿಕ ಶಿಕ್ಷಕರಿಗೆ ಟ್ರೈನಿಂಗ್ ಶಿಕ್ಷಣವು ದೊರಕುವಂತೆ ಇಲ್ಲೂ ಅವರಿಗೆ ಉತ್ತಮ ಮತ್ತು ಉಪಯುಕ್ತವಾದ ಶಿಕ್ಷಣವನ್ನು ಕೊಡುವ ವಿಷಯದಲ್ಲಿ ಪರ್ಯಾಲೋಚಿಸಿ, ಸಂಬಳದ ತರಗತಿಯನ್ನು ಸಹ ಹೆಚ್ಚಿಸುವದು ಅವಶ್ಯವಾಗಿದೆ. ಈ ವಿಷಯದಲ್ಲಿ ಉಪಾಧ್ಯಾಯರು ಸ್ವತಃ ಸಂಘಟಿತ ಪ್ರಯತ್ನವನ್ನು ಮಾಡಬೇಕು. ಕಾಯಿದೆ ಕೌನ್ಸಿಲಿನ ಆಯಾ ಭಾಗದ ಮೆಂಬರುಗಳನ್ನು ಕಂಡು ಅವರ ಮುಖಾಂತರ ಈ ಪ್ರಶ್ನವು ಕೌನ್ಸಿಲಿನಲ್ಲಿ ಬರುವಂತೆ ಮಾಡಬೇಕು. ಉಪಾಧ್ಯಾಯರ ಯೋಗ್ಯತೆಯು ಕಡಿಮೆ, ಅದಕ್ಕೆ ತಕ್ಕ ಸಂಬಳವು ಕಡಿಮೆ ಎಂಬ ಯುಕ್ತಿವಾದವನ್ನು ಸರಕಾರವು ಮಾಡತೊಡಗಿದರೆ ಇದೆ ಯುಕ್ತಿವಾದದ ಮಾರ್ಗದಲ್ಲಿ ಇನ್ನೂ ಮುಂದಕ್ಕೆ ಹೋಗಿ ನಾಳೆ "ಯೋಗ್ಯತೆಯೂ ಬೇಡ, ಸಂಬಳವೂ ಬೇಡ" ಎಂದುಹೇಳಿ ದನ ಕಾಯುವವರ ವಶಕ್ಕೆ ಹುಡುಗರನ್ನು ಕೊಡಬಹುದೆಂಬ ಅನರ್ಥವು ಬಂದೀತಲ್ಲವೆ! ಆದರೆ ಇಂಥ ಉಪಹಾಸಾಸ್ಪದ ವರ್ತನವನ್ನು ವಿದ್ಯಾ ಇಲಾಖೆಯು ಎಂದೂ ಮಾಡಲಿಕ್ಕಿಲ್ಲವೆಂದು ತೋರುತ್ತದೆ. ಇರಲಿ, ಕೊನೆಗೆ ನಮ್ಮ ದಕ್ಷಿಣಕನ್ನಡದೊಳಗಿನ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ದೀನಸ್ಥಿತಿಯನ್ನು ಪರಿಹರಿಸಲು ಅವರ ವರಿಷ್ಠರು ಅನುಗ್ರಹಿಸುವರೆಂದು ನಂಬಿ ಈ ಲೇಖನವನ್ನು ಮುಗಿಸುತ್ತೇವೆ

ಸ್ಫುಟ ವಿಚಾರಗಳು.

೧. ಮೈಸೂರಿನ ಮಹಾರಾಜರಿಗೆ ಇತ್ತಲಾಗೆ ಬ್ರಾಹ್ಮಣೇತರರ ಮಂಡಲವು ಒಂದು ಮಾನ ಪತ್ರವನ್ನು ಸಮರ್ಪಿಸಿತು. ಬ್ರಾಹ್ಮಣೇತರರ ಮಂಡಲದಲ್ಲಿ ಸುಪ್ರಸಿದ್ಧರಾದ ಅನೇಕ ಗೃಹಸ್ಥರಿದ್ದರು. ಮಹಾರಾಜರಿಗೆ ಸಮರ್ಪಿಸಿದ ಮಾನಪತ್ರದಲ್ಲಿ ಬ್ರಾಹ್ಮಣೇತರರು ಸ್ವಕೀಯ ವರ್ಗದವರಿಗೆ ದೊಡ್ಡ ದೊಡ್ಡ ಸರಕಾರಿ ಹುದ್ದೆಗಳನ್ನು ಕೊಟ್ಟು ಅವನ್ನು ತಮ್ಮನ್ನು ಮುಂದಕ್ಕೆ ತರಬೇಕೆಂಬುದಾಗಿ ವಿಜ್ಞಾಪಿಸಿಕೊಂಡಿದ್ದರು. ಈ ವಿಜ್ಞಾಪನೆಯನ್ನು ಇನ್ನೊಂದು ಭಾಷೆಯಲ್ಲಿ—ಅದರೂ ಅವರ ಅಭಿಪ್ರಾಯವನ್ನು ಎಳ್ಳಷ್ಟು ವಿೂರದೆ—ಹೇಳುವದಾದರೆ ದೊಡ್ಡ ದೊಡ್ಡ ಹುದ್ದೆಗಳನ್ನು ಬ್ರಾಹ್ಮಣರಿಗೆ ಕೊಡದೆ ತಮಗನೆ ಕೊಡಬೇಕು. ಈ ಆಶಯದ ಮಾನಪತ್ರಕ್ಕೆ ಉತ್ತರವನ್ನು ಕೊಡುವಾಗ ಮಹಾರಾಜರು ತಮ್ಮ ಸಮದೃಷ್ಟಿಯನ್ನು ತೊಲಗಿಸಿದಲ್ಲ. 'ಬ್ರಾಹ್ಮಣರನ್ನು ಒಂದು ನಮೂನೆಯಿಂದ, ನಿಮ್ಮನ್ನು ಒಂದು ನಮೂನೆಯಿಂದ ನಡಿಸಲಾಗುವದಿಲ್ಲ. ಬ್ರಾಹ್ಮಣರಾದರೂ ನಿಮ್ಮಂತೆಯೆ ರಾಜನಿಷ್ಠರಿದ್ದಾರೆ. ಉದ್ಯೋಗಗಳು ಪಾತ್ರತೆಯ ಮೇಲೆ ಹೊಂದಿಕೊಂಡಿವೆ, ಜಾತಿಯ ಮೇಲೆ ಹೊಂದಿಕೊಂಡಿಲ್ಲ; ಇತ್ಯಾದಿ ಸದಭಿಪ್ರಾಯವನ್ನು ವ್ಯಕ್ತಗೊಳಿಸಿ ಮಹಾರಾಜರವರು ಬ್ರಾಹ್ಮಣ—ದಿನ್ ಬ್ರಾಹ್ಮಣರ ಈ ವಿರೋಧವು ನಿಂತುಹೋಗುವದು ಅವಶ್ಯವಿದೆ ಎಂದು ತಮ್ಮ ಆಶೆಯನ್ನು ಸೂಚಿಸಿದರು. ಮೈಸೂರ ಮಹಾರಾಜರು ಸ್ಪಷ್ಟರೀತಿಯಿಂದ ಬ್ರಾಹ್ಮಣೇತರ ಬಂಧುಗಳ ಅಭಿಪ್ರಾಯವನ್ನು ಅವರ ಕಣ್ಣು ಮುಂದಕ್ಕೆ ತಂದುಕೊಟ್ಟು ತಮ್ಮ [illegible] ಅವರನ್ನು [illegible]

೩. ಐರ್ಲಂಡಿನ ಹೋಮ್‌ರೂಲಿಗೆ ಬರುವ ವಿಘ್ನಗಳು [illegible] ಎಂದು ಒಂದು ಆಳತೆ ಅಥವಾ ಲೆಕ್ಕವಿಲ್ಲ. ಐರ್ಲಂಡಿನೊಳಗಿನ ಪ್ರತಿ ಒಬ್ಬನು ಸೈನಿಕನಾಗಬೇಕಾದರೆ ಎಂದರೆ ಬಿಟ್ಟಾನಿಯದ ಸೈನಿಕತ್ವವನ್ನು ಐರ್ಲಂಡಿಗೆ ಬಗಾವಮಾಡುವದಾದರೆ 'ಸ್ವದೇಶಕ್ಕಾಗಿ ಯುದ್ಧವನ್ನು ಮಾಡುತ್ತೇವೆ.' ಎಂಬ ತಿಳುವು ಐರಿಶ್ ಜನರಲ್ಲಿ ಹುಟ್ಟುವಂತೆ ಮೊದಲು ಐರ್ಲಂಡಿಗೆ ಹೋಮ್‌ರೂಲನ್ನು ಕೊಟ್ಟುಬಿಡುತ್ತೇವೆಂದು ಮುಖ್ಯ ಮಂತ್ರಿಗಳಾದ ಮಿ. ಲೊಯ್ಡ್ ಜಾರ್ಜರು ಪಾರ್ಲಿಮೆಂಟಿನ ಸಭೆಯಲ್ಲಿ ಅರಿತೋರಿಸಿದರು. ಲೊಯ್ಡ್ ಜೋರ್ಜರ ಮುಖ್ಯ ಸೂತ್ರವೇನೆಂದರೆ ಬಿಟ್ಟಾನಿಯದ ಸೈನ್ಯಭರತಿಗಿಂತ ಮುಂಚೆ ಐರ್ಲಂಡಿಗೆ ಸ್ವರಾಜ್ಯವು ಬೇಕಾದ್ದು. ಐರ್ಲಂಡಿನ ಹೋಮ್‌ರೂಲಿನ ಸಿದ್ಧ್ಯರ್ಥ ಮುಖ್ಯ ಮಂತ್ರಿಗಳು ಲೋಕಕ್ಕೆಲ್ಲ ತಿಳಿಯುವಂತೆ ನಿಜವಾಗಿ ಬಹು ಸಾಹಸವನ್ನು ಮಾಡಿದ್ದಾರೆಂಬುದಕ್ಕೆ ಸಂದೇಹವಿಲ್ಲ. ಇವರ ಸಾಹಸದ ಮೇಲಿಂದಲಾದರೂ ಸ್ವರಾಜ್ಯದ ಸ್ವಾತಿಮಳೆಯ ಹನಿಯು ಐರ್ಲಂಡಿನ ಬಾಯಿಯಲ್ಲಿ ಬಿದ್ದೀತೆಂದು ಲೋಕವು ನೆನಸಿತ್ತು. ಪರಂತು ಅದರ ದುರ್ದೈವವು ಎಷ್ಟರಮಟ್ಟಿಗೆ ಬಲವತ್ತರವಿದೆ ಎಂದರೆ ಲೋರ್ಡ ಕರ್ಝನರು ಸದ್ಯದ ಒಂದು ಭಾಷಣದಲ್ಲಿ 'ಐರ್ಲಂಡಿಗೆ ಕೊನ್‌ಸ್ಟ್ರಿಕ್ಷನು ಎಂದರೆ ಬಿಟ್ಟಾನಿಯದ ಸೈನ್ಯಭರತಿಯು ಅಗತ್ಯವಿಲ್ಲ; ಹೋಮ್‌ರೂಲಿನ ಕಾರಣವೂ ಇಲ್ಲ'ವೆಂದು ಹೇಳಿದರು. ಲೊ. ಕರ್ಝನರು ಪೂರ ಕೆಬಿನೆಟಿನ ಒಬ್ಬ ಘಟಕರಾದ 'ಪ್ರಯುಕ್ತ ಪೂರ ಕೆಬಿನೆಟಿನ ನಿರ್ಣಯವಾದರೂ ಇದಕ್ಕಿಂತ ಬೇರೆ ಇರದೆಂಬುವದು ಸ್ಪಷ್ಟವೆ. ತಾತ್ಪರ್ಯ ಮುಖ್ಯ ಮಂತ್ರಿಗಳ ಸಾಹಸದಿಂದ ಬರಲಿಕ್ಕಿರುವ ಹೋಮ್-ರೂಲಿನ ಸ್ವಾತಿಮೇಘವು ಕರ್ಝನ ದೊರೆಗಳ ಗಾಳಿಯಿಂದ ಹಾರಿಹೋಯಿತು! ಐರ್ಲಂಡಿಗೆ ಹೋಮ್‌ರೂಲಿನ ಯೋಗವು ಕರ್ಝನರ ವಿಧಾನದಂತೆ ತಪ್ಪಿಹೋದರೂ ಬಿಟ್ಟಾನಿಯದ ಸೈನ್ಯಭರತಿಯ ವಿಷಯವು, ಇತ್ತಲಾಗಿನ ವರ್ತಮಾನಗಳನ್ನು ನೋಡುವಾಗಬೇರೆ ರೂಪದಲ್ಲಿ ಪ್ರಚಲಿತವಿದೆಂದು ತೋರುತ್ತದೆ. ಲೊರ್ಡ ಫ್ರೆಂಚರು ಐರ್ಲಂಡಿನಲ್ಲಿ ಅವಶ್ಯಕದ ತತ್ವದ ಮೇಲೆ ಸೈನ್ಯಭರತಿಯನ್ನು ಒದಗಿಸುವರಿದ್ದಾರೆ. ಆದರೆ ಬಿಟ್ಟಾರೆ ಹೋಮ್‌ರೂಲಿಗೆ ಮಾತ್ರ ಗ್ರಹದ ಬಾಧೆಯು ತಟ್ಟಿತು.

೪. ಭಾರತಮಂತ್ರಿಗಳ ಸುಧಾರಣೆಗಳು ಬೇಗನೆ ಬೆಳಕಿಗೆ ಬರತಕ್ಕವಿದ್ದಾವೆ. ಈ ಸುಧಾರಣೆಗಳು ಜನತೆಯ ಮುಂದೆ ಅವತರಿಸಬೇಕಾದರೆ ಅದಕ್ಕಿಂತ ಮುಂಚೆ ಆಗಬೇಕಾದ ಪೂರ್ವರಂಗವು ಈಗಲೆ ಪ್ರಾರಂಭವಾಗಿದೆ. ಕಲಕತ್ತೆಯಲ್ಲಿ ಬಾಬು ಸುರೇಂದ್ರನಾಥ ಬಾನರ್ಜಿಗಳು ತಾವು ಅಧ್ಯಕ್ಷರಾಗಿ ನಿಂತುಕೊಂಡು 'ನೆಶನಲ್ ಲಿಬರಲ್ ಲೀಗ್' ಎಂಬುದೆಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಸಂಘದ ಉಪಾಧ್ಯಕ್ಷರು ಹಲವು ಜಮೀನದಾರರೂ, ಮಹಾರಾಜರೂ ಇದ್ದಾರೆ. ಮೊಂಟೆಗ್ಯೂ ದೊರೆಗಳ ಬರತಕ್ಕ ಸುಧಾರಣೆಗಳನ್ನು ಕೆಲವರು ನಿರಾಕರಿಸುವ ಸಂಭವವಿದೆ, ಆದರೆ ಹಾಗೆ ನಿರಾಕರಿಸುವದು ತಪ್ಪು, ಆ ಸುಧಾರಣೆಗಳು ಹ್ಯಾಗಿದ್ದರೂ—ಕೊಂಗ್ರೆಸ್ ಲೀಗುಗಳ ಯೋಜನೆಗೆ ಕಡಿಮೆಬೀಳುವಷ್ಟು ಇದ್ದರೂ ಅವುಗಳನ್ನು ನಿರಾಕರಿಸಕೂಡದು ಎಂಬ ತತ್ತ್ವವನ್ನು ಉಪದೇಶಿಸುವ ಉದ್ದೇಶದಿಂದ ಈ ಹೊಸ ಶಿಶುವು ಹುಟ್ಟಿದೆ. ಈ ಸಂಘಶಿಶುವು ನೂತನವಾಗಿದ್ದರೂ ಅಧ್ಯಕ್ಷರಾದ ಸುರೇಂದ್ರನಾಥರು ಸಕ್ರೆಟರಿಗಳಾದ ಪೃಥ್ವೀಶಚಂದ್ರರಾಯರು ಹಳೆ ಮುದುಕರೆ ಸರಿ. ಇವರು ಹಾಗು ಈ ತಂಡದ ಮುಖ್ಯಸ್ಥರಾದ ಬೇರೆ ಮಹನೀಯರು, ಹಿಂದೆ ಮೊರ್ಲೆ ಮಿಂಟೊ ಸುಧಾರಣೆಗಳು ಬಂದಾಗ ಯಾವ ನಮೂನೆಯ ದೇಶಸೇವೆಯನ್ನು ಕೈಕೊಂಡಿದ್ದರೊ ಅದನ್ನೆ ಈಗ ಪುನರಾವರ್ತಿಸುವವರಿದ್ದಾರೆಂದು ತಿಳಿಯುತ್ತದೆ. ಮಿ. ಮೊಂಟೆಗ್ಯೂಗಳ ಅಂತರಂಗದಲ್ಲಿ ಸೇರಿ ಸುಧಾರಣೆಗಳ ಸ್ವರೂಪವನ್ನು ಮೊದಲಾಗಿಯೆ ತಿಳಿದುಕೊಂಡು "ಈ ಸುಧಾರಣೆಗಳು ಹೊರಗೆ ಬಿದ್ದ ಮೇಲೆ ಅವುಗಳ ಸರ್ವೋತ್ಕೃಷ್ಟತೆಯನ್ನು ಜನತೆಯ ಮುಂದೆ ತಾವು ಸಮರ್ಥಿಸುವೆವು" ಎಂಬುದಾಗಿ ಶಾಂತಪಕ್ಷದ ಹಲವು ಮುಖಂಡರು ಅಭಿವಚನವನ್ನು ಕೊಟ್ಟಿದ್ದಾರೆಂದು ಬೆರಿಸ್ಟರ್ ಸಿ. ಆರ್. ದಾಸ ಮತ್ತು ಚಕ್ರವರ್ತಿಗಳು ಪ್ರಕಟಿಸಿದ್ದಾರೆ. ಶ್ರೀ ಬಾನರ್ಜಿಗಳು ಈ ತಂಡದ ಅಭಿವಚನವನ್ನು ಕೊಟ್ಟವರ ತಂಡಕ್ಕೆ ಸೇರಿದವರಾದರೆ ರಾಷ್ಟ್ರೀಯಸಭೆಯು ನೆರೆದಾಗ ಅದರ ಸುಧಾರಣೆಗಳ ಅವಶ್ಯವೆಂದು ಹೇಳುವದು, ಅಧಿಕಾರಿಗಳಿಂದ ಪ್ರತಿಷ್ಠೆಯನ್ನು ಪಡೆಯಬೇಕೆಂದಿದ್ದಾಗ ಅವರ ಸ್ವಧಾರಣೆಗಳನ್ನು ಮಂಡಿಸುವರು. ಈ ರೀತಿಯಿಂದ ಎರಡು ಕಡೆಗಳಲ್ಲಿ ನಿಂತುಕೊಳ್ಳುವದು ಅವರಿಗೆ ಯೋಗ್ಯವಲ್ಲ. [illegible] ಬಾನರ್ಜಿಗಳ ಹಿಂದಿನ ರೀತಿಯನ್ನು ಸ್ಮರಿಸಿದರೆ 'ರಾಘವಾಯ ಸ್ವಸ್ತಿ, ರಾವಣಾಯ ಸ್ವಸ್ತಿ' ಎಂದು ಎರಡೂ ಕಡೆಗಳಲ್ಲಿ ಶಾಂತಿಸೂಕ್ತವನ್ನು ಪಠನಮಾಡುವ ಪೌರೋಹಿತ್ಯದ ಕೆಲಸಕ್ಕೆ ಅವರು ಯೋಗ್ಯರಲ್ಲದೆ ಬೇರೆ ಯಾರೂ ಕಾಣರು.

೫. ಸೈನ್ಯದಲ್ಲಿ ಸೇರುವವರಿಗೆ, ಅವರ ಯೋಗ್ಯತೆ [illegible] ದೊಡ್ಡದೊಡ್ಡ ಅಧಿಕಾರಗಳನ್ನು ಕೊಡಿರಿ ಎಂದು [illegible] ಹಿಂದಿಯನರು ಕೇಳುತ್ತಲೆ ಇದ್ದರು. ಪ್ರತ್ಯಕ್ಷ [illegible] ವಾಗ್ಯೆ ಸರಕಾರಕ್ಕೆ ಮನುಷ್ಯಬಲದ [illegible] ಕುಂದುಬಾರದಂತೆ ಆಗ [illegible]

ರಗತಿಯನ್ನು ಜನರ ಮುಖಂಡರು ಈಗ ಮೂರು ನಾಲ್ಕು ವರ್ಷಗಳಿಂದ ಪ್ರಾರ್ಥಿಕರಾಗಿ ಹೇಳುತ್ತಿದ್ದರು. ಆದರೆ ಈಚೆಗೆ ಸರಕಾರವು ಈ ನ್ಯೂನತೆಯನ್ನು ಪರಿಹರಿಸಿದೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಮಿಲಿಟರಿ ಆಫೀಸರರ ಕೆಲವು ಜಾಗೆಗಳನ್ನು ಹಿಂದಿಗಳಿಗೆ ಕೊಡಬೇಕೆಂದು ಸರಕಾರವು ನಿರ್ಣಯಿಸಿದೆ. ಮತ್ತು ಯುದ್ಧವು ನಡೆಯುವ ಕಾಲ ಇಲ್ಲಿಂದ ವರ್ಷಕ್ಕೆ ೧೦ ಜನರನ್ನು ವಿಲಾಯತಿಗೆ ಲಷ್ಕರಿ ಕಾಲೇಜಿನಲ್ಲಿ ಶಿಕ್ಷಣದ ಸಲುವಾಗಿ ಕಳುಹಿಸಬೇಕೆಂದು ನಿಶ್ಚಯಿಸಿದೆ. ಈ ಎರಡು ಸಂಗತಿಗಳು ಬರೆ 'ತಾತ್ಕಾಲಿಕ'ವಾಗಿ ಕಂಡುಬರುತ್ತವೆ. ಇದು ಅಧಿಕಾರಿಗಳ ಕೃಪಣತನದ ಲಕ್ಷಣವಾಗಿದೆ. ಆದರೂ ಮೊದಲಿನ ಸ್ಥಿತಿಯನ್ನು ಹೋಲಿಸುವಾಗ್ಗೆ ಈ ನೂತನ ಯೋಜನೆಯು ಕೊಂಚ ವಾಸಿಯೆಂದು ಹೇಳಬಹುದು.

ಸ್ಥಳೀಕ — ಮಂಗಳೂರು.

ಕೆರೆಸಿನ ಎಣ್ಣೆಯ ಡೊಂಬಿಯಲ್ಲಿ ೩೭೯ ಗಲಿಜಿರ ಪ್ರಕರಣಗಳ ಪ್ರಕಾರ ೫ ಜನರ ಮೇಲೆ ಚಾರ್ಜುಸೀಟು ದಾಖಲಾಗಿದೆ.

ಅಕ್ಕಿ ಲೂಟಿಯಲ್ಲಿ ಸೇರಿದ ೧೮ ಜನಂಮೇಲ ಪೋಲೀಸು ವಾರಂಟು ಹೊರಟು ಕೆಲವರು ಸಿಕ್ಕಿರುವರು. ಇನ್ನು ಕೆಲವರನ್ನು ತಲಾಸಿಯಿಂದ ಹಿಡಿಯುತ್ತಿದ್ದಾರೆ. ಇವರ ಮೇಲಣ ಮೊಕದ್ದಮೆಯ ತನಖೆಯು ನಡಿಯುತ್ತಿರುವದು. ಕಂಡಪ್ಪ ಎಂಬವನಿಗೆ ಒಂದು ವಾರದ ಸಜೆಯು ವಿಧಿಸೋಣಾಗಿರುವದು.

ಉಳ್ಳಾಲದಲ್ಲಿ ನಡೆದ ಲೂಟಿಯಲ್ಲಿ ೨೦ ಜನರನ್ನು ಹಿಡಿದು ಕೈದು ಮಾಡಿ ತಂದಿರುವರು. ಈ ಪೈಕಿ ೬ ಜನರನ್ನು ಜಾಮೀನಿನ ಮೇಲೆ ಬಿಟ್ಟಿರುವರು. ಬಾಕಿಯವರು ರಿಮಾಂಡಿನಲ್ಲಿರುವರು. ಪೋಲೀಸು ತನಖೆಯು ಇನ್ನೂ ನಡಿಯುತ್ತಾ ಇರುವದು.

ಇದೇ ಬರುವ ಸೋಮವಾರ ತಾ ೮ರಲ್ಲಿ ಸಾಯಂಕಾಲ ಗಂಟೆ ೫-೩೦ಕ್ಕೆ ಇಲ್ಲಿಯ ಗವರ್ನಮೆಂಟ ಕೊಲ್ಲೇಜಿನಲ್ಲಿ ಪುರಜನರ ಒಂದು ಸಭೆಯು ಕೂಡುವದು. ಈ ಸಭೆಯಲ್ಲಿ ಈಗಿನ ಏರಿದ ಧಾರಣೆಗಳಿಂದ ಬಡಜನರ ಸಂಕಷ್ಟ ನಿವಾರಣೆಯ ಏರ್ಪಾಡುಗಳು ಮಾಡೋಣಾಗುವವು. ಸರ್ವರೂ ಈ ಸಭೆಗೆ ದಯಮಾಡಿ ಬರಬೇಕೆಂದು ಜಿಲ್ಲಾ ಕಲೆಕ್ಟರ ದೊರೆಗಳವರು ವಿಜ್ಞಾಪಿಸಿಕೊಂಡಿರುತ್ತಾರೆ.

ಡಿಸ್ಟ್ರಿಕ್ಟ್ ಎಸೋಸಿಯೇಶನಿನವರ ಸಭೆಯೂ ಇದೇ ದಿನ ಕೂಡಬೇಕೆಂದು ನಿರ್ಣಿತವಾಗಿದೆ. ಆ ಸಭೆಯಲ್ಲಿ ಧಾರಣೆ ವಾಸಿಗಳು ಎಂಬ ವಿಷಯ, ಇದರಿಂದ ಪ್ರಾಪ್ತವಾದ ಸಂಕಷ್ಟ ನಿವಾರಣೆ ಒಗ್ಗ ಸಾವುಕಾರರೊಡನೆ ಯಾವ ಪ್ರಯತ್ನಗಳನ್ನು ನಡಸಬೇಕು, ಈ ಜಿಲ್ಲೆಯಲ್ಲಿ ಅಕ್ಕಿ ಎಸಹ ರಾಗಿ ಜೋಳ ಇತ್ಯಾದಿಗಳನ್ನು ಉಪಯೋಗಕ್ಕೆ ತರುವ ಸಾಧನ ಸ್ವದೇಶಿ ಸರಕುಗಳಿಗೆ ಪ್ರೋತ್ಸಾಹ ಕೊಡುವದು. ಸ್ವದೇಶಿ ವಸ್ತುಗಳ ಒಂದು ಸಂಗ್ರಹಾಲಯವನ್ನು ಸ್ಥಾಪಿಸುವದು, ಮಂಗಳೂರ ಪಟ್ಟಣದಲ್ಲಿ ಮುನ್ಸಿಪಲ್ ಕೆಲಸಗಳನ್ನು ಕೊಡುವವರ ಒಂದು ಸಂಘವನ್ನು ಸ್ಥಾಪಿಸುವದು, ಜಿಲ್ಲೆಯ ಆಯಾ ಭಾಗಗಳಿಂದ ಇರುವ ಕುಂದು ಕೊರತೆಗಳನ್ನು ಸಂಗ್ರಹಿಸಲು ಬೇಕಾಗಿರುವ ಏರ್ಪಾಡು, ಮತ್ತು ಸಾರ್ವಜನಿಕ ವಿಷಯಗಳಲ್ಲಿ ಬೇಕಾದ ಅನುಭವ ಇತ್ಯಾದಿಗಳನ್ನು ಸಂಗ್ರಹಿಸಿ ತಿಳಕೊಳ್ಳಲು ಬೇಕಾದ ಸಾಧನ — ಈ ವಿಷಯಗಳು ಈ ಸಭೆಯ ಮುಂದೆ ಇಡೋಣಾಗ ಬಹುದೆಂಬುದಾಗಿ ತಿಳಿಯುತ್ತೇವೆ.

ಪಟ್ಟಣಕ್ಕೆ ಕೆರೆಸಿನ ಎಣ್ಣೆಯನ್ನು ಸರಬರಾಯಿ ಮಾಡುವ ವಿಷಯ ಅಧಿಕಾರಿಗಳು ಬಿಮಿಣ ಎಣ್ಣೆಯ ಮಾಲಿಕರೊಡನೆ ಮಾಡಿದ ಏರ್ಪಾಡು ಬೇಗನೆ ಪ್ರಕಟವಾಗುವದು. ಮುನಿಸಿಪಾಲಿಟಿಯ ೮ ವಾರ್ಡುಗಳಲ್ಲಿ ೮ ಜನ ಏಜಂಟರು ನೇಮಿಸಲ್ಪಡುವರು. ಮತ್ತು ಇವರ ಮೂಲಕ ವಿಕ್ರಿತಗಳಲ್ಲವೂ ನಡೆಯುವವು. ಬಿಮಿಣ ಎಣ್ಣೆಯು ಪಯೋಗ ಸೌಕರ್ಯಗಳು ಇಲ್ಲದೆ ಇರುವದರಿಂದ ಮೊದಲಿನಷ್ಟು ಬರಲು ಸಾಧ್ಯವಿಲ್ಲ. ಆದ್ದರಿಂದ ಜನರು ಇದರ ಉಪಯೋಗವನ್ನು ಸಾಧ್ಯವಾದಷ್ಟು ಮಿತಪಡಿಸಬೇಕೆಂದು ಸೂಚಿಸೋಣಾಗಿದೆ. ರಾತ್ರೆ ೮ ಘಂಟೆಗಳ ನಂತರ ಪೇಟೆಯಲ್ಲಿ ಅಂಗಡಿ ಇತ್ಯಾದಿಗಳನ್ನು ತೆರೆಯದೆ ಇರುವದು, ಮುನಿಸಿಪಾಲಿಟಿಯವರು ತಮ್ಮ ದೀಪಸ್ತಂಭಗಳ ಸಂಖ್ಯೆಯನ್ನು ಕಡಮೆ ಮಾಡುವದು, ಹಂಚು ಕಾರಖಾನೆಯವರು ತಮ್ಮ ಇಂಜಿನುಗಳಿಗೆ ಕೆರಸಿನ ಎಣ್ಣೆಯ ಬದಲಿಗೆ ಇತರ ಎಣ್ಣೆಯನ್ನು ಉಪಯೋಗಿಸುವದು, ಇತ್ಯಾದಿ ಕ್ರಮಗಳನ್ನು ಜಾರಿಗೆ ತರುವದು ಅಗತ್ಯವೆಂತ ಕಲೆಕ್ಟರ ದೊರೆಗಳವರು ಸೂಚಿಸುತ್ತಾರೆ. ಜಿಲ್ಲೆಯ ಇತರ ಕಡೆಗಳಲ್ಲಿಯೂ ಇದೇ ವ್ಯವಸ್ಥೆಯು ಮಾಡೋಣಾಗುವದು. ದರಗಳನ್ನು ಏರಿಸಿ ಮಾರದಂತೆ ತಕ್ಕ ಮೇಲ್ವಿಚಾರವು ನಡಿಯುವದೆಂಬುದಾಗಿ ತಿಳಿಯುತ್ತೇವೆ.

ಮೆ| ಮೆರಿಯಸ್ ಪ್ಯಾಸರವರು ಪುತ್ತೂರು ಡಿವಿಜನಿನ ಡಿಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವದರಿಂದ ಮ. ರಾ. ರಾ. ಎಚ್. ಶಂಕರರಾಯರು ಮಂಗಳೂರು ತಹಸೀಲ್ದಾರರಾಗಿ ನೇಮಿಸಲ್ಪಟ್ಟಿರುತ್ತಾರೆ. ಉಪ್ಪಿನಂಗಡಿ ತಾಲೂಕಿನ ತಹಸೀಲ್ದಾರರಾಗಿ ಮ| ರಾ| ಬಿ ಕೃಷ್ಣಾಚಾರಿಯವರು ನೇಮಿಸಲ್ಪಟ್ಟಿರುವರು. ಮ| ರಾ| ಎಮ್ ಗಣೇಶರಾಯರು ಆಕ್ಟಿಂಗ್ ಇಂಗ್ಲಿಷ್ ಹೆಡ್‌ಕ್ಲಾರ್ಕರಾಗಿ ನೇಮಕಪಟ್ಟಿದ್ದಾರೆ.

ಅಕ್ಕಿ ಮಾರಾಟದ ವ್ಯವಸ್ಥೆಯ ಕುರಿತು ಇಲ್ಲಿಯ ಅಕ್ಕಿ ಸಾಹುಕಾರರು ಒಂದು ಅರ್ಜಿಯನ್ನು ಮಾಡಿರುವರು. ಇದನ್ನು ಈ ಸಂಚಿಕೆಯ ಇನ್ನೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ. ಮಂಗಳೂರಲ್ಲಿ ಸ್ಥಾಪಿತವಾಗುವ ರಿಲೀಫ್ ಕಮಿಟಿಯವರಿಗೆ ತಕ್ಕಷ್ಟು ಅಕ್ಕಿಯು ದೊರಕದ ಸಂದರ್ಭದಲ್ಲಿ ಅಕ್ಕಿಯನ್ನು ಬರಮಾಡಿಕೊಳ್ಳುವ ಅಧಿಕಾರವನ್ನು ಇಲ್ಲಿಯ ಜಿಲ್ಲಾ ಕಲೆಕ್ಟರರಿಗೆ ಕೊಡಬೇಕೆಂತ ಈ ಅರ್ಜಿಯನ್ನು ಹಾಜರುಪಡಿಸಿದ ಅಕ್ಕಿಸಾವುಕಾರರು ಸರಕಾರದವರಿಗೆ ತಂತಿ ಮೂಲಕ ಸೂಚಿಸಿರುವರು.

ಕಳೆದ ವಾರದಲ್ಲಿ ಪ್ಲೇಗು ಮರಣಗಳಿದ್ದಿಲ್ಲ. ಸೆಂಟ್ರಲ್ ವಾರ್ಡಿನಲ್ಲಿ ಸಿಡುಬುರೋಗದಿಂದ ಮೂರು ಮರಣಗಳಿದ್ದವು.

ಜಿಲ್ಲಾ ಕಲೆಕ್ಟರದೊರೆಗಳವರ ಸನ್ನಿಧಾನಕ್ಕೆ

ಮಂಗಳೂರು ಬಂದರದ ಅಕ್ಕಿ ಸಾಹುಕಾರರು ಜಾಹೀರು ಮಾಡಿಕೊಳ್ಳುವದೇನೆಂದರೆ:—

ಚಿಮಣಿಎಣ್ಣೆಯ ಗಲಾಟೆಯ ನಂತರ ನಡೆದ ಲೂಟಿಯ ಶಮನಾರ್ಥವಾಗಿ ಅಕ್ಕಿಯನ್ನು ಬೆಲೆತಗ್ಗಿಸಿ ಬಡಜನರ ಉಪಯೋಗಾರ್ಥವಾಗಿ ಮಾರಬೇಕೆಂಬ ಕಲೆಕ್ಟರದೊರೆಗಳವರ ಸೂಚನೆ ಮೇರೆಗೆ ಅಕ್ಕಿವ್ಯಾಪಾರಸ್ಥರಲ್ಲಿ ಸರ್ವಸಾಧಾರಣವಾಗಿ ಸರ್ವರೂ ಮಂಗಳೂರಿನಲ್ಲಿ ಅಕ್ಕಿಯನ್ನು ತಗ್ಗಿಸಿದ ಬೆಲೆಯಲ್ಲಿ ಮಾರುತ್ತಿರುವೆವು. ಮತ್ತು ಪ್ರಸ್ತುತ ನಮ್ಮ ಭಂಡಸಾಲೆಗಳಲ್ಲಿರುವ ಅಕ್ಕಿಯು ಖರ್ಚಾಗುವ ವರೆಗೆ ಮಾರಲು ನಾವು ಸಿದ್ಧರಿರುವೆವು. ಹೀಗೆ ಈ ಹೊತ್ತಿಗೆ ೮ ದಿವಸಗಳಿಂದ ನಡೆದು ಬಂದಿರುವ ಈ ಮಾರಾಟದ ಅನುಭವವನ್ನು ಈ ಮೂಲಕ ದೊರೆಗಳವರಿಗೆ ಸೂಚಿಸಿ ಮುಂದಿನ ಅಕ್ಕಿಯ ವ್ಯಾಪಾರ ವ ಮಾರಾಟದ ಕುರಿತು ನಮಗೆ ಅಗತ್ಯತೋರುವ ಏರ್ಪಾಡುಗಳನ್ನು ಸೂಚಿಸಲು ಬಂದಿರುವೆವು.

ಈಗ ಬಂದರದಲ್ಲಿ ೫೬೬೩ ಮುಡಿಗಳ ಅಕ್ಕಿ ಇದೆ. ಅಂಗಡಿಗಾರರಲ್ಲಿ ೧೩೩೪ ಗಳು ಇರುವವು. ಬಂದರದಲ್ಲಿರುವ ಈ ಜಮ್ಲಾ ಅಕ್ಕಿ ಮುಡಿಗಳಲ್ಲಿ ೩೭೭೧ ಮುಡಿಗಳು ಗೋವೆಯ ಸಾವುಕಾರರದಾಗಿರುವವು. ಇವುಗಳ ಮೇಲಣ ಸುಂಕ ಸರಕಾರಕ್ಕೆ ಕೊಡೋಣಾಗಿದೆ. ಮೇ ತಿಂಗಳಲ್ಲಿಯೇ ಮಳೆ ಪ್ರಾರಂಭವಾದದರಿಂದ ಮಚ್ಚೆಗಳಲ್ಲಿ ತುಂಬಿಸಿದ ಈ ಮುಡಿಗಳನ್ನು ಪುನಹ ಇಲ್ಲಿ ಇಳಿಸಿಕೊಂಡಿರುವೆವು. ಈ ಅಕ್ಕಿಯನ್ನು ಏನ ಮಾಡಬೇಕೆಂತ ಗೋವೆ ಸಾವುಕಾರರಿಗೆ ನಮ್ಮಲ್ಲಿ ಕೆಲವರು ಬರೆದಿರುವರು. ಅವರ ಉತ್ತರ ಬರುವ ತನಕ ಈ ಅಕ್ಕಿಯನ್ನು ಮಾರಾಟ ಮಾಡಲು ಯುಕ್ತವಿಲ್ಲ. ಆದರೆ ಅಕ್ಕಿ ಮಾರಬಹುದೆಂತ ಗೋವೆಯಿಂದ ಉತ್ತರ ಬರದಿರುವವರ ಈ ಅಕ್ಕಿಯನ್ನು ಸಹ ಮಾರಲು ಸಿದ್ಧರಿರುವೆವು.

ಕಳೆದ ವಾರದಲ್ಲಿ ಅಕ್ಕಿಯನ್ನು ಮಾರಲು ಪ್ರಾರಂಭಿಸಿದ ದಿನಗಳಿಂದವು ಭಂಡಸಾಲೆಗಳಲ್ಲಿ ಸುಮಾರು ೨೭೦೦ ಮುಡಿಗಳು, ಚಿಲ್ಲರೆ ಅಂಗಡಿಗಾರರಲ್ಲಿ ಸುಮಾರು ೨೩೩೭ ಮುಡಿಗಳ ಮಾರಾಟಮಾಡೋಣಾಗಿವೆ. ಇಂಥಾ ಮಳೆಗಾಲದ ಜೂನ ತಿಂಗಳಲ್ಲಿ ಸರಾಸರಿ ದಿನ ಒಂದಕ್ಕೆ ಸುಮಾರು ೫೫೦ ಮುಡಿಗಳು ಮಂಗಳೂರ ಪೇಟೆಯಲ್ಲಿ ಖರ್ಚಾಗುವ ವಾಡಿಕೆ. ಮೇಲಣ ಸಂಖ್ಯೆಯ ದಿನದ ಸರಾಸರಿಯು ೬೨೫ ಬರುವದರಿಂದ ಅಕ್ಕಿಯು ದಿವಸಹಿ ಮಂಗಳೂರು ಬಜಾರಿಗೆ ಬೇಕಾಗಿರುವ ದಕ್ಕಿಂತ ಹೆಚ್ಚು ಖರ್ಚಾಗಿದೆ ಎಂಬುದು ವ್ಯಕ್ತವಾಗುವದು. ಈ ರೀತಿಯ ಮಾರಾಟದಿಂದ ನಮ್ಮ ಕಲ್ಲಿಯ ಸಾವುಕಾರರ ವ ಚಿಲ್ಲರೆ ಅಂಗಡಿಗಾರರ ಅಕ್ಕಿಯು ೮ ದಿನಗಳಿಗೆ ಸಾಕಾದೀತೆಂತ ಕಂಡುಬರುತ್ತದೆ. ನಂತರದ ಮಾರಾಟಕ್ಕೆ ನಮ್ಮಲ್ಲಿ ಅಕ್ಕಿ ಇಲ್ಲ. ಸಾಮಾನ್ಯವಾಗಿ ಮಳೆಗಾಲದಲ್ಲಿ ಘಟ್ಟಗಳಿಂದ ದಿನ ಒಂದಕ್ಕೆ ಸುಮಾರು ೧೫೦ ಮುಡಿ ಅಕ್ಕಿಯು ಬರುತ್ತಿತ್ತು. ಮಂಗಳೂರಲ್ಲಿ ಲೂಟಿಯು ಪ್ರಾರಂಭವಾದಂದಿನಿಂದ ಈ ತನಕ ಒಂದು ಮುಡಿಯಾದರೂ ಬಂದಿಲ್ಲ. ಧಾರಣೆ ವಾಸಿಗಳ ತಾರತಮ್ಯಕ್ಕೆ ಅನುಸಾರವಾಗಿ ಅಕ್ಕಿಯು ಬಂದರಕ್ಕೆ ಬರುವದಲ್ಲದೆ ನಾವು ದಲಾಲರೇ ಬರೆದು ತರಿಸುವ ರೂಢಿ ಇಲ್ಲ.

ಭಂಡಸಾಲೆಗಳಿಂದಲೂ ಅಂಗಡಿಗಳಿಂದಲೂ ಕಡಮೆ ದರಗಳ ಮಾರಾಟದ ನಂತರ ಅಕ್ಕಿಯನ್ನು ಪಡಕೊಳ್ಳುವವರಲ್ಲಿ ಹೆಚ್ಚಿನವರು ಬಡಬಗ್ಗರಲ್ಲ. ಶ್ರೀಮಂತರೂ ಏರಿದ ಬೆಲೆಯ ಅಕ್ಕಿಯನ್ನು ಪಡಕೊಳ್ಳುವ ಸಾಮರ್ಥ್ಯವುಳ್ಳ ಇತರರೂ ನಾನಾ ಉಪಾಯಗಳಲ್ಲಿ ಕಡಿಮೆ ಕ್ರಯದಲ್ಲಿ ಅಕ್ಕಿಯನ್ನು ಪಡಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ಹಳ್ಳಿಗಳಿಂದ ಜನರು ಬಂದು ಇಲ್ಲಿ ಅಕ್ಕಿಯನ್ನು ಕೊಂಡು ಕೊಂಡು ಸಾಗಿಸುತ್ತಿದ್ದಾರೆ. ಈ ಮೂಲಕ ನಮ್ಮಲ್ಲಿರುವ ಅಕ್ಕಿಯು ಇನ್ನು ಬಹು ಸ್ವಲ್ಪ ದಿವಸಗಳಲ್ಲಿಯೇ ಮುಗಿದುಹೋಗುವದು. ಈ ಸಂಗತಿಯನ್ನು ದೊರೆಗಳವರು ಲಕ್ಷ್ಯಕ್ಕೆ ವಿಶೇಷವಾಗಿ ತರಬೇಕೆಂದು ಕೋರಿಕೆ.

ಅಕ್ಕಿಯ ಬೆಲೆಯನ್ನು ತಗ್ಗಿಸಬೇಕೆಂಬ ದೊರೆಗಳವರ ಸೂಚನೆಯನ್ನು ನಾವು ಸ್ವೀಕರಿಸಿದ್ದು ಬಡಜನರ ಕಷ್ಟನಿವಾರಣೆಗಾಗಿಯೇ. ಹೊರತು ದರಗಳನ್ನು ಸರ್ವಸಾಮಾನ್ಯವಾಗಿ ಆಲೋಚಿಸಿ ಅವುಗಳನ್ನು ಸರ್ವರಿಗಾಗಿಯೂ ತಗ್ಗಿಸಬೇಕೆಂದಲ್ಲ. ನಾವು ಇಷ್ಟು ದಿನಗಳಲ್ಲಿ ನಡಿಸಿದ ಅಕ್ಕಿಯ ಕಡಮೆ ದರಗಳ ಮಾರಾಟದ ಪ್ರಯೋಜನವನ್ನು ಬಡವರಕ್ಕಿಂತ ಹೆಚ್ಚಾಗಿ ಇತರರೇ ಪಡಿಯುವದರಿಂದ ಬಡಜನರ ಸಂಕಷ್ಟನಿವಾರಣೆಯ ನಮ್ಮ ಉದ್ದೇಶವು ಸರಿಯಾಗಿ ನೆರವೇರಿದಂತಾಗಲಿಲ್ಲ. ಮತ್ತು ಬಡಜನರಿಗೆ ಸ್ವಲ್ಪ ಕಾಲ ದೊರಕಬಹುದಂಥಾ ಈ ಮಾರಾಟಗಳ ಪ್ರಯೋಜನವನ್ನು ಇತರರು ಬಂದು ಅಪಹರಿಸಿದಂತಾಯಿತು.

ಬಡಜನರ ಉಪಯೋಗಿಸುವ ಕೀಳು ಕ್ಲಾಸಿನ ಯಾವದಾದರೂ ಒಂದೇ ಜಾತಿಯ ಅಕ್ಕಿಯನ್ನು ಕಡಿಮೆ ದರಗಳಲ್ಲಿ ಮಾರಾಟ ಏರ್ಪಡಿಸುವ ಏರ್ಪಾಡು ಸಾಧ್ಯವಲ್ಲದೆ, ಎಲ್ಲಾ ಜಾತಿಗಳ ಅಕ್ಕಿ ಧಾರಣೆಗಳನ್ನು ತಗ್ಗಿಸಿ ಮಾರುವದ ಕಷ್ಟಸಾಧ್ಯ.

ದೊರೆಗಳ ಕಡಿಮೆ ಕ್ರಯಗಳ ಆಲೋಚನೆಯನ್ನು ಅಂಗೀಕರಿಸಿಕೊಳ್ಳುವಾಗ ಬಂದರದಲ್ಲಿ ಸಾಕು ಕಾರರೇ ಈ ಮಾರಾಟವನ್ನು ನಡಿಸುವರು ಎಂಬುದು ನಮ್ಮ ಭಾವನೆ ಇತ್ತು. ಆದ್ದರಿಂದ ಚಿಲ್ಲರೆ ಅಂಗಡಿಗಾರರು ಅಕ್ಕಿಯನ್ನು ಯಾವ ದರದಲ್ಲಿ ಮಾರಬೇಕೆಂಬ ವಿಷಯ ಪ್ರಸ್ತಾಪ ಬಂದದ್ದು ಇಲ್ಲ. ಇದರ ವಿಷಯ ಏನೂ ನಿರ್ಣಯವಾದದ್ದಿಲ್ಲ. ಹೀಗಿದ್ದರೂ ಅಂಗಡಿಗಾರರು ಸಹ ಬಹುಶಃ ತಾಲೂಕ ಆಫೀಸಿನಿಂದ ಹೊರಟ ಅಕ್ಕಿದರಗಳ ಪ್ರಕಟನೆಯಲ್ಲಿದ್ದ ದರಗಳಲ್ಲಿಯೇ ಅಕ್ಕಿಯನ್ನು ಮಾರಿ ಬಹಳ ನಷ್ಟವನ್ನು ಪಡೆದಿದ್ದಾರೆ. ಅವರು ಇಂಥಾ ನಷ್ಟವನ್ನು ಸಹಿಸುವ ಶಕ್ತಿಯುಳ್ಳವರಲ್ಲ. ಇನ್ನು ಮುಂದಕ್ಕೆ ಇಂಥವರನ್ನು ನಷ್ಟಕ್ಕೆ ಗುರಿಪಡಿಸುವದು ಉಚಿತವೂ ಅಲ್ಲ.

ಬಡಜನರ ಸಂಕಷ್ಟನಿವಾರಣೆಯ ಪ್ರಯತ್ನವು ಎಷ್ಟು ಕಾಲ ನಡಿಯಬೇಕು, ಸಾಹುಕಾರರಲ್ಲದ ಅಕ್ಕಿಯನ್ನು ಸಾಹುಕಾರರಿಗೆ ವಿಕ್ರಯಮಾಡಿದ ವರ್ಗದಾರರೂ ಸ್ವಕೃತ ಅಕ್ಕಿಯನ್ನು ದಾಸ್ತಾನು ಇಟ್ಟಿರುವ ವರ್ಗದಾರರೂ ಇತರರೂ ಈ ಪ್ರಯತ್ನಕ್ಕೆ ಹೇಗೆ ಕೈಕೊಡಬೇಕು, ಎಂಬಿತ್ಯಾದಿ ವಿಷಯಗಳಲ್ಲಿ ಯಾವವೂ ತೀರ್ಮಾನವಾದದ್ದಿಲ್ಲ. ನಮ್ಮಲ್ಲಿ ಹೆಚ್ಚಿನವರು ಅಕ್ಕಿಯನ್ನು ಸಂಗ್ರಹಿಸಿಟ್ಟು ಸ್ವಂತವಾಗಿ ಮಾರಾಟಮಾಡುವವರಲ್ಲ, ಬರೆ ದಲಾಲಿ ವ್ಯಾಪಾರಿಗಳು, ಆದ್ದರಿಂದ ವಿಶೇಷ ಲಾಭವನ್ನು ಪಡಿಯುವಂಥವರಲ್ಲ. ಹೀಗಿರುವದರಿಂದ ದಲಾಲಿ ವ್ಯಾಪಾರಸ್ಥರೇ ಈ ಪ್ರಯತ್ನವನ್ನು ಮುಂದರಿಸುವದು ಸಾಧ್ಯವಾಗುವದಿಲ್ಲ.

ರೈಲ್ವೆ ವ್ಯಾಪಾರವು ಸರಿಯಿಲ್ಲ, ಧಾನ್ಯಗಳು ಹೊರಜಿಲ್ಲೆಗೆ ಹೋಗದಂತೆ ಇರುವ ಪ್ರತಿಬಂಧ, ಅಕ್ಕಿವ್ಯಾಪಾರವು ಸಂಕೋಚವಾಗಿ ಬಂದಿರುವಂಥಾದ್ದು ಮತ್ತು ಇವೆಲ್ಲ ಕಾರಣಕ್ಕಿಂತ ಮೊದಲನೆ ಕಾರಣವಾದ ಮಳೆಗಾಲ — ಇಂಥಾ ಸಮಯದಲ್ಲಿ ವ್ಯಾಪಾರ ವ್ಯವಹಾರಗಳು ಬಹಳ ಕಡಮೆಯಾಗಿ ಹೋಗಿರುವದರಿಂದ ವ್ಯಕ್ತಿಹೀನತೆಯು ಇರುವದು. ಇತರ ಜಿಲ್ಲೆಯವರಿಗೆ ಮಾರ್ಗಗಳನ್ನು ಮಾಡಿಸುವದು ಇತ್ಯಾದಿಗಳಲ್ಲಿ ಕೆಲಸ [illegible] ಅಂಥಾ ಸ್ಥಿತಿಯನ್ನು ಕೈಕೊಳ್ಳದು. ಅಕ್ಕಿಯ ಕಡಿಮೆ [illegible] ಇಂಥವರಿಂದ ಅಕ್ಕಿಗೆ ಕ್ರಯ [illegible] ಅಕ್ಕಿಯು [illegible] ಅಕ್ಕಿಯನ್ನು ಸ್ವಲ್ಪ [illegible]

ಆದ್ದರಿಂದ ಅಕ್ಕಿಯನ್ನು ಬಡಜನರ ಉಪಯೋಗಾರ್ಥವಾಗಿ ಕ್ರಯತಗ್ಗಿಸಿ ಮಾರಬೇಕೆಂದು ನಿರ್ಣಯಿಸಿದ ಸಭೆಯಲ್ಲಿಯೇ ಪಟ್ಟಣದ ಮಹಾಜನರ ಸಭೆಕೂಡಿಸಿ ಒಂದು ರಿಲೀಫ್ ಕಮಿಟಿಯನ್ನು ಏರ್ಪಡಿಸಬೇಕೆಂತ ನಿರ್ಣಯಿಸಿದ್ದೆವು. ದೊರೆಗಳು ಸ್ವತಹ ಈ ವಿಷಯದಲ್ಲಿ ಕೆಟ್ಟನ ಸಹಾನುಭೂತಿಯುಳ್ಳವರೆಂಬುದು ನಮಗೆ ಪ್ರತ್ಯಕ್ಷ ಕಂಡುಬಂದದ್ದರಿಂದ ಕಮಿಟಿ ಏರ್ಪಾಡು ಇತ್ಯಾದಿಗಳನ್ನು ದೊರೆಗಳು ಸ್ವಹಸ್ತದಿಂದಲೇ ನಡಸಿದರೆ ಉಪಕಾರವಾಗುವದೆಂದು ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇವೆ.

ಮೇಲೆ ವಿವರಿಸಿದ ವಿದ್ಯಮಾನಗಳನ್ನು ಆಲೋಚಿಸಿಕೊಂಡು ಕೆಳಗಿನ ಏರ್ಪಾಡುಗಳನ್ನು ನಡೆಸಬೇಕೆಂತ ವಿನಯಪೂರ್ವಕ ಸೂಚಿಸುತ್ತೇವೆ.

(೧) ಅಕ್ಕಿಯ ಸಂಗ್ರಹವು ಮಂಗಳೂರು ಬಂದರದಲ್ಲಿ ಕಡಮೆಯಾಗಿ ಬಾಧಿರುವದರಿಂದ ಮಂಗಳೂರಿನಲ್ಲಿರುವ ವರ್ಗದಾರರಿಂದಲೂ ಇತರರಿಂದಲೂ ಅದನ್ನು ತರಿಸುವ ಏರ್ಪಾಡನ್ನು ಕೂಡಲೆ ಜ್ಯಾರಿಗೆ ತರಬೇಕು.

(೨) ಕಡಮೆ ದರಗಳ ಮಾರಾಟದಿಂದ ಅಂಗಡಿಗಾರರನ್ನು ವಿರಹಿತಪಡಿಸುವದು.

(೩) ಬಡಬಗ್ಗರ ಉಪಯೋಗದ ಮೂರನೆ ಕ್ಲಾಸಿನ ಅಕ್ಕಿಯನ್ನು ಮಾರಾಟಕ್ಕೆ ನಿರ್ಣಯಿಸುವದು ಮತ್ತು ಈ ಕಡಮೆಕ್ರಯದ ಅಕ್ಕಿಯನ್ನು ಮುಡಿಕಟ್ಟೆಯಲ್ಲಿ ಮಾರುವದನ್ನು ನಿಲ್ಲಿಸಿ ಸೇರುಕಟ್ಟಳೆಯಲ್ಲಿ ಮಾರಿಸುವದು.

(೪) ರಿಲೀಫ್ ಕಮಿಟಿಗಳನ್ನು ವ್ಯವಸ್ಥೆಗೊಳಿಸುವದು.

(೫) ಜಿಲ್ಲೆಯಲ್ಲಿ ಅಕ್ಕಿಯ ಭಾರಿ ಸಂಗ್ರಹವಿರುವದೆಂದು ತಿಳಿಯುತ್ತೇವೆ. ಲೂಟಿಯು ಮೊದಲೇ ಅಕ್ಕಿಯ ಕ್ರಯವು ತಗ್ಗುತ್ತಬಂದಿದೆ. ಈಗ ಧಾನ್ಯಗಳು ಪರಬಂದರಕ್ಕೆ ಹೋಗಕೂಡದೆಂಬ ಪ್ರತಿಬಂಧವು ಇರುವದರಿಂದ ಧಾರಣೆಯು ಸ್ವತೇಹ ತಗ್ಗುವದು. ಆದ್ದರಿಂದ ಕ್ರಯಗಳನ್ನು ಆಲೋಚಿಸಿ ಕಡಮೆದರಗಳಿಗೆ ತರುವ ಪ್ರಯತ್ನವು ಅಗತ್ಯವಿಲ್ಲ. ಇಂಥಾ ಪ್ರಯತ್ನಗಳನ್ನು ನಡಿಸಿದರೆ ಸ್ವಾಭಾವಿಕವಾಗಿ ಬಂದರುಗಳಿಗೆ ವಿಕ್ರಯಕ್ಕೆ ಬರುವ ಅಕ್ಕಿಗೆ ತಡೆಯುಂಟಾಗುವದು. ಮತ್ತು ವ್ಯಾಪಾರವು ಅವ್ಯವಸ್ಥಿತ ಸ್ಥಿತಿಗೆ ಬರುವದು. ಅಕ್ಕಿಯ ಧಾರಣೆಯನ್ನು ಸರ್ವಸಾಮಾನ್ಯವಾಗಿ ತಗ್ಗಿಸಬೇಕೆಂಬುವ ಉದ್ದೇಶವು ಒಂದು ವೇಳೆ ದೊರೆಗಳವರ ಯೋಚನೆಯಲ್ಲಿರುವದಾದರೆ ಇದನ್ನು ನೆರವೇರಿಸಲು ಇಲ್ಲಿಯ ಸಾವುಕಾರರ ಸಮ್ಮತಿ ಅಥವಾ ಆಲೋಚನೆ ಮಾತ್ರ ಸಾಲದು. ವರ್ಗದಾರರಿಂದಲೂ ರೈತರಿಂದಲೂ ಸರಕಾರದವರಿಂದಲೂ ಆಗತಕ್ಕ ಕಾರ್ಯವಿಭಾಗಗಳು ಇದರಲ್ಲಿವೆ. ಆದ್ದರಿಂದ ಇಂಥವರ ಒಂದು ಕಮಿಟಿಯನ್ನು ಏರ್ಪಡಿಸಿ ಈ ಕಮಿಟಿ ಮೂಲಕ ತಕ್ಕ ವಿಚಾರವನ್ನು ನಡಿಸಿ ನಂತರ ಈ ಕಮಿಟಿಯವರ ಅಭಿಪ್ರಾಯದ ಮೇರೆಗೆ ರೈತರಿಗೂ ವರ್ಗದಾರರಿಗೂ ವ್ಯಾಪಾರಸ್ಥರಿಗೂ ಸಮರ್ಪಕವಾದ ರೀತಿಯಲ್ಲಿ ದರಗಳನ್ನು ವ್ಯವಸ್ಥೆಗೊಳಿಸುವದು ಯುಕ್ತವೆಂತ ನಮ್ಮ ಅಭಿಪ್ರಾಯವಾಗಿರುತ್ತದೆ.

(೬) ಕಲೆಕ್ಟರ ದೊರೆಗಳವರು ತಾಲೂಕು ಆಫೀಸು ಮೂಲಕ ಹೊರಡಿಸಿದ ತಾ ೨೮—೬—೧೯೧೮ರ ನೋಟೀಸು ನಾವು ಕೊಟ್ಟ ಅಭಿಪ್ರಾಯಕ್ಕೆ ಪೂರ್ಣ ಅನುಸಾರವಾಗಿರದು. ದರಗಳಲ್ಲಿ ಹೆಚ್ಚುಕಡಮೆ ಇದೆ. ಮತ್ತು ಬಡಜನರ ಸಂಕಷ್ಟ ನಿವಾರಣೆ ಬಗ್ಗೆ ದರವನ್ನು ತಗ್ಗಿಸಿದ್ದು ಎಂಬುದು ಈ ನೋಟೀಸಿನಲ್ಲಿ ವ್ಯಕ್ತವಾಗುವದಿಲ್ಲ. ಆದ್ದರಿಂದ ಮೇಲಣ ವಿದ್ಯಮಾನಗಳನ್ನು ಪರಾಂಬರಿಸಿಕೊಂಡು ಈ ನೋಟೀಸನ್ನು ಯುಕ್ತತೋರುವ ರೀತಿಯಲ್ಲಿ ತಿದ್ದಿಕೊಂಡು ಇದನ್ನು ಪುನಃ ಕೂಡಲೆ ಪ್ರಕಟಿಸುವದು ಅಗತ್ಯವೆಂತ ನಮಗೆ ತೋರುತ್ತದೆ.

ಮೇಲೆ ಕಾಣಿಸಿದ ಏರ್ಪಾಡುಗಳನ್ನು ನಡಿಸಿಕೊಡಬೇಕಾಗಿ ನಮ್ಮ ವಿನಯಪೂರ್ವಕ ಪ್ರಾರ್ಥನೆಯಾಗಿರುವದು.

ಇಂತಿ ತಮ್ಮ ವಿಧೇಯಸೇವಕರು

ಪತ್ರವ್ಯವಹಾರ.

ಅಯ್ಯಾ ಪತ್ರಿಕಾಕರ್ತರೇ,

ಇಲ್ಲಿಯ ಮ್ಯುನಿಸಿಪಾಲಿಟಿಯ ವಿಷಯದಲ್ಲಿ ಪಟ್ಟಣಿಗರು ಎಷ್ಟು ಜಾಗ್ರತೆಯನ್ನು ತಕ್ಕೊಂಡರೂ ಅದು ಸಾಲದು ಎಂದು ತೋರುತ್ತದೆ. ಯಾಕೆಂದರೆ ನಮ್ಮ ಪಟ್ಟಣದ ಮ್ಯುನಿಸಿಪಾಲಿಟಿಯು ಅಸಹ್ಯವಾದ ಒಂದೊಂದು ಕೆಲಸವನ್ನು ಮಾಡಿ ಜನರಿಗೆ ಎಷ್ಟರಮಟ್ಟಿಗೆ ಉಪದ್ರವವನ್ನು ಕೊಡುತ್ತದೆಂದರೆ ಅದನ್ನು ವರ್ಣಿಸಿದರೆ ಬೇರೆ ಊರಿನವರಿಗೆ ಅದು ಸತ್ಯವೆಂದು ತೋರಲಾರದು. ೧೦ ಘಂಟೆಯ ಸಮಯಕ್ಕೆ ಮಲದ ಗಾಡಿಗಳನ್ನು ತುಂಬಿಸಿಕೊಂಡು ಉರ್ವದ ಕಡೆಗೆ ತೋಟಗಳು ದಿನಾಲು ಹೋಗುತ್ತವಷ್ಟೆ. ಆ ಗಾಡಿಗಳು ಪುನಃ ೧೨ ಘಂಟೆಗೆ ವಾಪಸು ಬರುತ್ತವೆ. ದಿವಸಕ್ಕೆ ಒಂದುಸಾರಿ ಈ ಗಾಡಿಗಳು ಉರ್ವಕ್ಕೆ ಹೋದಮೇಲೆ ಆ ದಾರಿಯಿಂದ ನಡಿಯುವವರಿಗೆ ಬಾಯಲ್ಲಿ ಉಗುಳು ನುಂಗುವದು ತುಂಬಾ ಕಷ್ಟವಾಗುತ್ತದೆ. ಇಡಿ ದಾರಿಯ ಮೇಲೆ ಮಲದ ಹನಿಗಳು ಸಣ್ಣದೊಡ್ಡವಾಗಿ ಬಿದ್ದಿರುತ್ತವೆ. ಇದನ್ನು ನಾನೊಬ್ಬನೆ ಅಲ್ಲ, ದಾರಿಯ ಮೇಲೆ ತಿರುಗಾಡುವ ಪ್ರತಿ ಒಬ್ಬನು ದಿನಾಲು ನೋಡಿರುವನು. ಸಾಧಾರಣ ೧೦ ಘಂಟೆಯಿಂದ ೨ ಘಂಟೆಯ ವರೆಗೆ ಈ ದಾರಿಯಿಂದ ತಿರುಗಾಡುವವರಿಗೆ ದಾರಿಯ ಮೇಲೆ ಸ್ವಲ್ಪಸ್ವಲ್ಪವಾಗಿ ಬಿದ್ದಿರುವ ಈ ಮಲವು ಕಾಣಿಸುವದು. ದಾರಿಯಮೇಲೆ ಈ ರೀತಿಯಿಂದ ಮಲವು ಬೀಳುವ ಕಾರಣವೇನಾಗಿರಬಹುದೆಂದು ಚೌಕಸಿ ಮಾಡಿದರೆ ತಿಳಿದುಬರುವದೇನೆಂದರೆ, ಮಲದ ಗಾಡಿಗಳಿಗೆ ತೂತಾಗಿ ಈ ಅವಸ್ಥೆಯು ಉಂಟಾಗುತ್ತದೆ. ಕೆಲವರ ಅಭಿಪ್ರಾಯವೇನೆಂದರೆ ಗಾಡಿಗಳ ಮುಚ್ಚಳವನ್ನು ಮುಚ್ಚದೆ ಇದ್ದ ಕಾರಣ ಹೀಗೆ, ಅವುಗಳನ್ನು ವಿಶೇಷ ಓಡಿಸುವ ಕಾರಣ ಗಾಡಿಯೊಳಗಿನದು ಹಾರಿ ಬೀಳುವದು. ಇವುಗಳಲ್ಲಿ ಕಾರಣವು ಯಾವುದೇ ಇದ್ದರೂ ಇದು ಮಾರ್ಗದ ಮೇಲೆ ಬೀಳುತ್ತದೆ ಎಂಬುದಕ್ಕೆ ಸಂದೇಹವಿಲ್ಲ. ಇಂಥ ಮಲವನ್ನು ಶಾಲೆಯ ಹುಡುಗರು ಗುಂಪುಗುಂಪಾಗಿ ಹೋಗುವವರು ಏಕಪ್ರಕಾರ ತುಳಿದುಕೊಂಡು ಹೋಗುತ್ತಾರೆ. ಬೇರೆ ಜನರು ಸಹ ಹಾಗೆಯೇ. ಪಾಯಖಾನೆಯಲ್ಲಿರುವದನ್ನು ಬೀದಿಯ ಮೇಲೆ "ಶಾಂತಿ" ಮಾಡುವ ಈ ಕ್ರಮವು ಇನ್ನಲ್ಲಿ ಉಂಟೆ? ಮ್ಯುನಿಸಿಪಾಲಿಟಿಯು ಸಿಪಾಯಿಗಳು ಮೇಲ್ವಿಚಾರಕರು, ಸುಪರ್‌ವೈಸರ್ ಮಾಡುವವರು, ಸೆನಿಟರಿ ಇನ್ಸ್‌ಪೆಕ್ಟರರು, ಎಂದು ಅನೇಕ ವಿಧದವರಿದ್ದಾರೆ. ಅವರ ಕೆಲಸವೇನು? ಗಾಡಿಗಳಿಗೆ ತೂತುಗಳು ಬಿದ್ದಿದ್ದರೆ ಅವುಗಳ ದುರಸ್ತಿ ಅಥವಾ ಬೇರೆ ಗಾಡಿಗಳನ್ನು ಏರ್ಪಡಿಸುವದು. ಯಾರ ಕೆಲಸ? ಬಾಯಿ ಮುಚ್ಚದೆ ಕೊಂಡುಹೋಗುತ್ತಾರಾದರೆ ಅದರ ವ್ಯವಸ್ಥೆಯನ್ನು ಮಾಡಿಸುವದು ಯಾರು? ಒಳಗಿನ ಕೊಳಕು ಬೀದಿಯಮೇಲೆ ಬೀಳುವದರಿಂದ ಮ್ಯುನಿಸಿಪಾಲಿಟಿಯ ಆಡಳಿತವೆಯು ಎಷ್ಟು ನಿರಾಕ್ಷೇಪಕರವಾಗಿ ನಡೆಯುತ್ತಿದೆ ಎಂಬುದು ಪ್ರತ್ಯಕ್ಷದಿಂದ ತಿಳಿಯಬಹುದಾಗಿದೆ.

ಇದರ ಕಡೆಗೆ ಬೇಗನೆ [illegible] ನಮ್ಮ ಮುನಿಸಿಪಲ್ ಚೇರ್ಮನ್ ಕಲೆಕ್ಟರ ದೊರೆಗಳ ಲಕ್ಷ್ಯವನ್ನು [illegible] ಬಂದಿತು.

ಪಟ್ಟಣಿಗ.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ
ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿಪಾನಕ. ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದ ಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಲ್ಲರೆ ಸ್ಯಾಂಪು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತಗುಳಿಗೆ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಣ್ಣು ನಾಳಿಯ ಕಡತಗಳನ್ನೂ ಹಳೇ ವ್ರಣ ಮತ್ತೆ ನಾರುವ ಹುಣ್ಣುಗಳನ್ನೂ ಯೋಗಮಾಡುತ್ತದೆ. ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಲ್ಲರೆ ಸ್ಯಾಂಪು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು
ಎ. ವಿ. ಎಸ್. ಎ. ಎಮ್. ಪಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
55 ಆಚಾರಪ್ಪನ ಬೀದಿ,
ಜಾರ್ಜ್‌ಟೌನ್, ಮದರಾಸ್.

ತಂತಿ ವಿಳಾಸ:— "ಪಂಡಿತ್" ಮದರಾಸ್.

ಶ್ರೀಮತ್ ಕಲ್ಯಾಣ ಬಂಧುಗಳೇ!
ಈ ಕಡೆ ನೋಡಿರಿ.

ಕಲ್ಯಾಣಕಾರಕವೆಂಬ ವೈದ್ಯಗ್ರಂಥಾಧಾರದಿಂದಲೂ ಅನೇಕ ರೋಗಿಗಳನ್ನು ಗುಣಪಡಿಸಿ ಪರಿಶೋಧಿಸಿ ಅನುಭವ ಸಿದ್ಧ ಔಷಧಿಗಳು ಈ ಕೆಳಗಣ ವಿಳಾಸದಾರರಲ್ಲಿ ದೊರೆಯುವವು. ಅವಶ್ಯಕರು ಕೆಟಲಾಗನ್ನು ತರಿಸಿಕೊಂಡರೆ ಸಮಾಧಾನವಾಗುವದು.

S. P. RAJA & Co.,
Kalyanakaraka Bishagmandir,
POLALY, POST S. C.

ಎಸ್. ಪಿ. ರಾಜಾ ಮತ್ತು ಕಂಪೆನಿ,
ಕಲ್ಯಾಣಕಾರಕ ಭಿಷಗ್ಮಂದಿರ, ಪೋಸ್ಟು ಪೊಳಲಿ, ದ. ಕ.

"ನಷ್ಟಾಮಧುಮೇಹಾಂತಕ ವಟಿಕಾ."

ಮೇಹಸಂಬಂಧವಾದ ಮೂತ್ರ ಘಾತಾಕೃಚ್ಛ್ರ ಉರಿ ಮೂತ್ರಗಳನ್ನು 24 ಗಂಟೆಯಲ್ಲಿಯೇ ನಿಲ್ಲಿಸುವದು. ಇದರ ಸೇವನೆಯಿಂದ 20 ತರದ ಮೇಹಗಳು ಕೂಡಲೇ ನಿಲ್ಲುವದು. ಅಶ್ಮರಿಯೆಂಬ ಕಲ್ಲು ಸಹಾ ಇದ್ದಲ್ಲಿ ಕೂಡಲೇ ಮೂತ್ರದೊಂದಿಗೆ ಬೀಳುವದು.

12 ಮಾತ್ರೆಗಳಿರುವ ಡಬ್ಬಿ 1ರ ಕ್ರಯ . . . ರೂ. 1—4—0
12 ಡಬ್ಬಿಗಳನ್ನು ಒಂದೇ ಸಲ ತರಿಸಿಕೊಳ್ಳುವವರಿಗೆ ,, 13—12—0.

ಡಿ. ಪಿ. ಛಾರ್ಜು ಬೇರೆ.

ಇನ್ನೂ ನಮ್ಮಲ್ಲಿ ಅನೇಕ ಸಿದ್ಧೌಷಧಗಳು ದೊರೆಯುವವು. ಅಪೇಕ್ಷಕರು ಅಧ್ಯಾಣೆ ಸ್ಟಾಂಪನ್ನಿಟ್ಟು ಪತ್ರಬರೆದಲ್ಲಿ ಕೆಟಲಾಗು ಕಳುಹಿಸಲಾಗುವದು.

ನಮ್ಮ ವಿಳಾಸ:— ವೈದ್ಯ ಬಿ. ವಿಠಲ ಭಟ್ಟ,
ಆಯುರ್ವೇದ ವೈದ್ಯಮಂದಿರ, ಉಡುಪಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ!

ಪ್ರತಿವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.

ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲಯ ಸ್ಟೇಟ್, ಗೋವಾ, ಫೀಜಿಐಲೆಂಡ್, ಆಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿದ್ದಾರೆ.

ಮಹಾಭಾಗ. ಒಂದೇ ಒಂದು ಲೋಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮನೆಗೆ ವೈದ್ಯರ ಸಹಾಯವನ್ನು ಬಹುಮಟ್ಟಿಗೆ ಅಪೇಕ್ಷಿಸಬೇಕಾದ್ದಿಲ್ಲ.

ಶೀತ, ಶೀತವಾಯು, ಅಜೀರ್ಣ, ಪಾರ್ಶ್ವವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸಿಟೀಸ್, ಬಹುಮೂತ್ರ, ಕೆಟ್ಟ ಹವಾ, ಮತ್ತು ಕೆಡುಕಾದ ನೀರಿನಿಂದುಂಟಾಗುವ ವಿಕಾರ, ಮಕ್ಕಳ ಎದೆ, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಅತಿ ಶೀಘ್ರವಾಗುವಂತೆ ಗುಣಪಡಿಸುತ್ತದೆ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಬೆಲೆ ಇತ್ಯಾದಿ ಸೇರಿ 1—4—0.
ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಬೆಲೆ ಇತ್ಯಾದಿ ಸೇರಿ 2—12—0.
ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಬೆಲೆ ಇತ್ಯಾದಿ ಸೇರಿ 5—0—0.

ರಿಜಿಸ್ಟರಾದ ಈ ಟ್ರೇಡ್‌ಮಾರ್ಕ ಗುರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ಮ॥ ರಾ॥ ಡಾಕ್ಟರ್ ಪ್ರಭಾಕರ್ ಫೆಲೋ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್ ವೈ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ, ... ಲಂಡನ್ ಕನ್‌ಸಲ್ಟಿಂಗ್ ಕೆಮಿಸ್ಟ್, ... ನಂ. 2, ಬೊಂಬಾಯಿ ಇವರು ಬರೆದಿರುವುದು. ನನ್ನ ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ನೋಡಿದ್ದು ... ಅಜೀರ್ಣ, ಮಲಬದ್ಧತೆ, ಹೊಟ್ಟೆನೋವು, ಹೊಟ್ಟೆನೋವು, ... ಸಂಬಂಧವಾದ ರೋಗಗಳು, ಮಕ್ಕಳ ಎದೆ ವಾಯುಗಳಲ್ಲೂ ಗುಣವಾಗಿರುತ್ತವೆ. ... ಈ ಕಸ್ತೂರಿ ಮಾತ್ರೆಗಳನ್ನು ... ನಾನು ಶಿಫಾರಸು ಮಾಡುತ್ತೇನೆ.

ಮ॥ ರಾ॥ ಬಿ ಎಸ್. ಅಪ್ಪುರಾಯರ್ ಸೀನಿಯರ್ ಸರ್ಜನ್, ... ಗವರ್ನಮೆಂಟ್ ಇವರು ಬರೆದಿರುವುದು. ಲೋಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ... ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ... ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ ಅನೇಕ ತರದ ಉಪಯುಕ್ತವಾದ ಕೆಟಾಲಾಗ ... ಉಚಿತವಾಗಿ ಕಳುಹಿಸುತ್ತಾರೆ.

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ರೂ. 1,000 ಬಹುಮಾನ.
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.
(ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ).

ನಮ್ಮಿಂದ ತಯಾರಿಸಿದ ಡಬ್ಬಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ಎಂದು ಮುದ್ರಿಸಿರುವ ಲೇಬಲು ಇರುವದನ್ನು ನೋಡಿ ತೆಗೆದುಕೊಳ್ಳಿರಿ.

ಈ "ಸಾಲಾಮಿಸ್ರಿ ಮುರಬ್ಬಾ"ವನ್ನು ಸೇವನೆ ಯಿಂದ — ವೀರ್ಯವು ನಾಶವಾಗಿ ಇದ್ದರೂ ಸ್ವಲ್ಪೇಂದ್ರಿಯದವರೂ, ಮೂತ್ರದೊಂದಿಗೆ ವೀರ್ಯವು ಹೋಗುತ್ತಿದ್ದರೂ, ಕೈಕಾಲು ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲಬದ್ಧವಾಗಿಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ಈ ಸಾಲಾಮಿಸ್ರಿ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೆ ಸ್ಥಿತಿಯಲ್ಲಿರಿಸುವುದು. ಮುದುಕರಿಗೆ ಬಲವನ್ನು ಕೊಡುವುದು, ಹಳೇ ತಲೆನೋವುಗಳನ್ನು ಹೋಗಲಾಡಿಸುವದು, ಧಾತುವನ್ನು ಕೆಟ್ಟಿಯಾಗಿಸುವದು, ಸೊಂಟದ ನೋವು ಸ್ವಲ್ಪಮಾತ್ರವೂ ಇರಲಾರದು. ಈ ಸಾಲಾಮಿಸ್ರಿ ಎಂಬುದು ಕಾಬೂಲ್, ಕಾಂದಹಾರ್ ದೇಶಗಳಲ್ಲಿ ಬೆಳೆಯುತ್ತದೆ.

ಈ ಮುರಬ್ಬಾ ಸೇವನೆಯಿಂದ ಗುಣಹೊಂದಿದ ಅನೇಕ ದೊಡ್ಡ ಮನುಷ್ಯರಿಂದ ರಂಗೂನ್, ಪಿನಾಂಗ್, ಆಗ್ರಾ, ಕಲ್ಕತ್ತಾ, ಬೊಂಬಾಯಿ, ಮದ್ರಾಸ್ ಮೊದಲಾದ ಅನೇಕ ಪ್ರಾಂತ್ಯಗಳಿಂದ ಯೋಗ್ಯತಾಪತ್ರಿಕೆಗಳು ಬಂದಿವೆ. ಬೇಕಾದವರು ಅರ್ಧಾಣೆ ಸ್ಟಾಂಪನ್ನು ಕಳಿಸಿ ಅವುಗಳ ಪ್ರತಿಯನ್ನು ನೋಡಬಹುದು. ಇದನ್ನು ಯಾರಾದರೂ ಸುಳ್ಳು ಎಂದು ... ರೂ. ಬಹುಮಾನವು ಕೊಡಲ್ಪಡುವುದು. ... ಕಾಗದ ಮೂಲಕ ಪಡೆಯಬಹುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ... ಎರಡು ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತರದವರೆಗೂ ಗುಣ ಕೊಡುತ್ತೆ. ಉಪಯೋಗಿಸುವ ವಿಧಾನವು ಡಬ್ಬಿಯ ಜತೆಯಲ್ಲಿರುವುದು. ಕ್ರಯ ಡಬ್ಬಿ 1ಕ್ಕೆ ರೂ. 2. ಟಪಾಲು ಖರ್ಚು ಗಿರಿಂದ ೩ ಡಬ್ಬಿಗಳ ವರೆಗೆ ಆ. 6.

ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೊ, ಬೆಂಗಳೂರು ಸಿಟಿ.

ಎ ಕೋರ್ಸ್ ಆಫ್ ಇಂಡಿಯನ್ ಜಿಮ್ನಾಸ್ಟಿಕ್.
(೧ನೇ ಭಾಗ ಮತ್ತು ೨ನೇ ಭಾಗ).

ಈ ಎರಡು ಗ್ರಂಥಗಳು ಅನೇಕ ಶರೀರ ವ್ಯಾಯಾಮಗಳನ್ನು ಪಾಠಶಾಲೆಯವರುಗಳಿಗೆ ಬಹಳ ಉಪಯುಕ್ತವಾದವುಗಳು. ಇದರಲ್ಲಿ ಒಂದನೇ ಭಾಗ ಮದರಾಸು ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರಿಂದ ಅಂಗೀಕರಿಸಲ್ಪಟ್ಟದ್ದು ಮತ್ತು ಮೈಸೂರು ಗವರ್ನಮೆಂಟಿನವರಿಂದಲೂ ಆಶ್ರಯ ಕೊಡಲ್ಪಟ್ಟಿದೆ. ಒಂದನೇ ಭಾಗದಲ್ಲಿ ಬಂಡಿಗಳನ್ನು ... ಸಂಖ್ಯೆ 56 ಪ್ರತಿಮೆಗಳನ್ನು, ಎರಡನೇ ಭಾಗದಲ್ಲಿ 43 ಪ್ರತಿಮೆ ಆಯಾಯ ಪ್ರತಿಮೆಗಳ ಪಕ್ಕದಲ್ಲಿ ಇಂಗ್ಲೀಷು, ತಮಿಳು, ತೆಲುಗು, ಕನ್ನಡ ಭಾಷೆಗಳಲ್ಲಿ ಅಭ್ಯಸಿಸುವಂತೆ ಕ್ರಮಗಳನ್ನು ನಿರೂಪಿಸಲ್ಪಟ್ಟಿವೆ. ಪ್ರತ್ಯೇಕ ಭಾಗಕ್ಕೆ ಕ್ರಯ ರೂ. 0—12—0 ವಿ. ಪಿ. ಖರ್ಚು 0—2—0.

ಎರಡು ಭಾಗಗಳು ಸೇರಿ ಕ್ರಯ ರೂ. 1—4—0 ... 2 ಆಣೆ

ವಿಳಾಸ:— ಬಿ. ರಾಘವುಲು ನಾಯುಡು,
ಜಿಮ್ನಾಸ್ಟಿಕ್ ಇನ್‌ಸ್ಟ್ರಕ್ಟರ್, ಪಚ್ಚಿಯಪ್ಪಾಸ್ ಕಾಲೇಜ್, ಮದರಾಸು.

B. RAGHAVULU NAIDU,
Senior Gymnastic Instructor,
Pachiyappa's College, MADRAS.

N. B.— ...

ಸಿವಿಲ್ ಕ್ರಿಮಿನಲ್ ರೆವಿನ್ಯೂ ವ್ಯವಹಾರ ಬೋಧಿನಿ.

ಈ ಪುಸ್ತಕದಲ್ಲಿ ಅನೇಕ ದಾವೆಗಳ ಅರ್ಜಿ ನಮೂನೆ, ಕ್ರಯ ಭೋಗ್ಯಾದಿ ಮುಂತಾದ ಪತ್ರಗಳ ನಮೂನೆಗಳು ಮತ್ತು ಹಿಂದೂಲಾ ಧರ್ಮಶಾಸ್ತ್ರವು ಮುದ್ರಿಸಲ್ಪಟ್ಟಿರುವುದು. ಅತ್ಯಾವಶ್ಯಕವಾದ ಪುಸ್ತಕ. ಬೇಗ ತರಿಸಿಕೊಳ್ಳಿರಿ. ಕ್ರಯ. ಕ್ಯಾಲಿಕೋ ಬೈಂಡು ಈ ಪುಸ್ತಕ 1ಕ್ಕೆ ರೂ. 1—8—0.

ವಿವೇಕ ಚೂಡಾಮಣಿ.

ಶ್ರೀ ಶಂಕರಾಚಾರ್ಯರವರು ಅದ್ವೈತ ಸಿದ್ಧಾಂತದ ಸಾರವನ್ನು ಸಾಧಕರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗಾಗಲೇ ಪ್ರಕಟವಾಗಿದೆ. ಈ ಪುಸ್ತಕವು ಸಾಧನತ್ರಯ, ಆತ್ಮಾನಾತ್ಮ ವಿವೇಕ, ಶರೀರತ್ರಯ, ಗುಣತ್ರಯ, ಗುರುಶಿಷ್ಯ ಸಂವಾದ, ಬ್ರಹ್ಮೋಪದೇಶ ಮುಂತಾದ ಅನೇಕ ಪ್ರಕರಣಗಳನ್ನು ಒಳಗೊಂಡಿದೆ. ಇದನ್ನು ವ್ಯಾಸಂಗಮಾಡಿದವರಿಗೆ ವೇದಾಂತ ವಿಷಯಗಳಲ್ಲೂ ಮನಗಂಡ ಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಭಗವಂತನಿಗೆ ... ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ.

ಬೆಲೆ 1ಕ್ಕೆ ರೂ. 1—4—0. ಟಪಾಲು 6 ಆಣೆ.

ವಿಳಾಸ:— ಎಚ್. ಎಸ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ನವೀನ ಪುಸ್ತಕ! ನವೀನ ಪುಸ್ತಕ!!
ಹಿಂದೂ ವ್ರತವಿವೇಕ
ಲೇಖಕ:- ಒಡ್ಡಮನೆ ಆತ್ಮಾರಾಮ ಶಾಸ್ತ್ರಿ.
ಕ್ರಯ:— ಪ್ರತಿ ಒಂದಕ್ಕೆ ಆಣೆ 10.
...

ಕ್ರಯ ಸುಲಭ! ಕ್ರಯ ಸುಲಭ!!

ಕಾಶೀಯಲ್ಲಿ ತಯಾರಾಗುವ ಪೀತಾಂಬರ, ಸುಗಂಧ ಶಾಲು, ರವಕೆ ಕಣಗಳು, ಕಸ್ತೂರಿ ವಗೈರೆ ... ತರದ ಸಾಮಾನುಗಳು ... ಬೇಕಾದವರಿಗೆ ವಿ. ಪಿ. ಯಿಂದ ಕಳುಹಿಸಲಾಗುವುದು. ... ಗಜಕ್ಕೆ ರೂ. ... ವರೆಗೆ ... ರೂ. 4ರಿಂದ ... ವರೆಗೆ ... ರೂ. ... ವರೆಗೆ ...

ADDRESS:— Siromani Narayanacharya,
...

ಸಣ್ಣ ಮಕ್ಕಳಿಗೆ

ಶಕ್ತಿವರ್ಧಕ

ಡೊಂಗರೆ ಇವರ ಬಾಲಾಮೃತ

ಈ ಬಾಲಾಮೃತವನ್ನು ಕೊಡುವದರಿಂದ ಮಕ್ಕಳ ಶಕ್ತಿಯೂ ತೂಕವೂ ಹೆಚ್ಚುವದು, ಮತ್ತು ಇದು ಮಧುರವಾಗಿರುವದರಿಂದ ಮಕ್ಕಳು ಪ್ರೀತಿಯಿಂದ ತೆಗದುಕೊಳ್ಳುತ್ತವೆ

ಕ್ರಯ ಬಾಟ್ಲ 1ಕ್ಕೆ 12 ಆಣೆ ಟ ಖ 4 ಆಣೆ.

ಕೆ ಟಿ. ಡೊಂಗರೆ ಕಂಪೆನಿ,

ಗಿರಗಾಂವ ಮುಂಬಯಿ

ಮಂಗಳೂರು ಏಜಂಟರು

ಉಲನ್ ಮಾರ್ಟ್ ಮಾಧವ ಬಿಲ್ಡಿಂಗ್ಸ್

ಜ್ವರಾಂತಕ ಗುಳಿಗೆಗಳು

ಕಾಸಾಂತಕ ಗುಳಿಗೆಗಳು

ವೈದ್ಯಶಾಸ್ತ್ರಿ ಮಹೇಶಂಕರ ಗೋವಿಂದಜೀ

ಮತ್ತು 96 ... ಮುಂಬಯಿ

Local Agent Raphael & Co

Brito Buildings

Hampankatt MANGALORE

ಅನುಭವಸಿದ್ಧವಾದ ವನೌಷಧಗಳು

... ಕೊಡಲೆ ...

ಕರ್ಣಾಟಕ

Karnatak Ague Mixture.

ಚಳಿಜ್ವರ ಮಲೆರಿಯಾ ಅಂತರಿಕ (ದಿನಬಿಟ್ಟು ದಿನಕ್ಕೆ ಬರ ವಂಥ) ಜ್ವರ ಇತ್ಯಾದಿ ಜ್ವರಗಳಿಗೆ ತತ್ಕಾಲ ಗುಣಕೊಡುವಂಥ ಖಂಡಿತವಾದ ವ ದ್ದ ! ಲಕ್ಷಾವಧಿ ಜನರ ಇದನ್ನು ಉಪಯೋಗಿಸಿ ಖಾತ್ರಿಪಡಕೊಂಡಿರುತ್ತಾರೆ. ಕ್ರಯ ೧೦ ಆಣೆಗಳು ದೊಡ್ಡ ಬಾಟ್ಲಿಯ ಕ್ರಯ ರೂ ೧.

ಹೆನ್ಸೊ ಪಿಲ್ಸ್ —ಕೊಲೆರಾ ಹೊಟ್ಟೆನೋವು ಓಕರಿಕೆ ಮೊದಲಾದ ರೋಗಗಳಿಗೆ ತಪ್ಪದೆ ಗುಣಕೊಡುವಂಥ ಮದ್ದು ಕ್ರಯ ೧೦ ಆಣೆ

ಗಜಕರ್ಣದ ಮುಲಾಮು ಬಾಟ್ಲಿ ೧ಕ್ಕೆ ೪ ಆಣೆಗಳು ಡಜನ್ ೧ಕ್ಕೆ ರೂ ೨—೪—೦ ಪೋಸ್ಟೇಜ ಬೇರೆ ನಮ್ಮ ಇತರ ವ ದ್ದುಗಳ ಕ್ಯಾಟಲಾಗು ಫ್ರೀ

ಕರ್ಣಾಟಕ ಬ್ರದರ್ಸ್

56 ಗಿರಗಾಂವ ಮುಂಬಯಿ

Ag The Woollen Mart *Mangal*

...ಪಂಡಿತ ... ಫೆರ್ನಾಂದಿಸರವರ

ಅನುಭವಸಿದ್ಧವಾದ ಆಯುರ್ವೇದ ಔಷಧಗಳು

... ಮಂಗಳೂರು



ಕನ್ನಡ ಕಾಗದಂಬರಿಗಳು

ಯಂ ಎಸ್ ರಾವ್ ಕಂಪೆನಿ

ಪುಸ್ತಕ ವ್ಯಾ... ಬೆಂಗಳೂರ ಸಿಟಿ

ಅರ್ಧಶಿರಶೂಲ ... ಆರೋಗ್ಯಬಿಂದು.

ಎಚ್ ಎಮ್. ಮುಲ್ಲಾ,

ಆರೋಗ್ಯ ... ಬೆಳಗಾವ)

The Indian Tooth-ache Specific

ಹಲ್ಲುನೋವಿಗೆ ಖಾತ್ರಿಯಾದ ಔಷಧ

SLANY BROTHERS MANGALORE

ಸೊಗಸಾದ ಶಾಯಿ

I	ಕ್ಲಾಸ್	0—10—0
II	ಕ್ಲಾಸ್	0— 8—0
III	ಕ್ಲಾಸ್	— 6—0

SLANY BROTHERS, MANGALORE

ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ ಸಿದ್ಧೌಷಧಗಳು.

ಶ್ರೀಕರಕಸ್ತೂರಿಮಾತ್ರೆ — ...

ಚೀಗಿರೆರಸಾಯನ — ...

ಖಂಡಾಮಲಕರಸಾಯನ — ...

ಶತಾವರೀರಸಾಯನ — ...

ಬಿ. ವಿ. ಪಂಡಿತ ... ಮುಂಬಯಿ

ಜಗನ್ಮೋಹನ ದಂತಮಂಜನ ...

ಸರಹದ್ಭೇದಿ ಮಾತ್ರೆ ...

ಮಹಾಜ್ವರಾಂಕುಶ ಮಾತ್ರೆ ...

ನಮ್ಮ ಏಜಂಟ—ಬಿ. ಎಮ್ ... ಮತ್ತು ಕಂಪೆನಿ,

B. N. NATH & CO. *Ayurvedic Chemists*

Vepery Post MADRAS.

ಸ್ವದೇಶಾಭಿಮಾನಿ

ಪ್ರತಿ-ಶುಕ್ರವಾರವೂ ಪ್ರಕಟಿಸಲ್ಪಡುವ್ರದು

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ।
ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ... ಸುರರಿಗವರಿಂ ಹರುಷವಾಯಿತೆ ಮತ್ತೆ ಎಚ್ಚುವ ಸುಡುತ ಬರುತಿರುವ ॥
ಗರಲಕವರಂಜಿಧರೆ ಸುಧೆಯನ ...ರೆತ ... ತಂದಿ ಕುಳಿತರೆ । ತರಳಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೧೦ | ಮಂಗಳೂರ ತಾರೀಕ ೧೩ನೇ ಜುಲಾಯಿ ಶುಕ್ರವಾರ ೧೯೧೪ | ಸಂಚಿಕೆ ೨೮

'ನೈಟ್ರೇಟ್ ಒಫ್ ಸೋಡಾ

ಹೊಗೆಸೊಪ್ಪು ಕ... ತೆಂಗು ಅಡಿಕೆ ... ಕಬ್ಬು ಮೊದಲಾದ ಪೈರುಗಳಿಗೆ ಬಹಳ ಸಾರವತ್ತಾದ ...

ಈ ಗೊಬ್ಬರವು ಒಂದು ಬಗೆಯ ಉಪ್ಪು ... ಇದರ ಉಪಯೋಗದಿಂದ ಹುಲ ಸಾರ ಬೆಳೆಯನ್ನು ... ತಾರೆ

ಈ ಗೊಬ್ಬರವು ಹಟ್ಟಿಯ ಗೊಬ್ಬರದಂತೆ ಅಸಹ್ಯವಲ್ಲ ... ಗೊಬ್ಬರದಂತೆ ನಾತ ಬಡೆಯುವುದಿಲ್ಲ

ಈ ಗೊಬ್ಬರ ಒಂದು ಹಿಡಿ ಸಾಕಾದ್ದಲ್ಲಿ ... ಬೇಕ ... ಊರು ಗೊಬ್ಬರಗಳ ಬೆಂಬಲಕ್ಕೆ ಬಹಳ ಗುಣಕಾರಿ

ಪರಸ್ಪರ ಸಹಾಯಕ ಸಂಘಗಳ ಇದನ್ನು ಹಳ್ಳಿಯವರಿಗೆ ... ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಏರ್ಪಾಡುಗಳನ್ನು ಮಾಡಬಹುದು

"ಕೃಷಿ ಸುಧಾರಣೆ ... ಸಚಿತ್ರ ... ಕನ್ನಡ ಭಾಷೆ ... ನಮ್ಮಿಂದ ಧರ್ಮಾರ್ಥವಾಗಿ ಪಡೆಯಬಹುದು

ದಿ ಚಿಲಿಯನ್ ನೈಟ್ರೇಟ್ ಪ್ರೊಪಗಾಂಡಾ

1 ರೋಯಲ್ ಎಕ್ಸ್‌ಚೇಂಜ್ ಪ್ಲೇಸ್ ಕಲ್ಕತ್ತಾ

The Chilean Nitrate Propaganda

1, Royal Exchange Place Calcutta

ಹತ್ತಿರವೇ ಇಟ್ಟುಕೊಳ್ಳಿರಿ!

... ತಲೆಸಿಡಿತ ಸೊಂಟದ ನೋವು ಶೀತ ... ನೋವು ... ನೋವು ಮೊದಲಾದ ನೂರಾರು ವಿಧಾನಗಳ ನೋವುಗಳನ್ನು ಶೀಘ್ರದಲ್ಲಿ ಗುಣಪಡಿಸುವ

ಅಮೃತಾಂಜನವನ್ನು

... ಹತ್ತಿರವೇ ಇಟ್ಟುಕೊಳ್ಳಬೇಕು ಅಣೆ ಎಂಟಕ್ಕೆ ಅದು ಎಲ್ಲಿಯೂ ದೊರಕುವುದು

1 ... 5—4— ... ಪ್ರತ್ಯೇಕ

ಗಜಕರ್ಣದ ಮುಲಾಮು

... ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ... ಡಬಿಗಳ ಮಾರಲ್ಪಟ್ಟವು ರಾಜಾರಾಣಿ ಟ್ರೇಡ್ ಮಾರ್ಕ ... 2 ಡಬ್ಬಿಗಳ ... ಪ್ರತ್ಯೇಕ

ದಂತಮಂಜನ

